ವಿಶ್ವವಾಣಿ
ವಿಶ್ವಾಸವೇ ವಿಶ್ವ

ಸ್ಮರಣ್: ಸ್ಮರಣೀಯ ಇನ್ನಿಂಗ್ಸ್

ರಾಜ್ಯದ ಭರವಸೆಯ ಆಟಗಾರ ಸ್ಮರಣ್ ರವಿಚಂದ್ರನ್ (203 ರನ್) ಬೆಂಗಳೂರಿನಲ್ಲಿ ನಡೆಯುತ್ತಿರುವ ರಣಜಿ ಕ್ರಿಕೆಟ್‌ನಲ್ಲಿ ಚೊಚ್ಚಲ ದ್ವಿಶತಕ ದಾಖಲಿಸಿದ್ದಾರೆ. ಪಂಜಾಬ್ ವಿರುದ್ಧ ನಡೆಯುತ್ತಿರುವ ಪಂದ್ಯದ ಪ್ರಥಮ ಇನ್ನಿಂಗ್ಸ್‌ನಲ್ಲಿ ಅವರ ದ್ವಿಶತಕದಲ್ಲಿ 25 ಬೌಂಡರಿ, 3 ಸಿಕ್ಸರ್ ಒಳಗೊಂಡಿದ್ದು, ರಾಜ್ಯ ತಂಡವನ್ನು ಅವರು ಜಯದತ್ತ ಕೊಂಡೊಯ್ದಿದ್ದಾರೆ.

ಸೊಂಪಾದ ಪುಟಗಳು

ಸುಭಾಷ್‌ಚಂದ್ರ ಬೋಸ್ ಸಂಗ್ರಹಿಸಿದ್ದ ಸಂಪತ್ತೇನಾಯಿತು?
ವೀಕೆಂಡ್ ವಿತ್ ಮೋಹನ್ – ಮೋಹನ್ ವಿಶ್ವ 6

ಪ್ರಯಾಣದಲ್ಲಿ ಪಾಲಿಸಿ ಆಯುರ್ವೇದದ ಪ್ರಮಾಣ
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ – ಡಾ.ಸಾಧನಶ್ರೀ 7

ದಾರಿದೀಪೋಕ್ತಿ

ನಾನು ಒಳ್ಳೆಯ ಕೆಲಸಗಳನ್ನು ಮಾಡುತ್ತೇನೆ ಎಂದು ಹೇಳುವುದು ಮುಖ್ಯ ಅಲ್ಲ. ಆ ಕೆಲಸಗಳನ್ನು ಮಾಡುವುದು ಬಹಳ ಮುಖ್ಯ. ಹೇಳುವುದಕ್ಕಿಂತ ಮಾಡಿ ತೋರಿಸಿದರೆ ಮಾತ್ರ ಹೇಳಿದ್ದಕ್ಕೂ ಒಂದು ಅರ್ಥ ಬರುತ್ತದೆ. ಇಲ್ಲದಿದ್ದರೆ ಮಾತು ಒಂದು ಅರ್ಥಹೀನ ಹೇಳಿಕೆಯಾಗುತ್ತದೆ.

ವಕ್ರತುಂಡೋಕ್ತಿ

ಹೆಂಗಸರು ತಮ್ಮ ದೇಹದ ಶೇ. ಮೂವತ್ತರಷ್ಟು ತೂಕವನ್ನು ತಕ್ಷಣ ಇಳಿಸಿಕೊಳ್ಳಬಹುದು. ಆದರೆ ಅವರು ಮೇಕಪ್ ಮಾಡುವುದನ್ನು ನಿಲ್ಲಿಸಬೇಕು.

ಅರಣ್ಯದಲ್ಲಿ ಚಿತ್ರೀಕರಣಕ್ಕೆ ಅನುಮತಿ ಕಡ್ಡಾಯ

ಬೆಂಗಳೂರು: ಅರಣ್ಯ ಪ್ರದೇಶದಲ್ಲಿ ಇನ್ನು ಮುಂದೆ ಸಿನಿಮಾ, ಸಾಕ್ಷ್ಯ ಚಿತ್ರ, ಧಾರಾವಾಹಿ ಸೇರಿದಂತೆ ಯಾವುದೇ ಚಿತ್ರೀಕರಣಕ್ಕೆ ಸರಕಾರದ ಅನುಮತಿ ಕಡ್ಡಾಯ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದ್ದಾರೆ. ಈ ಬಗ್ಗೆ ಆದೇಶ ಹೊರಡಿಸಲು ಅರಣ್ಯ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡಿರುವ ಸಚಿವರು, ಚಲನಚಿತ್ರ, ದೂರದರ್ಶನ ಸಾಕ್ಷ್ಯ ಚಿತ್ರ, ಧಾರಾವಾಹಿ ಇತ್ಯಾದಿ ಚಿತ್ರೀಕರಣಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ನಿಗದಿತ ಶುಲ್ಕ ಪಡೆದು ಅನುಮತಿ ನೀಡುತ್ತಿದ್ದಾರೆ. ಸ್ಥಳೀಯ ಮಟ್ಟದಲ್ಲೂ ಅಧಿಕಾರಿಗಳು ಅನುಮತಿ ನೀಡುತ್ತಿರುವುದರಿಂದ ಅರಣ್ಯ ಪ್ರದೇಶ ಗೌಪ್ಯ ಮಾಹಿತಿ ಹೊರ ಜಗತ್ತಿಗೆ ಲಭಿಸುವ ಸಂಭವವಿರುತ್ತದೆ. ಇದು ಪರಿಸರ ಹಾಗೂ ಜೀವ ವೈವಿಧ್ಯಕ್ಕೂ ಧಕ್ಕೆ ತರುತ್ತದೆ ಎಂದಿದ್ದಾರೆ.

ಮಾತಂದ್ರೆ ಮಾತು

ಶ್ರೀರಾಮುಲು ಮತ್ತು ಜನಾರ್ದನ ರೆಡ್ಡಿ ನಡುವೆ ವೈಮನಸ್ಯ ಬಂದಿದೆ. ಶ್ರೀರಾಮುಲು ಒಬ್ಬ ಪ್ರಬಲ ನಾಯಕ, ಅವರು ನಮ್ಮ ಸಮಾಜದಲ್ಲಿ ಒಳ್ಳೆಯ ಹೆಸರು ಮಾಡಿದ್ದಾರೆ. ಬಿಎಸ್‌ಆರ್ ಪಕ್ಷ ಕಟ್ಟಿ 4 ಸ್ಥಾನ ಪಡೆದವರು. ಅವರಿಗೆ ಬಿಜೆಪಿಯಲ್ಲಿ ಅಸಮಾಧಾನ ಇದ್ದು, ಕಾಂಗ್ರೆಸ್‌ಗೆ ಬಂದರೆ ನಾನು ಸ್ವಾಗತಿಸುತ್ತೇನೆ

– ಕೆ.ಎನ್.ರಾಜಣ್ಣ, ಸಚಿವ

ಫನ್‌ತರಂಗ

– ರಘುಪತಿ ಶೃಂಗೇರಿ –



ರಾಜ್ಯ ಉಸ್ತುವಾರಿ ವಿರುದ್ಧ ವರಿಷ್ಠರೇ ಅಸಮಾಧಾನ | ರಾಧಾಮೋಹನ್ ನಡೆಗೆ ಜೆ.ಪಿ. ನಡ್ಡಾ ಗರಂ | ರೆಡ್ಡಿ-ರಾಮುಲು ಜಗಳದಲ್ಲಿ ವರಿಷ್ಠರ ಎಂಟ್ರಿ ಬಿವೈವಿ ಮತ್ತೆ ದೆಹಲಿಗೆ | ಶ್ರೀರಾಮುಲುಗೆ ಆಹ್ವಾನವಿತ್ತಿಲ್ಲ ಎಂದ ಡಿಕೆಶಿ

ಬಣ ಬಡಿದಾಟದಲ್ಲಿ ಚದುರಿದ ಕೇಸರಿ ದಳ

• ಧ್ಯಾನ್ ಪೂಣಚ್ಚ

ಬೆಂಗಳೂರು: ಬಣ ಬಡಿದಾಟದ ನಡುವೆ ಬಿಜೆಪಿ ಒಡೆದಮನೆಯಾಗಿದ್ದು, ಇಲ್ಲಿ ಒಂದೆರಡಲ್ಲ ಹತ್ತಾರು ಬಣಗಳು ಸಕ್ರಿಯವಾಗಿದೆ. ರಾಜ್ಯದೊಳಗಿನ ಪಕ್ಷದ ಸಮಸ್ಯೆ ಬಗೆಹರಿಸಲು ಆಯೋಜನೆಗೊಂಡ ಉಸ್ತುವಾರಿಗಳೇ ಸ್ಥಳೀಯ ನಾಯಕರಿಗೆ ತಲೆನೋವಾಗಿ ವರಿಷ್ಠರಿಂದಲೇ ಛೀಮಾರಿ ಹಾಕಿಸಿಕೊಳ್ಳುವಂತಾಗಿದೆ. ಈ ನಡುವೆ ರಾಜ್ಯಾಧ್ಯಕ್ಷರ ಬದಲಾವಣೆ ಹಿಂದೆ ನಡೆಯುತ್ತಿರುವ ಘಟನೆಗಳಿಂದ ಕಾರ್ಯಕರ್ತರ ಸ್ಥಿತಿ ಗೊಂದಲದ ಗೂಡಾಗಿದೆ.

ವಿಶ್ವವಾಣಿ ವಿಶೇಷ

ಪಕ್ಷದ ರಾಜ್ಯಾಧ್ಯಕ್ಷರ ನೇಮಕದಿಂದಲೇ ಆರಂಭವಾದ ಬಿರುಗಾಳಿ ನಂತರ ಪ್ರತಿಪಕ್ಷ ನಾಯಕ ಆಯ್ಕೆಗೆ ತಟ್ಟಿ ನಂತರ ರಾಜ್ಯಾಧ್ಯಕ್ಷರ ಬದಲಾವಣೆ, ಪ್ರತಿಪಕ್ಷ ಸ್ಥಾನದ ಬದಲಾವಣೆಯ ಕೂಗಿನಿಂದ ಹಿಡಿದಲ್ಲಿಂದ ಆರಂಭವಾದ ಎರಡು ಬಣ, ಹೋಳಾಗಿ, ಆ ಬಣಗಳನ್ನು ವಹಿಸಿಕೊಳ್ಳಲು ಒಳಬಣಗಳಾಗಿ, ತಟಸ್ಥ ಬಣ ಎಂದುಕೊಂಡರೂ ಸಂಘ ಪರಿವಾರದ ಮಗದೊಂದು ತಂಡವಾಗಿ, ಈಗ ಮಾಜಿಗಳ ಬಣ, ಅದರಲ್ಲಿ ಜಾತಿ ಬಣ, ಸಂಸದರ ಬಣ ಅದರಲ್ಲೂ ಮಾಜಿ ಸಂಸದರೊಂದು ಒಳ ಬಣ, ಬೆಂಗಳೂರು ಬಣ, ಮಂಗಳೂರು ಬಣ, ಉತ್ತರ ಭಾಗದ್ದೇ ನಾಲ್ಕೈದು ಬಣಗಳಾಗಿ ಕೇಸರಿಯ ದಳಗಳೇ ಚದುರಿ ಹೋಗುತ್ತಿದೆ.

ತೀವ್ರಗೊಂಡ ಒಳಬೇಗುದಿ: ಪಕ್ಷದ ರಾಜ್ಯಾಧ್ಯಕ್ಷ ನೇಮಕದಿಂದ ಆರಂಭವಾದ ಅಸಹನೆ ನಂತರ ಪ್ರತಿಪಕ್ಷದ ನಾಯಕರ ಆಯ್ಕೆಯ ಸಮಯದ ನಂತರವೂ ಒಳಬೇಗುದಿ ಇದೆ. ಇದಲ್ಲದೆ ಪಕ್ಷದ ಪದಾಧಿಕಾರಿಗಳ ನೇಮಕ ವಿಚಾರದಲ್ಲೂ, ಆನಂತರ ನಡೆದ ವಕ್ಫ್ ಹೋರಾಟದಲ್ಲೂ ಈ ಒಳಬೇಗುದಿ ಮುಂದುವರಿದಿತ್ತು. ಬಸನಗೌಡ ಪಾಟೀಲ್ ಯತ್ನಾಳ್ ಮೊದಲಿಗೆ ರಾಜ್ಯಾಧ್ಯಕ್ಷರ ಬದಲಾವಣೆಗೆ ಧ್ವನಿ ಎತ್ತಿದ್ದಲ್ಲದೆ, ನಂತರ ವಕ್ಫ್ ವಿಚಾರದಲ್ಲಿ ತಾರಕಕ್ಕೇರಿ ಪ್ರತ್ಯೇಕ ಹೋರಾಟವನ್ನೇ ಮಾಡಿದ್ದರು.

→ 4

ವರಿಷ್ಠರ ಅಸಮಾಧಾನ

ಜಿಲ್ಲಾಧ್ಯಕ್ಷರ ನೇಮಕ ಸಂಬಂಧ ಸಭೆಯಲ್ಲಿ ತೀವ್ರ ಗೊಂದಲಗಳು ಮೂಡಿವೆ. ಪ್ರಮುಖವಾಗಿ 39 ಜಿಲ್ಲಾಧ್ಯಕ್ಷರ ನೇಮದಲ್ಲಿ 23 ಜಿಲ್ಲಾಧ್ಯಕ್ಷರ ನೇಮಕ ಸರಿಯಾಗಿಲ್ಲ. ರಾಜ್ಯಾಧ್ಯಕ್ಷರ ಬಣದ ಪರವಾಗಿದೆ ಎಂದು ಕೆಲವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇದರಲ್ಲಿ ಬೆಂಗಳೂರು ಉತ್ತರ, ದಕ್ಷಿಣ, ಕೇಂದ್ರ, ತುಮಕೂರು, ಚಿತ್ರದುರ್ಗ, ಯಾದಗಿರಿ, ಗದಗ ಸೇರಿದಂತೆ 9 ಜಿಲ್ಲೆಗಳ ಅಧ್ಯಕ್ಷರ ಬದಲಾವಣೆ ಆಗಲೇಬೇಕು ಎಂದು ಪಟ್ಟು ಹಿಡಿಯಲಾಗಿದೆ. ಹೀಗಾಗಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮಾಡಿದ್ದ ಪಟ್ಟಿಗೆ ಅಷ್ಟಾಗಿ ವಿಶ್ವಾಸವಿಲ್ಲದಂತಾಗಿದೆ. ಈ ಸಂಬಂಧ ಹಿರಿಯರಿಗೆ ಪಟ್ಟಿ ಮಾಡುವ ಜವಾಬ್ದಾರಿ ಉಸ್ತುವಾರಿಗಳು ವಹಿಸಿದ್ದರು. ಇದಕ್ಕೂ ಕೂಡ ಆಕ್ಷೇಪ ವ್ಯಕ್ತವಾಗಿದೆ. ಉಸ್ತುವಾರಿಗಳು ಹೇಳಿದಂತೆ ಮಾಜಿ ಸಿಎಂ ಡಿ.ವಿ.ಸದಾನಂದಗೌಡ ಅವರ ನಿವಾಸದಲ್ಲಿ ಬಸವರಾಜ ಬೊಮ್ಮಾಯಿ ಸೇರಿದಂತೆ ಹಲವರು ಬುಧವಾರ ಚರ್ಚೆ ನಡೆಸಿದ್ದಾರೆ. ಜಿಲ್ಲಾಧ್ಯಕ್ಷರ ನೇಮಕದಲ್ಲಿ ಈ ಎಲ್ಲವೂ ಪರಿಗಣಿಸುವ ಸಾಧ್ಯತೆಯಿದೆ ಎನ್ನಲಾಗಿದೆ.

ಉಸ್ತುವಾರಿಗಳೇ ಹೊರೆ!

ಬಿಜೆಪಿಯ ಆಂತರಿಕ ಸಮಸ್ಯೆ ಬಗೆಹರಿಸಬೇಕಿದ್ದ ಕೋರ್ ಕಮಿಟಿ ಸಭೆಯೇ ಕೇಂದ್ರಕ್ಕೂ ಹಾಗೂ ರಾಜ್ಯದ ಕೆಲ ನಾಯಕರಿಗೂ ಹೊರೆಯಾದಂತಿದೆ. ಪಕ್ಷ ಸಂಘಟನೆ ಕೋರ್ ಕಮಿಟಿ ಸಭೆಯಲ್ಲಿ ಪಕ್ಷದ ಪ್ರಮುಖ ನಾಯಕ ಶ್ರೀರಾಮುಲು ತಮ್ಮ ಮೇಲಿನ ಆರೋಪದಿಂದಾಗಿ ಪಕ್ಷ ಬಿಡುವ ಮಾತನಾಡಿದ್ದರು. ಇದಾಗಿ ಅಲ್ಲೊಂದು ಬಣಸೃಷ್ಟಿಯಾಗಿ ಆಪ್ತಮಿತ್ರರಂತಿದ್ದ ಜನಾರ್ದನ ರೆಡ್ಡಿ ಹಾಗೂ ಶ್ರೀರಾಮುಲು ನಡುವೆ ಸಾರ್ವಜನಿಕವಾಗಿ ಮಾತಿನ ಸಮರ ಮುಂದುವರಿದಿದೆ. ಇದು ಪಕ್ಷಕ್ಕೆ ಆದ ಮತ್ತೊಂದು ಹಿನ್ನಡೆ. ಇದೇ ವೇಳೆಯಲ್ಲಿ ರಾಜ್ಯದ ಸಮಸ್ಯೆ ಬಗೆಹರಿಸಬೇಕಿದ್ದ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರವಾಲ್ ಅವರ ನಡೆಯಿಂದ ಸಂಘಟನೆಗೆ ಸಮಸ್ಯೆಯಾಗಿದೆ. ದಾಸ್ ಅವರ ಈ ನಡೆಗೆ ಸ್ವತಃ ಬಿಜೆಪಿ ವರಿಷ್ಠರು ತೀವ್ರ ಅಕ್ಷೇಪ ವ್ಯಕ್ತಪಡಿಸಿದ್ದಾರೆ. ಕೋರ್ ಕಮಿಟಿ ಸಭೆಯಲ್ಲಿ ಬಗೆಹರಿಯಬೇಕಿದ್ದ ಹಾಗೂ ಅದರ ವರದಿ ಕೇಂದ್ರಕ್ಕೆ ಸಲ್ಲಿಸಬೇಕಿದ್ದ ಉಸ್ತುವಾರಿಗಳು ಮತ್ತದೇ ಸಮಸ್ಯೆಯನ್ನು ಇಬ್ಬರು ಮಾಜಿ ಮುಖ್ಯಮಂತ್ರಿಗಳಿಗೆ ಸರಿಮಾಡಲು ತಿಳಿಸಿರುವುದು ಮತ್ತೊಂದು ಬಣ ಸೃಷ್ಟಿಯಾಗಲು ಕಾರಣವಾಗಿದೆ. ಕೋರ್ ಕಮಿಟಿಯಲ್ಲಿ ನಡೆದ ಸಂಘಟನಾ ಪರ್ವದ ವರದಿಯನ್ನು ಕೇಂದ್ರ ಸಮಿತಿಗೆ ಕಳುಹಿಸದಿರುವುದು, ರಾಜ್ಯಾಧ್ಯಕ್ಷರ ಮೇಲೆ ಉಸ್ತುವಾರಿಗಳಿಗೆ ವಿಶ್ವಾಸವಿಲ್ಲದಿರುವುದು ಹಾಗೂ ಜಿಲ್ಲಾಧ್ಯಕ್ಷರ ವಿಚಾರವನ್ನು ಮಾಜಿ ಸಿಎಂಗಳಿಗೆ ವಹಿಸಿರುವುದು ಹಾಗೂ ಕೋರ್ ಕಮಿಟಿಯಲ್ಲಿ ನಡೆದ ಶ್ರೀರಾಮುಲು ಘಟನೆಯೂ ಕೂಡ ವರಿಷ್ಠರ ಕೆಂಗಣ್ಣಿಗೆ ಕಾರಣವಾಗಿದೆ. ಉಸ್ತುವಾರಿಗಳ ದ್ವಂದ್ವ ಹಾಗೂ ಗೊಂದಲಕಾರಿ ನಡೆಯ ಬಗ್ಗೆ ರಾಷ್ಟ್ರಾಧ್ಯಕ್ಷರು ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ. ಇದೆಲ್ಲದರ ನಡುವೆಯೇ ಶ್ರೀರಾಮುಲುಗೆ ಸ್ವತಃ ಜೆ.ಪಿ.ನಡ್ಡಾ ಕರೆ ಮಾಡಿರುವುದು ಹಾಗೂ ಬಿ.ವೈ.ವಿಜಯೇಂದ್ರ ದೆಹಲಿಯತ್ತ ಮುಖ ಮಾಡಿರುವುದು ಕುತೂಹಲ ಮೂಡಿಸಿದೆ.

ಬಲವಂತದ ಸಾಲ ವಸೂಲಿ ನಿಯಂತ್ರಣಕ್ಕೆ ಕಾನೂನು ಅಸ್ತ್ರ
ಕಿರುಸಾಲ ಕಂಪನಿಗಳಿಂದ ಬಲವಂತದ ಸಾಲ ವಸೂಲಿ ದೂರು

ಮೈಕ್ರೋ ಫೈನಾನ್ಸ್ ಕಿರುಕುಳ ತಡೆಗೆ ಸುಗ್ರೀವಾಜ್ಞೆ: ಪರಂ

ಬೆಂಗಳೂರು: ರಾಜ್ಯದಲ್ಲಿ ದಿನದಿಂದ ದಿನಕ್ಕೆ ಮೈಕ್ರೋ ಫೈನಾನ್ಸ್ ಕಂಪನಿಗಳ ಸಾಲ ಮರುಪಾವತಿಯ ನೆಪದಲ್ಲಿ ನೀಡುತ್ತಿರುವ ಹಾವಳಿ ಹೆಚ್ಚಾಗುತ್ತಿದ್ದಂತೆ, ಇದನ್ನು ಮಟ್ಟ ಹಾಕಲು ಸುಗ್ರೀವಾಜ್ಞೆ ಮೂಲಕ ಕಾನೂನು ಜಾರಿಗೊಳಿಸಲು ರಾಜ್ಯ ಸರಕಾರ ತೀರ್ಮಾನಿಸಿದೆ.

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಶನಿವಾರ ಸಭೆ ನಡೆಯಲಿದ್ದು, ಈ ಸಭೆಯಲ್ಲಿ ಆರ್‌ಬಿಐ ಮಾರ್ಗಸೂಚಿ ಅನ್ವಯ ಸಾಲ ಮರುಪಾವತಿ ಮಾಡದೇ, ದಾಂಧಲೆ ನಡೆಸುತ್ತಿರುವ, ಮಾನಸಿಕ, ದೈಹಿಕ ಹಿಂಸೆಯ ಮೂಲಕ ಸಾರ್ವಜನಿಕರಿಗೆ ತೊಂದರೆ ಕೊಡುತ್ತಿರುವ ಸಂಸ್ಥೆಗಳ ವಿರುದ್ಧ ಕ್ರಮವಹಿಸಲು ಪ್ರತ್ಯೇಕ ಕಾನೂನಿನ ಬಗ್ಗೆ ಚರ್ಚೆ ನಡೆಯಲಿದೆ ಎನ್ನಲಾಗಿದೆ.

ಪ್ರತ್ಯೇಕ ಕಾನೂನು ರಚಿಸಲು ಚರ್ಚೆ: ಮೈಕ್ರೋ ಫೈನಾನ್ಸ್ ಹಾವಳಿಯನ್ನು ಯಾವ ರೀತಿಯಲ್ಲಿ ಮಟ್ಟ ಹಾಕಬಹುದು? ಆರ್‌ಬಿಐ ಮಾರ್ಗಸೂಚಿ ಹೊರತುಪಡಿಸಿ, ವಸೂಲಿ ಮಾಡುವ ಕಂಪನಿಗಳ ನಿಯಂತ್ರಣಕ್ಕೆ ಪ್ರತ್ಯೇಕ ಕಾನೂನು ತರುವ ಸಂಬಂಧವೂ ಸಭೆಯಲ್ಲಿ ಚರ್ಚೆ ನಡೆಯುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಮೂಲಗಳ ಪ್ರಕಾರ ಮೈಕ್ರೋ ಫೈನಾನ್ಸ್ ಹಾವಳಿಯನ್ನು ಶೀಘ್ರವೇ ತಡೆಗಟ್ಟಬೇಕಿರುವುದರಿಂದ ರಾಜ್ಯ ಸರಕಾರ ಮುಂದಿನ ಅಧಿವೇಶನ ದವರೆಗೆ ಕಾಯದೇ, ಸುಗ್ರೀವಾಜ್ಞೆ ಮೂಲಕ ಕಾನೂನು ಜಾರಿಗೊಳಿಸಲು ತೀರ್ಮಾನಿಸಲಾಗಿದೆ. ಆದರೆ ಈ ಕಾನೂನು ರಚಿಸುವ ವೇಳೆ ಹಲವು ಸವಾಲುಗಳಿದ್ದು, ಈ ಬಗ್ಗೆ ಚರ್ಚಿಸಿ ಅಂತಿಮ ರೂಪುರೇಷೆ ನೀಡುವ ಸಾಧ್ಯತೆಯಿದೆ.

ಮೈಕ್ರೋ ಫೈನಾನ್ಸ್ ಬಗ್ಗೆ ಮುಖ್ಯಮಂತ್ರಿಗಳು, ಕಂದಾಯ, ಗೃಹ, ಕಾನೂನು ಸಚಿವರು ಸೇರಿ ಚರ್ಚಿಸುತ್ತಿದ್ದಾರೆ. ಈ ವಿಚಾರದ ಬಗ್ಗೆ ನಾನು ಹಿಂದೆ ಅಧ್ಯಯನ ಮಾಡಿದ್ದೆ. ಕಾನೂನಾತ್ಮಕವಾಗಿ ಯಾವ ಕ್ರಮ ತೆಗೆದುಕೊಳ್ಳಬಹುದು ಎಂದು ನಾವು ಚರ್ಚೆ ಮಾಡುತ್ತೇವೆ. ಸದ್ಯದಲ್ಲಿಯೇ ಸರಕಾರ ತೀರ್ಮಾನ ಕೈಗೊಳ್ಳಲಿದೆ. ಈ ವಿಷಯವನ್ನು ನಾವು ಇದನ್ನು ಗಂಭೀರವಾಗಿ ಪರಿಗಣಿಸಿದ್ದೇವೆ.

– ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಕಾನೂನುಬಾಹಿರ ಕ್ರಮಕ್ಕೆ ನಿಯಂತ್ರಣ

ಈ ಬಗ್ಗೆ ಮಾತನಾಡಿದ ಗೃಹಸಚಿವ ಡಾ.ಜಿ. ಪರಮೇಶ್ವರ್, ಮೈಕ್ರೋ ಫೈನಾನ್ಸ್ ಕಂಪನಿಗಳು ಸಾಲ ವಸೂಲಿಗೆ ನಿಯಮಬಾಹಿರ ಕ್ರಮಗಳನ್ನು ಕೈಗೊಳ್ಳದಂತೆ ಸೂಚನೆ ನೀಡಿದ್ದಾರೆ. ಸಾಲ ಕೊಡುವಾಗ ಹಲವಾರು ಕಡೆ ಸಹಿ ಮಾಡಲಾಗಿರುತ್ತದೆ. ಅಷ್ಟು ಸಹಿಗಳನ್ನು ಏಕೆ ಮಾಡಲಾಗಿದೆ ಎಂದು ಸಾಲ ತೆಗೆದುಕೊಳ್ಳುವವರಿಗೆ ತಿಳಿದಿರುವುದಿಲ್ಲ. ಸಾಲ ಕೊಡುವವರು ಕೆಲವು ಆಸ್ತಿಗಳನ್ನು ಅಡಮಾನ ಮಾಡಿಕೊಂಡಿರುತ್ತಾರೆ. ಅದರ ಮೇಲೆ ಮನೆಗಳ ಮೇಲೆ ದಾಳಿ ಹಾಗೂ ಜಪ್ತಿ ಮಾಡುವುದು ಮುಂತಾದ ಕ್ರಮ ಕೈಗೊಳ್ಳುತ್ತಾರೆ. ಇದಕ್ಕೆ ಕಾನೂನು ಮೂಲಕವೇ ಪರಿಹಾರ ಕಂಡುಕೊಳ್ಳುವ ಅಗತ್ಯವಿದೆ. ಅದಕ್ಕಾಗಿ ಈಗಾಗಲೇ ಕಾನೂನು ಸಚಿವರು ಸೂಕ್ತ ತಿದ್ದುಪಡಿಗೆ ಮುಂದಾಗಿದ್ದಾರೆ ಎಂದರು.

ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಹಾವಳಿ ಹೆಚ್ಚುತ್ತಿದೆ. ಒಂದು ತಿಂಗಳಿನಿಂದ ಈ ಸಮಸ್ಯೆ ಇದೆ. ಜನರು ಹಳ್ಳಿಗಳನ್ನು ಬಿಟ್ಟು ಹೋಗುತ್ತಿದ್ದಾರೆ. ಇಡೀ ರಾಜ್ಯದಲ್ಲಿ ಈ ಸಮಸ್ಯೆ ಇದೆ. ಮೈಕ್ರೋ ಫೈನಾನ್ಸ್‌ನವರು ಜನಸಾಮಾನ್ಯರ ಮೇಲೆ ಕಿರುಕುಳ ಕೊಡುತ್ತಿದ್ದಾರೆ. ಆದರೆ ಸರಕಾರ ಕ್ರಮ ತೆಗೆದುಕೊಳ್ಳುತ್ತಿಲ್ಲ. ಜನರಿಗೆ ಮಾನಸಿಕ ಸ್ಥೈರ್ಯ ತುಂಬುವ ಕೆಲಸ ಮಾಡುತ್ತಿಲ್ಲ.

– ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಅರಮನೆ ವ್ಯಾಜ್ಯದ ಹಿನ್ನೆಲೆಯಲ್ಲಿ ಸಚಿವ ಸಂಪುಟದ ನಿರ್ಧಾರ

ಅರಮನೆ ಮೈದಾನ ಬಳಕೆಗೆ ಸುಗ್ರೀವಾಜ್ಞೆ



ಬೆಂಗಳೂರು: ಬೆಂಗಳೂರು ಅರಮನೆ ಮೈದಾನದ ಜಾಗ ಬಳಸಿಕೊಳ್ಳುವುದಕ್ಕೆ ಸುಗ್ರೀವಾಜ್ಞೆ ಹೊರಡಿಸುವ ಬಗ್ಗೆ ಸಂಪುಟದಲ್ಲಿ ನಿರ್ಣಯ ಕೈಗೊಳ್ಳಲಾಗಿದೆ ಎಂದು ಸಚಿವ ಎಚ್.ಕೆ.ಪಾಟೀಲ್ ಹೇಳಿದ್ದಾರೆ.

ವಿಧಾನಸೌಧದಲ್ಲಿ ಶುಕ್ರವಾರ ನಡೆದ ತುರ್ತು ಸಚಿವ ಸಂಪುಟ ಸಭೆಯ ಬಳಿಕ ಮಾತನಾಡಿದ ಅವರು, ಬೆಂಗಳೂರು ಅರಮನೆ ರಸ್ತೆ ಅಗಲೀಕರಣ ಯೋಜನೆ ವಿಚಾರವಾಗಿ ಟಿಡಿಆರ್ ವಿಸ್ತರಣೆಗೆ ಸಂಪುಟ ನಕಾರವೆತ್ತಿದ್ದು, ವಾರಸುದಾರರಿಗೆ ಟಿಡಿಆರ್ ನೀಡದಿರಲು ನಿರ್ಧರಿಸಲಾಗಿದೆ ಎಂದು ತಿಳಿಸಿದ್ದಾರೆ.

ಕಾನೂನು ಪ್ರಕ್ರಿಯೆ: 1996ರಲ್ಲಿ ಅರಮನೆ ಮೈದಾನ ವಶಕ್ಕೆ ಪಡೆಯಲು ಕಾನೂನು ಮಾಡಲಾಗಿತ್ತು. ಅದು ರಾಜ್ಯಪಾಲರು, ರಾಷ್ಟ್ರಪತಿ ಬಳಿಗೆ ಹೋಗಿತ್ತು. ಅಲ್ಲಿಂದ ಅಂಗೀಕಾರ ಆಗಿರುವ ಕಾನೂನು. ಈ ಕಾನೂನಿನಂತೆ 472 ಎಕರೆ ಭೂಮಿಯನ್ನು ಗೊತ್ತುಪಡಿಸಲಾಗಿತ್ತು. ಅಂದಿನ ದರ, ವಿವಿಧ ಅಂಶ ಪರಿಗಣಿಸಿ 11ಕೋಟಿ ರು. ಮೌಲ್ಯ ನಿರ್ಧರಿಸಿತ್ತು. ಅದಾದ ಬಳಿಕ ಜಾವೇರಿಯಲ್ಲಿ ದೊಡ್ಡ ಪ್ರಮಾಣದಲ್ಲಿ ನೀರು ಹರಿದಿದೆ, 28 ವರ್ಷ ಗತಿಸಿದೆ ಎಂದಿದ್ದಾರೆ. 1996ರ ಭೂಸ್ವಾಧೀನ ಕಾನೂನನ್ನು ಮೈಸೂರು ಮಹಾರಾಜರು ಪ್ರಶ್ನೆ ಮಾಡಿದ್ದರು. ಅದನ್ನು ಹೈಕೋರ್ಟ್ ಎತ್ತಿಹಿಡಿದಿತ್ತು. ಬಳಿಕ ಸುಪ್ರೀಂಕೋರ್ಟ್‌ಗೆ ಸಿವಿಲ್ ಅಪೀಲು ಹೋಗಿದ್ದರು. ಟಿಡಿಆರ್ ವ್ಯವಸ್ಥೆ ಬಂದ ಮೇಲೆ ಜಯಮಹಲ್ ರಸ್ತೆ, ಬಳ್ಳಾರಿ ರಸ್ತೆ ಅಗಲೀಕಣ ವೇಳೆ ಮತ್ತೆ ಪ್ರಕರಣ ಚರ್ಚೆಗೆ ಬರುತ್ತದೆ. ಪ್ರತಿ ಎಕರೆಗೆ 2.30 ಲಕ್ಷ ರು. ಪರಿಹಾರ ಕೊಡಬೇಕು ಎಂದು ಆದೇಶ ನೀಡಲಾಗಿದೆ ಎಂದರು.

2004ರಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಾಗಿದೆ. ರಸ್ತೆ ಅಗಲೀಕರಣದ ಉದ್ದೇಶದಿಂದ ಅರಮನೆ ಮೈದಾನವನ್ನು ಮೌಲೀಕರಿಸಿ ವರ್ಗಾವಣೆ ಮಾಡಲು ಕೋರ್ಟ್ ಆದೇಶ ನೀಡಿದೆ. ಪ್ರತಿ ಎಕರೆಗೆ 200 ಕೋಟಿಯಂತೆ 15.36 ಎಕರೆ ಭೂಮಿಗೆ 3014 ಕೋಟಿ ರು. ಕೊಡಬೇಕಿದೆ. 2.30 ಲಕ್ಷ ರು. ಎಲ್ಲಿ 3014 ಕೋಟಿ ರು ಎಲ್ಲಿ? ಈ ರೀತಿ ಮಾಡುವುದರಿಂದ ಅಭಿವೃದ್ಧಿಗೆ ಸಮಸ್ಯೆಯಾಗಲಿದೆ ಎಂದರು.

ನಾಗ್ಪುರ ಶಸ್ತ್ರಾಸ್ತ್ರ ಕಾರ್ಖಾನೆಯಲ್ಲಿ ಸ್ಫೋಟ: 8 ಸಾವು

ನಾಗಪುರ: ಮಹಾರಾಷ್ಟ್ರದ ಭಂಡಾರಾ ಜಿಲ್ಲೆಯ ಶಸ್ತ್ರಾಸ್ತ್ರ ತಯಾರಿಕಾ ಕಾರ್ಖಾನೆಯಲ್ಲಿ ಶುಕ್ರವಾರ ಸಂಭವಿಸಿದ ಭೀಕರ ಸ್ಫೋಟದಲ್ಲಿ ಎಂಟು ಜನರು ದುರ್ಮರಣಕ್ಕೀಡಾಗಿದ್ದು, ಇತರ ಏಳು ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ. ಜವಹರ್‌ನಗರದಲ್ಲಿರುವ ಕಾರ್ಖಾನೆಯ ಎಲ್‌ಟಿಪಿ ಘಟಕದಲ್ಲಿ ಮಧ್ಯಾಹ್ನ ಭಾರಿ ಸ್ಫೋಟ ಸಂಭವಿಸಿದೆ. ದುರ್ಘಟನೆ ವೇಳೆ ಸಾವಿರಕ್ಕೂ ಹೆಚ್ಚು ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದರು. ಸ್ಫೋಟದ ತೀವ್ರತೆಗೆ ಶಸ್ತ್ರಾಸ್ತ್ರ ತಯಾರಿಕಾ ಘಟಕದ ಛಾವಣಿ ಸಂಪೂರ್ಣ ಧ್ವಂಸಗೊಂಡು ಕುಸಿದಿದೆ. ಅವಶೇಷಗಳಡಿ ಸಿಲುಕಿದ ಎಂಟು ಜನರು ಸಾವಿಗೀಡಾದರು. ಏಳು ಜನರು ಗಾಯಗೊಂಡಿದ್ದಾರೆ.

ಡಿ ಗ್ಯಾಂಗ್ ಸದಸ್ಯರಿಗೆ ಸುಪ್ರೀಂ ಕೋರ್ಟ್‌ನಿಂದ ನೋಟಿಸ್ ಜಾರಿ

ದರ್ಶನ್ ಜಾಮೀನು ರದ್ದತಿಗೆ ಸುಪ್ರೀಂ ನಕಾರ

ಬೆಂಗಳೂರು: ಚಿತ್ರದುರ್ಗದ ರೇಣುಕಾ ಸ್ವಾಮಿ ಕೊಲೆ ಪ್ರಕರಣ ದಲ್ಲಿ ಜಾಮೀನು ಪಡೆದಿರುವ ನಟ ದರ್ಶನ್ ಸೇರಿದಂತೆ ಇತರ 7 ಆರೋಪಿಗಳಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ನೋಟೀಸ್ ಜಾರಿ ಮಾಡಿದೆ. ಆದರೆ ಜಾಮೀನು ರದ್ದುಮಾಡಲು ಕೋರ್ಟ್ ನಿರಾಕರಿಸಿದೆ.

ಹೈಕೋರ್ಟ್ ನೀಡಿರುವ ಜಾಮೀನು ಪ್ರಶ್ನಿಸಿ ಕರ್ನಾಟಕ ಸರಕಾರ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ದಿವಾಲಾ ಮತ್ತು ಆರ್. ಮಹದೇವನ್ ಅವರ ವಿಭಾಗೀಯ ಪೀಠವು ನಟ ದರ್ಶನ್ ಸೇರಿ 7 ಮಂದಿಗೆ ನೋಟೀಸ್ ಜಾರಿ ಮಾಡಿದೆ.

ಪ್ರಾಸಿಕ್ಯೂಷನ್ ಪರವಾಗಿ ಹಿರಿಯ ವಕೀಲ ಸಿದ್ದಾರ್ಥ್ ಲೂಥ್ರಾ ವಾದ ಮಂಡಿಸಿ, ಹೈಕೋರ್ಟ್ ನೀಡಿರುವ ಜಾಮೀನು ತೀರ್ಪನ್ನು ಬೇರೆಯವರು ಬಳಕೆ ಮಾಡಿಕೊಳ್ಳಬಾರದು ಎಂದು ಸುಪ್ರೀಂ ಕೋರ್ಟ್‌ಗೆ ಕಾರಣ ಕೊಟ್ಟರು. ಆದರೆ, ನ್ಯಾಯಪೀಠ, ಜಾಮೀನು ಆದೇಶಕ್ಕೆ ತಡೆ ನೀಡಲಾಗದು ಎಂದು ಹೇಳಿ ನೋಟಿಸ್ ಜಾರಿಮಾಡಿತು. ಬೇರೆ ಆರೋಪಿಗಳು ಜಾಮೀನು ಕೋರಿದರೆ ಹೈಕೋರ್ಟ್ ಆದೇಶವನ್ನು ಆಧರಿಸಬಾರದು ಎಂದು ಹೇಳಿ ಅರ್ಜಿ ವಿಚಾರಣೆಯನ್ನು ಮುಂದೂಡಿತು.

ರೇಣುಕಾಸ್ವಾಮಿ ಕೊಲೆ ಕೇಸ್‌ನಲ್ಲಿ ಆರೋಪಿಗಳಿಗೆ ಡಿಸೆಂಬರ್‌ನಲ್ಲಿ ಕರ್ನಾಟಕ ಹೈಕೋರ್ಟ್ ಷರತ್ತುಬದ್ಧ ಜಾಮೀನು ನೀಡಿತ್ತು. ಕೋರ್ಟ್ ತೀರ್ಮಾನಕ್ಕೆ ಬೆಂಗಳೂರು ಪೊಲೀಸರು ಮೇಲ್ಮನವಿ ಸಲ್ಲಿಸಲು ತೀರ್ಮಾನಿಸಿ ಸೂಕ್ತ ಸಿದ್ಧತೆ ಮಾಡಿಕೊಂಡು ಸುಪ್ರೀಂ ಕೋರ್ಟ್‌ಗೆ ಜನವರಿ ಮೊದಲ ವಾರದಲ್ಲಿ ಅರ್ಜಿ ಸಲ್ಲಿಸಿದ್ದರು.

ಅಕ್ರಮವಾಸಿಗಳ ಗಡಿಪಾರು ಕ್ರಮಕ್ಕೆ ತಾತ್ಕಾಲಿಕ ನಿರ್ಬಂಧ
ಜನ್ಮದತ್ತ ಪೌರತ್ವ ರದ್ದು ಮಾಡಿದ ಟ್ರಂಪ್ ಆದೇಶಕ್ಕೆ ಹಿನ್ನಡೆ

ಟ್ರಂಪ್ ಆದೇಶಕ್ಕೆ ಕೋರ್ಟ್ ತಡೆ

ವಾಷಿಂಗ್ಟನ್ : ಅಮೆರಿಕಕ್ಕೆ ವಲಸೆ ಹೋಗಿ ವಾಸ ಮಾಡುತ್ತಿರುವ ಪೋಷಕರಿಗೆ ಹುಟ್ಟಿದ ಮಕ್ಕಳಿಗೆ ಪೌರತ್ವ ನಿರಾಕರಿಸುವ ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆದೇಶವನ್ನು ಒಕ್ಕೂಟ ನ್ಯಾಯಾಧೀಶರು ತಾತ್ಕಾಲಿಕವಾಗಿ ತಡೆಹಿಡಿದಿದ್ದಾರೆ. ಟ್ರಂಪ್ ಆದೇಶ ಪ್ರಶ್ನಿಸಲಾಗಿದ್ದ ಅರ್ಜಿಯ ಮೊದಲ ವಿಚಾರಣೆಯ ವೇಳೆ, ಈ ಆದೇಶ ಸಂವಿಧಾನ ಬಾಹಿರ ಎಂದು ನ್ಯಾಯಮೂರ್ತಿಗಳು ಅಭಿಪ್ರಾಯ ಪಟ್ಟಿದ್ದಾರೆ.

ಸಂವಿಧಾನದ 14 ನೇ ತಿದ್ದುಪಡಿ ಪ್ರಕಾರ ಅಮೆರಿಕದ ನೆಲದಲ್ಲಿ ಜನಿಸಿದವರಿಗೆ ಪೌರತ್ವದ ಭರವಸೆ ನೀಡಲಾಗುತ್ತದೆ. ಆದರೆ ಕಾನೂನುಬಾಹಿರ ವಲಸೆಯನ್ನು ತಡೆಯಲು ವಲಸಿಗರ ಮಕ್ಕಳಿಗೆ ಸಹಜವಾಗಿ ಬರುತ್ತಿದ್ದ ಜನ್ಮತಃ ಪೌರತ್ವವನ್ನು ತಡೆಯುವ ನಿಟ್ಟಿನಲ್ಲಿ ಟ್ರಂಪ್ ತಮ್ಮ ಎರಡನೇ ಅವಧಿಗೆ ಪ್ರಮಾಣವಚನ ಸ್ವೀಕರಿಸಿದ ಬೆನ್ನಲ್ಲೇ ಆದೇಶ ಹೊರಡಿಸಿದ್ದಾರೆ.

ಟ್ರಂಪ್ ಆದೇಶ ಸಂವಿಧಾನ ವಿರೋಧಿ: ಟ್ರಂಪ್ ಆದೇಶ ಅಸಾಂವಿಧಾನಿಕ ಎಂದು ಅಭಿಪ್ರಾಯ ಪಟ್ಟವಾಷಿಂಗ್ಟನ್ ಜಿಲ್ಲಾ ನ್ಯಾಯಾಧೀಶ ಜಾನ್ ಕೊಫೆನರ್, ನಾನು ನಾಲ್ಕು ದಶಕಗಳಿಂದ ಪೀಠದಲ್ಲಿದ್ದು, ಈ ರೀತಿಯಾಗಿ ಸ್ಪಷ್ಟವಾಗಿ ನಿರೂಪಿಸಿರುವ ಇಂತಹ ಮತ್ತೊಂದು ಪ್ರಕರಣ ನೆನಪಿಲ್ಲ. ಇದು ಸ್ಪಷ್ಟವಾಗಿ ಅಸಾಂವಿಧಾನಿಕ ಆದೇಶ ಎಂದು ತಮ್ಮ ನಿಲುವನ್ನು ಸ್ಪಷ್ಟಪಡಿಸಿದರು. ಎಂದು ಹೇಳಿದರು.

ಅಕ್ರಮವಾಗಿ ನೆಲೆಸಿದ್ದರೆ ಪೌರತ್ವ ಇಲ್ಲ

ಹೊಸ ಸರಕಾರದ ಆದೇಶದ ಪ್ರಕಾರ, ಪೋಷಕರು ಅಮೆರಿಕದಲ್ಲಿ ಅಕ್ರಮವಾಗಿನೆಲೆಸಿದ್ದರೆ, ಫೆ.19 ರ ನಂತರ ಅವರಿಗೆ ಜನಿಸಿದ ಮಕ್ಕಳಿಗೆ ಪೌರತ್ವ ಸಿಗುವುದಿಲ್ಲ. ಅಂತಹ ಮಕ್ಕಳಿಗೆ ಪೌರತ್ವವನ್ನು ಗುರುತಿಸುವ ಯಾವುದೇ ದಾಖಲೆ ನೀಡುವುದನ್ನು ಅಥವಾ ಸ್ವೀಕರಿಸುವುದನ್ನು ಟ್ರಂಪ್ ಸರಕಾರ ನಿಷೇಧಿಸುತ್ತದೆ. ಟ್ರಂಪ್‌ರ ಈ ಆದೇಶದಿಂದ ಕಾನೂನು ಬದ್ಧವಾಗಿ ನೆಲೆಸಿರುವ ವಲಸಿಗರಲ್ಲಿ ಭಾರಿ ಗೊಂದಲ ಉಂಟಾಗಿದೆ. ಅಲ್ಲದೆ, ಇದು ಅನೇಕ ಕಾನೂನು ಬಿಕ್ಕಟ್ಟುಗಳಿಗೂ ಕಾರಣವಾಗಿದೆ. ಈ ಗೊಂದಲ ನಿವಾರಣೆಗೆ ವಲಸಿಗರ ಹಕ್ಕುಗಳ ರಕ್ಷಣಾ ಗುಂಪುಗಳು ಅಮೆರಿಕದ 22 ರಾಜ್ಯಗಳ ಕೋರ್ಟ್‌ಗಳ ಮೊರೆಹೋಗಿವೆ. ವಾಷಿಂಗ್ಟನ್, ಅರಿಜೋನಾ, ಒರೆಗಾನ್ ಮತ್ತು ಇಲಿನಾಯ್ ಕೋರ್ಟ್‌ಗಳಲ್ಲಿ ಈ ಸಂಬಂಧ ವಿಚಾರಣೆ ನಡೆಯುತ್ತಿದೆ.

ಮರಕ್ಕೆ ಕಾರು ಡಿಕ್ಕಿ: ಸ್ಥಳದಲ್ಲೇ 3 ಸಾವು

ವಿಜಯಪುರ: ಚಾಲಕನ ನಿಯಂತ್ರಣ ತಪ್ಪಿ ಕಾರು ರಸ್ತೆಬದಿಯ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ, ಮೂವರು ಸ್ಥಳದಲ್ಲೇ ಮೃತ ಪಟ್ಟು, ಇನ್ನಿಬ್ಬರು ಗಾಯ ಗೊಂಡ ಘಟನೆ ವಿಜಾಪುರ ಹೊರ ವಲಯದ ರಾಷ್ಟ್ರೀಯ ಹೆದ್ದಾರಿ 50 ರ ಕನ್ನಾಳ ಕ್ರಾಸ್‌ನಲ್ಲಿ ಶುಕ್ರವಾರ ಬೆಳಗಿನಜಾವ ಸಂಭವಿಸಿದೆ. ವಿಜಯ ಕುಮಾರ ಔರಂಗಬಾದ್ (24), ಅಭಿಷೇಕ್ ಸಾವಂತ್ (23) ಮತ್ತು ರಾಜು ಬಿರಾದಾರ (23) ಮೃತರು.

27ಕ್ಕೆ ಭುವನೇಶ್ವರಿ ಪ್ರತಿಮೆ ಅನಾವರಣ

ಬೆಂಗಳೂರು: ಕರ್ನಾಟಕ ಸುವರ್ಣ ಮಹೋತ್ಸವದ ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ವಿಧಾನಸೌಧದ ಪಶ್ಚಿಮ ದ್ವಾರದಲ್ಲಿ ನಿರ್ಮಾಣಗೊಂಡಿರುವ ಭುವನೇಶ್ವರಿಯ ಕಂಚಿನ ಪ್ರತಿಮೆ ಜ.27ರಂದು ಅನಾವರಣಗೊಳ್ಳಲಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ, ಕರ್ನಾಟಕ ಸುವರ್ಣ ಮಹೋತ್ಸವದ ಹಿನ್ನೆಲೆಯಲ್ಲಿ 'ಹೆಸರಾಯಿತು ಕರ್ನಾಟಕ ಹಾಗೂ ಉಸಿರಾಗಲಿ ಕನ್ನಡ' ಶೀರ್ಷಿಕೆ ಯಲ್ಲಿ ವರ್ಷವಿಡೀ ರಾಜ್ಯಾದ್ಯಂತ ಹಲವು ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗಿತ್ತು. ಅದರಂತೆ ಕನ್ನಡಾಂಬೆಯ ಪ್ರತಿಮೆಯನ್ನು ವಿಧಾನಸೌಧದ ಆವರಣದಲ್ಲಿ ಪ್ರತಿಷ್ಠಾಪಿಸಲು ನಿರ್ಧರಿಸಲಾಗಿತ್ತು ಎಂದು ತಿಳಿಸಿದರು.

ಶಕ್ತಿಸೌಧದ ಮುಂದೆ ಸರಸ್ವತಿ ದರ್ಶನ | ಪುಸ್ತಕ ಮೇಳ, ಮಾರಾಟ, ವಿಚಾರ ವಿನಿಮಯ | ಮೊದಲ ಬಾರಿಗೆ ವಿಧಾನಸೌಧದಲ್ಲಿ ಪುಸ್ತಕ ಮೇಳ

ಫೆ.28ರಿಂದ 4 ದಿನ ಪುಸ್ತಕ ಮೇಳ

0 **ಬೆಂಗಳೂರು:** ದೇಶದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ವಿಧಾನಸೌಧದ ಆವರಣದಲ್ಲಿ ಪುಸ್ತಕ ಮೇಳ ಹಾಗೂ ಆಹಾರ ಮೇಳಯನ್ನು ಆಯೋಜಿಸಲು ಸಚಿವಾಲಯ ತೀರ್ಮಾನಿಸಿದೆ. ಫೆ.28ರಿಂದ ನಾಲ್ಕು ದಿನಗಳ ಕಾಲ ಪುಸ್ತಕ ಹಾಗೂ ಆಹಾರಮೇಳ ನಡೆಯಲಿದೆ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ವಿಧಾನಸಭೆ ಸಚಿವಾಲ ಯದ ವತಿಯಿಂದ ಪುಸ್ತಕ ಮೇಳ ಹಾಗೂ ಸಾಹಿತ್ಯ ಮೇಳ ಮಾಡಲು ತೀರ್ಮಾನಿ ಸಲಾಗಿದೆ. ವಿಧಾನಸೌಧದ ಆವರಣದಲ್ಲಿ ಪುಸ್ತಕ ಮೇಳ ನಡೆಸಲಾಗುತ್ತದೆ. ಫೆ.28ರಿಂದ ಮಾರ್ಚ್ 3ರವರೆಗೆ ಪುಸ್ತಕ ಮೇಳ ಹಾಗೂ ಸಾಹಿತ್ಯ ಮೇಳ ಕೈಗೊಳ್ಳಲಾಗುವುದು. ಸಿಎಂ ಸಿದ್ದರಾಮಯ್ಯ ಅವರು ಪುಸ್ತಕ ಮೇಳ ಉದ್ಘಾಟನೆ ಮಾಡಲಿದ್ದಾರೆ ಎಂದು ತಿಳಿಸಿದರು.

ಸಾಹಿತಿಗಳು, ಪುಸ್ತಕಪ್ರಿಯರು, ವಿದ್ಯಾರ್ಥಿಗಳನ್ನು ವಿಧಾನಸೌಧದ ಹತ್ತಿರಗೊಳಿಸಲು ಇದು ಸಹಕಾರಿ ಯಾಗಲಿದೆ. ಸಾಹಿತ್ಯಕ್ಕೆ ಸಂಬಂಧಿಸಿದ ಕಾರ್ಯಾಗಾರ, ಪುಸ್ತಕ ಬಿಡುಗಡೆ ಹಾಗೂ ಉತ್ತಮ ಪುಸ್ತಕಕ್ಕೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಮಾಡಲಾಗುವುದು. ಶಾಸಕರು ತಮ್ಮ ನಿಧಿಯಿಂದ ಮೂರು ಲಕ್ಷ ರು. ಬಳಸಿ ಪುಸ್ತಕ ಖರೀದಿಸಿ ಅವರ ಕ್ಷೇತ್ರದ ಲೈಬ್ರರಿಗೆ ಕೊಡಬಹುದು. ಕಡಿಮೆ ದರದಲ್ಲಿ ಪುಸ್ತಕ ಸಿಗುವಂತೆ ಮಾಡಲಾಗುವುದು ಎಂದು ಸಭಾಧ್ಯಕ್ಷರು ವಿವರಿಸಿದರು.

ವಿಶ್ವವಾಣಿ
ಮೂರು ದಿನಗಳ ಕಾಲ ನಡೆಯಲಿರುವ ಪುಸ್ತಕ ಹಾಗೂ ಆಹಾರ ಮೇಳ | ಬ್ಯಾಂಕ್ವೆಟ್ ಹಾಲ್‌ನಲ್ಲಿ ವಿವಿಧ ಪುಸ್ತಕಗಳ ಬಿಡುಗಡೆ ಕಾರ್ಯಕ್ರಮ | ಸಂವಾದಕ್ಕೂ ಅವಕಾಶ
ಶಕ್ತಿಸೌಧದಲ್ಲಿ ಸಾಹಿತ್ಯ ಸಂಸ್ಕೃತಿಯ ಅನಾವರಣ
ಮೇಳದ ವಿಶೇಷತೆ ಏನು?
ನಮ್ಮಲ್ಲೇ ಮೊದಲು

ವಿಧಾನಸೌಧ ಆವರಣದಲ್ಲಿ ಪುಸ್ತಕ ಹಾಗೂ ಆಹಾರ ಮೇಳವನ್ನು ವಿಧಾನಸಭಾ ಸಚಿವಾಲಯದಿಂದ ಆಯೋಜಿಸಲಾಗುತ್ತಿದೆ ಎಂದು ಗುರುವಾರವೇ 'ವಿಶ್ವವಾಣಿ' ಪ್ರಕಟಿಸಿತ್ತು.

ಪುಸ್ತಕ ಮೇಳಕ್ಕೆ ಸಾರ್ವಜನಿಕರಿಗೆ ಮುಕ್ತ ಅವಕಾಶ ಇರಲಿದೆ. ಶಾಲಾ-ಕಾಲೇಜುಗಳ ಮಕ್ಕಳಿಗೆ ಹೆಚ್ಚಿನ ಅವಕಾಶ ನೀಡಲಾಗುವುದು. ನಮಗೆ ಎಡವೂ ಇಲ್ಲ, ಬಲವೂ ಇಲ್ಲ, ನಮ್ಮದು ಸ್ಟ್ರೈಟ್. ಗೇಟ್‌ನ ಹೊರಗಡೆ ಎಡ, ಬಲ ಇರಲಿ. ಆದರೆ ಒಳಗೆ ಬಂದ ಬಳಿಕ ನೇರವಾಗಿ ಇರಲಿ.

– ಯು.ಟಿ. ಖಾದರ್, ವಿಧಾನಸಭಾಧ್ಯಕ್ಷ

ಸಮಾಚಾರ ಸಣ್ಣದಲ್ಲ

ರಾಷ್ಟ್ರಪತಿಗಳ ಭೋಜನ ಕೂಟಕ್ಕೆ ಡಾ. ಸುರೇಶ್

ದಾವಣಗೆರೆ: ದೆಹಲಿಯಲ್ಲಿ ಜ. 26ರಂದು ನಡೆಯಲಿರುವ ಗಣರಾಜ್ಯೋತ್ಸವದ ಪ್ರಯುಕ್ತ ರಾಷ್ಟ್ರಪತಿ ಭವನದಲ್ಲಿ ಹಮ್ಮಿಕೊಂಡಿರುವ ಭೋಜನ ಕೂಟಕ್ಕೆ

ನಗರದ ಜ.ಜ.ಮು ವೈದ್ಯಕೀಯ ಕಾಲೇಜಿನ ಪೆಥಾಲಜಿ ವಿಭಾಗದ ಪ್ರಾಧ್ಯಾಪಕ ಹಾಗೂ ಹಿಮೋಫಿಲಿಯಾ ಸೊಸೈಟಿ ಅಧ್ಯಕ್ಷ ಡಾ. ಸುರೇಶ್ ಹನಗವಾಡಿ ಅವರನ್ನು ಆಹ್ವಾನಿಸಲಾಗಿದೆ. ಡಾ.ಸುರೇಶ್ ಅವರು ಅತಿ ವಿರಳ, ದುಬಾರಿ ವೆಚ್ಚದ ಹಿಮೋಫಿಲಿಯಾ ನ್ಯೂನ್ಯತೆ ಹೊಂದಿದ್ದು ಈ ಕಾಯಿಲೆ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿ ತಮ್ಮ ಹಿಮೋಫಿಲಿಯಾ ಸಮುದಾಯದವರ ಕಷ್ಟ ಕಾರ್ಪಣ್ಯ ಆಲಿಸಿ ಸರಕಾರ ಮತ್ತು ಸಾರ್ವಜನಿಕರಿಗೆ ನ್ಯೂನ್ಯತೆ ಬಗ್ಗೆ ಜಾಗೃತಿ ಮೂಡಿಸಿ ದುಬಾರಿ ವೆಚ್ಚದ ಹಿಮೋಫಿಲಿಯಾ ಚಿಕಿತ್ಸೆಯನ್ನು ಸರಕಾರದಿಂದ ಉಚಿತವಾಗಿ ದೊರಕಲು ಕಾರಣಕರ್ತರಾಗಿದ್ದಾರೆ. ಚಿಕಿತ್ಸಾ ಕೇಂದ್ರವನ್ನು ದಾವಣಗೆರೆಯಲ್ಲಿ ಸ್ಥಾಪಿಸಿ ಸಾವಿರಾರು ರೋಗಿಗಳಿಗೆ ಉತ್ಕೃಷ್ಟ ಗುಣಮಟ್ಟದ ಉಚಿತ ಚಿಕಿತ್ಸೆ ನೀಡುತ್ತಿದ್ದಾರೆ.

ತರಬೇತಿ ಶಿಬಿರಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ: ಪ್ರಸಕ್ತ ಸಾಲಿಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪ. ಜಾತಿ ಉಪಯೋಜನೆಯಡಿ ಪ. ಜಾತಿ ಯುವಕ, ಯುವತಿಯರಿಗೆ ಜಿಮ್ ಫಿಟ್ನೆಸ್ ಹಾಗೂ ನಿರೂಪಣಾ ಮತ್ತು ವಾರ್ತಾ ವಾಚಕ ತರಬೇತಿ ಶಿಬಿರ ಆಯೋಜಿಸಲಾಗಿದೆ. ಈ ತರಬೇತಿಯು ಬೆಂಗಳೂರಿನಲ್ಲಿ ನಡೆಸಲಾಗುವುದು. ಆಸಕ್ತರು ಜ. 25ರೊಳಗಾಗಿ ಅರ್ಜಿ ನಮೂನೆಯನ್ನು ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ದಾವಣಗೆರೆ ಇಲ್ಲಿ ಪಡೆದು, ದಾಖಲೆಗಳೊಂದಿಗೆ ಕಚೇರಿಗೆ ಸಲ್ಲಿಸಬೇಕು. ಮಾಹಿತಿಗಾಗಿ 08192-237480 ಸಂಪರ್ಕಿಸಿ.

ರಾಷ್ಟ್ರೀಯ ಮತದಾರರ ದಿನಾಚರಣೆ ಇಂದು

ದಾವಣಗೆರೆ: ಭಾರತ ಚುನಾವಣಾ ಆಯೋಗ, ಜಿಲ್ಲಾಡಳಿತ, ಜಿಪಂ ಹಾಗೂ ಪಾಲಿಕೆ ಸಹಯೋಗದಲ್ಲಿ ಜ.25ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ 'ಮತದಾನಕ್ಕಿಂತ ಇನ್ನೊಂದಿಲ್ಲ, ನಾನು ಖಚಿತವಾಗಿ ಮತದಾನ ಮಾಡುವೆ ಎಂಬ ಧ್ಯೇಯವಾಕ್ಯದೊಂದಿಗೆ 15ನೇ ರಾಷ್ಟ್ರೀಯ ಮತದಾರರ ದಿನಾಚರಣೆ ಆಯೋಜಿಸಲಾಗಿದೆ. ಕಾರ್ಯಕ್ರಮವನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾದ ರಾಜೇಶ್ವರಿ.ಎನ್ ಹೆಗಡೆ ಉದ್ಘಾಟಿಸುವರು. ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ.ಜಿ.ಎಂ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ.ಮ.ಕರೆಣ್ಣವರ ಘನ ಉಪಸ್ಥಿತರಿರುವರು. ಅತಿಥಿಗಳಾಗಿ ಜಿಪಂ ಸಿಇಒ ಡಾ.ಸುರೇಶ್ ಬಿ. ಇಟ್ನಾಳ್, ಎಸ್ಪಿ ಉಮಾ ಪ್ರಶಾಂತ್, ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್ ಭಾಗವಹಿಸುವರು.

ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗೆ ಅರ್ಜಿ

ದಾವಣಗೆರೆ: ಪ್ರಸಕ್ತ ಸಾಲಿಗೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಪ್ರಶಸ್ತಿ ನೀಡಲು ಆತ್ಮಸ್ಥೈರ್ಯದಿಂದ ಹೋರಾಡಿ ಜೀವನೋಪಾಯದಿಂದ ಪಾರು ಮಾಡಿದಂತಹ ಮಹಿಳೆಯರಿಗೆ ಕಿತ್ತೂರುರಾಣಿ ಚನ್ನಮ್ಮ ಪ್ರಶಸ್ತಿಗೆ ಪರಿಗಣಿಸಲು ಮಹಿಳೆಯರಿಂದ ಅರ್ಜಿ ಆಹ್ವಾನಿಸಲಾಗಿದೆ. ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಅರ್ಹ ಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳನ್ನೊಳಗೊಂಡಂತೆ ಕ್ರೀಡೆ, ಕಲೆ, ಸಾಹಿತ್ಯ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಮಹಿಳೆಯರು ಅರ್ಜಿ ಸಲ್ಲಿಸಬಹುದು. ಅರ್ಜಿ ನಮೂನೆಗಳನ್ನು ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,ಸರಕಾರಿ ಬಾಲಕರ ಬಾಲಮಂದಿರ ಕಟ್ಟಡ, 14ನೇ ಮುಖ್ಯರಸ್ತೆ, ಕುವೆಂಪು ನಗರ, ಎಂ.ಸಿ.ಸಿ ಬಿ ಬ್ಲಾಕ್, ದಾವಣಗೆರೆ ಇಲ್ಲಿ ಪಡೆದು ಭರ್ತಿಮಾಡಿ ದ್ವಿ-ಪ್ರತಿಯಲ್ಲಿ ಫೆ. 5 ರೊಳಗಾಗಿ ಕಚೇರಿಗೆ ಸಲ್ಲಿಸಬೇಕು. ಮಾಹಿತಿಗಾಗಿ ದೂ: 08192-264056 ಸಂಪರ್ಕಿಸಲು ಉಪನಿರ್ದೇಶಕ ರಾಜಾನಾಯ್ಕ ತಿಳಿಸಿದ್ದಾರೆ.

ಮಾನ್ಯ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹರಿಹರ.
ಸಿ.ಆರ್. ಮಿಸ್. ನಂ: 18/2025

ಅರ್ಜಿದಾರರು : ಶ್ರೀ ಹುಳ್ಳೇರ ಹನುಮಂತಪ್ಪ ಬಿನ್ ಹಾಲಪ್ಪ ವಯಸ್ಸು : 61 ವರ್ಷ, ವಾಸ : ಜಿಗಳಿ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

-:ವಿರುದ್ಧ:-

ಎದುರುದಾರರು : ಜನನ ಮತ್ತು ಮರಣ ನೊಂದಾಣಾಧಿಕಾರಿಗಳು ಮಾನ್ಯ ತಹಶೀಲ್ದಾರರು, ಹರಿಹರ ತಾಲ್ಲೂಕು ಕಛೇರಿ ಹರಿಹರ.

ಅರ್ಜಿದಾರರ ಪರ ನೀಡಲಾದ ಪ್ರಕಟಣಾ ನೋಟೀಸು

ಮೇಲ್ಕಂಡ ಪ್ರಕರಣವನ್ನು ಅರ್ಜಿದಾರರು ತಮ್ಮ ತಾಯಿಯಾದ "ಶ್ರೀಮತಿ ಚೌಡಮ್ಮ ಕೋಂ ಹಾಲಪ್ಪ" ಇವರು ದಿನಾಂಕ: 27-01-1983 ರಂದು ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಘನ ಸನ್ನಿದಾನ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಬೇರೆ ಯಾರದರೂ ತಕರಾರು ಇದ್ದಲ್ಲಿ ನಿಮ್ಮ ಹಾಜರಾತಿಗಾಗಿ ದಿನಾಂಕ 25-02-2025 ರಂದು ಬೆಳಿಗ್ಗೆ 11-00 ಗಂಟೆಗೆ ನೀವು ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಿಯಾಗಲಿ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷಿಯವಾಗಿ ತೆಗೆದು ಕೊಳ್ಳಲಾಗುವುದು ತಿಳಿಯಿರಿ.

ನ್ಯಾಯಾಲಯದ ಅಪ್ಪಣೆ ಮೇರೆಗೆ ದಿನಾಂಕ: 23-01-2025 ರಂದು ನೀಡಲಾಗಿದೆ.

ನ್ಯಾಯಾಲಯಾದ ಆದೇಶದ ಮೇರೆಗೆ
ಶಿರಸೇದಾರರು
ಮಾನ್ಯ 2ನೇ ಹೆಚ್ಚುವರಿ ಸಿವಿಲ್ ನ್ಯಾಯದೀಶರು & ಜೆ.ಎಂ.ಎಫ್.ಸಿ. ನ್ಯಾಯಾಲಯ, ಹರಿಹರ.

ಅರ್ಜಿದಾರಾರ ಪರ ವಕೀಲರು:
ರಘು ಹೆಚ್

ಸ್ಥಳ : ಹರಿಹರ
ದಿನಾಂಕ: 23-01-2025

ಕಾನೂನು ಪ್ರಾಧಿಕಾರದ ಜತೆ ಸಂವಾದ | ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಸೂಚನೆ

ಲೋಕಾಯುಕ್ತ ಕಾನೂನು ಸೇವೆಗಳ ಸಮನ್ವಯದಿಂದ ಕಾರ್ಯನಿರ್ವಹಿಸಿ

ಚಿತ್ರದುರ್ಗ: ಲೋಕಾಯುಕ್ತ ಹಾಗೂ ಕಾನೂನು ಸೇವೆಗಳ ಪ್ರಾಧಿಕಾರ ಸಮನ್ವಯದಿಂದ ಕಾರ್ಯನಿರ್ವಹಿಸಿದರೆ ಸಾರ್ವಜನಿಕರ ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಡಬಹುದು. ದುರಾಡಳಿತಕ್ಕೆ ಕಡಿವಾಣ ಹಾಕಬಹುದು ಎಂದು ಉಪಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಹೇಳಿದರು.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಕರ್ನಾಟಕ ಲೋಕಾಯುಕ್ತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯಾಂಗ ಘಟಕದ ಸಹಯೋಗದಲ್ಲಿ ಶುಕ್ರವಾರ ಜಿಲ್ಲಾ ನ್ಯಾಯಾಲಯ ಸಭಾಂಗಣದಲ್ಲಿ ಆಯೋಜಿಸಿದ್ದ , ಸಾರ್ವಜನಿಕ ಆಡಳಿತದಲ್ಲಿ ಲೋಕಾಯುಕ್ತ ಹಾಗೂ ಕಾನೂನು ಸೇವೆಗಳ ಪ್ರಾಧಿಕಾರದ ಪಾತ್ರದ ಕುರಿತು, ಜಿಲ್ಲಾ ನ್ಯಾಯಾಧೀಶರೊಂದಿಗೆ ಸಂವಾದ ನಡೆಸಿ ಮಾತನಾಡಿದರು.

ಕಾನೂನು ಸೇವಾ ಪ್ರಾಧಿಕಾರ ಅಸ್ತಿತ್ವಕ್ಕೆ ಬರುವ ಮುನ್ನ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಾನೂನು ಸೇವಾ ಸಹಾಯ ಘಟಕ ಕಾರ್ಯನಿರ್ವಹಿಸುತಿತ್ತು. 1987ರ ಕಾನೂನು ಸೇವೆಗಳ ಪ್ರಾಧಿಕಾರ ಕಾಯ್ದೆ ಮೂಲಕ ರಾಷ್ಟ್ರ, ರಾಜ್ಯ, ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಕಾನೂನು ಸೇವಾ ಪ್ರಾಧಿಕಾರಗಳು ರಚನೆಯಾಗಿವೆ. ಈ ಪ್ರಾಧಿಕಾರಗಳು ಬೃಹದಾಕರವಾಗಿ ಬೆಳದು ಸಾರ್ವಜನಿಕರಿಗೆ ಒಳಿತಾಗಿದೆ ಎಂದರು.

> ಸಾಕಷ್ಟು ಸಂದರ್ಭದಲ್ಲಿ ಪ್ರಕರಣ ದಾಖಲಾಗುವ ಮುನ್ನವೇ ಸಾರ್ವಜನಿಕರ ತೊಂದರೆ ಪರಿಹರಿಸಬಹುದು. ನ್ಯಾಯಾಧೀಶರು ವಿಷಯವನ್ನು ಗಮನಿಸುತ್ತಾರೆ ಎಂದರೆ, ಸರಕಾರಿ ಅಧಿಕಾರಿಗಳು ಎಚ್ಚರಿಕೆಯಿಂದ ಕರ್ತವ್ಯ ನಿರ್ವಹಿಸುತ್ತಾರೆ. ಕಾನೂನು ಸೇವಾ ಪ್ರಾಧಿಕಾರದ ಮುಂದೆ, ಲೋಕಾಯುಕ್ತಕ್ಕೆ ಸಲ್ಲಿಕೆಯಾಗಬಹುದಾದ ಪ್ರಕರಣಗಳು ಇದ್ದರೆ, ಅವುಗಳನ್ನು ಶಿಫಾರಸ್ಸು ಮಾಡಬಹುದು.
> - ಕೆ.ಎನ್.ಫಣೀಂದ್ರ,
> ಉಪಲೋಕಾಯುಕ್ತ ನ್ಯಾಯಮೂರ್ತಿ

ಜಿಲ್ಲಾ ನ್ಯಾಯಾಲಯ ಸಭಾಂಗಣದಲ್ಲಿ ಆಯೋಜಿಸಿದ್ದ ಸಾರ್ವಜನಿಕ ಆಡಳಿತದಲ್ಲಿ ಲೋಕಾಯುಕ್ತ ಹಾಗೂ ಕಾನೂನು ಸೇವೆಗಳ ಪ್ರಾಧಿಕಾರದ ಪಾತ್ರದ ಕುರಿತು, ಜಿಲ್ಲಾ ನ್ಯಾಯಾಧೀಶರೊಂದಿಗೆ ಸಂವಾದ ನಡೆಸಿ ಉಪಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಮಾತನಾಡಿದರು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ರೋಣ ವಾಸುದೇವ್, ಲೋಕಾಯುಕ್ತದ ಅಪರ ನಿಬಂಧಕರಾದ ಪೃಥ್ವಿರಾಜ್ ವರ್ಣೇಕರ್ ಹಾಗೂ ಜಿ.ವಿ. ವಿಜಯಾನಂದ, ಉಪಲೋಕಾಯುಕ್ತರ ಆಪ್ತ ಕಾರ್ಯದರ್ಶಿ ಹಾಗೂ ಸಿವಿಲ್ ನ್ಯಾಯಾಧೀಶರಾದ ಕಿರಣ್ ಪಿ. ಎಂ. ಪಾಟೀಲ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಹಾಗೂ ನ್ಯಾಯಾಧೀಶ ಎಂ.ವಿಜಯ್ ಸೇರಿದಂತೆ ಇತರೆ ನ್ಯಾಯಾಧೀಶರು ಉಪಸ್ಥಿತರಿದ್ದರು.

ದುರಾಡಳಿತದ ತಡೆಗಾಗಿ ಸ್ವಾಯತ್ತ ಲೋಕಾಯುಕ್ತ ಸಂಸ್ಥೆ ಸ್ಥಾಪನೆ

ಸರಕಾರ ಹಾಗೂ ಅಧಿಕಾರಿಗಳು ನಡೆಸುವ ದುರಾಡಳಿತ ನಿಯಂತ್ರಣದಲ್ಲಿ ಇರಿಸಲು ಲೋಕಾಯುಕ್ತ ಎನ್ನುವ ಸ್ವಾಯತ್ತತಾ ಸಂಸ್ಥೆಯನ್ನು ತೆರೆಯಲಾಗಿದೆ. ಲೋಕಾಯುಕ್ತ ಕಾಯ್ದೆಯ ಸೆಕ್ಷನ್ 8 ಹಾಗೂ 9 ಅಡಿ ಸರಕಾರಿ ನೌಕರರ ಭಾಗಿಯಾಗಿರದ ಪ್ರಕರಣಗಳನ್ನು ದಾಖಲಿಸಲು ಸಾಧ್ಯವಾಗುವುದಿಲ್ಲ. ಇದೇ ಮಾದರಿಯಲ್ಲಿ ಕಾನೂನು ಸೇವಾ ಪ್ರಾಧಿಕಾರದ ಮುಂದೆ ಸಾರ್ವಜನಿಕರು ಹಲವು ಸಮಸ್ಯೆಗಳ ಬಗ್ಗೆ ಅಳಲು ತೊಡಿಕೊಳ್ಳುತ್ತಾರೆ. ಇಂತಹ ಪ್ರಕರಣಗಳ ಬಗ್ಗೆ ಅಧ್ಯಯನ ನಡೆಸಿ ಎರಡು ಸಂಸ್ಥೆಗಳು ಸಾರ್ವಜನಿಕರ ಸಮಸ್ಯೆ ಪರಿಹರಿಸಲು ಪ್ರಯತ್ನಿಸಬೇಕು. ಇದರ ಅಂಗವಾಗಿ ಲೋಕಾಯುಕ್ತದಿಂದ ಚಿತ್ರದುರ್ಗ ಸೇರಿ ಒಟ್ಟು 19 ಜಿಲ್ಲೆಗಳ ಕಾನೂನು ಸೇವಾ ಪ್ರಾಧಿಕಾರಗಳೊಂದಿಗೆ ಸಂವಾದ ನಡೆಸಲಾಗಿದೆ ಎಂದು ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ತಿಳಿಸಿದರು.

ಹುಲಿಕಟ್ಟೆ ಗ್ರಾಮಸ್ಥರು ಶಾಸಕರೊಂದಿಗೆ ಡಿಸಿ ಭೇಟಿ

ದಾವಣಗೆರೆ: ಜಮೀನಿನ ಪಹಣಿಗಳು ಜಂಟಿಯಾಗಿರುವುದರಿಂದ ಸರಕಾರಿ ಸೌಲಭ್ಯ, ಸಾಲ ಸೌಲಭ್ಯ ಪಡೆಯಲು ಸಮಸ್ಯೆಯಾಗಿದ್ದು, ಕೂಡಲೇ ಪೋಡಿ ಮಾಡಿ, ಅವರ ಹೆಸರಿನಲ್ಲಿ ಪಹಣಿ ಮಾಡಿಸುವ ಕುರಿತು ಶಾಸಕ ಕೆ.ಎಸ್.ಬಸವಂತಪ್ಪ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಅವರೊಂದಿಗೆ ಚರ್ಚೆ ನಡೆಸಿದರು.

ತಾಲೂಕಿನ ಹುಲಿಕಟ್ಟೆ ಗ್ರಾಮದ ರೈತರೊಂದಿಗೆ ಜಿಲ್ಲಾಧಿಕಾರಿ ಕಚೇರಿಗೆ ಭೇಟಿ ನೀಡಿದ ಶಾಸಕರು, ಹುಲಿಕಟ್ಟೆ ಗ್ರಾಮದ ಸರ್ವೇ ನಂ.57ರಲ್ಲಿ 100ಕ್ಕೂ ಹೆಚ್ಚು ರೈತರ ಪಹಣಿಗಳು ಜಂಟಿಯಾಗಿರುವುದರಿಂದ ಸರಕಾರಿ ಸೌಲಭ್ಯ, ಸಾಲ ಸೌಲಭ್ಯ ಪಡೆಯಲು ಸಮಸ್ಯೆ ಆಗಿದೆ. ಇದರಿಂದ ರೈತರು ಪರಿತಪಿಸುತ್ತಿದ್ದಾರೆ. ಕೂಡಲೇ ಪೋಡಿ ಮಾಡಿ ಅವರ ಹೆಸರಿನಲ್ಲಿ ಪಹಣಿ ಬರುವಂತೆ ಕ್ರಮ ತೆಗೆದುಕೊಳ್ಳಬೇಕು. ಅಲ್ಲದೇ ಜಮೀನಿನ ಓಡಾಡಲು ರಸ್ತೆ ಸಮಸ್ಯೆ ಇದ್ದು, ಇದನ್ನು ಸರಿಪಡಿಸಬೇಕೆಂದು ರೈತರ ಪರ ಮನವಿ ಮಾಡಿದರು.

ರೈತರ ಸಮಸ್ಯೆ ಆಲಿಸಿದ ಡಿಸಿ ಜಿ.ಎಂ. ಗಂಗಾಧರಸ್ವಾಮಿ, ಜಂಟಿಯಾಗಿರುವ ಪಹಣಿ, ಪೋಡಿ ಮತ್ತು ಜಮೀನಿನ ರಸ್ತೆ ಸಮಸ್ಯೆ ಶೀಘ್ರದಲ್ಲಿ ಬಗೆಹರಿಸಿಕೊಡುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ರೈತರ ಶಾಸಕ ಕೆ.ಎಸ್. ಬಸವಂತಪ್ಪ ಮತ್ತು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಅವರಿಗೆ ಅಭಿನಂದನೆ ಸಲ್ಲಿಸಿದರು. ಹುಲಿಕಟ್ಟೆ ಗ್ರಾಮದ ಚನ್ನಬಸಪ್ಪ, ಪತ್ಯನಾಯ್ಕ್, ರತ್ನಿಬಾಯಿ, ಅರುಣ್‌ನಾಯ್ಕ್, ನಿರ್ಮಲ, ಶಶಿಧರ್ ಇನ್ನಿತರರಿದ್ದರು.

ಹುಲಿಕಟ್ಟೆ ಗ್ರಾಮದ ರೈತರ ಪಹಣಿಗಳು ಜಂಟಿಯಾಗಿರುವುದರಿಂದ ಕೂಡಲೇ ಪೋಡಿ ಮಾಡಿಸುವಂತೆ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಅವರೊಂದಿಗೆ ಶಾಸಕ ಕೆ.ಎಸ್. ಬಸವಂತಪ್ಪ ಚರ್ಚಿಸಿದರು.

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯೆ ಅಪರ್ಣ

ಮಕ್ಕಳಿಗೆ ಶಿಕ್ಷಣದ ಜತೆ ರಕ್ಷಣೆ ಅಗತ್ಯ

ದಾವಣಗೆರೆ: ಮಕ್ಕಳು ಶಾಲೆಯಿಂದ ಹೊರ ಉಳಿಯುತ್ತಿದ್ದಾರೆ. ಮಕ್ಕಳಿಗಿರುವ ಮಾನಸಿಕ, ಆರ್ಥಿಕ, ಕೌಟುಂಬಿಕ ಸಮಸ್ಯೆ ಅರಿತು ಶಿಕ್ಷಣದ ಜತೆಗೆ ಅವರ ರಕ್ಷಣೆ ಮಾಡುವ ಜವಾಬ್ದಾರಿ ಶಿಕ್ಷಕರ ಮೇಲಿದೆ ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯೆ ಅಪರ್ಣ ಎಂ. ಕೊಳ್ಳ. ಹೇಳಿದರು.

ನಗರದ ಅಥಣಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಸೇರಿಸುವ ಆಂದೋಲನ ತರಬೇತಿ ಕಾರ್ಯಗಾರ ಉದ್ಘಾಟಿಸಿ ಮಾತನಾಡಿದರು.

ಜಿಲ್ಲೆಯ ಹಿರಿಯ ಸಿವಿಲ್ ನ್ಯಾಯಧೀಶ ಹಾಗೂ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ್ ಎಂ.ಕರೆಣ್ಣನವರ ಮಾತನಾಡಿ, ಸರಕಾರಿ ಶಾಲೆಗಿಂತ ಖಾಸಗಿ ಶಾಲೆಗಳಲ್ಲಿ ಹೆಚ್ಚು ಮಕ್ಕಳು ಓದುತ್ತಿದ್ದಾರೆ. ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಜಿಲ್ಲಾ ಮಟ್ಟದಲ್ಲಿ ಜಾಗೃತಿ ಆಂದೋಲನ ಮಾಡಲಾಗಿದೆ. ಪೋಷಕರು ತಮ್ಮ ನೌಕರಿ ಕಡೆ ನೋಡದೆ ಮಕ್ಕಳ ವಿದ್ಯಾಭ್ಯಾಸದ ಕಡೆ ಗಮನ ನೀಡಿ ಮಕ್ಕಳನ್ನು ಪ್ರೀತಿಯಿಂದ ಕಾಣಬೇಕು ಎಂದು ತಿಳಿಸಿದರು.

ಉಚಿತ ಮತ್ತು ಕಡ್ಡಾಯ ಶಿಕ್ಷಣದ ಬಗ್ಗೆ ಶಿಕ್ಷಕ ನಾಗರಾಜ. ಡಿ ಉಪನ್ಯಾಸ ನೀಡಿದರು. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಕೊಟ್ರೇಶ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆರ್.ಸಿ.ಹೆಚ್. ಅಧಿಕಾರಿ ಡಾ.ರೇಣುಕಾರಾಧ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ರಾಜಾನಾಯ್ಕ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಕವಿತಾ, ಪ್ರಾಚಾರ್ಯ ಷಣ್ಮುಖಪ್ಪ ಇದ್ದರು.

ಹೆಣ್ಣು ಮಕ್ಕಳು ಕುಟುಂಬದ ಕಣ್ಣು

ಇತ್ತೀಚಿನ ದಿನಗಳಲ್ಲಿ ಹೆಣ್ಣಿನ ಮೇಲಿನ ಬಲತ್ಕಾರ, ಕೊಲೆ, ಚಿಕ್ಕಮಕ್ಕಳ ಅಪಹರಣ ನಡೆಯುತ್ತಲೇ ಇವೆ. ಇಂತಹ ಘಟನೆಗಳು ನಡೆಯಲು ಅವಕಾಶವಿಲ್ಲದಂತೆ ಶಿಕ್ಷಣದ ಜತೆಗೆ ಮಕ್ಕಳನ್ನು ರಕ್ಷಣೆ ಮಾಡುವ ನಿಟ್ಟಿನಲ್ಲಿ ನಾವು ಕಾರ್ಯೋನ್ಮುಖರಾಗಿರಬೇಕು. ಇದರ ಮಾಹಿತಿ ಅರಿಯಲು ಶಾಲೆಯಿಂದ ಹೊರಗುಳಿದ ಮಕ್ಕಳ ಬಗ್ಗೆ ತೀವ್ರ ನಿಗಾ ವಹಿಸಬೇಕಾಗುತ್ತದೆ ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯೆ ಅಪರ್ಣ ಎಂ. ಕೊಳ್ಳ. ತಿಳಿಸಿದರು.

ತೆಂಗು ಬೆಳೆ ಕಪ್ಪುತಲೆ ಹುಳು ಹತೋಟಿಗೆ ಕ್ರಮ

ಹೊಸದುರ್ಗ: ತಾಲೂಕಿನ ಹಲವೆಡೆ ತೆಂಗಿನ ತೋಟಗಳಿಗೆ ತಗುಲಿರುವ ಕಪ್ಪುತಲೆ ಹುಳು ಹತೋಟಿಗೆ ಹೊಸದುರ್ಗ ಪಟ್ಟಣದ ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕರ ಕಚೇರಿ ತಂಡ ಮುಂದಾಗಿದ್ದು, ತೋಟಗಳಿಗೆ ಹೋಗಿ ತೆಂಗು ಬೆಳೆಯಲ್ಲಿ ಕಪ್ಪುತಲೆ ಹುಳು ಹತೋಟಿಗೆ ಗೋನಿಯೋಜಸ್ ಪರೋಪಜೀವಿ ಬಿಡುಗಡೆ ಹಾಗೂ ತಾಂತ್ರಿಕ ಕಾರ್ಯಾಗಾರ ನಡೆಸುತ್ತಿದೆ.

ಕಪ್ಪುತಲೆ ಹುಳು ತೆಂಗು ಬೆಳೆಯುವ ಕರಾವಳಿ ಹಾಗೂ ಮೈದಾನ ಪ್ರದೇಶಗಳಲ್ಲಿ ತೆಂಗಿನ ಬೆಳೆಗೆ ಹೆಚ್ಚಾಗಿ ಹಾನಿಯನ್ನುಂಟು ಮಾಡುತ್ತಿದೆ. ಮರಿಹುಳ ಎಲೆಗಳ ತಳಭಾಗದಲ್ಲಿ ತನ್ನ ಹಿಕ್ಕೆ ಹಾಗೂ ನೂಲಿನಿಂದ ನಿರ್ಮಿಸಿದ ಸುರಂಗಗಳಲ್ಲಿ ವಾಸಿಸುತ್ತಾ, ಎಲೆಯ ಹಸಿರು ಭಾಗವನ್ನು ಕೊರೆದು ತಿನ್ನುತ್ತದೆ. ಇದರಿಂದ ಹಾನಿ ಹೆಚ್ಚಾದಾಗ ಮರಗಳು ಸುಟ್ಟಂತೆ ಕಂಡುಬರುತ್ತವೆ. ಸಾಮಾನ್ಯವಾಗಿ ವರ್ಷಕ್ಕೆ 5 ಸಂತತಿಗಳನ್ನು ಪೂರ್ಣಗೊಳಿಸುವ ಈ ಹುಳು ಹತೋಟಿಗೆ ತರದಿದ್ದರೆ ಶೇ.60ರಷ್ಟು ಇಳುವರಿಯಲ್ಲಿ ಕುಂಠಿತ ಕಾಣಬಹುದು ಎಂದು ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕಿ ಶೋಭಾ ತಿಳಿಸಿದ್ದಾರೆ.

ಯಾಂತ್ರಿಕ ವಿಧಾನ: ಹಾನಿಯು ಪ್ರಾಥಮಿಕ ಹಂತದಲ್ಲಿದ್ದು, ಗರಿಗಳಲ್ಲಿ ಕಂಡುಬಂದಾಗ ತೋಟಗಳಲ್ಲಿ ಬಿದ್ದಗರಿಗಳು ಇತರೆ ಕಸಕಡ್ಡಿ ಸಂಗ್ರಹಿಸಿ ಸ್ವಚ್ಛವಾಗಿಡುವುದು. ಕೀಟದ ಆಕ್ರಮಣ ಸೂಚನೆ ಕಂಡಕೂಡಲೇ ಹುಳದ ಬಲೆ(ಗ್ಯಾಲರಿ) ಇರುವ ಗರಿ ಅಥವಾ ಅದರ ಭಾಗಗಳನ್ನುಕತ್ತರಿಸಿ ಸುಡುವುದು. ಯಾವುದೇ ಕಾರಣಕ್ಕೂ ಹಾನಿ ಹೆಚ್ಚಾದಾಗ ಎಲ್ಲಾ ಗರಿಗಳನ್ನು ಸಂಪೂರ್ಣವಾಗಿ ಕತ್ತರಿಸಿ ತೆಗೆಯಬಾರದು.

ಜೈವಿಕ ವಿಧಾನ: ಕೀಟದ ಬಾಧೆ ಕೆಳಭಾಗದ ಗರಿಗಳಲ್ಲಿದ್ದು ತೀವ್ರತೆಯ ಹಂತ ತಲುಪಿಲ್ಲದಿದ್ದರೆ ಪ್ರಯೋಗಶಾಲೆಗಳಿಂದ ಪರೋಪಜೀವಿಗಳನ್ನು ಪಡೆದು ಬಿಡುಗಡೆ ಮಾಡುವುದು. ಕಪ್ಪುತಲೆ ಹುಳು ಮರಿಹುಳುವಿನ ಹಂತದಲ್ಲಿದ್ದಾಗ ಗೋನಿಯೋಜಸ್ ನಿಫಾಂಟಿಡಿಸ್ ಪರೋಪಜೀವಿಗಳನ್ನು ಪ್ರತಿ ಕೀಟಬಾಧಿತ ಮರಕ್ಕೆ ಸುಮಾರು 15ರಿಂದ 20ರಂತೆ 15 ದಿನಗಳಿಗೊಮ್ಮೆ ಕನಿಷ್ಠ ನಾಲ್ಕು ಬಾರಿ ಬಿಡುಗಡೆ ಮಾಡಬೇಕು.

ಸಿಂಪರಣೆ: ಸಣ್ಣ ಮರಗಳಾದರೆ 3-5ಮಿ.ಲೀ ಕ್ಲೋರೆಂಥನಿಲಿಪ್ರೋಲ್ ಕೀಟನಾಶಕವನ್ನು 10ಲೀ. ನೀರಿನಲ್ಲಿ ಬೆರೆಸಿ ಗರಿಗಳ ಕೆಳಭಾಗ ಸಂಪೂರ್ಣ ಒದ್ದೆಯಾಗುವಂತೆ ಸಿಂಪಡಿಸಬೇಕು. ಎಂದು ಕೀಟಶಾಸ್ತ್ರಜ್ಞ ವಿಜ್ಞಾನಿ ಡಾ.ಪ್ರಕಾಶ್, ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕ ಬಿ.ದೇವರಾಜು, ಸಹಾಯಕ ತೋಟಗಾರಿಕೆ ನಿರ್ದೇಶಕಿ ಶೋಭಾ ರೈತರಿಗೆ ಮಾಹಿತಿ ನೀಡಿದರು.

ತೆಂಗು ಬೆಳೆಯಲ್ಲಿ ಕಪ್ಪುತಲೆ ಹುಳು ಹತೋಟಿಗೆ ಗೋನಿಯೋಜಸ್ ಪರೋಪಜೀವಿ ಬಿಡುಗಡೆ ಹಾಗೂ ತಾಂತ್ರಿಕ ಕಾರ್ಯಾಗಾರ ನಡಯಿತು.

ಬೇರಿನಿಂದ ಕೀಟನಾಶಕ ಉಪಚರಿಸುವ ವಿಧಾನ

ಪೆನ್ಸಿಲ್ ಕಡ್ಡಿ ಗಾತ್ರದ, ಇಟ್ಟಿಗೆ ಬಣ್ಣದ ಬೇರನ್ನು ಆಯ್ಕೆ ಮಾಡಿಕೊಂಡು ಓರೆಯಾಗಿ ಕತ್ತರಿಸಿ ಸಿದ್ಧ ಮಾಡಿಕೊಳ್ಳಬೇಕು. 4 ಸೆಂ.ಮೀ ಅಗಲ ಮತ್ತು 15 ಸೆಂ.ಮೀ ಉದ್ದದ ಪಾಲಿಥಿನ್ ಚೀಲದಲ್ಲಿ, ಮೇಲೆ ತಿಳಿಸಿದ ಪ್ರಮಾಣದಲ್ಲಿ ಕೀಟನಾಶಕ ತೆಗೆದುಕೊಂಡು, ಅದಕ್ಕೆ ಅಷ್ಟೇ ಪ್ರಮಾಣದ ನೀರನ್ನು ಬೆರೆಸಿ, ಬೇರು ಔಷಧಿಯೊಳಗೆ ಸರಿಯಾಗಿ ಮುಳುಗುವಂತೆ ಇರಿಸಿ ಪಾಲಿಥಿನ್ ಚೀಲವನ್ನು ಕಟ್ಟಬೇಕು. ಈ ಪರೋಪಜೀವಿಗಳು ಮರಿಹುಳುಗಳ ಮೇಲೆ ಮೊಟ್ಟೆ ಇರಿಸಲು ಮರಿಹುಳುಗಳನ್ನು ಹುಡುಕಿ ಅವುಗಳನ್ನು ಚುಚ್ಚಿ ನಿಷ್ಕ್ರಿಯಗೊಳಿಸುತ್ತವೆ. ಕಪ್ಪುತಲೆ ಹುಳುವಿನ ಮೊಟ್ಟೆಗಳ ಹತೋಟಿಗಾಗಿ ಅಮಥೋಕೊರಿಡ್ ಬಗ್(ಓರಿಯಸ್ ಟ್ಯಾಂಟಿಲಸ್) ಪರಭಕ್ಷಕಗಳನ್ನು ಬಿಡುಗಡೆಗೊಳಿಸುವುದು. ಈ ಕ್ರಮದಿಂದ ಹುಳು ಬಾಧೆ ನಿಯಂತ್ರಣಕ್ಕೆ ಬರುತ್ತದೆ ಎಂದು ತಜ್ಞರು ತಿಳಿಸಿದ್ದಾರೆ.

ಜನತೆ ಮೂಢನಂಬಿಕೆಗಳಿಗೆ ದಾಸರು

ಚಿತ್ರದುರ್ಗ: ಶರಣರು ತಮ್ಮ ವಚನಗಳಲ್ಲಿ ನಾವು ಅನೇಕ ಆಧುನಿಕ ವೈಜ್ಞಾನಿಕ ಅಂಶಗಳನ್ನು ಗುರುತಿಸಬಹುದು. ಅಂದಿನ ಶರಣರು ಸಾಮಾಜಿಕ, ಆಧ್ಯಾತ್ಮಿಕ ಸುಧಾರಣೆಗೆ ಒತ್ತು ನೀಡಿದ ಹಾಗೆ ವೈಚಾರಿಕ ಮತ್ತು ವೈಜ್ಞಾನಿಕ ಚಿಂತನೆಗಳತ್ತ ಹೆಚ್ಚಿನ ಒಲವನ್ನು ತೋರಿದ್ದರು ಎಂದು ಭೋವಿ ಗುರುಪೀಠದ ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ತಿಳಿಸಿದರು.

ಚಿತ್ರದುರ್ಗ ನಗರದ ತರಾಸು ರಂಗಮಂದಿರದಲ್ಲಿ ಶುಕ್ರವಾರ ನಡೆದ ಎಸ್.ಜೆ.ಎಸ್.ಸಮೂಹ ಸಂಸ್ಥೆಗಳ 2024-25ನೇ ಸಾಲಿನ ಶಾಲಾ ವಾರ್ಷಿಕೋತ್ಸವ ಜ್ಞಾನ ಸಂಭ್ರಮ ಕಾರ್ಯಕ್ರಮದ ದಿವ್ಯ ಸಾನಿಧ್ಯವಹಿಸಿ ಆಶೀರ್ವಚನ ನೀಡಿ ಮಾತನಾಡಿದ ಶ್ರೀಗಳು,

ವಿಜ್ಞಾನ ಮತ್ತು ಆಧ್ಯಾತ್ಮಿಕತೆಯು ಒಂದೇ ಸತ್ಯವನ್ನು ಎರಡು ರೀತಿಯಲ್ಲಿ ಕಾಣುವುದು. ಬ್ರಹ್ಮಾಂಡ ಮತ್ತು ಪಿಂಡಾಂಡ, ಬಾಹ್ಯ ಜಗತ್ತು ಮತ್ತು ಆಂತರಿಕ ಜಗತ್ತು ಎಂಬ ಎರಡು ಜಗತ್ತುಗಳಿವೆ. ಅನುಭವದಿಂದ ಈ ಎರಡು ಕ್ಷೇತ್ರಗಳಿಂದ ನಮಗೆ ಸತ್ಯ ದೊರಕುವುದು ಎಂದರು.

ವಿಜ್ಞಾನಿಗಳು ನಮಗೆ ನೀಡಿದ ಕೊಡುಗೆಯನ್ನು ದಿನ ನಿತ್ಯ ನಾವು ಉಪಯೋಗ ಮಾಡುತ್ತೇವೆ, ಆದರೂ ಜನತೆ ಮೂಢನಂಭಿಕೆಯನ್ನು ಆಚರಣೆ ಮಾಡುತ್ತಾ, ಅಜ್ಞಾನದ ದಾಸರಾಗಿದ್ದಾರೆ. ವಿಜ್ಞಾನವನ್ನು ಭೋಧಿಸುವವರು ಮೂಢನಂಬಿಕೆಯನ್ನು ಪೋಷಿಸುತ್ತಿದ್ದಾರೆ. ಗ್ರಹಣ ನೈಸರ್ಗಿಕವಾಗಿ ಆಗುವಂತ ಕ್ರಿಯೇಯಾಗಿದೆ, ಆದರೆ ಇದನ್ನು ಹಲವಾರು ಜನತೆ ಮೂಢನಂಬಿಕೆಯೆಂದು ಬಿಂಬಿಸುತ್ತಿದ್ದಾರೆ. ಜನತೆ ಆಚರಣೆ ಮಾಡುವ ಅವೈಜ್ಞಾನಿಕ ಪದ್ದತಿಯಿಂದ ವೈಜ್ಞಾನಿಕ ಪದ್ದತಿಗೆ ಗ್ರಹಣವಾಗಿದೆ ಎಂದು ಸ್ವಾಮಿ ನುಡಿದರು.

ಕಾರ್ಯಕ್ರಮದಲ್ಲಿ ಚನ್ನಬಸವ ಶ್ರೀಗಳು, ಎಸ್.ಜೆ.ಎಸ್ ಸಮೂಹ ಸಂಸ್ಥೆಗಳ ಕಾರ್ಯದರ್ಶಿ ಡಿ.ಸಿ.ಮೋಹನ್, ನಿರ್ದೇಶಕ ತಿಪ್ಪೇಸ್ವಾಮಿ, ಮಂಜುನಾಥ್, ಭೋವಿ ಸಮಾಜದ ಅಧ್ಯಕ್ಷ ತಿಪ್ಪೇಸ್ವಾಮಿ, ಕಾರ್ಯದರ್ಶಿ ಲಕ್ಷ್ಮಣ್, ಭೋವಿ ಗುರುಪೀಠದ ಸಿಇಓ ಗೋವಿಂದಪ್ಪ, ಮಾಜಿ ನಿರ್ದೇಶಕ ವೀರಣ್ಣ ಇದ್ದರು.

ಚಿತ್ರದುರ್ಗ ನಗರದ ತರಾಸು ರಂಗಮಂದಿರದಲ್ಲಿ ನಡೆದ ಶಾಲಾ ವಾರ್ಷಿಕೋತ್ಸವ ಜ್ಞಾನ ಸಂಭ್ರಮ ಕಾರ್ಯಕ್ರಮದ ದಿವ್ಯ ಸಾನಿಧ್ಯವಹಿಸಿ ಭೋವಿ ಗುರುಪೀಠ ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಮಾತನಾಡಿದರು.

ಸರಕಾರಿ ಶಾಲೆ ಮಕ್ಕಳಿಗೆ ಬಸ್ ವ್ಯವಸ್ಥೆ

ಹೊಳಲ್ಕೆರೆ: ಸರಕಾರಿ ಶಾಲೆಗೆ ಬರುವ ಬಡ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗಬಾರದೆಂದು ಸ್ವಂತ ಖರ್ಚಿನಿಂದ ಬಸ್‌ಗಳನ್ನು ಬಿಟ್ಟಿದ್ದೇನೆಂದು ಶಾಸಕ ಡಾ.ಎಂ.ಚಂದ್ರಪ್ಪ ಹೇಳಿದರು.

ಭರಮಸಾಗರ ಹೋಬಳಿ ಬಸ್ತಿಹಳ್ಳಿ ಗ್ರಾಮದಲ್ಲಿ 1.25 ಕೋಟಿ ರು.ವೆಚ್ಚದಲ್ಲಿ ಯಳಗೋಡಿನಿಂದ ಬಸ್ತಿಹಳ್ಳಿವರೆಗೂ ಡಾಂಬರ್ ರಸ್ತೆ ನಿರ್ಮಾಣ ಕಾಮಗಾರಿಗೆ ಶುಕ್ರವಾರ ಭೂಮಿ ಪೂಜೆ ಸಲ್ಲಿಸಿ ಮಾತನಾಡಿದರು.

ರಾಜ್ಯದಲ್ಲಿ ಯಾವ ಶಾಸಕರು ಸರಕಾರಿ ಶಾಲೆ ಮಕ್ಕಳಿಗೆ ಬಸ್ ವ್ಯವಸ್ಥೆ ಕಲ್ಪಿಸಿರುವ ಇತಿಹಾಸವಿಲ್ಲ. ನಾನು ಡ್ರೈವರ್, ಕಂಡಕ್ಟರ್‌ಗೆ ಸಂಬಳ ನೀಡಿ ಬಸ್‌ಗೆ ಡೀಸೆಲ್ ಕೂಡ ಹಾಕಿಸುತ್ತೇನೆ. ಸರಕಾರ ಮಧ್ಯಾಹ್ನದ ಬಿಸಿಯೂಟ, ಸಮವಸ್ತ್ರ, ಪಠ್ಯಪುಸ್ತಕ, ಶೂ, ಸಾಕ್ಸ್ ನೀಡುತ್ತಿದೆ. ಇನ್ನು ಎರಡು ಶಾಲೆಗಳನ್ನು ಇಲ್ಲಿ ಕಟ್ಟಿಸಿದ್ದೇನೆ. ಅಧಿಕಾರ ಬಹಳ ದಿನ ಇರುವುದಿಲ್ಲ, ಇದ್ದಷ್ಟು ಸಮಯದಲ್ಲಿ ಹತ್ತಾರು ಜನಕ್ಕೆ ಒಳ್ಳೆಯದಾಗಬೇಕೆಂಬ ಮುಂದಾಲೋಚನೆ ಯಿಟ್ಟುಕೊಂಡು ಕ್ಷೇತ್ರಾದ್ಯಂತ ಅಭಿವೃದ್ಧಿ ಕೆಲಸಗಳನ್ನು ಕೈಗೊಂಡಿದ್ದೇನೆಂದು ತಿಳಿಸಿದರು.

ಕ್ಷೇತ್ರದ ಮತದಾರರು ನನ್ನ ಮೇಲಿಟ್ಟಿರುವ ವಿಶ್ವಾಸ, ನಂಬಿಕೆಯನ್ನು ಉಳಿಸಿಕೊಳ್ಳುವುದು ಜನಪ್ರತಿನಿಧಿಗಳ ಜವಾಬ್ದಾರಿ ಎನ್ನುವುದನ್ನು ಅರಿತು ಸರಕಾರ ಯಾವುದೇ ಇರಲಿ ಅನುದಾನ ತಂದು ಅಭಿವೃದ್ಧಿಪಡಿಸುವ ತಾಕತ್ತಿಟ್ಟುಕೊಂಡಿದ್ದೇನೆ. ಎಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಿದರೆ ಜನರಿಗೆ ಒಳ್ಳೆಯದಾಗುತ್ತದೆಂಬ ಮುಂದಾಲೋಚನೆಯಿಟ್ಟುಕೊಂಡು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದೇನೆಂದರು.

ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಅನಿತಮ್ಮ ನಾಗರಾಜ್, ಉಪಾಧ್ಯಕ್ಷೆ ನಿರ್ಮಲ ತಿಪ್ಪೇಸ್ವಾಮಿ, ನಾರಪ್ಪ, ಸುರೇಶ್‌ಬಾಬಣ್ಣ, ಶಾಂತಣ್ಣ, ಶರಣಪ್ಪ ಹಾಗೂ ಗ್ರಾಮದ ಹಿರಿಯರು ಇದ್ದರು.



ಭರಮಸಾಗರ ಹೋಬಳಿ ಬಸ್ತಿಹಳ್ಳಿ ಗ್ರಾಮದಲ್ಲಿ ಡಾಂಬರ್ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ಸಲ್ಲಿಸಿ ಶಾಸಕ ಡಾ. ಎಂ.ಚಂದ್ರಪ್ಪ ಮಾತನಾಡಿದರು.

ಶ್ರೇಷ್ಠ ಭಾರತಕ್ಕಾಗಿ ತಪ್ಪದೆ ಮತದಾನ ಮಾಡೋಣ

ಹೊಳಲ್ಕೆರೆ: ಭಾರತ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ದೇಶ. ಮತದಾನವೇ ಶ್ರೇಷ್ಠ ದಾನ. ಪ್ರಜೆಗಳು ಮತದಾನ ಮಾಡಿ ಆಯ್ಕೆ ಮಾಡುವ ಪ್ರತಿನಿಧಿಗಳಿಂದ ಭಾರತದ ಭವಿಷ್ಯ ನಿರ್ಧಾರವಾಗುತ್ತದೆ. ಯೋಗ್ಯ ನಾಯಕರ ಆಯ್ಕೆಗೆ ಮತ್ತು ಶ್ರೇಷ್ಠ ಭಾರತ ನಿರ್ಮಾಣಕ್ಕೆ ತಪ್ಪದೆ ಮತದಾನ ಮಾಡೋಣ ಎಂದು ಅಮೃತಾಪುರ ಮತಗಟ್ಟೆ ಅಧಿಕಾರಿಗಳಾದ ಡಾ.ಉಮೇಶ್ ಟಿ.ಪಿ. ಹೇಳಿದರು.

ಹೊಳಲ್ಕೆರೆ ತಾಲೂಕಿನ ಅಮೃತಾಪುರದಲ್ಲಿ ರಾಷ್ಟ್ರೀಯ ಮತದಾರರ ದಿನಾಚರಣೆಯಲ್ಲಿ ಮಾತನಾಡಿ, ಕಾಲಕಾಲಕ್ಕೆ ನಡೆಯುವ ಚುನಾವಣೆಗಳಲ್ಲಿ ಅರ್ಹ ಮತದಾರರಿಂದ ಸ್ಥಳೀಯ, ರಾಜ್ಯ ಹಾಗೂ ಕೇಂದ್ರ ಸರಕಾರ ರಚನೆಗೊಳ್ಳುತ್ತವೆ. ಸರಕಾರ ಪ್ರಜಾ ಪ್ರತಿನಿಧಿಗಳಿಂದ ನಿಯಂತ್ರಣಕ್ಕೊಳಪಟ್ಟು ದೇಶದ ಎಲ್ಲ ಜನರಿಗೆ ನ್ಯಾಯಸಮ್ಮತವಾದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ನ್ಯಾಯಿಕ ಹಾಗು ರಾಜಕೀಯ ಹಕ್ಕುಗಳ ದೊರಕಿಸಿಕೊಡಲು ಶ್ರಮಿಸುತ್ತದೆ. ಭಾರತ ಚುನಾವಣಾ ಆಯೋಗ ರಚನೆಗೊಂಡು ಇಂದಿಗೆ ಎಪ್ಪತ್ತೈದು ವರ್ಷಗಳಾಗಿದೆ. ಚುನಾವಣಾ ಆಯೋಗದ ರಚನೆ ಸಂಸ್ಮರಣೆಗಾಗಿ ಹಾಗು ಮತದಾನ ಜಾಗೃತಿಗಾಗಿ ಪ್ರತಿವರ್ಷ ರಾಷ್ಟ್ರೀಯ ಮತದಾರರ ದಿನಾಚರಣೆ ಆಚರಿಸುವೆವು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಯುವ ಮತದಾರರಿಗೆ ಚುನಾವಣೆ ಗುರುತಿನ ಚೀಟಿ ವಿತರಿಸಲಾಯಿತು. ಎಲ್ಲ ಮತದಾರರಿಗು ಮತದಾರರ ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ಅಮೃತಾಪುರ ಸರ್ಕಲ್ ಗ್ರಾಮ ಆಡಳಿತಾಧಿಕಾರಿ ರಾಜು, ತಿಪ್ಪೇಶ, ಮುಖ್ಯಶಿಕ್ಷಕ ಡಿ.ಸಿದ್ದಪ್ಪ, ಸಹಶಿಕ್ಷಕರಾದ ಜಿ.ಎನ್.ರೇಷ್ಮ, ರಾಧಾ ಬಸವರಾಜು, ಸುಮ ಹಾಗು ಗ್ರಾಮಸ್ಥರಾದ ತಿಮ್ಮಮ್ಮ, ಶಾರದಮ್ಮ, ವೆಂಕಟೇಶ್ ಹಾಗು ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ತಾತ್ಕಾಲಿಕ ಬಸ್ ನಿಲ್ದಾಣ ತೆರವಿಗೆ ಗಡುವು

ದಾವಣಗೆರೆ: ನಗರದ ಹೈಸ್ಕೂಲ್ ಮೈದಾನದಲ್ಲಿ ತಾತ್ಕಾಲಿಕವಾಗಿ ನಿರ್ಮಾಣ ಮಾಡಿದ್ದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣವನ್ನು ಸೋಮವಾರದೊಳಗೆ ತೆರವುಗೊಳಿಸುವಂತೆ ಜಿಲ್ಲಾ ಕ್ರೀಡಾಪಟುಗಳ ಸಂಘ ಗಡುವು ನೀಡಿ ಆಗ್ರಹಿಸಿದೆ.

ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈಗಾಗಲೇ ತಾತ್ಕಾಲಿಕ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣವನ್ನು ಹೊಸ ಬಸ್ ನಿಲ್ದಾಣಕ್ಕೆ ಸ್ಥಳಾಂತರಿಸಲಾಗಿದೆ. ಆದರೂ ತಾತ್ಕಾಲಿಕ ಬಸ್ ನಿಲ್ದಾಣದ ಕಟ್ಟಡ ತೆರವು ಮಾಡದೇ ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಕಾರಿ ಸಿದ್ದೇಶ್ ಹೆಬ್ಬಾಳ್ ನೆಪ ಹೇಳುತ್ತಿದ್ದಾರೆ ಎಂದು ಆರೋಪಿಸಿದರು.

ಖಾಸಗಿ ಬಸ್ ನಿಲ್ದಾಣವನ್ನು ಆಧುನೀಕರಣ ಮಾಡಬೇಕಾಗಿದ್ದರಿಂದ ನಿಲ್ದಾಣವನ್ನು ಹತ್ತಿರದಲ್ಲಿ ಇದ್ದ ಹೈಸ್ಕೂಲ್ ಮೈದಾನದಲ್ಲಿ ತಾತ್ಕಾಲಿಕವಾಗಿ ಮಾಡಿಕೊಳ್ಳುವಂತೆ ನಾವೇ ಒಪ್ಪಿಗೆ ನೀಡಿದ್ದೇವು. ನಂತರ ಕೆಎಸ್‌ಆರ್‌ಟಿಸಿ ಆಧುನೀಕರಣ ಮಾಡಬೇಕು ಅಂದಾಗ, ಆವರಗೆರೆ ಬಳಿಯ ಐದು ಎಕರೆ ಪ್ರದೇಶದಲ್ಲಿ ತಾತ್ಕಾಲಿಕ ಬಸ್ ನಿಲ್ದಾಣ ಮಾಡುವಂತೆ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಸೂಚಿಸಿದ್ದರು. ಅಂದಿನ ಬಿಜೆಪಿ ಆಡಳಿತದಲ್ಲಿದ್ದವರು ಹೈಸ್ಕೂಲ್ ಮೈದಾನದಲ್ಲಿ ತಾತ್ಕಾಲಿಕ ಬಸ್ ನಿಲ್ದಾಣವನ್ನು ನಿರ್ಮಿಸಿದ್ದರು. ಪ್ರತಿಭಟನೆ ಮಾಡಿ ನ್ಯಾಯಾಲಯಕ್ಕೆ ಹೋಗಿದ್ದಾಗ ಕೆಎಸ್‌ಆರ್‌ಟಿಸಿ ಡಿಸಿ ಆರು ತಿಂಗಳಿನಲ್ಲಿ ಬದಲಾವಣೆ ಮಾಡುವುದಾಗಿ ಲಿಖಿತವಾಗಿ ಬರೆದು ಕೊಟ್ಟಿದ್ದರು. ಮೂರು ವರ್ಷಗಳಾದರೂ ಇನ್ನೂ ತಾತ್ಕಾಲಿಕ ಬಸ್ ನಿಲ್ದಾಣ ತೆರವು ಮಾಡಿಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ಫುಟ್‌ಬಾಲ್ ಅಸೋಸಿಯೇಷನ್ ಮುಜಾಹಿದ್, ಕ್ರಿಕೆಟ್ ಅಸೋಸಿಯೇಷನ್ ಜಯಪ್ರಕಾಶ್, ಕ್ರೀಡಾಪಟುಗಳಾದ ಮೋಹನ್ ಗಾಂನಗರ, ಕೇರಂ ಗಣೇಶ್, ಫರೀದ್‌ಖಾನ್, ಚಂದ್ರಶೇಖರ್, ಅಲ್ಲಾಭಕ್ಷಿ, ಪರಶುರಾಮ್, ಬಷೀರ್ ಮತ್ತಿತರರಿದ್ದರು.

ದಾವಣಗೆರೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಮಾತನಾಡಿದರು.

> ತಾತ್ಕಾಲಿಕ ಬಸ್ ನಿಲ್ದಾಣದಿಂದ ಮೈದಾನದಲ್ಲಿ ಆಡುವ ಕ್ರೀಡಾಪಟುಗಳಿಗೆ ತೊಂದರೆಯಾಗುತ್ತಿದೆ. ಸೋಮವಾರದೊಳಗೆ ತಾತ್ಕಾಲಿಕ ಬಸ್ ನಿಲ್ದಾಣ ತೆರವು ಪ್ರಕ್ರಿಯೆ ಪ್ರಾರಂಭ ಮಾಡದಿದ್ದಲ್ಲಿ ನಾವೇ ತೆರವುಗೊಳಿಸಲು ಮುಂದಾಗುತ್ತೇವೆ. ಕಟ್ಟಡವನ್ನು ಕೆಡವಿ ಅವಶೇಷಗಳನ್ನು ತೆಗೆದುಕೊಂಡು ಹೋಗುವಂತೆ ಸಾರ್ವಜನಿಕರಿಗೆ ಕರೆ ನೀಡಿ, ಅದರಿಂದ ಬಂದ ಹಣವನ್ನು ಪ್ರೌಢಶಾಲೆಯ ಖಾತೆಗೆ ಜಮೆ ಮಾಡಿಕೊಳ್ಳುತ್ತೇವೆ.
> -ದಿನೇಶ್ ಕೆ. ಶೆಟ್ಟಿ, ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ

ರಾಯಣ್ಣ ಹುತಾತ್ಮ ದಿನಾಚರಣೆ ನಾಳೆ

ದಾವಣಗೆರೆ: ನಗರದ ಶಿವಯೋಗಿ ಮಂದಿರದಲ್ಲಿ ಜ.26ರಂದು ಸಂಜೆ 6.30ಕ್ಕೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ ಹುತಾತ್ಮ ದಿನಾಚರಣೆ ಹಮ್ಮಿಕೊಳ್ಳಲಾಗಿದೆ ಎಂದು ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಉದ್ಘಾಟನೆಯನ್ನು ಮಾಜಿ ಶಾಸಕ ಎಸ್.ವಿ. ರಾಮಚಂದ್ರ ನೆರವೇರಿಸುವರು. ಕರವೇ ಉದ್ದಿಮೆದಾರರ ಸಂಘದ ಅಧ್ಯಕ್ಷ ಡಿ.ಸಿ. ಶ್ರೀನಿವಾಸ್ ಚೆನ್ನಿಕಟ್ಟೆ ಅಧ್ಯಕ್ಷತೆ ವಹಿಸಲಿದ್ದಾರೆ. ಹುತಾತ್ಮ ರಾಯಣ್ಣನ ಭಾವಚಿತ್ರಕ್ಕೆ ಇನ್‌ಸೈಟ್ಸ್ ಸಂಸ್ಥೆ ನಿರ್ದೇಶಕ ಜಿ.ಬಿ. ವಿನಯ್ ಕುಮಾರ್ ಪುಷ್ಪಾರ್ಚನೆ ಮಾಡುವರು ಎಂದರು. ಚಿಂತಕ ರಾ.ಚಿಂತನ್ ಅವರಿಗೆ ಹುತಾತ್ಮ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರಶಸ್ತಿ ನೀಡಲಾಗುವುದು. ಅತಿಥಿಗಳಾಗಿ ಕಾಂಗ್ರೆಸ್ ಮುಖಂಡ ಎಚ್.ಎಸ್ ನಾಗರಾಜ್, ಕರವೇ ತುಮಕೂರು ಘಟಕದ ಕಾಂತರಾಜ್, ಬಿಜೆಪಿ ಎಸ್.ಟಿ ಮೋರ್ಚಾ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ಕರವೇ ತುಮಕೂರು ಘಟಕದ ಮಂಜುನಾಥ್ ಗೌಡ, ಪಾಲಿಕೆ ಸದಸ್ಯ ಕೆ. ಪ್ರಸನ್ನಕುಮಾರ್, ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಬಡದಾಳ್, ಪಾಲಿಕೆಯ ಸವಿತಾ ಗಣೇಶ್ ಹುಲ್ಲುಮನೆ ಆಗಮಿಸಲಿದ್ದಾರೆಂದರು. ಸಮಾರಂಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದವರಿಗೆ ಸನ್ಮಾನಿಸಿ ಗೌರವಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಈಶ್ವರ್, ಸಂತೋಷ್, ಗೋಪಾಲ ದೇವರಮನೆ, ರವಿಕುಮಾರ್, ಫೈಲ್ವಾನ್ ಜಬೀವುಲ್ಲಾ ಖಾನ್, ಮಂಜುಳಾ ಗಣೇಶ್, ಜಬೀವುಲ್ಲಾ,ಗಿರೀಶ್ ಕುಮಾರ್ ಇದ್ದರು.

ಸಮಾಚಾರ ಸಣ್ಣದಲ್ಲ

ಎರಡೂವರೆ ವರ್ಷ ಅಧಿಕಾರ ಕೊಡಿ

ಸಾಗರ: ಇಲ್ಲಿನ ನಗರ ಸಭೆಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಮೀಸಲು ಪ್ರಕಟ ತಡವಾಗಿರುವ ಹಿನ್ನೆಲೆಯಲ್ಲಿ ನಮ್ಮ ಅವಧಿಯನ್ನು ಮೊಟಕುಗೊಳಿಸದೆ 2 ನೇ ಅವಧಿಯ ಒಟ್ಟು 2 ವರ್ಷ 6 ತಿಂಗಳು ಅನ್ವಯವಾಗುವ ರೀತಿ ಅವಕಾಶ ಕಲ್ಪಿಸಿಕೊಡಬೇಕು ಎಂದು ಸಾಗರ ನಗರ ಸಭಾ ಸದಸ್ಯರು ಆಗ್ರಹಿಸಿ ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಈ ಹಿಂದೆ 29.10.2020 ರಂದು ಆರಂಭವಾಗಿ 28.04.22023 ಕ್ಕೆ ಮೊದಲ ಅವಧಿ ಮುಕ್ತಾಯ ವಾಗಿತ್ತು ಆದರೆ ಮುಂದೆ 16 ತಿಂಗಳು ಮೀಸಲಾತಿ ಘೋಷಣೆಯಾಗಿರಲಿಲ್ಲ ಮತ್ತು ಘೋಷಣೆಯಾದ ನಂತರ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದಿದ್ದ ಕಾರಣ ಇದುವರೆಗೂ ಸದಸ್ಯರಾಗಿದ್ದರೂ ಯಾವುದೇ ಅಧಿಕಾರದ ಅವಕಾಶ ಇಲ್ಲದೆ ತಪ್ಪಿ ಹೋಗಿತ್ತು. ಈಗ ತಡೆಯಾಜ್ಞೆ ತೆರವಾಗಿದೆ ಆದರೆ ನಮ್ಮದಲ್ಲದ ತಪ್ಪಿಗೆ ಸುಮಾರು 20 ತಿಂಗಳಿಗೂ ಹೆಚ್ಚು ಅವಧಿ ಸುಮ್ಮನೆ ಹೊರಗೆ ಕಳೆಯುವಂತಾಗಿದೆ. ಹಾಗಾಗಿ ಮುಂದಿನ ಅವಧಿಯನ್ನು ಪೂರ್ಣ 2 ವರ್ಷ 6 ತಿಂಗಳು ಕಲ್ಪಿಸಿ, ತಕ್ಷಣ ಚುನಾವಣೆ ನಡೆಸಬೇಕು ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ನಾಳೆ ಸಾಧಕರಿಗೆ ಸನ್ಮಾನ, ಹಾಸ್ಯ ಸಂಜೆ

ದಾವಣಗೆರೆ: ನಗರದ ಎಸ್.ಎಸ್. ಬಡಾವಣೆ ಸ್ನೇಹಿತರ ಬಳಗ ಸಂಘದ ಉದ್ಘಾಟನೆ, ಸಾಧಕರಿಗೆ ಸನ್ಮಾನ ಹಾಗೂ ಗಂಗಾವತಿ ಪ್ರಾಣೇಶ್ ಮತ್ತು ಸಂಗಡಿಗರಿಂದ ಹಾಸ್ಯ ರಸ ಸಂಜೆ ಕಾರ್ಯಕ್ರಮ ಜ. 26ರ ಸಂಜೆ 6 ಗಂಟೆಗೆ ಎಸ್.ಎಸ್. ಬಡಾವಣೆ ಎ ಬ್ಲಾಕ್‌ನಲ್ಲಿ ನಡೆಯಲಿದೆ. ಸುದ್ದಿಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ಎಂ.ಎಸ್. ದೇವರಾಜ್ ಮಾತನಾಡಿ, ಉದ್ಘಾಟನೆಯನ್ನು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ನೆರವೇರಿಸುವರು. ಎಸ್ಪಿ ಉಮಾ ಪ್ರಶಾಂತ್ ಆಗಮಿಸಲಿದ್ದಾರೆ ಎಂದರು. ಹಾಸ್ಯ ಭಾಷಣಕಾರ ಗಂಗಾವತಿ ಪ್ರಾಣೇಶ್‌ರಿಂದ ಹಾಸ್ಯ ರಸಸಂಜೆ ಏರ್ಪಡಿಸಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಎಂ. ಆಂಜನೇಯ, ಎಂ.ಬಿ. ರವಿ, ಸದಸ್ಯರಾದ ಸುಜಿತ್ ಕುಮಾರ್, ಪೂರ್ವಾಚಾರ್ ಇದ್ದರು.

ಸಾಬೀತುಪಡಿಸಿದರೆ ಬಹುಮಾನ: ಪಾಷ

ದಾವಣಗೆರೆ: ಯಲ್ಲಮ್ಮನಗರ, ವಾರ್ಡ್ ನಂ. 22ರಲ್ಲಿ 2021ರಂದು ನಡೆದ ಉಪಚುನಾವಣೆಯಲ್ಲಿ ಬಿಜೆಪಿ ಯವರ ಬಳಿ ಹಣ ತೆಗೆದುಕೊಂಡಿದ್ದಾಗಿ ಬಿಜೆಪಿ, ಕಾಂಗ್ರೆಸ್‌ನ ಕೆಲ ಮುಖಂಡರು ಹೇಳುತ್ತಿದ್ದು, ಒಂದು ವೇಳೆ ನಾನು ಹಣ ಪಡೆದಿರುವುದು ಸಾಬೀತುಪಡಿಸಿದಲ್ಲಿ 2 ಲಕ್ಷ ರು. ಬಹುಮಾನ ನೀಡುವೆ ಎಂದು ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮುಜಾಹಿದ್ ಪಾಷ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 2021ರ ಮಾರ್ಚ್ ತಿಂಗಳಿನಲ್ಲಿ ನಡೆದ ವಾರ್ಡ್ ನಂ. 22. ಯಲ್ಲಮ್ಮ ನಗರದ ಉಪಚುನಾವಣೆಯಲ್ಲಿ ನಾನು ಕಾಂಗ್ರೆಸ್ ಪ್ರಬಲ ಆಕಾಂಕ್ಷಿಯಾಗಿದ್ದೆ. ಟಿಕೆಟ್ ಸಿಗದಿದ್ದಾಗ ಪಕ್ಷೇತರನಾಗಿ ಸ್ಪರ್ಧಿಸಿದೆ. ಆದರೆ, ಕೆಲವರು ವಿನಾಕಾರಣ ನನ್ನ ತೇಜೋವಧೆ ಮಾಡಲು, ಹಣ ಪಡೆದಿದ್ದಾಗಿ ಆರೋಪಿಸುತ್ತಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರವೀಣ್ ಕುಮಾರ್, ಸೈಯದ್ ಅಪ್ರು, ಮಲ್ಲಿಕ್ ರಿಯಾನ್, ಜಿಲಾನಿ ಉಪಸ್ಥಿತರಿದ್ದರು.

ಇಂದು ಬೈಕ್ ರ‍್ಯಾಲಿ

ದಾವಣಗೆರೆ: ನಗರದ ಪುಷ್ಪಾ ಶಾಮನೂರು ಮಹಾಲಿಂಗಪ್ಪ ಶಾಲೆ ವತಿಯಿಂದ 'ಡ್ರಗ್ಸ್ ಫ್ರೀ ದಾವಣಗೆರೆ' ಹೆಸರಿನಡಿ ಬೈಸಿಕಲ್ ರ‍್ಯಾಲಿಯನ್ನು ಜ. 25ರ ಬೆಳಗ್ಗೆ 9.15ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ಪ್ರಾಚಾರ್ಯ ಬಿ.ಆರ್. ಅಶೋಕ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರ‍್ಯಾಲಿಯನ್ನು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ, ಎಸ್ಪಿ ಉಮಾ ಪ್ರಶಾಂತ್, ಎಸ್‌ಪಿಎಸ್‌ಎಂ ಆಫ್ ಇನ್ಸ್ಟಿಟ್ಯೂಷನ್ ಚೇರ್ಮನ್ ಎಚ್. ಮಹಾಲಿಂಗಪ್ಪ ಉದ್ಘಾಟಿಸುವರೆಂದರು. ಸುದ್ದಿಗೋಷ್ಠಿಯಲ್ಲಿ ಡೀನ್ ಸಿಲ್ಜಿ ಜೋಸ್, ಶಾಹೀದ್, ರಾಕೇಶ್ ಇದ್ದರು.

ಉಪಕಾರ ಸ್ಮರಣೆ ಇಲ್ಲದ ವ್ಯಕ್ತಿ ಎಂಪಿಆರ್

ದಾವಣಗೆರೆ: ಉಪಕಾರ ಸ್ಮರಣೆ ಇಲ್ಲದ ವ್ಯಕ್ತಿ ಎಂ.ಪಿ. ರೇಣುಕಾಚಾರ್ಯ. ಈ ಹಿಂದೆ ಹೊನ್ನಾಳಿಯಲ್ಲಿದ್ದ ಹಲವಾರು ಮುಖಂಡರನ್ನು ತುಳಿದು ಹಾಕಿದ ಖ್ಯಾತಿ ಇವರಿಗಿದೆ ಎಂದು ಜಿಪಂ ಮಾಜಿ ಸದಸ್ಯ ಎಂ.ಆರ್. ಮಹೇಶ್ ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಹಿಂದೆ ಬಿಎಸ್‌ವೈ ಅಧಿಕಾರದಲ್ಲಿದ್ದಾಗ ಸುಗಮ ಆಡಳಿತ ನಡೆಸಲು ಬಿಡದ ಎಂಪಿಆರ್, ಈಗ ಬಿಎಸ್‌ವೈ ಬಗ್ಗೆ ಮಾತನಾಡುತ್ತಾರೆ. ಮೊದಲಿನಿಂದಲೂ ರೇಣುಕಾಚಾರ್ಯ ಬ್ಲಾಕ್ ಮೇಲ್ ಮಾಡುತ್ತಾ ಬಂದಿದ್ದಾರೆ ಎಂದು ದೂರಿದರು. ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಎಂಪಿಆರ್ ಬಗ್ಗೆ ಮಾತನಾ ಡಿಲ್ಲ. ಈ ಹಿಂದೆ ಎಂಪಿಆರ್ ಕಾಂಗ್ರೆಸ್ ಸೇರಲು ಮುಂದಾಗಿದ್ದರು. ನೈತಿಕತೆ ಇಲ್ಲದೆ ಇನ್ನೊಬ್ಬರ ಬಗ್ಗೆ ಆರೋಪಿಸುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

{ಡಿ.ಕೆ.ಶಿವಕುಮಾರ್} ಉಪಮುಖ್ಯಮಂತ್ರಿ

ವಾಣಿವಿಲಾಸ ಸಾಗರ ಜಲಾಶಯ ನಿರ್ಮಿಸಿದ ಮಹಾರಾಣಿ ಕೆಂಪರಾಜ ಅಮ್ಮಣ್ಣಿ ಅವರ ಜನಸೇವೆ ಸ್ಮರಣೀಯ. ಚಿತ್ರದುರ್ಗ ಜಿಲ್ಲೆಯ ಎಲ್ಲ ಕ್ಷೇತ್ರಗಳಿಗೆ ಮುಂದಿನ ಬಜೆಟ್ ನಲ್ಲಿ ಯೋಜನೆ ರೂಪಿಸಲು ನಮ್ಮ ಸರಕಾರ ಬದ್ಧ. ನೀರಾವರಿ ಯೋಜನೆಯಲ್ಲಿ ನಮ್ಮ ಸರಕಾರ ಬದ್ಧತೆಯಿಂದ ಕೆಲಸ ಮಾಡುತ್ತಿದೆ.

ತೋಟಗಾರಿಕೆ ಇಲಾಖೆಯಿಂದ ಮಲೆನಾಡ ಕರಕುಶಲ ಉತ್ಸವ ಸರಸ್ ಮೇಳ - ಪುಷ್ಪಸಿರಿ ಫಲಪುಷ್ಪ ಪ್ರದರ್ಶನ

ಕರಕುಶಲ ಕಲಾವಿದರಿಗೆ ಶಾಶ್ವತ ಮಳಿಗೆ ಸ್ಥಾಪಿಸಿ: ಶಾಸಕ

ಶಿವಮೊಗ್ಗ: ವೈವಿಧ್ಯಮಯ ಕರಕುಶಲ ಮತ್ತು ಫಲಪುಷ್ಪಗಳ ಜಗತ್ತು ಇಲ್ಲಿ ಸೃಷ್ಟಿಯಾಗಿದೆ. ಕರಕುಶಲ ಕಲಾವಿದರಿಗೆ ಶಾಶ್ವತವಾಗಿ ಮಾರುಕಟ್ಟೆ ಒದಗಿಸಲು ಮಾಲ್‌ನ್ನು ನಿರ್ಮಿಸಿದರೆ ಅನುಕೂಲವಾಗುತ್ತದೆ. ಇದಕ್ಕೆ ನಮ್ಮ ಸಹಕಾರ ಇದೆ ಎಂದು ಶಾಸಕ ಎಸ್.ಎನ್.ಚನ್ನಬಸಪ್ಪ ತಿಳಿಸಿದರು.

> **ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆ ಸದೃಢವಾಗಿದ್ದು, ಉತ್ತಮವಾಗಿ ಕಾರ್ಯವೆಸುತ್ತಿದೆ. ಮುಂದಿನ ದಿನಗಳಲ್ಲಿ ಮಹಿಳೆಯರು ತಯಾರಿಸಿದ ಕರಕುಶಲ ಉತ್ಪನ್ನಗಳಿಗೆ ಶಾಶ್ವತವಾಗಿ ಮಳಿಗೆ ಸ್ಥಾಪನೆ ಮಾಡುವ ಯೋಚನೆ ಇದೆ. ಒಳಾಂಗಣ ಮತ್ತು ಹೊರಾಂಗಣ ಅಲಂಕಾರಿಕ ವಸ್ತುಗಳು ಒಂದೇ ಸೂರಿನಡಿ ಹಾಪ್‌ಕಾಮ್ಸ್ ರೀತಿಯಲ್ಲಿ ಮಾರಾಟ ಮಾಡುವ ಪರಿಕಲ್ಪನೆ ಇದೆ ಎಂದರು.**
> **ಹೇಮಂತ್ ಎನ್**, ಜಿ.ಪಂ ಸಿಇಓ

ಜಿಲ್ಲಾ ಪಂಚಾಯತ್, ತೋಟಗಾರಿಕೆ ಇಲಾಖೆ, ಜಿಲ್ಲಾ ಉದ್ಯಾನ ಕಲಾ ಸಂಘ ಶಿವಮೊಗ್ಗ ಇವರ ಸಹಯೋಗದಲ್ಲಿ ಅಲ್ಲಮಪ್ರಭು ಉದ್ಯಾನವನ(ಫ್ರೀಡಂ ಪಾರ್ಕ್)ನಲ್ಲಿ 24 ರಿಂದ 26 ರವರೆಗೆ ಏರ್ಪಡಿಸಲಾಗಿರುವ ಮಲೆನಾಡ ಕರಕುಶಲ ಉತ್ಸವ ಸರಸ್ ಮೇಳ ಹಾಗೂ ಪುಷ್ಪಸಿರಿ ಫಲಪುಷ್ಪ ಪ್ರದರ್ಶನವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

ಜಿ.ಪಂ. ಸಿಇಓ ಹೇಮಂತ್ ಅವರ ಮಲೆನಾಡ ಕರಕುಶಲ ಉತ್ಸವದ ಕನಸು ಇಂದು ನನಸಾಗಿದೆ. ಇಚ್ಛಾಶಕ್ತಿ ಇರುವ ಅಧಿಕಾರಗಳಿಂದ ಮಾತ್ರ ಸಾಧ್ಯ .ಇಂತಹ ಕಾರ್ಯಕ್ರಮವನ್ನು ನೆನಪು ಮಾಡಿಕೊಂಡಾಗೆಲ್ಲಾ ಕರಕುಶಲ ಕಲಾವಿದರಿಗೆ ಸರಿಯಾದ ನ್ಯಾಯ ಸಿಗುತ್ತಿಲ್ಲ ಎಂದು ಕೊರಗಿತ್ತು. ಆದರೆ ಇವತ್ತು ಅದಕ್ಕೆ ನ್ಯಾಯ ಸಿಕ್ಕಿದೆ ಎಂದೆನಿಸುತ್ತಿದೆ.ಬೆಂಗಳೂರಿನಂತೆ ನಮ್ಮ ಜಿಲ್ಲೆಯಲ್ಲೂ ಬೃಹತ್ ಮಟ್ಟದಲ್ಲಿ ಕರಕುಶಲ ಮತ್ತು ಫಲ ಪುಷ್ಪ ಪ್ರದರ್ಶನ ಏರ್ಪಟ್ಟಿದೆ. ಕುಪ್ಪಳಿಯಲ್ಲಿನ ಕುವೆಂಪುರವರ ಮನೆಯನ್ನು ಇಡೀ ದೇಶದ ಜನ ನೋಡುವಂತಾಗಿದೆ ಎಂದರು.

ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಆರ್.ಎಂ.ಮಂಜುನಾಥ ಗೌಡ ಮಾತನಾಡಿ, ಮಲೆನಾಡ ಕರಕುಶಲ ಉತ್ಸವವನ್ನು ಬಹಳ ಅರ್ಥಪೂರ್ಣವಾಗಿ ಮಾಡಲಾಗಿದೆ. ಧಾರ್ಮಿಕ, ಸಾಹಿತ್ಯಿಕ ಕಲಾಕೃತಿಗಳು, ಮಹಿಳೆಯರು ತಯಾರಿಸಿದ ಕರಕುಶಲ ವಸ್ತುಗಳಾದ ಟೆರಾಕೊಟ, ಹಸೆ ಚಿತ್ತಾರ, ರೇಶಿಮೆ, ಬಿದಿರು, ರೈತರು ಬೆಳೆದ ಫಲ-ಪುಷ್ಪಗಳು, ರಾಷ್ಟ್ರಕವಿ ಕುವೆಂಪುರವರ ಪುಸ್ತಕ ಪ್ರದರ್ಶನ ತುಂಬಾ ವಿಶೇಷವಾಗಿದೆ. ಈ ಉತ್ಸವ 3 ದಿನಗಳ ಕಾಲ ಯಶಸ್ವಿಯಾಗಿ ನಡೆಯಲಿ ಎಂದರು.

ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಮಾತನಾಡಿ, ಈ ಫಲಪುಷ್ಪ ಪ್ರದರ್ಶನದಲ್ಲಿ ಸುಮಾರು 428000 ಹೂಗಳನ್ನು ಬಳಕೆ ಮಾಡಲಾಗಿದೆ. ಜಿಲ್ಲೆಯಲ್ಲಿ ಉತ್ತಮ ಕರಕುಶಲ ವಸ್ತುಗಳು ಸಿದ್ಧವಾಗುತ್ತಿವೆ. ಆದರೆ ಅವುಗಳ ಮಾರಾಟ ಕುಂಠಿತವಾಗಿದೆ. ಇಂತಹ ಮೇಳದಲ್ಲಿ ಆನ್‌ಲೈನ್ ಮೂಲಕ ಮಾರಾಟಕ್ಕೆ ಮುಂದಾಗಿದ್ದೇವೆ. ಇದರಿಂದ ಕಲಾವಿದರಿಗೂ ಪ್ರೋತ್ಸಾಹ ನೀಡಿದಂತಾಗುತ್ತದೆ. ಮುಂದಿನ ಮೇಳ ಆರಂಭಕ್ಕಿಂತ ಮಂಚಿತವಾಗಿ ಆನ್‌ಲೈನ್ ಮಾರಾಟದ ವ್ಯವಸ್ಥೆ ಕಲ್ಪಿಸಲು ಎಲ್ಲಾ ರೀತಿಯ ತಯಾರಿ ಮಾಡಲಾಗುತ್ತದೆ. ಈ ಕಾರ್ಯಕ್ರಮ ಯಶಸ್ಸಿಗೆ ಕಾರಣರಾದ ಜಿ.ಪಂ ಸಿಇಓ ಎನ್. ಹೇಮಂತ್ ಮತ್ತು ಅವರ ತಂಡಕ್ಕೆ ಅಭಿನಂದನೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ತೋಟಗಾರಿಕೆ ಇಲಾಖೆ ಉಪ ನಿರ್ದೇಶಕಿ ಸವಿತಾ, ಜಿ.ಪಂ. ಯೋಜನಾ ನಿರ್ದೇಶಕಿ ನಂದಿನಿ, ಉದ್ಯಾನ ಕಲಾ ಸಂಘದ ಪದಾಧಿಕಾರಿಗಳು, ಅಧಿಕಾರಿಗಳು, ಸಿಬ್ಬಂದಿಗಳು, ಸಾರ್ವಜನಿಕರು ಹಾಜರಿದ್ದರು.

ಪುಷ್ಪಸಿರಿ ಫಲಪುಷ್ಪ ಪ್ರದರ್ಶನವನ್ನು ಶಾಸಕ ಎಸ್.ಎನ್.ಚನ್ನಬಸಪ್ಪ ಉದ್ಘಾಟಿಸಿ ಮಾತನಾಡಿದರು.

ಉತ್ಸವದಲ್ಲಿ 30ಕ್ಕೂ ಹೆಚ್ಚು ಮಾರಾಟ ಮಳಿಗೆ

ಉತ್ಸವದಲ್ಲಿ ರೈತರು ಬೆಳೆದ ವಿವಿಧ ಫಲ-ಪುಷ್ಪಗಳು, ಮಲೆನಾಡ ಕರಕುಶಲತೆಗಳು, ಸಹ್ಯಾದ್ರಿ ಕರಕುಶಲತೆ, ಬಂಜಾರ ಲಂಬಾಣಿ ಉಡುಪು, ಕಲ್ಲಿನ ಆಭರಣ, ಮಲೆನಾಡು ಸವಿರುಚಿ ತಿನಿಸು, ಅಕ್ಕ ಕೆಫೆ, ಮ್ಯೂರಲ್ ಕಲಾ ಚಿತ್ರ, ಹಸೆ ಚಿತ್ತಾರೆ, ಮಣ್ಣಿನ ಅಲಂಕಾರಿಕ ಮಳಿಗೆ, ಸ್ವದೇಶಿ, ಕೌದಿ, ಈಚಲು ಚಾಪೆ, ಮರದ ಉತ್ಪನ್ನ, ಟೆರಾಕೋಟ, ಖಾದಿ ಉಡುಪುಗಳು ಸೇರಿದಂತೆ ಒಳಾಂಗಣದಲ್ಲಿ 30 ಕ್ಕೂ ಹೆಚ್ಚು ಮಳಿಗೆ ಹಾಗೂ ಹೊರಾಂಗಣದಲ್ಲಿ ನರ್ಸರಿ ಗಿಡಗಳು, ವಿವಿಧ ಇಲಾಖೆಗಳ ಮಳಿಗೆಗಳು, ಕೃಷಿ ಪರಿಕರಗಳು, ತಿಂಡಿ, ಬಟ್ಟೆ . ವಿವಿಧ ರೀತಿಯ ಮಾರಾಟ ಮಳಿಗೆಗಳನ್ನು ಸ್ಥಾಪಿಸಲಾಗಿದೆ.

ನೋಡುಗರ ಗಮನ ಸೆಳೆದ ಕರಕುಶಲ ಉತ್ಸವ

ಶಿವಮೊಗ್ಗ: ಗಣರಾಜ್ಯೋತ್ಸವ ಅಂಗವಾಗಿ ಜಿಲ್ಲಾ ಪಂಚಾಯಿತಿ, ತೋಟಗಾರಿಗೆ ಇಲಾಖೆ, ಹಾಗೂ ಜಿಲ್ಲಾ ಉದ್ಯಾನ ಕಲಾಸಂಘ ಇವರ ಸಹಯೋಗದೊಂದಿಗೆ ಇಂದಿನಿಂದ ಮೂರು ದಿನಗಳ ಕಾಲ ಅಲ್ಲಮಪ್ರಭು ಪಾರ್ಕ್ ಉದ್ಯಾನವನದಲ್ಲಿ ಮಲೆನಾಡು ಕರಕುಶಲ ಉತ್ಸವ ಹಾಗೂ ಪುಷ್ಪಸಿರಿ ಫಲಪುಷ್ಪ ಪ್ರದರ್ಶನ ಆಯೋಜಿಸಿದ್ದು, ನೋಡುಗರ ಗಮನ ಸೆಳೆದಿದೆ ರಾಷ್ಟ್ರಕವಿ ಕುವೆಂಪು ಅವರ ಕವಿಶೈಲದ ಮನೆ ಮಾದರಿ, ಕುವೆಂಪು ಪುತ್ಥಳಿ, ಬೃಹತ್ ಗಾತ್ರದ ಪುಷ್ಪಾಲಂಕೃತ ನವಿಲು, ಚಂದ್ರಗುತ್ತಿ ರೇಣುಕಾಂಬ ದೇವಾಲಯ, ಐ ಲವ್ ಯು ಶಿವಮೊಗ್ಗ ಕಲಾಕೃತಿ, ಬಿದಿರಿನ ಬುಟ್ಟಿಗಳು, ಮಣ್ಣಿನ ವಿವಿಧ ಕಲಾಕೃತಿಗಳು, ವಿವಿಧ ಬೆಗೆಯ ಫಲ ಪುಷ್ಪಗಳು, ತರಕಾರಿಗಳು, ಮೀನಿನ ಅಕ್ವೇರಿಯಂ, ವಿವಿಧ ತಳಿಯ ತರಕಾರಿ, ಹೂವಿನ ಬೀಜಗಳು, ಸಹಕಾರಿ ಸಂಘಗಳಿಂದ ನೂರಾರು ಮಳಿಗೆಗಳಲ್ಲಿ ತಿಂಡಿ ತಿನಿಸುಗಳ ಪ್ರದರ್ಶನ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ. ಅದರಲ್ಲೂ ತರಕಾರಿ, ಹಣ್ಣು, ಹೂವುಗಳನ್ನು ಬಳಸಿ ವಿವಿಧ ಕಲಾಕೃತಿ ರಚಿಸಿದ್ದು, ಮಕ್ಕಳು ಹಾಗೂ ನೋಡುಗರನ್ನು ಸೆಳೆದಿವೆ. ಆಕರ್ಷಕ ವೈವಿಧ್ಯಮಯ ರಂಗೋಲಿಗಳು ಕೂಡ ನೋಡುಗರನ್ನು ಸೆಳೆದಿವೆ. ಹಸೆ ಚಿತ್ತಾರ, ಟರ‍್ರಾಕೊಟ್ಟ(ಸುಡಾವೆ ಮಣ್ಣು) ಶಿಲ್ಪಕಲಾ ಉತ್ಪನ್ನಗಳು, ಗುಡಿ ಕೈಗಾರಿಕೆ ಮತ್ತು ವೈಯರ್ ಬ್ಯಾಗ್ ಗಳು, ಗೃಹ ಅಲಂಕಾರಿಕಾ ವಸ್ತುಗಳು, ಹೀಗೆ ಹತ್ತು ಹಲವು ಬಗೆಯ ವಸ್ತುಗಳನ್ನು ಪ್ರದರ್ಶನದಲ್ಲಿವೆ. ಸ್ವಸಹಾಯ ಸಂಘದ ಸದಸ್ಯರಿಗೆ ವಿವಿಧ ಯೋಜನೆಗಳಡಿಯಲ್ಲಿ ಅವಕಾಶ ನೀಡಲಾಗಿದೆ.

ಕಾಡಾನೆಗಳ ಸ್ಥಳಾಂತರಕ್ಕೆ ಆಗ್ರಹಿಸಿ ಪ್ರತಿಭಟನೆ

ಶಿವಮೊಗ್ಗ: ರೈತರ ಬೆಳೆ ನಾಶ ಮಾಡುತ್ತಿರುವ ಆನೆಗಳನ್ನು ಕೂಡಲೇ ಸ್ಥಳಾಂತರಿಸಬೇಕು. ಬೆಳೆ ನಷ್ಟವಾದ ರೈತರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಒತ್ತಾಯಿಸಿ ಮಲೆನಾಡು ಪ್ರದೇಶದ ರೈತರು ಮಾಜಿ ಸಚಿವ ಹರತಾಳು ಹಾಲಪ್ಪ ನೇತೃತ್ವದಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

> **ರೈತರ ಬದುಕಿನ ಜತೆಗೆ ಚೆಲ್ಲಾಟ ಬೇಡ, ರೈತ ರೊಚ್ಚಿಗೆದ್ದರೆ ಜನಪ್ರತಿನಿಧಿಗಳು ಊರು ಬಿಡುವ ಪರಿಸ್ಥಿತಿ ಬರುತ್ತದೆ. ರೈತರ ಸಹನೆ ಮಿತಿ ಇದೆ. ಅರಣ್ಯಾಧಿಕಾರಿಗಳು ಪಟಾಕಿ ಸಿಡಿಸಿ ಈ ಊರಿನಿಂದ ಆ ಊರಿಗೆ ಆನೆಗಳನ್ನು ಓಡಿಸುವ ನಾಟಕ ಮಾಡುತ್ತಿದ್ದಾರೆ. ಶಾಶ್ವತವಾಗಿ ಆನೆಗಳನ್ನು ಸ್ಥಳಾಂತರಿಸಬೇಕು. ಬೆಳೆಹಾನಿ ಪರಿಹಾರ ನೀಡಿ ರೈತರಿಗೆ ಧೈರ್ಯ ತುಂಬಬೇಕು. ಮೃತ ಮತ್ತು ಗಾಯಾಳು ರೈತರ ಕುಟುಂಬಕ್ಕೆ ತಕ್ಷಣ ಸೂಕ್ತ ಪರಿಹಾರ ನೀಡಬೇಕು.**
> **-ವೀರೇಶ್ ಹಾಲವಳ್ಳಿ**, ರೈತ ಮುಖಂಡ

ಶಿವಮೊಗ್ಗ ಜಿಲ್ಲೆಯ ಮಲೆನಾಡು ಭಾಗಗಳಲ್ಲಿ ಆನೆಗಳ ಹಾವಳಿ ಹೆಚ್ಚಾಗಿದ್ದು, ಪ್ರತಿನಿತ್ಯ ರೈತರ ಜಮೀನುಗಳಿಗೆ ನುಗ್ಗಿ ಬೆಳೆಗಳನ್ನು ನಾಶ ಮಾಡುತ್ತಿದೆ. ಬಸವಾಪುರದ ರೈತ ತಿಮ್ಮಪ್ಪನ ಪ್ರಾಣ ಆನೆಗಳು ಬಲಿ ಪಡೆದಿವೆ. ರೈತರು ಪ್ರಾಣ ಭಯದಿಂದ ಓಡಾಡುವ ಸ್ಥಿತಿ ಎದುರಾಗಿದ್ದು, ಈ ಬಗ್ಗೆ ಅರಣ್ಯಾಧಿಕಾರಿಗಳಿಗೆ, ಅರಣ್ಯ ಸಚಿವರಿಗೆ ಮತ್ತು ಸರಕಾರಕ್ಕೆ ದೂರು ನೀಡಲಾಗಿದೆ. ಸದನದಲ್ಲೂ ಚರ್ಚೆಯಾಗಿದೆ. ರೈತರ ಪ್ರಾಣ ಬಲಿಯಾಗುತ್ತಿದ್ದರೂ, ಸರಕಾರ ಹಾಗೂ ಅರಣ್ಯಾಧಿಕಾರಿಗಳು ತೋರುತ್ತಿರುವ ನಿರ್ಲಕ್ಷ್ಯ ಖಂಡಿಸಿ ಅನಿವಾರ್ಯವಾಗಿ ಸಮಸ್ಯೆ ಬಗೆಹರಿಯುವವರೆಗೆ ಅನಿರ್ಧಿಷ್ಟಾವಧಿ ಮುಷ್ಕರ ನಡೆಸುವುದಾಗಿ ರೈತರು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ರೈತ ಮುಖಂಡ ವೀರೇಶ್ ಹಾಲವಳ್ಳಿ ಮಾತನಾಡಿ, ಶಾಶ್ವತ ಪರಿಹಾರ ಸಿಗುವವರೆಗೆ ನಾವು ಹೋರಾಟ ಮುಂದುವರೆಸುತ್ತೇವೆ. ಅನೇಕ ರೈತರ ಮೇಲೆ ಆನೆಗಳು ದಾಳಿ ಮಾಡಿವೆ. ಇತ್ತೀಚೆಗೆ ದೇವೇಂದ್ರಪ್ಪ ಎಂಬ ರೈತ ಕೂಡ ಆನೆ ದಾಳಿಯಿಂದ ಮೃತಪಟ್ಟಿದ್ದಾರೆ. ಬಿಜೆಪಿ ಶಾಸಕರು ಸದನದಲ್ಲಿ ಹೋರಾಟ ಮಾಡಿದ್ದರ ಫಲವಾಗಿ 15 ಲಕ್ಷ ರೂ. ಘೋಷಣೆ ಮಾಡಿದ್ದರೂ ಕೂಡ ಹೊಲಸು ರಾಜಕಾರಣದಿಂದಾಗಿ ಶಾಸಕರು ಊರಲ್ಲಿಲ್ಲ ಎಂಬ ಕಾರಣಕ್ಕೆ ಪರಿಹಾರ ನೀಡಲು ಬಡ ರೈತನ ಕುಟುಂಬಕ್ಕೆ ಎರಡು ತಿಂಗಳು ವಿಳಂಬ ಮಾಡಿದ್ದಾರೆ ಎಂದು ದೂರಿದರು.

ಈ ಸಂದರ್ಭದಲ್ಲಿ ಶಾಸಕ ಡಿ.ಎಸ್. ಅರುಣ್, ಮಾಜಿ ಶಾಸಕರಾದ ಸ್ವಾಮಿರಾವ್, ಕೆ.ಬಿ. ಅಶೋಕ್ ನಾಯ್ಕ್, ಟಿ.ಡಿ. ಮೇಘರಾಜ್, ಹೊನಗೋಡು ರತ್ನಾಕರ್, ವಿನ್ಸೆಂಟ್ ರೋಡ್ರಿಗಸ್, ದತ್ತಾತ್ರಿ, ಮೋಹನ್ ರೆಡ್ಡಿ, ಸುಮಾ ಭೂಪಾಳಂ, ಹರೀಶ್, ನಾಗಾರ್ಜುನ ಸ್ವಾಮಿ, ಸತೀಶ್ ಎನ್., ಉಮೇಶ್ ಕಡೆಗದ್ದೆ, ದೇವರಾಜ್ ಬಸವಾಪುರ, ಆದರ್ಶ ಕಲ್ಲೂರು, ದಿವಾಕರ ಬೆಳ್ಳೂರು ಮೊದಲಾದವರಿದ್ದರು.

ಮಾಜಿ ಸಚಿವ ಹರತಾಳು ಹಾಲಪ್ಪ ನೇತೃತ್ವದಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ ಮುಂದೆ ರೈತರು ಪ್ರತಿಭಟನೆ ನಡೆಸಿದರು.

ಸಹಕಾರ ಭಾರತಿಗೆ ಇಲ್ಲ ನೈತಿಕತೆ

ಶಿವಮೊಗ್ಗ: ಅಡಕೆಯ ಮಾನ ಮೌಲ್ಯ ಕಾಪಾಡುವಲ್ಲಿ ಸಹಕಾರ ಭಾರತಿ ಸಂಘಟನೆ ಸಂಪೂರ್ಣ ವಿಫಲವಾಗಿದ್ದು, ಚುನಾವಣೆಯಲ್ಲಿ ಮತ ಕೇಳುವ ಯಾವುದೇ ನೈತಿಕತೆ ಅವರಿಗಿಲ್ಲ ಎಂದು ಜಿಲ್ಲಾ ಅಡಿಕೆ ಬೆಳಗಾರ ಸಂಘದ ಅಧ್ಯಕ್ಷ ಬಿ.ಎ. ರಮೇಶ್ ಹೆಗಡೆ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಭಾರತೀಯ ಸಂಸ್ಕೃತಿಯಲ್ಲಿ ಅಡಿಕೆಗೆ ಪೂಜ್ಯ ಭಾವನೆ ಇದೆ. ರೈತರ ಬದುಕಿನ ಭಾಗದ ಬೆಳೆಯಾಗಿದೆ. ಹಿಂದೂ ಧರ್ಮದ ಸಂಸ್ಕೃತಿಯ ಬಗ್ಗೆ ಮಾತನಾಡುವ ಬಿಜೆಪಿಯ ಅಂಗಸಂಸ್ಥೆಯಾದ ಸಹಕಾರ ಭಾರತಿ ಅಡಿಕೆಯ ಮಾನವನ್ನು ಸಂಪೂರ್ಣವಾಗಿ ಹರಾಜು ಹಾಕಿದೆ. ಅಡಿಕೆ ಆರೋಗ್ಯಕ್ಕೆ ಹಾನಿಕಾರಕ ಅಲ್ಲ ಎಂದು ಕೇಂದ್ರ ಸರಕಾರಕ್ಕೆ ಮತ್ತು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡುವಲ್ಲಿ ಸಹಕಾರ ಭಾರತಿ ಸಂಘಟನೆ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿದರು.

ಕೇಂದ್ರ ಸರಕಾರದ ಆರೋಗ್ಯ ಸಚಿವರಾದ ಅನುಪ್ರಿಯಾ ಪಟೇಲ್ ಹಾಗೂ ಅಶ್ವಿನಿ ಕುಮಾರ್ ಮತ್ತು ಜಾಖಂಡ್ ಸಂಸದ ನಿಶಿಕಾಂತ್ ಅವರು ಅಡಿಕೆಯ ಬಗ್ಗೆ ಇದು ಹಾನಿಕಾರಕ ಎಂದು ಪದೇ ಪದೇ ಹೇಳುತ್ತಲೇ ಬಂದಿದ್ದಾರೆ. ಕೇಂದ್ರ ಸರಕಾರ ಅಧಿಕಾರಕ್ಕೆ ಬಂದು 10 ವರ್ಷಗಳಾದರೂ ಅಡಿಕೆ ಹಾನಿಕಾರಕ ಅಲ್ಲ ಎಂದು ಸುಪ್ರೀಂ ಕೋರ್ಟ್ ಪ್ರಮಾಣಪತ್ರ ಸಲ್ಲಿಸದೇ ಮೌನ ವಹಿಸಿದ್ದಾರೆ ಎಂದರು.

ಈ ಹಿಂದೆ ಅಮಿತ್ ಶಾ ಅವರು ತೀರ್ಥಹಳ್ಳಿಯಲ್ಲಿ ಚುನಾವಣಾ ಪ್ರಚಾರಕ್ಕೆ ಬಂದಿದ್ದಾಗ 500 ಕೋಟಿ ರು. ವೆಚ್ಚದಲ್ಲಿ ಅಡಿಕೆ ಮಂಡಳಿ ಸ್ಥಾಪಿಸುವುದಾಗಿ ಹೇಳಿದ್ದರು. ಆದರೆ ಆ ಬಗ್ಗೆ ಕೇಂದ್ರ ಸರಕಾರದ ಯಾರೊಬ್ಬರೂ ಮಾತನಾಡುವುದಿಲ್ಲ. ಆರಗ ಜ್ಞಾನೇಂದ್ರ ಅವರು ಅಡಿಕೆ ಮಂಡಳಿ ಬೇಡ ಎನ್ನುತ್ತಿದ್ದಾರೆ. ಅಡಿಕೆ ಮಂಡಳಿ ರಚನೆ ಕುರಿತಂತೆ ಸಹಕಾರ ಭಾರತಿ ತನ್ನ ಸ್ಪಷ್ಟ ನಿಲುವನ್ನು ತಿಳಿಸಬೇಕು. ಅಲ್ಲದೇ, ಮ್ಯಾಮ್‌ಕೋಸ್ ಸಂಸ್ಥೆಗೆ ಸಹಕಾರ ಇಲಾಖೆ ವತಿಯಿಂದ ಎಂಡಿ ನೇಮಕವಾಗುತ್ತಿತ್ತು. ಈಗ ಅದನ್ನು ಖಾಸಗಿಯವರಿಗೆ ನೀಡಲಾಗುತ್ತಿದೆ ಈ ಎಲ್ಲಾ ಕಾರಣಗಳಿಂದ ಸಹಕಾರ ಭಾರತಿ ಸಂಘಟನೆಗೆ ದೇಶದ ಅಡಿಕೆ ಬೆಳೆಗಾರರ ಹಿತಕ್ಕಿಂತ, ಬಿಜೆಪಿ ಹಿತವೇ ಮುಖ್ಯವಾಗಿದೆ. ಮತ್ತು ಚುನಾವಣೆಯ ಉದ್ದೇಶದಿಂದಲೇ ಕೇಂದ್ರ ಕೃಷಿ ಸಚಿವರು ಇಲ್ಲಿಗೆ ಬಂದಿದ್ದು ಎಂದು ಈಗ ಬಹಿರಂಗವಾಗಿದೆ. ಈ ಎಲ್ಲಾ ಕಾರಣಗಳಿಂದ ಸಹಕಾರ ಭಾರತಿಗೆ ಅಡಿಕೆ ಬೆಳೆಗಾರರ ಬೆಂಬಲ ಕೇಳುವ ನೈತಿಕತೆ ಇಲ್ಲ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಮುಖರಾದ ಜಿ.ಡಿ. ಮಂಜುನಾಥ್, ಇಕ್ಕೇರಿ ರಮೇಶ್, ಸಂತೆಕಡೂರು ವಿಜಯಕುಮಾರ್, ದಯಾನಂದ್, ಡಿ.ಸಿ. ನಿರಂಜನ್, ಕುಶಾಲ್ ಪಟೇಲ್, ಡಾಕ್ಯಾನಾಯ್ಕ್, ಇದ್ದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಅಡಿಕೆ ಬೆಳಗಾರ ಸಂಘದ ಅಧ್ಯಕ್ಷ ಬಿ.ಎ. ರಮೇಶ್ ಹೆಗಡೆ ಮಾತನಾಡಿದರು.

> **ಈಶಾನ್ಯ ರಾಜ್ಯಗಳಿಂದ ಅಡಿಕೆ ಕಳ್ಳಸಾಗಾಣಿಕೆ ಭಾರತಕ್ಕೆ ಬರುತ್ತಿದೆ. ಅದನ್ನು ತಡೆಯಲು ಕೇಂದ್ರ ಸರಕಾರ ವಿಫಲವಾಗಿದೆ. ಮತ್ತು ದೇಶೀಯ ಮಾರುಕಟ್ಟೆಯಲ್ಲಿ ಸಾಕಷ್ಟು ಅಡಿಕೆ ದಾಸ್ತಾನು ಇದ್ದರೂ ಅತ್ಯಂತ ಕಡಿಮೆ ತೆರಿಗೆಯಲ್ಲಿ ಅಡಿಕೆಯನ್ನು ಆಮದು ಮಾಡಿಕೊಳ್ಳುತ್ತಿದೆ. ಬಿಜೆಪಿ ಅಂಗ ಸಂಸ್ಥೆ ಸಹಕಾರ ಭಾರತಿಗೆ ಇವೆಲ್ಲವೂ ಗೊತ್ತಿದ್ದೂ ಏನೂ ಮಾತನಾಡದೇ ಸುಮ್ಮನಿರುವುದು ಅಡಿಕೆ ಬೆಳಗಾರರಿಗೆ ಮೋಸ ಮಾಡಿದಂತಿದೆ.**
> **-ಬಿ.ಎ. ರಮೇಶ್ ಹೆಗಡೆ**, ಜಿಲ್ಲಾ ಅಡಿಕೆ ಬೆಳಗಾರರ ಸಂಘದ ಅಧ್ಯಕ್ಷ

ಸರಕಾರಿ ಆಸ್ಪತ್ರೆ ಬಗ್ಗೆ ಒಳ್ಳೆಯ ಅಭಿಪ್ರಾಯ ಇರಲಿ

ಸಾಗರ: ವೈದ್ಯಸಿಬ್ಬಂದಿಯನ್ನು ಗೌರವದಿಂದ ನೋಡಿ. ಸರಕಾರಿ ಆಸ್ಪತ್ರೆಯಲ್ಲಿ ಬಂದು ವೈದ್ಯಸಿಬ್ಬಂದಿಯನ್ನು ಬೆದರಿಸುವುದು, ಸಾರ್ವಜನಿಕ ಸ್ವತ್ತುಗಳಿಗೆ ಹಾನಿ ಮಾಡುವುದನ್ನು ಸಹಿಸಿಕೊಳ್ಳುವುದಿಲ್ಲ ಎಂದು ಶಾಸಕ ಹಾಗೂ ಅರಣ್ಯ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಗೋಪಾಲಕೃಷ್ಣ ಬೇಳೂರು ಎಚ್ಚರಿಕೆ ನೀಡಿದ್ದಾರೆ.

ಇಲ್ಲಿನ ತಾಯಿಮಗು ಆಸ್ಪತ್ರೆಯಲ್ಲಿ ಶುಕ್ರವಾರ ಪ್ರಗತಿಪರಿಶೀಲನಾ ಸಭೆ ನಡೆಸಿ, ರಾಷ್ಟ್ರೀಯ ಹೆಣ್ಣುಮಗು ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಖಾಸಗಿ ಆಸ್ಪತ್ರೆಯಾದರೆ ಸುಮ್ಮನೆ ಬರುತ್ತೀರಿ. ಸರಕಾರಿ ಆಸ್ಪತ್ರೆ ಎಂದಾಕ್ಷಣ ನಿಮ್ಮ ವರ್ತನೆಯೆ ಬದಲಾಗುತ್ತಿದೆ. ಇದು ಸರಿಯಲ್ಲ. ಸರಕಾರಿ ಆಸ್ಪತ್ರೆ ಬಡವರಿಗಾಗಿ ಇರುವುದು. ಇದು ನಮ್ಮೆಲ್ಲರ ಆಸ್ತಿಯಾಗಿದ್ದು ಉಳಿಸಿಕೊಳ್ಳುವುದು ನಮ್ಮ ಕೈಲ್ಲಿ ಇರುತ್ತದೆ. ವೈದ್ಯರ ಮೇಲೆ ದಬ್ಬಾಳಿಕೆ ಮಾಡಿದರೆ ಅವರಿಗೆ ನಿರ್ಭೀತಿಯಿಂದ ಕೆಲಸ ಮಾಡಲು ಆಗುವುದಿಲ್ಲ. ತಾಯಿಮಗು ಆಸ್ಪತ್ರೆಯಲ್ಲಿ ವರ್ಷಕ್ಕೆ ಎರಡು ಸಾವಿರಕ್ಕೂ ಹೆಚ್ಚು ಹೆರಿಗೆ ಆಗುತ್ತಿದ್ದು, ಇದು ಜಿಲ್ಲೆಯಲ್ಲಿ ತಾಲೂಕು ಆಸ್ಪತ್ರೆ ಮಾಡುತ್ತಿರುವ ದಾಖಲೆಯ ಕೆಲಸವಾಗಿದೆ ಎಂದು ಹೇಳಿದರು.

ಉಪವಿಭಾಗೀಯ ಆಸ್ಪತ್ರೆಗೆ ಆರೋಗ್ಯ ಸಚಿವರು ಭೇಟಿ ನೀಡಿ ಮೆಚ್ಚುಗೆ ವ್ಯಕ್ತಪಡಿಸಿ, ಆಸ್ಪತ್ರೆಗೆ ಮೂಲಭೂತ ಸೌಲಭ್ಯ ಒದಗಿಸಿಕೊಡುವ ಭರವಸೆ ನೀಡಿದ್ದು, ಆಸ್ಪತ್ರೆಯಲ್ಲಿ ಸುಸಜ್ಜಿತ ಶೌಚಾಲಯ, ಕ್ಯಾಂಟಿನ್, ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ವೈದ್ಯರ ಕೊರತೆ ನೀಗಿಸಲು ಸರಕಾರಕ್ಕೆ ಮನವಿ ಸಲ್ಲಿಸಲಾಗಿದೆ ಎಂದರು.

ಸಿವಿಲ್ ಸರ್ಜನ್ ಡಾ. ಕೆ.ಪರಪ್ಪ, ಡಾ. ಪ್ರತಿಮಾ, ಡಾ. ಭರತ್, ಡಾ. ಬಿ.ಜಿ.ಸಂಗಮ್, ಪೌರಾಯುಕ್ತ ಎಚ್.ಕೆ.ನಾಗಪ್ಪ, ನಗರಸಭೆ ಸದಸ್ಯರಾದ ಮಧುಮಾಲತಿ, ಗಣಪತಿ ಮಂಡಗಳಲೆ ಇನ್ನಿತರರು ಹಾಜರಿದ್ದರು.

ಹೆಣ್ಣುಮಗು ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಗೋಪಾಲಕೃಷ್ಣ ಮತ್ತಿತರರಿದ್ದರು.

ಹೆಣ್ಣು ಭ್ರೂಣ ಹತ್ಯೆ ಬೇಡ

ಹೆಣ್ಣುಮಕ್ಕಳ ಜನ್ಮದಿನಾಚರಣೆ ಅಂಗವಾಗಿ ಜನಿಸಿದ ಮಗುವಿಗೆ ಶುಭಾಶಯ ಕೋರಿದ ಶಾಸಕರು, ಹೆಣ್ಣು ಮತ್ತು ಗಂಡು ಎನ್ನುವ ಬೇಧಭಾವ ಮಾಡಬೇಡಿ. ಪ್ರಸ್ತುತ ಮಹಿಳೆ ಎಲ್ಲಾ ಕಡೆ ಅದ್ವಿತೀಯ ಸಾಧನೆ ಮಾಡುತ್ತಿದ್ದಾಳೆ. ಭ್ರೂಣಹತ್ಯೆಯಂತಹ ಪಾಪದ ಕೆಲಸವನ್ನು ಕೈಬಿಡಬೇಕು. ಹೆಣ್ಣು ಮಗುವಿಗೆ ಸಾಮಾಜಿಕ ಮಾನ್ಯತೆ ಸಿಗಬೇಕು ಎಂದು ಶಾಸಕ ಗೋಪಾಲಕೃಷ್ಣ ಬೇಳೂರು ತಿಳಿಸಿದರು.

ಚಕ್ರತೀರ್ಥ ಬಳಿ ಬಂಡೆ ಶಾಸನ ಶೋಧ

ತೀರ್ಥಹಳ್ಳಿ: ಪಟ್ಟಣದ ತುಂಗಾ ನದಿಯ ಚಕ್ರತೀರ್ಥ ಒಂದು ಮಡುವಾಗಿದೆ. ಇದು ತುಂಗಾ ನದಿ ತಿರುವು ಪಡೆಯುವ ಸ್ಥಳ. ರಾಮ ಮಂಟಪದ ಉತ್ತರ ಭಾಗದಲ್ಲಿದೆ. ಚಕ್ರತೀರ್ಥದ ಸಮೀಪ ನದಿಯ ದಡದಲ್ಲಿ ಹಾಗೂ ರಾಮಚಂದ್ರಾಪುರ ಮಠದ ಹಿಂಭಾಗ ಸ್ಥಳದ ಹುಟ್ಟು ಬಂಡೆಯ ಮೇಲೆ ಶಾಸನವನ್ನು ಕೆತ್ತಲಾಗಿದೆ. ಹುಟ್ಟಬಂಡೆಯು ಶಾಸನದ ಬಲಭಾಗದಲ್ಲಿ ಸುಮಾರು 25 ಅಡಿಗಳಷ್ಟು ಎತ್ತರವಾಗಿದ್ದು, ಎಡಭಾಗಕ್ಕೆ ಬೆಟ್ಟ ಹೊಂದಿಕೊಂಡಿದೆ. ಹುಟ್ಟು ಬಂಡೆ ಸುಮಾರು 60 ಅಡಿಗಳಷ್ಟು ಉದ್ದವಾಗಿದೆ. ಇದು ಮರಮಟ್ಟುಗಳಿಂದ ಕೂಡಿ ಒಂದು ದಿಬ್ಬವಾಗಿದೆ. ಪ್ರಸ್ತುತ ಗ್ರಾಮಸ್ಥರು ಇಲ್ಲಿ ಬ್ರಹ್ಮ ದೇವರು, ಚೌಡಿ, ನಾಗರಕಲ್ಲು ಪ್ರತಿಷ್ಠಾಪಿಸಿ ಆರಾಧಿಸುತ್ತಿದ್ದಾರೆ. ಪ್ರಸ್ತುತ ಹುಟ್ಟುಬಂಡೆಯ ಮೇಲಿನ ಶಾಸನವು ಕನ್ನಡ ಭಾಷೆ ಮತ್ತು 16ನೇ ಶತಮಾನದ ಕನ್ನಡ ಲಿಪಿಯಲ್ಲಿದೆ. ಬಂಡೆಯ ಈ ಶಾಸನ ಅಧ್ಯಯನ ಮಾಡಿದ್ದು ತೀರ್ಥಹಳ್ಳಿ ಸಮೀಪದ ಮೇಳಿಗೆ-ಸುಳುಗೋಡಿನವರೇ ಆದ ಶಾಸನ ತಜ್ಞ ಪ್ರೊ.ಜಿ.ಕೆ. ದೇವರಾಜಸ್ವಾಮಿ. ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಮಾಹಿತಿ ಪಡೆದು ಸಂಶೋಧನಾ ಲೇಖನ ಪ್ರಸ್ತುತಪಡಿಸಿದ್ದಾರೆ. ಇತಿಹಾಸ ದರ್ಶನ ಸಂಪುಟ 39-2024ರಲ್ಲಿ ಸಂಶೋದನಾ ವರದಿ ಪ್ರಕಟವಾಗಿದೆ.

ಕೇಂದ್ರ ಸಚಿವರಿಗೆ ಚೇಂಬರ್ ಸನ್ಮಾನ

ಶಿವಮೊಗ್ಗ: ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ. ಎಲ್.ಮುರುಗನ್ ಹಾಗೂ ಲೋಕಸಭಾ ಸದಸ್ಯ ಬಿ.ವೈ. ರಾಘವೇಂದ್ರ, ಅವರನ್ನು ಶಿವಮೊಗ್ಗ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ವತಿಯಿಂದ ಪದಾಧಿಕಾರಿಗಳು ಸನ್ಮಾನಿಸಿದರು. ಕೆನಡಾದಿಂದ ತರಲಾಗಿರುವ 10 ಕಿಲೋವ್ಯಾಟ್ ಸಾಮರ್ಥ್ಯದ ಟ್ರಾನ್ಸ್ ಮೀಟರ್ ಅಳವಡಿಕೆ ಕಾರ್ಯಕ್ರಮದ ಚಾಲನೆ ಸಂದರ್ಭದಲ್ಲಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಪದಾಧಿಕಾರಿಗಳು ಜನಪ್ರತಿನಿಧಿಗಳನ್ನು ಅಭಿನಂದಿಸಿದರು. ಟ್ರಾನ್ಸ್ ಮೀಟರ್ ಅಳವಡಿಕೆಯಿಂದ ಪ್ರಸಾರ ಸಾಮರ್ಥ್ಯ ಹತ್ತುಪಟ್ಟು ಹೆಚ್ಚಾಗಲಿದೆ. ಶಿವಮೊಗ್ಗ, ದಾವಣಗೆರೆ, ಚಿಕ್ಕಮಗಳೂರು ಸೇರಿದಂತೆ ಸುತ್ತಮುತ್ತಲಿನ ಅನೇಕ ಜಿಲ್ಲೆಗಳಲ್ಲೂ ಆಕಾಶವಾಣಿ ಕಾರ್ಯಕ್ರಮ ಕೇಳಬಹುದಾಗಿದೆ. ಶಾಸಕ ಆರಗ ಜ್ಞಾನೇಂದ್ರ, ಎಸ್.ಎನ್.ಚನ್ನಬಸಪ್ಪ, ವಿಧಾನ ಪರಿಷತ್ ಸದಸ್ಯ ಡಿ.ಎಸ್. ಅರುಣ್, ಡಾ. ಧನಂಜಯ ಸರ್ಜಿ, ಮಾಜಿ ಶಾಸಕ ಕೆ.ಬಿ.ಅಶೋಕ್ ನಾಯ್ಕ್, ಶಿವಮೊಗ್ಗ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಅಧ್ಯಕ್ಷ ಬಿ.ಗೋಪಿನಾಥ್, ಉಪಾಧ್ಯಕ್ಷ ಜಿ.ವಿಜಯಕುಮಾರ್, ಕಾರ್ಯದರ್ಶಿ ಎ.ಎಂ.ಸುರೇಶ್, ನಿರ್ದೇಶಕ ಗಣೇಶ್ ಎಂ. ಅಂಗಡಿ, ಕಿರಣ್‌ಕುಮಾರ್, ಶಿವಕುಮಾರ್, ರವಿಪ್ರಕಾಶ್ ಜನ್ನಿ, ರಾಜಶೇಖರ್, ಆಕಾಶವಾಣಿಯ ಉಪನಿರ್ದೇಶಕ ಡಾ. ರಘು, ಎಸ್.ಆರ್.ಭಟ್, ಆಕಾಶವಾಣಿ ನಿರೂಪಕರು, ಸಿಬ್ಬಂದಿ ವರ್ಗ ಇದ್ದರು.

ಮಾರಿಕಾಂಬಾ ಜಾತ್ರೆಗೆ ಅನುದಾನ ಬಿಡುಗಡೆ

ಸೊರಬ: ಶಾಸಕರ ವಿಶೇಷ ಅನುದಾನದಲ್ಲಿ ತವನಂಧಿ ಗ್ರಾಮಕ್ಕೆ, ಮಾರಿಕಾಂಬ ಜಾತ್ರಾ ಪ್ರಯುಕ್ತ ಡಾಂಬರೀಕರಣಕ್ಕೆ ಶಿಕ್ಷಣ ಮಂತ್ರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಅನುದಾನ ಬಿಡುಗಡೆ ಮಾಡಿದ್ದಾರೆ ಎಂದು ತಾಲೂಕು ಬಗರ್ ಹುಕುಂ ಕಮಿಟಿಯ ಅಧ್ಯಕ್ಷ ಎಂಡಿ ಶೇಖರ್ ತಿಳಿಸಿದರು. ತಾಲೂಕಿನ ತವನಂದಿ ಗ್ರಾಮದಲ್ಲಿ ಸ್ಥಳೀಯ ಶಾಸಕರ ಅಭಿವೃದ್ಧಿ ನಿಧಿಯಲ್ಲಿ ಮಂಜೂರಾದ ಕಾಮಗಾರಿಯ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಮಾರಿಕಾಂಬ ಜಾತ್ರೆಯ ಪ್ರಯುಕ್ತ ಗ್ರಾಮಸ್ಥರೆಲ್ಲರೂ ಸೇರಿ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಮಂತ್ರಿಗಳನ್ನು ಭೇಟಿ ಮಾಡಿ ತೇರು ಎಳೆಯುವ ಮಾರ್ಗ ಹಾಳಾಗಿದ್ದು ಸರಿಪಡಿಸಿ ಕೊಡುವಂತೆ ಮಂತ್ರಿಗಳು ಹತ್ತಿರ ಮನವಿ ಮಾಡಿಕೊಂಡಿದ್ದರ ಮೇರೆಗೆ ಅನುದಾನವನ್ನು ಬಿಡುಗಡೆ ಮಾಡಿರುತ್ತಾರೆ ಎಂದು ತಿಳಿಸಿದರು. ಮಂತ್ರಿಗಳ ಸಹಕಾರಕ್ಕೆ ಎಲ್ಲಾ ಗ್ರಾಮಸ್ಥರ ಪರವಾಗಿ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಾದ ಮಧು ಬಂಗಾರಪ್ಪನವರಿಗೆ ಕೃತಜ್ಞತೆ ಸಲ್ಲಿಸುವುದಾಗಿ ಮುಂದೆಯೂ ಸಹ ಇನ್ನು ಹೆಚ್ಚಿನ ಅನುದಾನ ತಂದು ಅಭಿವೃದ್ಧಿಪಡಿಸಲಾಗುವುದು, ಈ ಹಿಂದೆ ಶಾಸಕರಾಗಿದ್ದಾಗ ಹಲವು ಕಾಮಗಾರಿಗಳನ್ನು ನಮ್ಮ ಗ್ರಾಮಕ್ಕೆ ಕೊಟ್ಟಿರುತ್ತಾರೆ, ಮುಂದೆಯೂ ಮಂತ್ರಿಗಳು ಮತ್ತು ಶಾಸಕರ ವಿಶೇಷ ಅನುದಾನ ತಂದು ಅಭಿವೃದ್ಧಿ ಪಡಿಸಲಾಗುವುದು ಎಂದು ತಿಳಿಸಿದರು ಈ ಸಂದರ್ಭದಲ್ಲಿ ಗ್ರಾಮಾಭಿವೃದ್ಧಿ ಸಮಿತಿಯ ಅಧ್ಯಕ್ಷ ಶಿವಪ್ಪ ಗುಡ್ಡೆಕೊಪ್ಪ, ಹಾಲು ಒಕ್ಕೂಟದ ಅಧ್ಯಕ್ಷ ಹನುಮಂತಪ್ಪ ಬುಳ್ಳಿ, ಉಪಾಧ್ಯಕ್ಷ ಪ್ರಕಾಶ್ ಮಧುರಳ್ಳಿ, ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಹನುಮಂತಪ್ಪ ತ್ಯಾಗೋಂಡ, ರಾಜಣ್ಣ ಕೆರೆಕೊಪ್ಪ ಊರಿನ ಪ್ರಮುಖರಾದ ಮಂಜುನಾಥ್ ಮಾಸ್ಟರ್, ದುರ್ಗಪ್ಪ, ಯುವರಾಜ, ಉಮೇಶಪ್ಪ, ವೆಂಕಟೇಶ, ಗಣಪತಿ, ಹುಳ್ಳಪ್ಪ, ಯೋಗೇಶ್, ಮಂಜು, ಸ್ವಾಮಿ, ಮೋಹನ ಇದ್ದರು.

ತಾಲೂಕಿನ ತವನಂದಿ ಗ್ರಾಮದಲ್ಲಿ ಸ್ಥಳೀಯ ಶಾಸಕರ ಅಭಿವೃದ್ಧಿ ನಿಧಿಯಲ್ಲಿ ಮಂಜೂರಾದ ಕಾಮಗಾರಿಯ ಗುದ್ದಲಿ ಪೂಜೆ ನೆರವೇರಿಸಿ ಬಗರ್ ಹುಕುಂ ಕಮಿಟಿಯ ಅಧ್ಯಕ್ಷ ಎಂಡಿ ಶೇಖರ್ ಮಾತನಾಡಿದರು.

ಸಂವಿಧಾನ ಜಾಗೃತಿ ಸಮಾವೇಶ 29ಕ್ಕೆ

ಶಿವಮೊಗ್ಗ: ಕರ್ನಾಟಕ ದಲಿತ ಸಂಘರ್ಷ ಸಮಿತಿ(ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿತ) ಭದ್ರಾವತಿ ಶಾಖೆಯ ವತಿಯಿಂದ ಜ. 29ರಂದು ಭದ್ರಾವತಿಯ ವೀರಶೈವ ಸಭಾಭವನದಲ್ಲಿ ಸಂವಿಧಾನ ಜಾಗೃತಿ ಸಮಾವೇಶವನ್ನು 50 ವರ್ಷದ ನೆನಪಲ್ಲಿ ಆಯೋಜಿಸಲಾಗಿದೆ ಎಂದು ಸಂಚಾಲಕ ಚಿನ್ನಯ್ಯ ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕರ್ನಾಟಕ ದಲಿತ ಸಂಘರ್ಷ ಸಮಿತಿಗೆ 50 ವರ್ಷ ತುಂಬಿವೆ. ಪ್ರೊ. ಬಿ. ಕೃಷ್ಣಪ್ಪ ಅವರು 1974-75ರಲ್ಲಿ ಈ ಸಂಘಟನೆಯನ್ನು ಸ್ಥಾಪನೆ ಮಾಡಿದರು. ಆ ಮೂಲಕ ಶೋಷಿತರು, ದಲಿತರ ಪರವಾಗಿ ಸಂವಿಧಾನದ ಅಡಿಯಲ್ಲಿ ಸಂಘಟನೆ ಕೆಲಸ ಮಾಡುತ್ತಾ ಬಂದಿದೆ. ಬೆತ್ತಲೆ ಸೇವೆ, ಬಗರ್‌ಹುಕುಂ ಸಾಗುವಳಿ, ಅಟ್ರಾಸಿಟಿ ಕಾಯ್ದೆ, ಭೂಸುಧಾರಣೆ ಕಾಯ್ದೆ ಮುಂತಾದ ಹಲವು ವಿಷಯಗಳನ್ನಿಟ್ಟುಕೊಂಡು ತನ್ನದೇ ಆದ ಹೋರಾಟಗಳನ್ನು ಮಾಡುತ್ತಾ ಸಂಘಟನೆ ಬೆಳೆದು ಬಂದಿದೆ. ಸಮಾರಂಭ ಬೆಳಗ್ಗೆ 11.30ಕ್ಕೆ ಆರಂಭವಾಗುತ್ತದೆ. ಅದಕ್ಕೂ ಮುನ್ನ 10.30ಕ್ಕೆ ಅಂಬೇಡ್ಕರ್ ಸರ್ಕಲ್‌ನಿಂದ ವೀರಶೈವ ಸಭಾಭವನದವರೆಗೆ ಮೆರವಣಿಗೆ ಇರುತ್ತದೆ ಎಂದರು.ಕಾರ್ಯಕ್ರಮದಲ್ಲಿ ಶಾಸಕ ಬಿ.ಕೆ. ಸಂಗಮೇಶ್, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ. ಪಲ್ಲವಿ, ನಗರಸಭೆ ಅಧ್ಯಕ್ಷ ಮಣಿ, ಕುವೆಂಪು ವಿವಿ ಕುಲಪತಿ ಶರತ್ ಅನಂತಮೂರ್ತಿ, ಎಂದರು.

ಸಮಾಚಾರ ಸಣ್ಣದಲ್ಲ

ಅಪ್ರಾಪ್ತ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ

ಜೇವರ್ಗಿ: ಇತ್ತೀಚಿಗೆ ಜೇವರ್ಗಿಯಲ್ಲಿ ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಹಾಗೂ ಕಿರುಕುಳ ಪ್ರಕರಣಗಳು ಹೆಚ್ಚಾಗುತ್ತಿದ್ದು, ಹಳೆಯ ಘಟನೆ ಮಾಸುವ ಮುನ್ನವೇ, ಮತ್ತೊಂದು ಲೈಂಗಿಕ ಕಿರುಕುಳ ಪ್ರಕರಣ ನಡೆದಿರುವ ಪ್ರಕರಣ ಬೆಳಕಿಗೆ ಬಂದಿದೆ. ಅನ್ಯಕೋಮಿನ ಆಟೋ ಡ್ರೈವರ್ ಅಪ್ರಾಪ್ತ ಬಾಲಕಿಯಮೇಲೆ ಲೈಂಗಿಕ ದೌರ್ಜನ್ಯ ನಡೆಸಿರುವ ಪ್ರಕರಣ ಜೇವರ್ಗಿಯಲ್ಲಿ ನಡೆದಿದೆ. ಅಬ್ಬಾಸ್ ಅಲಿ (21) ಎನ್ನುವ ಆರೋಪಿ 11 ವರ್ಷದ ಅಪ್ರಾಪ್ತ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದು, ಆತನನ್ನು ಈಗಾಗಲೇ, ಪೊಲೀಸರು ಬಂಧಿಸಿದ್ದಾರೆ ಎಂದು ತಿಳಿದುಬಂದಿದೆ. ಆರೋಪಿ ಅಬ್ಬಾಸ್ ಅಲಿ ಪ್ರತಿದಿನ ಬಾಲಕಿಗೆ ಮನೆಯಿಂದ ಶಾಲೆಗೆ ಕರೆದುಕೊಂಡು ಹೋಗುತ್ತಿದ್ದ, ಈ ಸಮಯದಲ್ಲಿ ಅಬ್ಬಾಸ್ ಅಲಿ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾನೆ ಎಂದು ಕುಟುಂಬದವರು ಸಲ್ಲಿಸಿದ ದೂರಿನಲ್ಲಿ ತಿಳಿಸಿದ್ದಾರೆ. ದೂರಿನ ಅನ್ವಯ ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಪ್ರಕರಣ ದಾಖಲಾಗಿದೆ.

ಹಲ್ಲೆಗೊಳಗಾಗಿದ್ದ ಯುವಕನ ಸಾವು

ಯಾದಗಿರಿ: ಕೊಟ್ಟ ಸಾಲ ಸಕಾಲಕ್ಕೆ ಮರು ಪಾವತಿ ಮಾಡಿಲ್ಲ ಎನ್ನುವ ಕಾರಣಕ್ಕೆ ಯುವಕನ ಹಲ್ಲೆ ಮಾಡಿರುವ ಘಟನೆ ನಗರದಲ್ಲಿ ನಡೆದಿದೆ. ನಗರದ ಲಾಡಿಸ್ ಗಲ್ಲಿಯ ಯುವಕ ಖಾಸೀಂ (28) ಮೃತ

ದುರ್ದೈವಿಯಾಗಿದ್ದು, ಯಾಸಿನ್ ಹತ್ಯೆಗೈದ ಆರೋಪಿಯಾಗಿದ್ದಾನೆ. ಆರೋಪಿ ಯಾಸಿನ್ ಬಳಿ ಖಾಸೀಂ ಸಾಲ 30 ಸಾವಿರ ಪಡೆದುಕೊಂಡಿದ್ದ. ಹೀಗಾಗಿ ಕಳೆದ ಜ. 19ರಂದು 35 ಸಾವಿರ ರು. ಸಾಲ ಮರು ಪಾವತಿಸಬೇಕಿತ್ತು. ಆದರೆ, ಇದು ನೀಡದೆ ಇನ್ನಷ್ಟು ದಿನ ಸಮಯ ಕೇಳಿದ್ದ ಕಾರಣಕ್ಕೆ ಖಾಸೀಂ ಮೇಲೆ ಯಾಸಿನ್ ಮಾರಣಾಂತಿಕವಾಗಿ ಹಲ್ಲೆ ಮಾಡಿದ್ದಾನೆ. ಇದರಿಂದ ಗಾಯಗೊಂಡ ಖಾಸೀಂನನ್ನು ಯಾದಗಿರಿ ಜಿಲ್ಲಾಸ್ಪತ್ರೆಗೆ ಕುಟುಂಬಸ್ಥರು ದಾಖಲಿಸಿ ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಕಲಬುರಗಿಗೆ ಕರೆದುಕೊಂಡು ಹೋಗಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಹಲ್ಲೆಯಾದ ನಾಲ್ಕು ದಿನಗಳ ಬಳಿಕ ಖಾಸೀಂ ಕಲಬುರಗಿ ಸರಕಾರಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾನೆ ಎಂದು ತಿಳಿದುಬಂದಿದೆ. ಆರೋಪಿ ಯಾಸೀನ್ ವಿರುದ್ಧ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ವಶಕ್ಕೆ ಪಡೆದುಕೊಳ್ಳಲಾಗಿದೆ.

ರಾಜ್ಯದಲ್ಲಿ ಮುಂದುವರಿದ ಮೈಕ್ರೋ ಫೈನಾನ್ಸ್ ಕಿರುಕುಳ | ಅಧಿಕಾರಿಗಳ ವಿರುದ್ಧ ಆಕ್ರೋಶ

ಫೈನಾನ್ಸ್‌ನಿಂದ ಕುಟುಂಬ ಬೀದಿಪಾಲು

ಬೆಳಗಾವಿ: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪ್ರತಿನಿಧಿಸುವ ಬೆಳಗಾವಿ ಗ್ರಾಮೀಣ ಮತ ಕ್ಷೇತ್ರದಲ್ಲಿ ಫೈನಾನ್ಸ್ ಕಂಪನಿ ಮನೆಯನ್ನು ಜಪ್ತಿ ಮಾಡಿದ ಹಿನ್ನೆಲೆಯಲ್ಲಿ ಬಾಣಂತಿ ಹಾಗೂ ಬಡ ಕುಟುಂಬವೊಂದು ಬೀದಿಪಾಲಾಗಿ ಕಣ್ಣೀರಲ್ಲಿ ಕೈತೊಳೆಯುತ್ತಿರುವ ಅಮಾನವೀಯ ಘಟನೆ ಬೆಳಕಿಗೆ ಬಂದಿದೆ.

ಬೆಳಗಾವಿ ತಾಲೂಕಿನ ತಾರಿಹಾಳ ಗ್ರಾಮದಲ್ಲಿ ಅಮಾವಾಸ್ಯೆ ದಿನದಂದು ಈ ಅಮಾನವೀಯ ಘಟನೆ ನಡೆದಿದೆ. ಏಕಾಏಕಿ ಮನೆಯನ್ನು ಜಪ್ತಿ ಮಾಡಲಾಗಿದ್ದು, ಕಳೆದ ಒಂದು ತಿಂಗಳಿಂದ ಬಾಣಂತಿ ಸೇರಿದಂತೆ ಕುಟುಂಬ ಬೀದಿಪಾಲಾಗಿದೆ. ಬಾಣಂತಿ ಎಂಬುದನ್ನು ನೋಡದೆ, ಮನೆಯಿಂದ ಹೊರದಬ್ಬಿದ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತವಾಗಿದೆ.

ಆಫ್ಟಸ್ ವ್ಯಾಲ್ಯೂ ಹೌಸಿಂಗ್ ಎಂಬ ಫೈನಾನ್ಸ್ ನಲ್ಲಿ ಲೋಹಾರ್ ಕುಟುಂಬವು 5 ವರ್ಷಗಳ ಹಿಂದೆ ಮನೆ ನಿರ್ಮಾಣಕ್ಕಾಗಿ 5 ಲಕ್ಷ ಗೃಹಸಾಲ ಪಡೆದಿದ್ದ ಗಣಪತಿ ಲೋಹಾರ್ ಬಳಿಕ ಮೂರು ವರ್ಷಗಳ ಕಾಲ ನಿರಂತರ ಕಂತು ತುಂಬಿದ್ದರು. ವೃದ್ಧ ತಾಯಿಗೆ ಅನಾರೋಗ್ಯ, ಮಗಳ ಹೆರಿಗೆ ಹಿನ್ನೆಲೆಯಲ್ಲಿ ಕಳೆದ 6 ತಿಂಗಳಿಂದ ಕಂತು ಪಾವತಿ ಅಸಾಧ್ಯವಾಗಿತ್ತು. ಕಂತು ತುಂಬದ ಹಿನ್ನೆಲೆ ಕೋರ್ಟ್ ಮೊರೆ ಹೋಗಿದ್ದ ಫೈನಾನ್ಸ್ ಕೋರ್ಟ್ ಆದೇಶದಂತೆ ಪೊಲೀಸರು ಹಾಗೂ ವಕೀಲರ ಸಮ್ಮುಖದಲ್ಲಿ ಮನೆ ಸೀಜ್ ಮಾಡಲಾಗಿದೆ. ಕುಟುಂದವರ ಅನಾರೋಗ್ಯ, ಮನೆಯ ಪರಿಸ್ಥಿತಿ ನೆನದು ಕಣ್ಣೀರು ಹಾಕಿದ ಲೋಹಾರ್ ಕುಟುಂಬಕ್ಕೆ ಮೂರು ವರ್ಷ ಕಟ್ಟಿರುವ ಕಂತಿನ ಸ್ಟೇಟ್‌ಮೆಂಟ್ ಕೊಡಲು ಬ್ಯಾಂಕ್ ಸಿಬ್ಬಂದಿಗಳು ಹಿಂದೇಟು ಹಾಕಿರುವ ಆರೋಪ ಕೇಳಿ ಬಂದಿದೆ. ಸದ್ಯ 7.5 ಲಕ್ಷ ರೂಪಾಯಿ ಒಂದೇ ಹಂತದಲ್ಲಿ ಕಟ್ಟಿ ಎಂದು ಫೈನಾನ್ಸ್ ಸಿಬ್ಬಂದಿಗಳು ಹೇಳುತ್ತಿದ್ದಾರೆ ಎಂದು ಕುಟುಂಬದವರು ಆರೋಪಿಸಿದ್ದಾರೆ.

ಕುಟುಂಬದ ಸಹಾಯಕ್ಕೆ ಬಂದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್: ಸಾಲ ಮರುಪಾವತಿಸಿಲ್ಲ ಎನ್ನುವ ಕಾರಣಕ್ಕೆ ಬಾಣಂತಿ ಸೇರಿದಂತೆ ಕುಟುಂಬದವರನ್ನೆಲ್ಲ ಹೊರ ಹಾಕಿ ಬೀಗ ಹಾಕಲಾಗಿದ್ದ ಪ್ರಕರಣಕ್ಕೆ ತ್ವರಿತವಾಗಿ ಸ್ಪಂದಿಸಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ತಮ್ಮ ಮನೆಯ ಬೀಗ ತೆರವುಗೊಳಿಸಿ ಕುಟುಂಬದವರನ್ನು ಮನೆಗೆ ಸೇರಿಸಿದ್ದಾರೆ. ಅಪಘಾತದಿಂದ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೂ, ಸುದ್ದಿ ತಿಳಿದ ತಕ್ಷಣ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಹಾಗೂ ತಮ್ಮ ಆಪ್ತ ಸಹಾಯಕರನ್ನು ಸ್ಥಳಕ್ಕೆ ಕಳಿಸಿ ಕುಟುಂಬಕ್ಕೆ ಆಹಾರ, ಧಾನ್ಯಗಳನ್ನು ಮತ್ತು ಸ್ವಲ್ಪಮಟ್ಟಿಗೆ ಆರ್ಥಿಕ ನೆರವನ್ನು ಒದಗಿಸಿದರು.



ಫೈನಾನ್ಸ್ ಕಂಪನಿ ಮನೆಯನ್ನು ಜಪ್ತಿ ಮಾಡಿದ ಹಿನ್ನೆಲೆಯಲ್ಲಿ ಬೀದಿಪಾಲಾದ ಕುಟುಂಬ.

ಮೈಕ್ರೋ ಫೈನಾನ್ಸ್‌ಗಳಿಂದ ಜನ ಮೋಸ ಹೋಗದಂತೆ ಸಾರ್ವಜನಿಕರಲ್ಲಿ ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಈ ಕುರಿತು ಹೆಚ್ಚಿನ ಜಾಗೃತಿ ಮೂಡಿಸಬೇಕು. ಸಹಕಾರ ಸಂಘ ಗಳಲ್ಲಿ ಸಾಲ ನೀಡುವ ಸಂದರ್ಭದಲ್ಲಿ ಎಲ್ಲ ನಿಯಮ ಹಾಗೂ ಷರತ್ತುಗಳ ಕುರಿತು ಮಾಹಿತಿ ನೀಡುವಂತೆ ಸೂಚನೆ ನೀಡಿರುವೆ.

-ಸತೀಶ್ ಜಾರಕಿಹೊಳಿ ಲೋಕೋಪಯೋಗಿ ಸಚಿವ

ಬೀದರ್‌ನಲ್ಲಿ ಮಹಿಳೆ ಆತ್ಮಹತ್ಯೆ

ಬೀದರ್ ಜಿಲ್ಲೆಯ ಗಡಿಗೌಡಗಾಂವ್‌ನ ಮಹಿಳೆಯೊಬ್ಬರು ಫೈನಾನ್ಸ್‌ಗಳ ಕಿರುಕುಳಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಗ್ರಾಮದ ರೇಷ್ಮಾ ಸೂರ್ಯವಂಶಿ ಆತ್ಮಹತ್ಯೆ ಮಾಡಿಕೊಂಡ ಮಹಿಳೆ. ವಿವಿಧ ಸಂಘಗಳಲ್ಲಿ 3 ಲಕ್ಷಕ್ಕೂ ಅಧಿಕ ಸಾಲ ಪಡೆದಿದ್ದು, ಸಕಾಲಕ್ಕೆ ಪಾವತಿಸಲು ಆಕೆಗೆ ಸಾಧ್ಯವಾಗಿರಲಿಲ್ಲ. ಸಂಘಗಳು ಸಾಲ ಮರುಪಾವತಿಗೆ ಒತ್ತಡ ಹಾಕುತ್ತಿದ್ದವು ಎನ್ನಲಾಗಿದೆ.

ಯಕ್ಷಗಾನ ಕಲಾವಿದನ ಮೇಲೆ ಸಹಕಲಾವಿದನಿಂದ ಹಲ್ಲೆ

ಮೀಟರ್ ಬಡ್ಡಿ ದಂಧೆ ವಿಚಾರದಲ್ಲಿ ಯಕ್ಷಗಾನ ಕಲಾವಿದರೊಬ್ಬರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ಘಟನೆ ಉಡುಪಿಯಲ್ಲಿ ನಡೆದಿದೆ. ನಿತಿನ್ ಆಚಾರ್ಯ ಹಲ್ಲೆಗೊಳಗಾದ ಕಲಾವಿದ. ಸಚಿನ್ ಅಮೀನ್ ಎಂಬಾತ ಮನೆಯಲ್ಲಿ ಕೂಡಿಹಾಕಿ ಮನಬಂದಂತೆ ಥಳಿಸಿದ್ದಾನೆ. ಈ ಬಗ್ಗೆ ಉಡುಪಿಯ ಪಡುಬಿದ್ರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸಸಿಹಿತ್ಲು ಯಕ್ಷಗಾನ ಮೇಳದ ಕಲಾವಿದನಾಗಿರುವ ನಿತಿನ್ ಆಚಾರ್ಯಗೆ ಬಾಸುಂಡೆ ಬರುವಂತೆ ಹಲ್ಲೆ ನಡೆಸಲಾಗಿದೆ. ಹಲ್ಲೆ ಮಾಡಿದ ಸಚಿನ್ ಅಮೀನ್ ಪಾವಂಜೆ ಮೇಳದ ಕಲಾವಿದ. ಈ ಬಗ್ಗೆ ತನಿಖೆ ಮಾಡಿ ಆರೋಪಿಯನ್ನು ಬಂಧಿಸುವಂತೆ ಉಡುಪಿ ಪೊಲೀಸ್ ವರಿಷ್ಠಾಧಿಕಾರಿಗೆ ವಿಶ್ವಕರ್ಮ ಸಂಘಟನೆಗಳು ಮನವಿ ಮಾಡಿದೆ.

ಸುಮೇರು ಪರ್ವತದಿಂದ ವಿಶ್ವಕ್ಕೆ ಆಧ್ಯಾತ್ಮಿಕ ಸಂದೇಶ

ಮಹಾಮಸ್ತಕಾಭಿಷೇಕದಲ್ಲಿ ಲೋಕಸಭಾ ಸ್ಪೀಕರ್ ಓಂ ಪ್ರಕಾಶ್ ಬಿರ್ಲಾ ಅಭಿಮತ

ಹುಬ್ಬಳ್ಳಿ ಸಮೀಪದ ವರೂರಿನಲ್ಲಿ ಮುಂದುವರಿದ ಮಹಾ ಮಸ್ತಕಾಭಿಷೇಕವನ್ನು ಲೋಕಸಭಾಧ್ಯಕ್ಷ ಓಂ ಬಿರ್ಲಾ ಶುಕ್ರವಾರ ಉದ್ಘಾಟಿಸಿದರು. ಗುಣಧರ ನಂದಿ ಮಹಾರಾಜರು ಸಾನಿಧ್ಯ ವಹಿಸಿದ್ದರು.

ಹುಬ್ಬಳ್ಳಿ: ಸಮೀಪದ ವರೂರಿನಲ್ಲಿ ಮುಂದುವರಿದ ಮಹಾಮಸ್ತಕಾಭಿಷೇಕ ಕಾರ್ಯಕ್ರಮವನ್ನು ಲೋಕಸಭೆ ಸ್ಪೀಕರ್ ಓಂ ಪ್ರಕಾಶ್ ಬಿರ್ಲಾ ಶುಕ್ರವಾರ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಸುಮೇರು ಪರ್ವತ ಭಾರತ ಮತ್ತು ವಿಶ್ವಕ್ಕೆ ಆಧ್ಯಾತ್ಮಿಕ ಸಂದೇಶ ಕೊಡಲಿದೆ ಎಂದು ಬಣ್ಣಿಸಿದರು.

ಜೈನ ಸಂತರು ಲೋಕಕ್ಕೆ ಮಾದರಿ: ಮಾನವ ಕಲ್ಯಾಣಕ್ಕೆ ಮಹಾವೀರ, ಪಾರ್ಶ್ವನಾಥರ ವಿಚಾರಗಳು ಮಾರ್ಗದರ್ಶಿಯಾಗಿವೆ. ಅಹಿಂಸಾ ತತ್ವ, ಸೇವಾತ್ಯಾಗ ವಿಶ್ವಕ್ಕೆ ಮಾದರಿ . ಮನುಷ್ಯ ಜೀವನಕ್ಕೆ ಮಹಾವೀರರು ಆದರ್ಶಪ್ರಾಯ .ಜೈನ ಸಂತ, ಆಚಾರ್ಯ ಮುನಿಗಳು ಮಹಾವೀರರ ವಿಚಾರಗಳನ್ನು ಜನತೆಗೆ ಮುಟ್ಟಿಸುತ್ತಿದ್ದಾರೆ. ಜೀವನದಲ್ಲಿ ಪ್ರತಿಕೂಲ ಪರಿಸ್ಥಿತಿ ಬಂದಾಗ ಸಂತರ ಬಳಿ ಹೋಗಲು ಪಾರ್ಶ್ವನಾಥರು ಹೇಳಿದ್ದರು ಎಂದು ಲೋಕಸಭಾಧ್ಯಕ್ಷರು ವಿವರಿಸಿದರು.

ಅಹಿಂಸಾ ತತ್ವದಲ್ಲಿ ದಿವ್ಯ ದೃಷ್ಟಿ ಇದೆ. ಪಾರ್ಶ್ವನಾಥರ ಭಗವಾನ್‌ರ ವಿಚಾರಗಳು ಸತ್ಯಕ್ಕೆ ಹತ್ತಿರವಾಗಿವೆ. ಮಾನವನ ವಿಕಾಸಕ್ಕೆ ದಾರಿದೀಪಗಳಾಗಿವೆ. ಶಾಂತಿ ಅಂದ್ರೆ ಭಾರತ ನೆನಪಾಗುತ್ತೆ. ಭಾರತ ಆಧ್ಯಾತ್ಮ ಕೇಂದ್ರವಾಗಿ ಮಾರ್ಪಟ್ಟಿದೆ . ಸುಮೇರು ಪರ್ವತ ಭಾರತ ಮತ್ತು ವಿಶ್ವಕ್ಕೆ ಆಧ್ಯಾತ್ಮಿಕ ಸಂದೇಶ ಕೊಡಲಿದೆ.

-ಓಂ ಪ್ರಕಾಶ್ ಬಿರ್ಲಾ ಲೋಕಸಭೆ ಸ್ಪೀಕರ್

ಹಣದ ವಿಚಾರಕ್ಕೆ ತಂದೆ ಮಗನ ಮೇಲೆ ಹಲ್ಲೆ

ವಿಜಯಪುರ: ಇಟ್ಟಿಗೆ ಭಟ್ಟಿ ಕಾರ್ಮಿಕರ ಮೇಲೆ ಅಮಾನುಷವಾಗಿ ಹಲ್ಲೆ ಮಾಡಿದ ಘಟನೆ ಮಾಸುವ ಮುನ್ನವೇ ಕಬ್ಬು ಕಟಾವು ಹಣದ ವಿಚಾರವಾಗಿ ತಂದೆ ಮಗನ ಮೇಲೆ ಹಲ್ಲೆ ಮಾಡಿರುವ ಮತ್ತೊಂದು ಅಮಾನವೀಯ ಘಟನೆ ಬೆಳಕಿಗೆ ಬಂದಿದೆ.

ವಿಜಯಪುರ ಜಿಲ್ಲೆ ಬಬಲೇಶ್ವರ ತಾಲೂಕಿನ ಕಾಖಂಡಕಿ ಬಳಿ ತೋಟದ ಮನೆಯಲ್ಲಿ ಕಬ್ಬು ಕಟಾವು ಮಾಡುವ ಕಾರ್ಮಿಕರ ಪೂರೈಕೆ ಮಾಡುವ ಕುಮಾರ ರಾಠೋಡ ಹಾಗೂ ಆತನ ಪುತ್ರ ಕಿರಣ ಮೇಲೆ ವಿಜಯಪುರ ತಾಲೂಕಿನ ಮಖಣಾಪುರ ತಾಂಡಾದ ಶಿವಲಾಲ್ ಪವಾರ ಹಾಗೂ ಇನ್ನಿಬ್ಬರು ಸೇರಿ ಮನಸೋ ಇಚ್ಚೆ ಹಲ್ಲೆ ಮಾಡಿದ್ದಾರೆ ಎನ್ನಲಾಗಿದೆ. ಕಬ್ಬು ಕಟಾವು ಮಾಡುವ ಗ್ಯಾಂಗ್ ಕೆಲಸಕ್ಕೆ ಕಳುಹಿಸುವುದಾಗಿ ಜಮೀನು ಮಾಲೀಕರಿಂದ ಶಿವಲಾಲ್ ಪವಾರ 7 ಲಕ್ಷ ಹಣ ಮುಂಗಡವಾಗಿ ಪಡೆದು ಆ ಹಣ ಕುಮಾರ ಹಾಗೂ ಕಿರಣಗೆ ನೀಡಿದ್ದರು. ಹಣ ತೆಗೆದುಕೊಂಡು ಕುಮಾರ್ ಹಾಗೂ ಕಿರಣ ಅವರು ಕಾರ್ಮಿಕರಿಗೆ ನೀಡಿದ್ದರು. ಹಣ ಪಡೆದಿದ್ದ ಕಾರ್ಮಿಕರು ಕೆಲಸ ಮಾಡದೆ ಪರಾರಿಯಾಗಿದ್ದರು. ಶಿವಲಾಲ್ ಪವಾರ ಹಾಗೂ ಆತನ ಇನ್ನಿಬ್ಬರು ಸಹಚರರು ಕುಮಾರ ನಮ್ಮನ್ನು ತೋಟದ ಮನೆಗೆ ಕರೆದುಕೊಂಡು ಹೋಗಿ ಮರಕ್ಕೆ ಕಟ್ಟಿ ಮನಬಂದಂತೆ ಹಲ್ಲೆ ಮಾಡಿದ್ದಾರೆ. ಕಾಲು ಕಟ್ಟಿ, ಮೈ ಬೆನ್ನು ಎನ್ನದೇ ಪ್ಲಾಸ್ಟಿಕ್ ಪೈಪ್, ಕಟ್ಟಿಗೆ, ಬೆಲ್ಟ್ ನಿಂದ ಹೊಡೆದಿದ್ದಾರೆ. ಹಣ ವಾಪಸ್ ನೀಡುವವರೆಗೂ ನಮ್ಮ ಟ್ರ್ಯಾಕ್ಟರ್ ಮತ್ತು ನೇಗಿಲು ಒತ್ತೆ ಇಟ್ಟುಕೊಂಡು ಕಳುಹಿಸಿದ್ದಾರೆ ಎಂದು ಹಲ್ಲೆಗೊಳಗಾದ ಕಿರಣ ಹಾಗೂ ಕುಮಾರ ಆರೋಪಿಸಿದ್ದಾರೆ. ಶಿವಲಾಲ್ ಪವಾರ ಹಾಗೂ ಇತರರ ಮೇಲೆ ಕುಮಾರ ರಾಠೋಡ ಹಾಗೂ ಆತನ ಪುತ್ರ ಕಿರಣ ದೂರು ನೀಡಿದ್ದು, ಬಬಲೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೈದ್ಯನ ನಿರ್ಲಕ್ಷ್ಯ: ಬಾಣಂತಿ ಸಾವು

ಅಥಣಿ: ಚಿಕಿತ್ಸೆ ಫಲಕಾರಿಯಾಗದೆ ಬಾಣಂತಿ ಮೃತ

ಅಥಣಿ: ರಾಜ್ಯದ ವಿವಿಧಡೆ ಗರ್ಭಿಣಿಯರ ಮತ್ತು ಬಾಣಂತಿಯರ ಹೆಚ್ಚುತ್ತಿರುವ ಸಾವು- ನೋವಿನ ಘಟನೆ ಮಾಸುವ ಮುನ್ನವೇ ಬೆಳಗಾವಿ ಜಿಲ್ಲೆ ಅಥಣಿ ತಾಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಗುರುವಾರ ಸಾಯಂಕಾಲ ಬಾಣಂತಿ ಸಾವನ್ನಪ್ಪಿರುವ ಘಟನೆ ಜರುಗಿದೆ. ರಾಯಬಾಗ ತಾಲೂಕಿನ ಮುಗಳಖೋಡದ ಮುತ್ತವ್ವ ಸಂತೋಷ ಗೊಳಸಂಗಿ (21) ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟ ಬಾಣಂತಿ.

ಘಟನೆ ವಿವರ: 9 ತಿಂಗಳ ತುಂಬು ಗರ್ಭಿಣಿ ಮುತ್ತವ್ವಳ ಹೆರಿಗೆ ದಿನಾಂಕವನ್ನು ಜ. 31 ಕ್ಕೆ ವೈದ್ಯರು ನೀಡಿದ್ದರೂ ಕೂಡ ಗರ್ಭಿಣಿಯ ಆರೋಗ್ಯದಲ್ಲಿ ಏರುಪೇರಾದ ಹಿನ್ನೆಲೆಯಲ್ಲಿ ಜ. 22 ರಂದು ಅಥಣಿ ಆಸ್ಪತ್ರೆಗೆ ದಾಖಲಾಗಿದ್ದರು.23 ರಂದು ಸಾಯಂಕಾಲ ಗರ್ಭಿಣಿಯ ಬಿಪಿಯಲ್ಲಿ ನಿರಂತರ ವ್ಯತ್ಯಾಸ ಕಾಣುತ್ತಿದ್ದರಿಂದ ಶಸ್ತ್ರಚಿಕಿತ್ಸೆಯ ಮೂಲಕ ಹೆರಿಗೆ ಮಾಡಲಾಗಿತ್ತು. ಗರ್ಭಿಣಿ ಹೆಣ್ಣು ಮಗುವಿಗೆ ಜನ್ಮ ನೀಡಿದ ನಂತರ ವೈದ್ಯರು ನೀಡಿದ ಶಸ್ತ್ರ ಚಿಕಿತ್ಸೆ ಫಲಕಾರಿಯಾಗದೆ ನಿರಂತರ ರಕ್ತಸ್ರಾವ ಹೆಚ್ಚಾಗಿದ್ದು, ವೈದ್ಯರು ಕೊನೆಗಳಿಗೆಯಲ್ಲಿ ಖಾಸಗಿ ವಾಹನದ ಮೂಲಕ ಖಾಸಗಿ ಆಸ್ಪತ್ರೆಗೆ ರವಾನಿಸಿ ಚಿಕಿತ್ಸೆ ಕೊಡಿಸಲು ಪ್ರಯತ್ನಿಸಿದ್ದಾರೆ.

ಬಾಣಂತಿಯ ರಕ್ತಸ್ರಾವ ನಿರಂತರ ಹೆಚ್ಚಾದ ಹಿನ್ನೆಲೆಯಲ್ಲಿ ಮಾರ್ಗಮಧ್ಯೆ ಆಕೆ ಕೊನೆಯುಸಿರೆಳೆದಿದ್ದಾರೆ. ಬಾಣಂತಿಯ ಪತಿ ಸಂತೋಷ ಅಥಣಿ ಪೊಲೀಸರಿಗೆ ದೂರು ನೀಡಿದ್ದು, ಈ ಬಗ್ಗೆ ಹಿರಿಯ ವೈದ್ಯಕೀಯ ತಂಡ ತನಿಖೆ ನಡೆಸುತ್ತಿದೆ.

ಬಣ ಬಡಿದಾಟದಲ್ಲಿ ಚದುರಿದ ಕೇಸರಿ ದಳ

← ಮೊದಲಪುಟದಿಂದ

ಇದಾದ ನಂತರ ಕೇಂದ್ರದ ನಾಯಕರ ಮಾತಿನಂತೆ ಒಂದಷ್ಟು ದಿನ ಸುಮ್ಮನಾದರೂ, ರಾಜ್ಯಾಧ್ಯಕ್ಷರನ್ನೇ ರಮೇಶ್ ಜಾರಕಿಹೊಳಿ ಬಚ್ಚಾ ಎಂದಿದ್ದಲ್ಲದೆ ಇಬ್ಬರ ನಡುವೆ ಮಾತಿನ ಸಮರವಾದರೂ ಕೇಂದ್ರದ ನಾಯಕರಾಗಲಿ, ವರಿಷ್ಠರಾಗಲಿ ಕರೆದು ಮಾತನಾಡಲಿಲ್ಲ. ಸ್ಥಳೀಯವಾಗಿ ಮುಖಂಡರೂ ಕೂಡ ಬಣಜಗಳ ನೋಡಿಕೊಂಡು ಹೋದರೇ ಹೊರತು, ಯಾರ ಬಣದಲ್ಲೂ ಗುರುತಿಸಿಕೊಂಡರೆ ಕಷ್ಟ ಎಂದು ಒಳಗೊಳಗೇ ಸುಮ್ಮನಾದರು. ಇದು ಕಾರ್ಯಕರ್ತರಲ್ಲಿ ಮತ್ತಷ್ಟು ಸಮಸ್ಯೆ ತಂದೊಡ್ಡಿದೆ. ಇದಾದ ನಂತರ ಪ್ರತಿಪಕ್ಷದ ನಾಯಕರು ಪ್ರಬಲವಾಗಿ ಆಡಳಿತ ಪಕ್ಷದ ವಿರುದ್ಧ ಹೋರಾಡುತ್ತಿಲ್ಲ ಎಂಬ ವಿಚಾರ ಪಕ್ಷ ಹಾಗೂ ಕಾರ್ಯಕರ್ತರ ಮಧ್ಯೆ ಇಂದಿಗೂ ಇದೆ.

ದೆಹಲಿಗೆ ವಿಜಯೇಂದ್ರ ದೌಡು, ಗರಿಗೆದರಿದ ಕುತೂಹಲ: ಪಕ್ಷದ ಬಣ ಬಡಿದಾಟ ತಾರಕಕ್ಕೇರಿರುವ ಬೆನ್ನಲ್ಲೇ ಬಿ.ವೈ.ವಿಜಯೇಂದ್ರ ದಿಢೀರನೆ ಶುಕ್ರವಾರ ದೆಹಲಿಗೆ ಪ್ರಯಾಣ ಬೆಳೆಸಿದ್ದಾರೆ.

ಯತ್ನಾಳ್ ಹಾಗೂ ರಾಜ್ಯಾಧ್ಯಕ್ಷರ ಸ್ಥಾನದ ಬಗ್ಗೆ ವರಿಷ್ಠರು ಏನನ್ನೂ ಹೇಳದೆ ಹಾಗೂ ಕ್ರಮ ಕೈಗೊಳ್ಳದೆ, ಕೋರ್ ಸಮಿತಿಯಲ್ಲಾದ ಶಿಫಾರಸು ಪಟ್ಟಿ ಕೇಂದ್ರ ಸಮಿತಿಗೆ ಕಳುಹಿಸದೆ, ಹಿರಿಯ ನಾಯಕರ ತಂಡಕ್ಕೆ ಒಪ್ಪಿಸಿರುವುದೇ ಉಸ್ತುವಾರಿಗೆ ಕೂಡ ರಾಜ್ಯಾಧ್ಯಕ್ಷರ ಮೇಲೆ ವಿಶ್ವಾಸವಿಲ್ಲ ಎಂಬ ಸಂದೇಹ ರವಾನೆಯಾಗಿದೆ. ಅಕಸ್ಮಾತ್ ವಿಜಯೇಂದ್ರ ತಂತ್ರದಂತೆ ಚುನಾವಣೆ ನಡೆದರೆ ಜಿಲ್ಲಾಧ್ಯಕ್ಷರು ಹಾಗೂ ಮಂಡಲಕ್ಕೊಬ್ಬ ಪರಿಷತ್ ಸದಸ್ಯರೊಬ್ಬರಿಗೆ ಮತಹಾಕಲು ಅವಕಾಶವಿದೆ. ಹಾಗಾಗಿ ಅಲ್ಲಿ 39 ಜಿಲ್ಲೆಗಳಲ್ಲಿ ತಮ್ಮ ನಿಷ್ಠರಿಗೆ ಅವಕಾಶ ಕಲ್ಪಿಸಬೇಕಾಗಿದೆ. ತಟಸ್ಥ ಬಣ ಎನ್ನಲಾದ ಅಶೋಕ ಹಾಗೂ ಬೊಮ್ಮಾಯಿಯವರ ಲೆಕ್ಕಾಚಾರದಂತೆ ಅಧ್ಯಕ್ಷ ವಿಜಯೇಂದ್ರ ಮುಂದುವರಿಯುವ ಸಾಧ್ಯತೆ ಊಹಿಸಿದ್ದಾರೆ. ಹೀಗಿದ್ದರೂ ವಿಜಯೇಂದ್ರ ಮುಂದುವರಿದರೆ ಹಿಡಿತದಲ್ಲಿಟ್ಟುಕೊಳ್ಳಬೇಕು ಎಂಬ ಲೆಕ್ಕಾಚಾರವೂ ಅವರಲ್ಲದೆ.

ಈ ಎಲ್ಲ ಲೆಕ್ಕಾಚಾರಗಳ ಮಧ್ಯೆ ಪಕ್ಷದ ಕೆಲವು ರಾಷ್ಟ್ರಿಯ ನಾಯಕರನ್ನು ಭೇಟಿಮಾಡಿ ಪ್ರಸಕ್ತ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ ಎನ್ನಲಾಗಿದೆ. ಪರಮಾಪ್ತರಾಗಿದ್ದ ಮಾಜಿ ಸಚಿವರಾದ ಜನಾರ್ದನ ರೆಡ್ಡಿ ಮತ್ತು ಶ್ರೀರಾಮುಲು ನಡುವಿನ ಹಾದಿಬೀದಿ ಜಗಳ ಹಾಗೂ ಬಸನಗೌಡ ಪಾಟೀಲ್ ಯತ್ನಾಳ್ ಬೀದಿ ರಂಪಾಟದ ನಡುವೆ ವಿಜಯೇಂದ್ರ ದಿಢೀರನೆ ದೆಹಲಿಗೆ ತೆರಳಿರುವುದು ಸಾಕಷ್ಟು ಊಹಾಪೋಹಗಳಿಗೆ ಕಾರಣವಾಗಿದೆ.

ಸಂಘ, ಜೇ ಹಾಗೂ ಬಣ – ಒಳ ಬಣಗಳೆಷ್ಟಿವೆ?

ಬಿಜೆಪಿಯಲ್ಲೀಗ ಬಹಿರಂಗವಾಗಿ ಮೂರು ಬಣ ಎನ್ನಲಾಗುತ್ತಿದ್ದರೂ, ಅಂತರಂಗವಾಗಿ ಹತ್ತಾರು ಬಣಗಳಿದೆ. ತಟಸ್ಥ ಎನ್ನಲಾಗುತ್ತಿರುವ ಬಣವಿದ್ದರೂ ಅವು ಸಂಘ ಪರಿವಾರದ ಬಣ ಎನ್ನಲಾಗುತ್ತಿದೆ. ಇದೆಲ್ಲದರ ನಡುವೆಯೇ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರದೊಂದು ಬಣವೂ ಸೃಷ್ಟಿಯಾದಂತಿದೆ. ಈ ಮಧ್ಯೆ ರಾಜ್ಯ ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಮುಕ್ತಿ ನೀಡಿ ಎಂದು ಸುನಿಲ್ ಕುಮಾರ್ ವರಿಷ್ಠರಿಗೆ ಕೇಳಿಕೊಂಡಿದ್ದರೂ ಅಂತರಂಗದಲ್ಲಿ ಮತ್ತೊಂದು ಕರಾವಳಿ ಬಣ ಸೃಷ್ಟಿಯಾದಂತಿದೆ. ಉಳಿದಂತೆ ಸಂಸದರಾದ ಬಿ.ವೈ.ರಾಘವೇಂದ್ರ, ಯದುವೀರ್, ಬ್ರಿಜೇಶ್ ಚೌಟ ಅವರು ತಟಸ್ಥರಾದವರಂತೆ ಕಾಣುತ್ತಿದ್ದಾರೆ. ಸಚಿವರಾದ ಪ್ರಲ್ಹಾದ್ ಜೋಶಿ ಕೇಂದ್ರದ ಆಣತಿಯಂತೆ ನಡೆಯುತ್ತಿದ್ದರೂ, ಸಂಸದ ಜಗದೀಶ್ ಶೆಟ್ಟರ್ ಅವರ ಬಣದಲ್ಲಿದ್ದಾರೆ. ಸಂಸದ ಬಸವರಾಜ ಬೊಮ್ಮಾಯಿ ಸೇರಿದಂತೆ ಹಲವು ಸಂಸದರೂ ತಮ್ಮದೊಂದು ಬಣ ಸೃಷ್ಟಿಸಿಕೊಂಡಿದ್ದಾರೆ. ಇದರೊಂದಿಗೆ ಮಾಜಿ ಸಂಸದರೂ ಕೂಡ ಅಲ್ಲಲ್ಲಿ ಕಾಣಿಸಿಕೊಂಡು ಒಳಬಣವೊಂದಾಗಿದೆ. ಬೆಂಗಳೂರಿನಲ್ಲಿ ಅಶೋಕದೊಂದು ಬಣವಾದರೆ ಅಶ್ವತ್ಥ ನಾರಾಯಣರದ್ದೊಂದು ಒಳಬಣವಿದೆ ಎನ್ನುವುದು ಈಗ ಗುಟ್ಟಾಗಿ ಉಳಿದಿಲ್ಲ ಎನ್ನುವುದು ಕಾರ್ಯಕರ್ತರ ಮಾತಾಗಿದೆ.

ಪ್ರತಿಪಕ್ಷಗಳ ಅಸ್ಥಿರಕ್ಕೆ ಯತ್ನ

ಎಚ್‌ಡಿಕೆ ಆರೋಪ

ಮೈಸೂರು: ರಾಜ್ಯದ ಕಾಂಗ್ರೆಸ್ ನಾಯಕರು ವಿರೋಧ ಪಕ್ಷಗಳನ್ನು ಅಸ್ಥಿರಗೊಳಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಕಳೆದ 18 ತಿಂಗಳಿನಿಂದ ಅವರ ನಡವಳಿಕೆ ನೋಡಿದರೆ ರಾಜ್ಯದ ಜನತೆಯ ಸಮಸ್ಯೆಗೆ ಪರಿಹಾರ ತರುವ ರೀತಿ ಕಾಣುತ್ತಿಲ್ಲ ಎಂದು ದೂರಿದರು. ಆಡಳಿತದಲ್ಲಿ ಕರ್ನಾಟಕಕ್ಕೆ ಒಳ್ಳೆಯ ಹೆಸರಿದೆ. ಅದನ್ನು ಸರ್ವನಾಶ ಮಾಡಲು ಹೊರಟಿದ್ದಾರೆ. ಇಡೀ ದೇಶದಲ್ಲೇ ಕರ್ನಾಟಕ ಮಾದರಿ ರಾಜ್ಯವಾಗಿತ್ತು. ಆದರೆ, ಅದನ್ನು ಹಾಳುಗೆಡವಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಶ್ರೀರಾಮುಲು ಬಿಜೆಪಿ ಬಿಡಲ್ಲ: ಮಾಜಿ ಸಚಿವ ಶ್ರೀರಾಮುಲು ಬಿಜೆಪಿ ಬಿಟ್ಟು ಕಾಂಗ್ರೆಸ್‌ಗೆ ಹೋಗುವುದಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯತಿ
ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.
ಇ–ಮೇಲ್: eotpbangaloresouth@gmail.com
ಸಂ: ಬೆಂದತಾಪಂ/ಯೋವಿ/ಅನಿರ್ಬಂಧಿತ/ಇ-ಟೆ/2024–25 ದಿನಾಂಕ: 23.01.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
ಟೆಂಡರ್ ಇಂಡೆಂಟ್ ಸಂಖ್ಯೆ: 1. RDPR/2024-25/SE2092
ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಲ್ಲಿ ಬೀದಿ ನಾಯಿಗಳ ಸಂತಾನ ನಿಯಂತ್ರಣಕ್ಕೆ ಹಾಗೂ ರೋಗಗ್ರಸ್ಥ ನಾಯಿಗಳ ಚಿಕಿತ್ಸೆ ಮತ್ತು ಆರೈಕೆ ಸಂಬಂಧ ಆಸಕ್ತ ಸಂಸ್ಥೆ / ಏಜೆನ್ಸಿಗಳಿಂದ ಇ-ಟೆಂಡರ್ ವೆಬ್‌ಸೈಟ್ kppp.karnataka.gov.in ನಲ್ಲಿ ಅರ್ಜಿ ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳ ಸರಬರಾಜುದಾರರು ದಿನಾಂಕ 28.01.2025 ರ ಮಧ್ಯಾಹ್ನ 2.00 ಗಂಟೆ ಒಳಗಾಗಿ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.
ಮೇಲಿನ ಟೆಂಡರ್ ಇಂಡೆಂಟ್ ಸಂಖ್ಯೆಗಳನ್ನು ಇಂದಿನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.
ಹೆಚ್ಚಿನ ಮಾಹಿತಿಗಾಗಿ ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ಬೆಂಗಳೂರು ದಕ್ಷಿಣ ತಾಲ್ಲೂಕು, ಬನಶಂಕರಿ ಬೆಂಗಳೂರು ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/–
ಕಾರ್ಯನಿರ್ವಾಹಕ ಅಧಿಕಾರಿ
ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯಿತಿ
ವಾಸಸಂಇ/ಸಿಪಿ/ಎಎಎ/4541/2024–25

ನಗರಸಭೆ ಕಾರ್ಯಾಲಯ ನೆಲಮಂಗಲ
ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ–562123, ದೂರವಾಣಿ : 080–27722135,
Email : itstaff_ulb_nelamangala@yahoo.com
ಸಂಖ್ಯೆ:CMC/NEL/DAYNULM/SUH/CR/18/2024-25 ದಿನಾಂಕ : 23.01.2025

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)
(ಸ್ಟಾಂಡರ್ಡ್ ಡಾಕ್ಯೂಮೆಂಟ್ KC ನಿಬಂಧನೆಗಳಂತೆ ಅರ್ಜಿ & ಆಹ್ವಾನಿಸಲಾಗಿದೆ)
ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನೆಲಮಂಗಲ ನಗರಸಭೆ ವ್ಯಾಪ್ತಿಯಲ್ಲಿ 2024–25ನೇ ಸಾಲಿನ ಡೇ ನಲ್ಮ್ ಯೋಜನೆಯ ನಗರ ವಸತಿ ರಹಿತರಿಗೆ ಆಶ್ರಯ ಉಪಘಟಕದಡಿ ನಡೆಸಲಾಗುತ್ತಿರುವ ನಿರಾಶ್ರಿತರ ಕೇಂದ್ರಗಳ ನಿರ್ವಹಣೆಗೆ ಟೆಂಡರ್ ಕೈಗೊಳ್ಳಲು ಒಟ್ಟು ಮೊತ್ತ **ರೂ: 11.26 ಲಕ್ಷಗಳ** ಕೈಗೊಳ್ಳುವ ಕಾಮಗಾರಿಗಳ ಐಟಂವಾರು ಮತ್ತು ಕೆಪಿಪಿಪಿ ಪೋರ್ಟಲ್‌ನ ಏಕ ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತೆಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in/ ಮೂಲಕ ಟೆಂಡರ್ ಸಲ್ಲಿಸುವುದು.
ಇ–ಪ್ರಕ್ಯೂರ್‌ಮೆಂಟ್ ಮುಖಾಂತರ **ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: (As per KPPP Portal ಘಂಟೆಯವರೆಗೆ) ಟೆಂಡರ್ ತೆರೆಯುವ ದಿನಾಂಕ: (As per KPPP Portal)** ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.
ಸಹಿ/–
ಪೌರಾಯುಕ್ತರು,
ನಗರಸಭೆ, ನೆಲಮಂಗಲ
ವಾ.ಸಾ.ಸಂ.ಇ/ವಾಪ್ರ/4558/ಎಸ್‌ಎಸ್‌ಸಿ/2024–25

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಚಾಮರಾಜನಗರ ವಿಭಾಗ,
ಚಾಮರಾಜನಗರ–571 313 ದೂರವಾಣಿ/ಫ್ಯಾಕ್ಸ್ ಸಂಖ್ಯೆ : 08226–222027,
ಇ–ಮೇಲ್: eecnr@kpwd.gov.in/pwdeechngr@gmail.com
ಸಂಖ್ಯೆ/ಕಾ.ಪಾ.ಅ./ಚಾ.ವಿ.ಚಾ/ಟೆಂಡರ್ /2024–25 ದಿನಾಂಕ: 21–01–2025

(ಎರಡು ಲಕೋಟೆ) ಅಲ್ಪಾವಧಿ ಟೆಂಡರ್
ಅಧಿಸೂಚನೆ ಸಂಖ್ಯೆ : 18/2024–25 ದಿನಾಂಕ: 21–01–2025
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-4 (Stanard Tender Document) ಹಾಗೂ KTPP Act 1999 and KTPP Rule 2000 ರಲ್ಲಿ (ಸಿವಿಲ್) ಗುತ್ತಿಗೆದಾರರುಗಳಿಂದ ಇ–ಪ್ರಕ್ಯೂರ್‌ಮೆಂಟ್ ಮೂಲಕ ಲೆ.ಶಿ.:8443 ಠೇವಣಿ ವಂತಿಕೆಯಡಿಯಲ್ಲಿ ಗರಿಷ್ಠ ಅಂದಾಜು ಮೊತ್ತ ರೂ.950.00 ಲಕ್ಷಗಳ 1 ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಆನ್‌ಲೈನ್ ನಲ್ಲಿ ಡೌನ್ ಲೋಡ್ ಮಾಡಬಹುದಾದ ದಿನಾಂಕ 22–01–2025 ರಿಂದ 10–02–2025 ಸಂಜೆ 16–00 ಗಂಟೆವರೆಗೆ. ಟೆಂಡರ್ ಪೂರ್ವಭಾವಿ ಸಭೆ ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿಯ ಸಭಾಂಗಣದಲ್ಲಿ ದಿನಾಂಕ 30–01–2025 ರಂದು ಬೆಳಿಗ್ಗೆ 11–00 ಗಂಟೆಗೆ. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ 10–02–2025 ಸಂಜೆ 16–00 ಗಂಟೆಯ ನಂತರ. ಆರ್ಥಿಕ ಬಿಡ್ ತೆರೆಯುವ ದಿನಾಂಕ: 14–02–2025 ಹಾಗೂ ಇನ್ನು ಮುಂದೆ ಈ ನೋಟಿಫಿಕೇಶನ್‌ಗೆ ಸಂಬಂಧ ಪಟ್ಟ ಬದಲಾವಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಹೆಚ್ಚಿನ ಮಾಹಿತಿ/ವಿವರಗಳನ್ನು https://www.kppp.karnataka.gov.in ಜಾಲದಲ್ಲಿ ಹಾಗೂ ಕೆಳಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಪಡೆಯಬಹುದಾಗಿದೆ.
ಸಹಿ/–
ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ ವಿಭಾಗ
ಚಾಮರಾಜನಗರ, ಚಾಮರಾಜನಗರ
ಸಂ.ವಾಸಾಸಂಇ/ಚಾನಗರ/571/2024–25

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯಿತಿ: ಹಾಸನ ತಾಲ್ಲೂಕು ಪಂಚಾಯಿತಿ: ಹಾಸನ
ಗ್ರಾಮ ಪಂಚಾಯಿತಿ ಕಾರ್ಯಾಲಯ : ಕಬ್ಬಳಿ
Email: hsn.gp.kabbali@gmail.com Phone: 9480867383
ಸಂ: ಗ್ರಾ.ಪಂ/ಟೆಂಡರ್/2024–2025 ದಿನಾಂಕ : 10–01–2025

ಟೆಂಡರ್ ಪ್ರಕಟಣೆ
2022–23ನೇ ಸಾಲಿನ 15ನೇ ಹಣಕಾಸು ಯೋಜನೆ ಮತ್ತು ಅಮೃತ ಗ್ರಾಮ ಯೋಜನೆ ಅನುದಾನದಿಂದ ಕಬ್ಬಳಿ ಗ್ರಾಮ ಪಂಚಾಯಿತಿಗೆ ಸೋಲಾರ್ ರೂಫ್ ಟಾಪ್ ಸರಕು ಖರೀದಿ (5.00 ಲಕ್ಷ ರೂ.) ಗಳಿಗೆ ಷರತ್ತಿನ ಟೆಂಡರ್ ಮೂಲಕ ಆಸಕ್ತರಿಂದ ದರ ಆಹ್ವಾನಿಸಲಾಗಿದೆ. ಶುಲ್ಕ 500/– ರೂಗಳನ್ನು ಪಾವತಿಸಿ ಟೆಂಡರ್ ಅರ್ಜಿ ಪಡೆಯಲು ಕೊನೆಯ ದಿನಾಂಕ:–31–01–2025 ಹಾಗು ತುಂಬಿದ ಅರ್ಜಿ ಫಾರಂಗಳ ಟೆಂಡರನ್ನು ಕಬ್ಬಳಿ ಗ್ರಾಮ ಪಂಚಾಯಿತಿ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ:–04–02–2025 ಸಮಯ 13:00 ಗಂಟೆ ಆಗಿರುತ್ತದೆ. ಹಾಗು ಅದೇ ದಿನದ ಸಮಯ 15:00 ಗಂಟೆ ಅಥವಾ ಆ ದಿನವೇ ಪಿ.ಡಿ.ಓ ರವರು ತಿಳಿಸಲ್ಪಡುವ ದಿನಾಂಕ ಮತ್ತು ಸಮಯದಂದು ಟೆಂಡರ್ ತೆರೆಯಲಾಗುವುದು ಹಾಗು ಟೆಂಡರ್ ದಾರನು ಟೆಂಡರ್ ತೆರೆಯುವ ಸಂದರ್ಭದಲ್ಲಿ ಹಾಜರಿರಬಹುದಾಗಿದೆ. ಹೆಚ್ಚಿನ ಮಾಹಿತಿ ಹಾಗೂ ಅರ್ಜಿ ಫಾರಂ ಪಡೆಯಲು ಕಬ್ಬಳಿ ಗ್ರಾಮ ಪಂಚಾಯಿತಿ ಕಛೇರಿಯನ್ನು ಸಂಪರ್ಕಿಸುವುದು.
ಸಹಿ/–
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ,
ಗ್ರಾಮ ಪಂಚಾಯಿತಿ, ಕಬ್ಬಳಿ, ಹಾಸನ ತಾಲ್ಲೂಕು.

ಕರ್ನಾಟಕ ಸರ್ಕಾರ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಕಾರ್ಯಾಲಯ, ಗದಗ ದೂ: 08372 - 234375
WEB SITE : https://kppp.karnataka.gov.in

ಟೆಂಡರ್ ಪ್ರಕಟಣೆ
2025–26ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತಿ/ ತಾಲೂಕಾ ಪಂಚಾಯತ ಕಛೇರಿಯಲ್ಲಿ ಖಾಲಿಯಿರುವ ಹುದ್ದೆಗಳಿಗೆ ಹೊರ ಸಂಪನ್ಮೂಲ ಆಧಾರದ ಮೇಲೆ ಮಾನವ ಸಂಪನ್ಮೂಲ ಸಂಸ್ಥೆಯಿಂದ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಇ–ಟೆಂಡರ್ ಆಹ್ವಾನಿಸುವ ಕುರಿತು
(1) ಟೆಂಡರ್ ಕರೆದ ಪತ್ರ ಸಂ & ದಿನಾಂಕ : ಕ್ರ.ಸಂ:ಗಜಿಪಂ:ಆಡಳಿತ:ಎ–1: 2024–25 ದಿ : 23/01/2025 (2) ತಾಂತ್ರಿಕ ಅಂದಾಜು ಮೊತ್ತ **196.02** ಲಕ್ಷ (3) ಇ.ಎಂ.ಡಿ ಮೊಬಲಗು (ವಿದ್ಯುನ್ಮಾನ ಪ್ರಕ್ರಿಯೆ ಮೂಲಕ ಮಾತ್ರ) ರೂ. **1,96,027/–** (4) ಟೆಂಡರ್ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ (ವೆಬ್‌ಸೈಟ್ ಮೂಲಕ) **10/02/2025 at 05.00 PM** (5) ತಾಂತ್ರಿಕ ಬಿಡ್ ಗಳನ್ನು ತೆರೆಯುವ ದಿನಾಂಕ & ಅವಧಿ : **11/02/2025 at 05.30 PM** (6) ಆರ್ಥಿಕ ಬಿಡ್‌ಗಳನ್ನು ತೆರೆಯಬಹುದಾದ ದಿನಾಂಕ & ಅವಧಿ : **13/02/2025 at 11.00 AM**
INDENT NUMBER: RDPR/2024-25/SE2104
ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ, ಗದಗ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/557/2024–25

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN:U31401KA2002SGC030437)
ನಿಗಮ ಕಛೇರಿ, ಪೂನಾ – ಬೆಂಗಳೂರ ರಸ್ತೆ, ನವನಗರ,
ಹುಬ್ಬಳ್ಳಿ – 580 025, ದೂರವಾಣಿ : 0836 – 2222535.
ಮಿಂಚಂಚೆ : seeit@hescom.co.in, eeit1@hescom.co.in
No. : HESCOM/SEE-IT&MT/EE-IT1/2024-25/CYS-7954
Date : 24-01-2025

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)
ಅಧೀಕ್ಷಕ ಇಂಜನೀಯರ್ (ವಿ), ಐಟಿ & ಎಮ್‌ಟಿ, ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿರವರು ಈ ಕೆಳಗಿನ ಕೆಲಸಕ್ಕಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ 2 ಭಾಗಗಳಲ್ಲಿ (ಭಾಗ – 1 ಟೆಕ್ನೋ ಕಮರ್ಷಿಯಲ್ ಬಿಡ್ ಮತ್ತು ಭಾಗ – 2 ಪ್ರೈಸ್ ಬಿಡ್) ಟೆಂಡರ್‌ನ್ನು ಆಹ್ವಾನಿಸಲಾಗಿದೆ.
1) ಟೆಂಡರ್ ಸಂಖ್ಯೆ : HESCOM/2024-25/SE0339, ಟೆಂಡರ್ ವಿವರಗಳು : ನವನಗರ, ಹೆಸ್ಕಾಂ, ಹುಬ್ಬಳ್ಳಿಯಲ್ಲಿರುವ ನಿಗಮ ಕಚೇರಿಗೆ 2 ಸಂಖ್ಯೆಯ ಐಟಿ ಮ್ಯಾನ್ ಪವರ್ ಮತ್ತು ಕೇಂದ್ರಿಕೃತ ಗ್ರಾಹಕ ಕೇಂದ್ರಕ್ಕೆ (ಸಿಸಿಸಿ) 58 ಸಂಖ್ಯೆಯ ಮಾನವ ಶಕ್ತಿ (ಕಾಲ್ ಸೆಂಟರ್ ಕಾರ್ಯನಿರ್ವಾಹಕರು) ಸೇವೆಗಳನ್ನು ಒದಗಿಸಲು ಏಜೆನ್ಸಿಯ ಆಯ್ಕೆ.
ಸದರಿ ಟೆಂಡರ್‌ದ ಪೂರ್ಣ ವಿವರಗಳನ್ನು ದಿನಾಂಕ : 25–01–2025 ರಂದು ಅಥವಾ ನಂತರ ಕೆ.ಪಿ.ಪಿ.ಪಿ. ಜಾಲತಾಣ : https://kppp.karnataka.gov.in ರಲ್ಲಿ ಪಡೆಯಬಹುದು.
ಸಹಿ/– ಅಧೀಕ್ಷಕ ಇಂಜನೀಯರರು (ವಿ),
(ಐಟಿ & ಎಮ್‌ಟಿ) ಹೆಸ್ಕಾಂ, ಹುಬ್ಬಳ್ಳಿ.
ಡಿಐಪಿಆರ್/ಧಾರವಾಡ/894/ಮಣಿಪಾಲ್/2024–25

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.
ಸಂ: ಬೆಂಅಪ್ರಾ/ನಯೋಸ/CLU-305/2805/2024-25 ದಿನಾಂಕ: 24.01.2025

ಪ್ರಕಟಣೆ
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–Aರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ(ಶೈಕ್ಷಣಿಕ, ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಮತ್ತು ಇತ್ಯಾದಿ) ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಒಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ. ನಂ	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ-2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಮೆ॥ ಆದರ್ಶ್ ವಿದ್ಯಾ ಸಂಘ(ರಿ) ರವರ ಪರವಾಗಿ ಅಧಿಕೃತ ಸಹಿದಾರರಾದ ಶ್ರೀ ಚೇತನ್ ಮರ್ಲೆಚಾ, ಶ್ರೀ ಜಿತೇಂದ್ರ ಮರದಿಯಾ ಮತ್ತು ಶ್ರೀ ಪದಮ್ ರಾಜ್ ಮೆಹ್ತಾ	ಬೆಂಗಳೂರು ದಕ್ಷಿಣ	ಕೆಂಗೇರಿ	ತಗಚ ಗುಪ್ಪೆ	26/2	5–00	ವ್ಯವಸಾಯ ವಲಯ	ವಾಣಿಜ್ಯ (ಶೈಕ್ಷಣಿಕ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಮತ್ತು ಇತ್ಯಾದಿ)
					53/2	3–00		
					68	3–37		

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ಶೈಕ್ಷಣಿಕ ಸಂಸ್ಥೆ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಆಧುನಿಕ ಶೈಕ್ಷಣಿಕ ಸೌಲಭ್ಯವುಳ್ಳ ಉತ್ತಮ ಶೈಕ್ಷಣಿಕ ಸಂಸ್ಥೆ ದೊರೆತಂತಾಗುತ್ತದೆ, ಈ ಜಮೀನಿನಲ್ಲಿ ಶೈಕ್ಷಣಿಕ ಸಂಸ್ಥೆ ಅಭಿವೃದ್ಧಿ ಪಡಿಸುವುದರಿಂದ ಸುತ್ತಮುತ್ತಲಿನ ಶಿಕ್ಷಕರಿಗೆ ಉತ್ತಮ ಉದ್ಯೋಗ ದೊರಕುತ್ತದೆ. ಈ ಜಮೀನಿನಲ್ಲಿ ಶೈಕ್ಷಣಿಕ ಸಂಸ್ಥೆ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಈ ಸ್ಥಳದಲ್ಲಿ ಜಮೀನಿನಲ್ಲಿ ಶೈಕ್ಷಣಿಕ ಸಂಸ್ಥೆ ತೆರೆಯುವುದರಿಂದ ಕಛೇರಿಯಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳು ಮತ್ತು ಇತರರಿಗೆ ಉತ್ತಮ ಕೌಶಲ್ಯ ಉದ್ಯೋಗಗಳು ದೊರೆತಂತಾಗುತ್ತದೆ, ವಾಣಿಜ್ಯ(ಶೈಕ್ಷಣಿಕ, ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಮತ್ತು ಇತ್ಯಾದಿ) ಉಪಯೋಗಕ್ಕಾಗಿ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸುತ್ತಿದ್ದೇವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತ, ಪ್ರಶ್ನಿತ ಜಮೀನುಗಳನ್ನು **'ವ್ಯವಸಾಯ ವಲಯ'** ದಿಂದ **'ವಾಣಿಜ್ಯ(ಶೈಕ್ಷಣಿಕ, ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಮತ್ತು ಇತ್ಯಾದಿ)ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.
ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ರಾಜ್ಯದ ಉದ್ದಗಲಕ್ಕೂ ಸ್ಪಷ್ಟ ಮಾಹಿತಿ ನಿಖರ ಸುದ್ದಿಯೊಂದಿಗೆ ರಾಜ್ಯದ ಜನರ ಮನೆಮಾತಾಗಿರುವ ವಿಶ್ವವಾಣಿ ದಿನಪತ್ರಿಕೆ ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳ ಮಹತ್ವ ಸಾರುತ್ತ ವಿಶ್ವಾಸ ಉಳಿಸಿಕೊಂಡಿದೆ. ವಿಶ್ವವಾಣಿ ಪತ್ರಿಕೆ ತನ್ನದೇ ಆದ ಪ್ರಾಮುಖ್ಯವನ್ನು ಹೊಂದಿರುವ ರಾಜ್ಯದ ಏಕೈಕ ಪತ್ರಿಕೆಯಾಗಿದೆ. ಇದೀಗ ಪತ್ರಿಕೆ ವಿಶ್ವೇಶ್ವರ ಭಟ್ ನೇತೃತ್ವದಲ್ಲಿ 10 ನೇ ವರ್ಷಕ್ಕೆ ಕಾಲಿಟ್ಟಿರುವುದು ಸಂತಸದ ಸಂಗತಿ. ಇದೇ ರೀತಿಯಾಗಿ ಪತ್ರಿಕಾಧರ್ಮ ಪಾಲನೆ ಮತ್ತಷ್ಟು ವರ್ಷಗಳ ಕಾಲ ಕರುನಾಡಿನಲ್ಲಿ ಪ್ರಕಾಶಿಸಲಿ ಎಂದು ಹಾರೈಸುತ್ತೇನೆ.

- ಕೆ.ಜಗದಪ್ಪ ವಕೀಲರ ಸಂಘದ ಮಾಜಿ ಅಧ್ಯಕ್ಷ

ಪತ್ರಿಕೋದ್ಯಮದಲ್ಲಿ ಹೊಸತನಕ್ಕೆ ಹೆಸರಾದ ವಿಶ್ವವಾಣಿ ಹತ್ತನೇ ವಾರ್ಷಿಕೋತ್ಸವ ಆಚರಿಸಿಕೊಳ್ಳುತ್ತಿರುವುದು ಸಂತೋಷದ ಸಂಗತಿ. ವಿಶ್ವೇಶ್ವರ ಭಟ್ ಅವರ ಸಾರಥ್ಯದಲ್ಲಿ ಬರುತ್ತಿರುವ ವಿಶ್ವವಾಣಿ ಬಹುಬೇಗ ಓದುಗರ ವಿಶ್ವಾಸಕ್ಕೆ ಪಾತ್ರವಾಗಿದೆ. ಜನಪರ ನಿಲುವು ಹಾಗೂ ಸಮಾಜ ಮುಖಿ ಚಿಂತನೆ ಮೂಲಕ ಪತ್ರಿಕೆ ನೂರ್ಕಾಲ ಬೆಳಗಲಿ.

- ಅಶ್ವಿನ್ ಕೊತ್ತಂಬರಿ
ವಿಜಯನಗರ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷರು

ವಿಶ್ವವಾಣಿ ಕನ್ನಡ ಪತ್ರಿಕಾಲೋಕದಲ್ಲಿ ನಿಖರತೆ, ಪ್ರಾಮಾಣಿಕತೆ ಮತ್ತು ಜನಪರ ನಿಲುವುಗಳಿಂದ ಜನಮನ ಗೆದ್ದಿದ್ದು, ಸಾಮಾಜಿಕ ಜಾಗೃತಿಗೆ ಮಹತ್ವದ ಪಾತ್ರ ವಹಿಸಿದೆ. ವಿಶ್ವವಾಣಿ ಮುಂದೆ ಮತ್ತಷ್ಟು ಯಶಸ್ಸು ಸಾಧಿಸಿ, ಕನ್ನಡ ಭಾಷೆ ಮತ್ತು ಮತ್ತು ಸಮಾಜದ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡಲಿ.

- ಹನಮಂತರಾವ್ ಭೂಸನೂರು, ಪ್ರಗತಿಪರ ಕೃಷಿಕ

ಸಮಾಜವನ್ನು ತಿದ್ದುವಲ್ಲಿ ಪತ್ರಿಕೆಗಳು ಪ್ರಮುಖ ಪಾತ್ರ ವಹಿಸುತ್ತವೆ. ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ, ಕ್ರೀಡಾ ವಿಶೇಷ ವರದಿಗಳೊಟ್ಟಿಗೆ ಒಂದಷ್ಟು ಮೊದಲುಗಳಿಗೆ ಮುನ್ನುಡಿ ಬರೆದಿರುವ ವಿಶ್ವವಾಣಿ ದಿನಪತ್ರಿಕೆ ಮತ್ತಷ್ಟು ಎತ್ತರಕ್ಕೆ ಬೆಳೆದು ಸಮಾಜಕ್ಕೆ ತನ್ನದೇ ಆದ ಕೊಡುಗೆ ನೀಡಲಿ.

- ಶ್ರೇಯಸ್ ಪಟೇಲ್ ಸಂಸದ

ಭಟ್ಟರು ರೂಪಿಸುತ್ತಿರುವ ಯೋಜನೆಗಳು ಯಶಸ್ವಿಯಾಗಲಿ

-ವೆಂಕಟೇಶ್ ಕೆ.ಎಸ್., ಮಂಡ್ಯ

ನಮ್ಮ ಕುಟುಂಬ ಹಿಂದಿನಿಂದಲೂ ಪ್ರಜಾವಾಣಿ ಓದುಗರು. ಇಂದಿಗೂ ನಮ್ಮನೆಗೆ ಪ್ರಜಾವಾಣಿ ಹಾಗೂ ವಿಶ್ವವಾಣಿ ಎರಡೂ ಪತ್ರಿಕೆಗಳು ಬರುತ್ತಿವೆ.

ಪ್ರಾರಂಭದಲ್ಲಿ ನಾನು ವಿಜಯ ಕರ್ನಾಟಕ ಓದಲು ಶುರುಮಾಡಿದೆ. ಅದರಲ್ಲಿ ಬರುತ್ತಿದ್ದ ಅಂಕಣಗಳು ತುಂಬಾ ಇಷ್ಟ. ಆರಂಭದಲ್ಲಿ ನಂಗೆ ವಿಶ್ವೇಶ್ವರ ಭಟ್ ಅವರ ಕುರಿತು ಅಷ್ಟಾಗಿ ಮಾಹಿತಿ ಇರಲಿಲ್ಲ. ನನ್ನ ಸೋದರಮಾವ ಅವರ ಬಗ್ಗೆ ತಿಳಿಸಿದರು. ನಂತರ ಅವರ ಬರವಣಿಗೆ ಶೈಲಿ ತುಂಬಾ ಹಿಡಿಸಿತು. ಯಾವುದೇ dry subject ತೆಗೆದುಕೊಂಡರು, ಅದಕ್ಕೆ ಜೀವ ತುಂಬುವ ಸಾಮರ್ಥ್ಯ ಅವರಿಗಿದೆ. ನಾನು ಕಂಡಂತೆ ಕೆಲವೇ ಉತ್ತಮ ಲೇಖಕರಲ್ಲಿ ಭಟ್ಟರು ಕೂಡ ಒಬ್ಬರು. ವಿದೇಶಲ್ಲಿ ಪತ್ರಿಕೋದ್ಯಮ ಕುರಿತು ಉನ್ನತ ವ್ಯಾಸಂಗ ಮಾಡಿರುವ ಭಟ್, ವಿಶ್ವವಾಣಿಯನ್ನು ರೂಪಿಸಿರುವ ರೀತಿ ನಿಜಕ್ಕೂ ಆಪ್ಯಾಯಮಾನ. ಇನ್ನು ಇದರಲ್ಲಿ ಬರೆಯುವ ಅಂಕಣಕಾರರು ಎಲ್ಲರೂ ವಿಶಿಷ್ಟರೇ. ನಾನು ಪ್ರತಿದಿನ ಎಲ್ಲ ಅಂಕಗಳನ್ನು ತಪ್ಪದೆ ಓದುತ್ತೇನೆ. ಉಳಿದಂತೆ ಗುರುವಾರ ಭಾನುವಾರಗಳಂದು ಬರುವ ಭಟ್ಟರ ಕಾಲಂನಲ್ಲಿ ಈ ದಿನ ಏನು ವಿಶೇಷ ಇರಬಹುದು ಎಂದು ಚಾತಕಪಕ್ಷಿಯಂತೆ ಕಾಯುತ್ತಿರುತ್ತೇವೆ. ಉಳಿದಂತೆ ಸಂಪಾದಕೀಯ, ಸೊಂಪಾದಕೀಯ, ಸಂಪಾದಕರ ಸತ್ಯಶೋಧನೆ ಕುರಿತು ಎರಡನೇ ಮಾತೆ ಇಲ್ಲ. ಕಿರಣ್ ಉಪಾಧ್ಯಾಯ, ಡಾ. ನಾ. ಸೋಮೇಶ್ವರ, ಮೂಕನಹಳ್ಳಿ ರಂಗಸ್ವಾಮಿ, ರೂಪಾ ಮೇಡಂ ಇತರರ ವಿದ್ವತ್ತಿಗೆ ತಲೆದೂಗಲೇಬೇಕು. ವಿಶ್ವೇಶ್ವರ ಭಟ್ ಬರೆದಿರುವ ನೆಚ್ಚಿನ ಪುಸ್ತಕಗಳಾದ ಅಜಾತಶತ್ರು, ಧನ ದೇವೋಭವ, ಆವಿಷ್ಕಾರದ ಹರಿಕಾರ ಇಸ್ರೇಲ್, ಇಂದಿನ ದಿನವೇ ಶುಭದಿನ, ಇತರ ಎಲ್ಲ ಪುಸ್ತಕಗಳು ನನ್ನ ಸಂಗ್ರಹದಲ್ಲಿದೆ. ಆದರೆ ನನ್ನ ನೆಚ್ಚಿನ ಯಾವಾಗಲೂ ಓದುವ ಹಾಗೂ ಪ್ರೀತಿಪಾತ್ರರಿಗೆ ಉಡುಗೊರೆ ಕೊಡುವ ಪುಸ್ತಕ selfi with life. ಎಲ್ಲರೂ ಒಮ್ಮೆ ಓದಿ.

ನನ್ನ ಲೇಖಕರನ್ನು ಭೇಟಿಮಾಡುವ ಸುಯೋಗ ಕೂಡಿ ಬಂದಿದ್ದು ಮಂಡ್ಯ ಸಾಹಿತ್ಯ ಸಮ್ಮೇಳನದಲ್ಲಿ. ನನ್ನ ಬಹುದಿನಗಳ ಬಯಕೆ ಅಂದು ಈಡೇರಿತು. ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಮಾತುಗಳೇ ಹೊರಡಲಿಲ್ಲ. ಆದರೂ ಸ್ವಲ್ಪ ತಡವರಿಸಿದರೂ ನಂತರ ಮಾತನಾಡಿದೆ. ತುಂಬಾ ಸ್ನೇಹಮಯಿ . ಸ್ವಲ್ಪಹೊತ್ತು ಮಾತನಾಡಿದ ನಂತರ ಧನ್ಯತಾ ಭಾವದಿಂದ ಹಿಂದಿರುಗಿದೆ.

ಪಾಟೀಲ ಪುಟ್ಟಪ್ಪ ನವರು ಸಹ ನೆಚ್ಚಿನ ಬರಹಗಾರರು. ಅವರ 'ಬದುಕವ ಮಾತು' ಪುಸ್ತಕ ಉತ್ತಮ ಪುಸ್ತಕ ಜೀವನದ ದಿಕ್ಕನ್ನೇ ಬದಲಿಸುವ ಬರವಣಿಗೆ. ಅವರ ನಂತರ ವಿಶ್ವವಾಣಿ ಪತ್ರಿಕೆಯನ್ನು ಮುನ್ನಡೆಸುತ್ತಿರುವ ವಿಶ್ವೇಶ್ವರ ಭಟ್ ಈ ಟಿವಿ ಮಾಧ್ಯಮಗಳ ನಡುವೆ ಒಂದು ದಶಕ ಪೂರೈಸಿರುವುದು ಸುಲಭದ ಮಾತಲ್ಲ. ನನ್ನಂತಹ ನೂರಾರು ಓದುಗರು ಸಾವಿರಾರು ಲಕ್ಷಗಳನ್ನು ದಾಟಿ ಕೋಟಿಗೂ ಹೆಚ್ಚಿನ ಓದುಗರಾಗಲಿ.

ಭಟ್ಟರು ರೂಪಿಸುತ್ತಿರುವ ಯೋಜನೆಗಳು ಯಶಸ್ವಿಯಾಗಲಿ. ವಿಶ್ವವಾಣಿ ಪತ್ರಿಕೆ, ಸಮೂಹ ಮಾಧ್ಯಮ ಪ್ರವಾಸ ಕುರಿತು ಇತರ ಭಟ್ಟರ ಕನಸುಗಳು ಎಲ್ಲಾ ಕೈಗೂಡಲಿ ಶುಭವಾಗಲಿ.

ವಿಶ್ವೇಶ್ವರ ಭಟ್ ಅದ್ಭುತ ಮಸ್ತಿಷ್ಕ

- ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ,
ರಾಮಚಂದ್ರಾಪುರ ಮಠ

ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ ಅವರ ವಿಶ್ವವಾಣಿಗೆ ಇದೀಗ ಹತ್ತರ ಎತ್ತರ. ಯಾವುದೇ ಒಂದು ವಸ್ತುವಿನ ಅಥವಾ ವ್ಯಕ್ತಿಯ ಶ್ರೇಷ್ಠತೆ ಅದರ ನಿರ್ಮಾತೃವನ್ನು ಅವಲಂಬಿಸಿರುತ್ತದೆ. ಒಂದೊಳ್ಳೆಯ ಉತ್ಪನ್ನ ಎಂದಾದಲ್ಲಿ ಯಾವ ಕಂಪನಿ ಎಂಬುದು ಮುಖ್ಯ. ವಿದ್ವಾಂಸ ಎಂದಾದಲ್ಲಿ ಅವನ ಗುರು ಯಾರು ಎಂಬುದು ಮುಖ್ಯ. ಕಾರಣ ಸೃಷ್ಟಿಕರ್ತ ತುಂಬಾ ಮುಖ್ಯ. ನಮಗೆ ವಿಶ್ವವಾಣಿ ಪರಿಚಯ 10 ವರ್ಷಗಳದ್ದು. ಆದರೆ ವಿಶ್ವೇಶ್ವರ ಭಟ್ ಅವರ ಪರಿಚಯ ಹಲವು ವರ್ಷಗಳದ್ದು. ವಿಶ್ವೇಶ್ವರ ಭಟ್ಟರೊಂದು ಅದ್ಭುತವಾದ ಮಸ್ತಿಷ್ಕ. ಹೊಸ ಹೊಸ ವಿಚಾರ ಮೂಡಿಬರುವ ಮಸ್ತಿಷ್ಕ. ಹಾಗಾಗಿ ಅಂತಹ ನಿರ್ಮಿತಿ ವಿಶಿಷ್ಟವಾಗಿ ಇರಲೇಬೇಕು. ಅವರು ಕೊಡುವ ಶೀರ್ಷಿಕೆಗಳು ತುಂಬಾ ವಿಭಿನ್ನ. ಎಲ್ಲರೂ ಅನುಕರಣೆ ಮಾಡುತ್ತಾರೆ. ಆ ಶೀರ್ಷಿಕೆ ನೋಡಿದರೆ ತಿಳಿಯುತ್ತದೆ ಆ ಒಂದು ಮೇಧೆ ಎಂತಹದ್ದು ಎಂದು ಅದನ್ನು ವಿಶ್ವವಾಣಿ ಯಲ್ಲಿ ಕಾಣಬಹುದು. ತುಂಬಾ ವಿಶಿಷ್ಟ ವಾದ, ಅಪರೂಪದ ನಾವೀನ್ಯತೆಯನ್ನು ವಿಶ್ವವಾಣಿ ಪಡೆದುಕೊಂಡಿದೆ.

ಪತ್ರಕರ್ತರಿಗೆ ಇರಬೇಕಾದ ಸಕಲ ಲಕ್ಷಣ ಗಳು ಅವರಿಗಿದೆ. ಧೈರ್ಯ, ನಿಷ್ಠೆ, ಚಾಕ ಚಕ್ಯತೆ ಅಥವಾ ತುಂಬಾ ವಿಭಿನ್ನ ವಾಗಿ ಪ್ರಸ್ತುತ ಮಾಡುವುದು, ಯಾರೂ ಗ್ರಹಿಸದಿ ದ್ದನ್ನು ಇವರು ಗಮನಿಸುವ ಸೂಕ್ಷ್ಮತೆ ಇರುವುದು ಇವೆಲ್ಲವೂ ಪತ್ರಕರ್ತರಿಗೆ ಅಗತ್ಯವಾಗಿದೆ. ಅಂತಹ ಪತ್ರಕರ್ತನ ವಿಶ್ವವಾಣಿ ತುಂಬಾ ವಿಶಿಷ್ಟವಾಗಿ ಮೂಡಿ ಬರುತ್ತಿದೆ. ಹತ್ತು ವರ್ಷ ನಿರಂತರವಾಗಿರಲಿ. ಅಭಿವೃದ್ಧಿ ಆಗುತ್ತಿರಲಿ ಎಂಬುದೇ ನಮ್ಮ ಹಾರೈಕೆ....ವಿಶ್ವೇಶ್ವರ ಭಟ್ಟರಿಗೂ ಒಳ್ಳೆಯ ಆರೋಗ್ಯವನ್ನು ಭಗವಂತ ನೀಡಲಿ ಎಂದು ಹಾರೈಸುತ್ತೇನೆ.

ವಿಶ್ವೇಶ್ವರ ಭಟ್ ! ಬಸ್ ನಾಮ್ ಹೀ ಕಾಫಿ ಹೈ !

-ಶ್ರೀಕೃಷ್ಣ, ಶಾಂತಿಕುಟೀರ ಆಶ್ರಮ, ಕನ್ನೂರ, ವಿಜಯಪುರ

ಮುಟ್ಟಿದೆಲ್ಲವನ್ನು ಬಂಗಾರ ಮಾಡುವ ಗ್ರೀಕ್ ಮೈಥೋಲಾಜಿ ದೊರೆ ಅವನ 'ಮಿಡಾಸ್ ಟಚ್' ಬಗ್ಗೆ ಕೇಳಿದ್ವಿ. ಅದರ ಹಾಗೆಯೇ 'ವಿಶ್ವೇಶ್ವರ ಭಟ್ ಟಚ್' ಎಂಬ ಪದವು ಇನ್ಮುಂದೆ ಚಲಾವಣೆಯಲ್ಲಿ ಬರುವ ಸಾಧ್ಯತೆ ಇದೆ. ಅವರು ಯಾವ ಕ್ಷೇತ್ರದಲ್ಲಿ 'ಇಳಿದರೂ' ಆ ಕ್ಷೇತ್ರವನ್ನು 'ಮೇಲೆ' ತರುವ ಎಲ್ಲ ಶಕ್ತಿ – ಯುಕ್ತಿ – ಭಕ್ತಿ ಅವರಲ್ಲಿ ಪೂರ್ಣ ಪ್ರಮಾಣದಲ್ಲಿ ಇವೆ. ವಿಶ್ವವಾಣಿ ಇಂದು 'ಬ್ರ್ಯಾಂಡ್' ಆಗಿ ಹೊರಹೊಮ್ಮಲು ಭಟ್ ಅವರ ನೈಪುಣ್ಯ, ಅನುಭವ, ಹೃದಯ ವೈಶಾಲ್ಯವೇ ಕಾರಣ. ಯಾವುದೇ ಭಿಡೆ, ಮೂರವತ್ತು, Taboo ಇಲ್ಲದೆಯೇ ಸರ್ವವ್ಯಾಪಿ, ವಿಶ್ವವ್ಯಾಪಿ ಆಗಿ ವಿಶ್ವವಾಣಿ ರೂಪುಗೊಳ್ಳುತ್ತಿದೆ. ಶೀರ್ಷಿಕೆ, ವಿಶೇಷ ಸಂದರ್ಭಗಳಲ್ಲಿ ವಿನ್ಯಾಸ, ಅಂಕಣಗಳು ಇವೆಲ್ಲ ವಿನೂತನ ಶೈಲಿಯಲ್ಲಿ ರೂಪಗೊಳ್ಳುತ್ತಿವೆ. Creativity ಯ Craving ಎದ್ದು ಕಾಣುತ್ತದೆ. ವಿಶ್ವೇಶ್ವರ ಭಟ್ ತಮಗೆ ಆದ ಅನುಭವ ವಾಚಕರೊಡನೆ ಮುಕ್ತಹಸ್ತದಿಂದ, ಆತ್ಮೀಯವಾಗಿ, ರಸವತ್ತಾಗಿ ಹಂಚಿ ತಿನ್ನುವ ಸ್ವಭಾವದವರು. ವಿಶ್ವವಾಣಿಯನ್ನು ಬಾಯಿತುಂಬ ಹೊಗಳಲು ನನ್ನಲ್ಲಿ ವಾಣಿ ಇಲ್ಲ..! ವಿಶ್ವೇಶ್ವರ ಭಟ್ ! ಬಸ್ ನಾಮ್ ಹೀ ಕಾಫಿ ಹೈ !!

ಹತ್ತಾರು ಪ್ರಯೋಗ, ನೂರಾರು ಚಿಂತನೆ, ಸಾವಿರಾರು ಯೋಚನೆಗಳೊಂದಿಗೆ ಕಾಲಮಾನಕ್ಕೆ ತಕ್ಕಹಾಗೆ ಪುಟವಿನ್ಯಾಸ, ಸುದ್ದಿ ವಿಶ್ಲೇಷಣೆ ಹತ್ತು ಹಲವು ವಿಚಾರ ವ್ಯಕ್ತಿಗಳ ಅಂಕಣ ಬರಹಗಳ ಮೂಲಕ ವಿಶ್ವವಾಣಿ ಪತ್ರಿಕೆ ಜನಮಾನಸವನ್ನೂ ಗೆದ್ದಿದೆ. ಪತ್ರಿಕೆ ಮುಂದಿನ ದಿನಮಾನಗಳಲ್ಲಿ ಇನ್ನೂ ಹೆಚ್ಚು ಯಶಸ್ಸು ಕಾಣಲಿ

- ಡಾ. ವಿಶ್ವನಾಥ ಪಾಟೀಲ ಮಾಜಿ ಶಾಸಕ

ವಿಶ್ವೇಶ್ವರ ಭಟ್ಟರ ಸಾರಥ್ಯದಲ್ಲಿ ಹತ್ತು ವರ್ಷಗಳ ಹಿಂದೆ ಪ್ರಾರಂಭವಾದ ವಿಶ್ವವಾಣಿ ಪತ್ರಿಕೆಯು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯುತ್ತ ನಾಡಿನಾದ್ಯಂತ ಹೆಸರಾಗಿದ್ದು. ಪ್ರತಿದಿನ ನೈಜ ಹಾಗೂ ವಾಸ್ತವ ಸುದ್ದಿಗಳು, ಸಂಪಾದಕೀಯ ಬರವಣಿಗೆ, ಅಗ್ರ ಲೇಖನಗಳ ಮೂಲಕ ಸಮಾಜದ ಅಂಕು-ಡೊಂಕುಗಳನ್ನು ತಿದ್ದುತ್ತಿರುವ ವಿಶ್ವವಾಣಿ ಪತ್ರಿಕೆ ಉತ್ತರೋತ್ತರವಾಗಿ ಇನ್ನೂ ಎತ್ತರಕ್ಕೆ ಬೆಳೆಯಲಿ.

- ಎಸ್.ಕೆ.ಬೆಳ್ಳುಬ್ಬಿ ಮಾಜಿ ಸಚಿವ

ಸಿನಿಮಾ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳು ಸಹ ಅತ್ಯುತ್ತಮವಾಗಿರು ತ್ತವೆ. ಪತ್ರಿಕೆ ಓದುತ್ತಿದ್ದರೆ ಸಮಯ ಮುಗಿಯುವುದೇ ಗೊತ್ತಾಗುವುದಿಲ್ಲ.10ನೇ ವರ್ಷಕ್ಕೆ ಕಾಲಿಟ್ಟಿರುವ ನನ್ನ ಅಚ್ಚುಮೆಚ್ಚಿನ ವಿಶ್ವವಾಣಿಗೆ ಶುಭವಾಗಲಿ. ನನ್ನ ಮೊದಲ ನಿರ್ದೇಶನದ ಬಗ್ಗೆ ಮೊದಲ ಬಾರಿಗೆ ವಿಶ್ವವಾಣಿಯಲ್ಲಿ ವರದಿ ಪ್ರಕಟಗೊಂಡಿತ್ತು. ನೂರಾರು ವರ್ಷ ನಾಡಿನ ಜನರ ಜೀವನಾಡಿಯಾಗಿ ಪತ್ರಿಕೆ ಕಾರ್ಯನಿರ್ವಹಿಸಲಿ.

-ಕೀರ್ತಿ, ಚಲನಚಿತ್ರ ನಿರ್ದೇಶಕ

ಇಂಟರ್‌ನೆಟ್ , ಮೊಬೈಲ್, ಆಧುನಿಕ ಜಗತ್ತಿನ ಭರಾಟೆಯ ಬೆಳವಣಿಗೆಯಲ್ಲಿ ಪತ್ರಿಕೆಗಳ ಓದುಗರ ಸಂಖ್ಯೆ ಕಡಿಮೆಯಾಗುತ್ತಿರುವ ಈ ಸಮಯದಲ್ಲಿ ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ತೆಗೆಯದೆ ವಿಶ್ವವಾಣಿ ದಿನಪತ್ರಿಕೆಯನ್ನು ಮುನ್ನಡೆಸುತ್ತಿರುವುದು ಸಾಹಸದ ಕಾರ್ಯವೇ ಸರಿ. ವಿಶ್ವೇಶ್ವರ ಭಟ್ಟರು ಹೊಸತನವನ್ನು ಮೈಗೂಡಿಸಿಕೊಂಡು ಓದುಗರ ಹೃದಯ ಮುಟ್ಟುತ್ತಿರುವುದು ಶ್ಲಾಘನೀಯ. ಪತ್ರಿಕೆ ಬೆಳೆಯಲಿ.

- ಕೃಷ್ಣಾ ನಾಯ್ಕ , ಶಾಸಕ, ಹೂವಿನಹಡಗಲಿ.

ಸಮಾಚಾರ ಸಣ್ಣದಲ್ಲ

ನೀರಿನ ಟ್ಯಾಂಕ್‌ನಲ್ಲಿ ಬಿದ್ದು ಮಗು ಸಾವು

ಹುಬ್ಬಳ್ಳಿ: ನೀರಿನ ಟ್ಯಾಂಕ್ ನಲ್ಲಿ ಮಗುವೊಂದು ಬಿದ್ದು ಸಾವನ್ನಪ್ಪಿದ ಘಟನೆ ನಗರದ ಗಾಮನಗಟ್ಟಿ ಗ್ರಾಮದಲ್ಲಿ ನಡೆದಿದೆ. ತಾಲೂಕಿನ ಬುಡರಸಿಂಗಿ ನಿವಾಸಿ ಭೀಮಪ್ಪ ಜಿಗಳೂರು ಅವರ 3 ವರ್ಷದ ಮಗು ದೀಪಾ ಸಾವನ್ನಪ್ಪಿರುವ ಮಗುವಾಗಿದೆ. ರಜೆಗೆಂದು ಗಾಮನಗಟ್ಟಿಯ ಅಜ್ಜನಾದ ಸಿದ್ದಪ್ಪ ಕರಡಿಗುಡ್ಡ ಅವರ ಮನೆಗೆ ಬಂದ ಸಂದರ್ಭದಲ್ಲಿ ಈ ಒಂದು ಅವಘಡ ಸಂಭವಿಸಿದೆ. ಆಟವಾಡುವ ಸಂದರ್ಭದಲ್ಲಿ ಮನೆಯ ಮುಂಭಾಗದಲ್ಲಿ ಇರುವ ನೀರಿನ ಟ್ಯಾಂಕ್ ನಲ್ಲಿ ಬಿದ್ದು ಮಗು ಮೃತಪಟ್ಟಿದೆ ಎಂದು ತಿಳಿದು ಬಂದಿದೆ. ಮೃತ ಮಗುವನ್ನು ಕಿಮ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ. ನವನಗರ ಎಪಿಎಂಸಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಸ್ಥಳಕ್ಕೆ ಪೊಲೀಸರು ಆಗಮಿಸಿ ಪರಿಶೀಲನೆ ನಡೆಸಿದರು.

ಹಿಟ್ ಆ್ಯಂಡ್ ರನ್: ಇಬ್ಬರ ಸಾವು

ಬೀದರ್: ಹಿಟ್ ಆ್ಯಂಡ್ ರನ್ ದುರಂತದಲ್ಲಿ ಇಬ್ಬರು ಬೈಕ್ ಸವಾರರು ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ಪಾಂಡ್ರಿ ಗ್ರಾಮದ ಬಳಿ ನಡೆದಿದೆ. ಮೃತರನ್ನು ಮೂಲತಃ ಮಹಾರಾಷ್ಟ್ರದ ನಾಂದೇಡ್ ಗ್ರಾಮದ ನಾಗೂರಾವ್ (40) ಹಾಗೂ ಭಾನುದಾಸ್ (42) ಎಂದು ಗುರುತಿಸಲಾಗಿದೆ. ಮೂವರು ಸೇರಿ ಒಂದು ಬೈಕ್‌ನಲ್ಲಿ ಔರಾದ್‌ನಿಂದ ನಾಂದೇಡ್‌ಗೆ ಹೋಗುತ್ತಿದ್ದರು. ಪಾಂಡ್ರಿ ಬಸ್ ನಿಲ್ದಾಣದ ಬಳಿ ಅಪರಿಚಿತ ವಾಹನವೊಂದು ಬೈಕ್‌ಗೆ ಡಿಕ್ಕಿ ಹೊಡೆದು ಹೋಗಿದೆ. ಪರಿಣಾಮ ಇಬ್ಬರು ಸ್ಥಳದಲ್ಲಿಯೇ ಸಾವನ್ನಪ್ಪಿದ್ದು, ಇನ್ನೋರ್ವ ಗಂಭೀರವಾಗಿ ಗಾಯಗೊಂಡಿದ್ದಾರೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ:** ಬೀದರ್

ಸಮಸ್ಯೆಯೇನು: ಬೀದರ್ ಜಿಲ್ಲೆ ಔರಾದ್ ತಾಲೂಕಿನ ಜಮಗಿಯಿಂದ ಸಂತಪೂರ್ ಸಂಗಮ ಕ್ರಾಸ್ ವರೆಗೆ ರಸ್ತೆಯ ಎರಡು ಬದಿಯಲ್ಲಿ ಬೆಳೆದಿರುವ ಮುಳ್ಳಿನ ಮರಗಳು ಬೆಳೆದಿದ್ದರಿಂದ ದಿನನಿತ್ಯ ಓಡಾಡುವ ವಾಹನಗಳಿಗೆ ಹಾಗೂ ಪಾದಚಾರಿಗಳಿಗೆ ತುಂಬಾ ಸಮಸ್ಯೆ ಆಗುತ್ತಿರುವುದು.

- **ಪರಿಹಾರ:** ಬೀದರ್ ಜಿಲ್ಲೆ ಔರಾದ್ ತಾಲೂಕಿನ ಜಮಗಿಯಿಂದ ಸಂತಪೂರ್ ಸಂಗಮ ಕ್ರಾಸ್ ವರೆಗೆ ರಸ್ತೆಯ ಎರಡು ಬದಿಯಲ್ಲಿ ಬೆಳೆದಿರುವ ಮುಳ್ಳಿನ ಮರಗಳು ತೆರವುಗೊಳಿಸಲಾಗಿದ್ದು, ವಾಹನ ಸವಾರರಿಗೆ , ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಲಾಗಿದೆ.

ರಾಮುಲು ಅವರನ್ನು ಪಕ್ಷಕ್ಕೆ ಆಹ್ವಾನಿಸಿರುವ ಸುದ್ದಿಯೇ ಸುಳ್ಳು: ಡಿಕೆ | ರಾಮುಲು ಸೇರ್ಪಡೆ ಬಗ್ಗೆ ನನಗೆ ಯಾವುದೇ ಮಾಹಿತಿಯಿಲ್ಲ: ಸತೀಶ್

ರಾಮುಲು ಕೈ ಸೇರ್ಪಡೆ: ಕಾಂಗ್ರೆಸ್‌ನಲ್ಲಿ ಪರ-ವಿರೋಧ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಜನಾರ್ದನ ರೆಡ್ಡಿ ಹಾಗೂ ಶ್ರೀರಾಮುಲು ನಡುವಿನ ವೈಯಕ್ತಿಕ ಗದ್ದಲ ತಾರಕಕ್ಕೇರಿದ್ದು, ಇದು ಬಿಜೆಪಿ ಮಾತ್ರವಲ್ಲದೇ ಕಾಂಗ್ರೆಸ್‌ನಲ್ಲಿ ಹಲವು ರಾಜಕೀಯ ಬೆಳವಣಿಗೆ ಕಾರಣವಾಗಿದೆ.

ರೆಡ್ಡಿ, ರಾಮುಲು ನಡುವಿನ ಬಹಿರಂಗ ಗುದ್ದಾಟದಿಂದ ಬಿಜೆಪಿಯಲ್ಲಿ ಈಗಾಗಲೇ ಹಲವು ರೀತಿಯ ವಿವಾದ ನಡೆಯುತ್ತಿದೆ. ಈ ನಡುವೆ ಬಿಜೆಪಿಯಲ್ಲಿನ ಈ ವಿವಾದವನ್ನು ಬಳಸಿಕೊಂಡು, ಕಾಂಗ್ರೆಸ್ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನ ಮಾಡಿತ್ತು. ಇದರ ಭಾಗವಾಗಿ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ನಾಯಕರು ಶ್ರೀರಾಮುಲು ಅವರಿಗೆ 'ಬಹಿರಂಗ ಆಹ್ವಾನ'ವನ್ನು ನೀಡಿದ್ದರು. ಆದರೆ ಈ ಆಹ್ವಾನ ಇದೀಗ ವಿವಾದಕ್ಕೆ ಕಾರಣವಾಗಿದೆ.

ಜಾತಿ ಲೆಕ್ಕಾಚಾರದಲ್ಲಿ ಸತೀಶ್ ಜಾರಕಿಹೊಳಿ ಅವರಿಗೆ ಠಕ್ಕರ್ ಕೊಡಬೇಕು ಎನ್ನುವ ಕಾರಣಕ್ಕೆ ಶ್ರೀರಾಮುಲು ಅವರನ್ನು ಪಕ್ಷಕ್ಕೆ ಕರೆತರುವ ಲೆಕ್ಕಾಚಾರದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಬೆಂಬಲಿಗರಿದ್ದಾರೆ ಎನ್ನಲಾಗಿತ್ತು. ಆದರೆ ಪಕ್ಷದಲ್ಲಿ ಈ ನಡೆಗೆ ಭಾರಿ ವಿರೋಧ ವ್ಯಕ್ತವಾಗುತ್ತಿದ್ದಂತೆ, 'ಈ ಯೋಚನೆಯಿಲ್ಲ' ಎಂದು ಡಿ.ಕೆ. ಸ್ಪಷ್ಟಪಡಿಸಿದ್ದಾರೆ. ರಾಮುಲು ಅವರು ಬರುವುದರಿಂದ ವಾಲ್ಮೀಕಿ ಸಮುದಾಯದ ಮತಗಳು ಇನ್ನಷ್ಟು ಕಾಂಗ್ರೆಸ್ ಪಾಲಾಗಲಿದೆ ಎನ್ನುವುದು ಕೆಲ ನಾಯಕರ ಲೆಕ್ಕಚಾರವಾಗಿದ್ದು, ಅದಕ್ಕಾಗಿ ಶ್ರೀರಾಮುಲು ಅವರು ಪಕ್ಷಕ್ಕೆ ಬರಲಿ ಎಂದು ಆಹ್ವಾನಿಸುತ್ತಿದ್ದಾರೆ. ಆದರೆ ಇನ್ನೊಂದೆಡೆ ಕೆಲವರು ವಿರೋಧಿಸುತ್ತಿದ್ದಾರೆ.

ಶ್ರೀರಾಮುಲು ಪಕ್ಷ ಸೇರ್ಪಡೆಗೆ ಒಂದೊಂದು ರೀತಿಯ ಮಾತನಾಡುತ್ತಿರುವ ನಡುವೆ, ಸಚಿವ ಎಂ.ಬಿ. ಪಾಟೀಲ್ ಅವರು, 'ಜನಾರ್ದನ ರೆಡ್ಡಿ ಅವರಿಗೆ ಕಾಂಗ್ರೆಸ್ ಬಾಗಿಲು ತೆರೆದಿಲ್ಲ' ಎನ್ನುವ ಮೂಲಕ ಹೊಸ ಆಯಾಮಕ್ಕೆ ಅವಕಾಶ ನಾಂದಿ ಹಾಡಿದ್ದಾರೆ. ಈ ನಡುವೆ ಶ್ರೀರಾಮುಲು ಕಾಂಗ್ರೆಸ್ ಸೇರ್ಪಡೆಗೆ ವಿರೋಧಿಸದಿದ್ದರೂ, 'ಸತೀಶ್ ಜಾರಕಿಹೊಳಿ' ಅವರು ನಮ್ಮ ನಾಯಕರು ಎನ್ನುವ ಮೂಲಕ ಶ್ರೀರಾಮುಲು ಅವರ ದಾರಿಯನ್ನು ಕಠಿಣಗೊಳಿಸಿದ್ದಾರೆ.

ಬಾಯಿ ಚಪಲಕ್ಕೆ ರೆಡ್ಡಿ ಮಾತನಾಡಿದ್ದಾನೆ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ನನಗೆ ಶ್ರೀರಾಮುಲು ಅವರು ಸಿಕ್ಕಿಲ್ಲ. ನನ್ನ ಬಳಿ ಅವರು ಮಾತನಾಡಿಲ್ಲ. ಪಕ್ಷಕ್ಕೆ ಬರುವಂತೆ ಅವರಿಗೆ ಯಾವುದೇ ಆಹ್ವಾನ ನೀಡಿಲ್ಲ. ಈ ವಿಚಾರದಲ್ಲಿ ನನ್ನ ಹೆಸರನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ಟೀಕಿಸಿದರು. ರಾಮುಲು ಅವರನ್ನು ಡಿಕೆ ಸಂಪರ್ಕಿಸಿದ್ದಾರೆ ಎನ್ನುವ ಜನಾರ್ಧನ ರೆಡ್ಡಿ ಹೇಳಿಕೆಗೆ ಪ್ರತಿಕ್ರಿಯಿಸಿ, ಆತ ಬಾಯಿ ಚಪಲಕ್ಕೆ ಮಾತನಾಡುತ್ತಿದ್ದಾನೆ. ಆತ ಆ ಪಕ್ಷದಲ್ಲಿಯೇ ಇರಲಿಲ್ಲ. ಈಗ ಆ ಪಕ್ಷಕ್ಕೆ ಕಾಲಿಟ್ಟ, ಆ ಮನೆಯನ್ನೇ ಒಡೆಯುವ ಪ್ರಯತ್ನ ಮಾಡುತ್ತಿದ್ದಾನೆ. ನಾನು ಆತನ ಹೆಸರು ಹೇಳಿ ಅವನನ್ನು ಏಕೆ ದೊಡ್ಡ ಮನುಷ್ಯನನ್ನಾಗಿ ಮಾಡಲಿ? ಆತ ನನ್ನ ಹೆಸರು ತೆಗೆದುಕೊಂಡರೆ ದೊಡ್ಡವನಾಗುತ್ತಾನೆಯೇ? ನಾನು ಸಂಪರ್ಕದಲ್ಲಿ ಇರುವುದನ್ನು ಆತ ನೋಡಿದ್ದಾನೆಯೇ? ಆತನೇ ಯಾರ ಜೊತೆ ಸಂಪರ್ಕದಲ್ಲಿ ಇದ್ದ ಎಂಬುದನ್ನು ಈಗ ಚರ್ಚೆ ಮಾಡುವುದು ಬೇಡ. ನಾನು ಯಾವುದನ್ನು ಬಹಿರಂಗಗೊಳಿಸಲು ಹೋಗುವುದಿಲ್ಲ ಎಂದು ಕಿಡಿಕಾರಿದರು. ಈ ಹಿಂದೆ ಚುನಾವಣೆಗೆ ಮುಂಚಿತವಾಗಿ ಶ್ರೀರಾಮುಲು ಅವರನ್ನು ಪಕ್ಷಕ್ಕೆ ಆಹ್ವಾನಿಸಿದ್ದು ನಿಜ. ಆಗ ಅವರು ಬರುವುದಿಲ್ಲ, ಬಿಜೆಪಿಯಲ್ಲಿಯೇ ಉಳಿದುಕೊಳ್ಳುತ್ತೇನೆ ಎಂದು ಹೇಳಿದ್ದರು. ನಾನು ಆ ರೀತಿ ಸುಮಾರು 50 ಜನಕ್ಕೆ ಕೇಳಿದ್ದೇನೆ. ಶ್ರೀರಾಮುಲು ಅವರು ಈಗ ಕಾಂಗ್ರೆಸ್ ಪಕ್ಷಕ್ಕೆ ಬರಲು ಒಪ್ಪಿದರೆ ಎಂದು ಪ್ರಶ್ನಿಸಿದಾಗ, ಇದರ ಬಗ್ಗೆ ನಾನೇಕೆ ಸುಮ್ಮನೆ ಯೋಚನೆ ಮಾಡಲಿ ಎಂದರು.

ಬಿಜೆಪಿ ಮುಖಂಡ ಹಾಗೂ ಮಾಜಿ ಸಚಿವ ಶ್ರೀರಾಮುಲು ಅವರನ್ನು ಕಾಂಗ್ರೆಸ್‌ಗೆ ಕರೆತರುವ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ. ಪಕ್ಷದಲ್ಲಿರುವ ಸತೀಶ್ ಜಾರಕಿಹೊಳಿ ಅವರನ್ನು ಮೂಲೆಗುಂಪು ಮಾಡಲು ರಾಮುಲು ಅವರನ್ನು ಕಾಂಗ್ರೆಸ್‌ಗೆ ಸೆಳೆಯುವ ಯತ್ನ ನಡೆಯುತ್ತಿದೆ ಎಂಬ ಆರೋಪದ ಬಗ್ಗೆಯೂ ತಮಗೆ ಮಾಹಿತಿಯಿಲ್ಲ.

-ಡಾ.ಜಿ. ಪರಮೇಶ್ವರ, ಗೃಹ ಸಚಿವ

ಶ್ರೀರಾಮುಲು ಕಾಂಗ್ರೆಸ್ ಸೇರ್ಪಡೆ ವಿಚಾರದ ಬಗ್ಗೆ ಸ್ಪಷ್ಟವಾದ ಮಾಹಿತಿಯಿಲ್ಲ. ಪೂರ್ಣ ಪ್ರಮಾಣದಲ್ಲಿ ಏನು ಬೆಳವಣಿಗೆ ಆಗಿದೆ ಗೊತ್ತಿಲ್ಲ. ಟಿವಿಯಲ್ಲಿ ನೋಡಿದ್ದೇನಷ್ಟೇ. ಈ ಬಗ್ಗೆ ಬೆಂಗಳೂರಿನಲ್ಲಿ ನಾಯಕರೊಂದಿಗೆ ಚರ್ಚಿಸಿದ ಬಳಿಕ ಮಾತನಾಡುತ್ತೇನೆ.

- ಸತೀಶ್ ಜಾರಕಿಹೊಳಿ, ಸಚಿವ

ರೆಡ್ಡಿ ವಿರುದ್ಧ ಪಾಟೀಲ್ ವಾಗ್ದಾಳಿ

ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಎಂ.ಬಿ. ಪಾಟೀಲ್, ಜನಾರ್ದನ ರೆಡ್ಡಿ ಅವರು ಕಾಂಗ್ರೆಸ್ ಸೇರಲು ಸಿದ್ಧರಾಗಿರಬಹುದು. ಇದಕ್ಕಾಗಿ ಗೊಂದಲಕಾರಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಶ್ರೀರಾಮುಲು ಅವರನ್ನು ಕಾಂಗ್ರೆಸ್‌ಗೆ ಕರೆತರುವ ವಿಚಾರ ತಮಗೆ ಮಾಹಿತಿಯಿಲ್ಲ ಎಂದು ಸ್ಪಷ್ಟಪಡಿಸಿದರು. ನಮ್ಮ ಪಕ್ಷದಲ್ಲಿ ಸತೀಶ್ ಜಾರಕಿಹೊಳಿ ಹಿರಿಯ ನಾಯಕರು. ಅವರನ್ನು ಕಡೆಗಣಿಸಲು ಸಾಧ್ಯವಿಲ್ಲ. ಶ್ರೀರಾಮುಲು ಕಾಂಗ್ರೆಸ್ ಸೇರುವುದು, ಬಿಡುವುದು ಅವರಿಗೆ ಸೇರಿದ ವಿಚಾರ. ಈ ಬಗ್ಗೆ ನಮ್ಮ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುವುದು. ರಾಜ್ಯಮಟ್ಟದಲ್ಲಿ ಇಂಥ ಚರ್ಚೆಗಳು ನಡೆಯುವುದಿಲ್ಲ. ಆದರೆ ಜನಾರ್ದನ ರೆಡ್ಡಿ ತಮ ಪಕ್ಷದ ಒಳ ಜಗಳಕ್ಕಾಗಿ ಅನಗತ್ಯವಾಗಿ ಸತೀಶ್ ಜಾರಕಿಹೊಳಿ ಅವರ ಹೆಸರನ್ನು ಎಳೆದು ತಂದಿದ್ದಾರೆ ಎಂದು ಟೀಕಿಸಿದರು. ಜನಾರ್ದನ ರೆಡ್ಡಿ ಅವರದು ರಾಜಕೀಯ ಪ್ರೇರಿತ ಹೇಳಿಕೆ. ಬಹುಶಃ ಅವರೇ ಕಾಂಗ್ರೆಸ್ ಸೇರುತ್ತಿರಬಹುದು ಎಂದರು.

ಬಿಜೆಪಿ ನಾಯಕರು ನನ್ನೊಂದಿಗೆ ಇದ್ದಾರೆ: ಮಾಜಿ ಸಚಿವ ಬಿ.ಶ್ರೀರಾಮುಲು

ನಾನು ಬಿಜೆಪಿಯಲ್ಲೇ ಇರುತ್ತೇನೆ

ಬಳ್ಳಾರಿ: ನನ್ನ ಸ್ಟ್ಯಾಂಡ್ ವೇರಿ ಕ್ಲೀಯರ್ ನಾನು ಬಿಜೆಪಿಯಲ್ಲೇ ಇರ್ತೀನೆ ಎಂದು ಮಾಜಿ ಸಚಿವ ಬಿ. ರಾಮುಲು ಮತ್ತೊಮ್ಮೆ ಸ್ಪಷ್ಟ ಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ದೂರವಾಣಿ ಮೂಲಕ ನನ್ನೊಡನೆ ಮಾತಾಡಿದ್ರು. ಅವರಿಗೆ ಏನಾಗಿದೆ ಅನ್ನೋದನ್ನ ಎಲ್ಲವನ್ನೂ ವಿವರಿಸಿದ್ದೇನೆ. ಕೋರ್ ಕಮಿಟಿಯಲ್ಲಿ ರಾಧಾಮೋಹನ್ ಅಗರವಾಲ್ ನಡೆಸಿಕೊಂಡ ಬಗ್ಗೆಯೂ ಹೇಳಿದ್ದೇನೆ. ರಾಮುಲು ನಿನ್ನ ಪರವಾಗಿ ನಾವಿದ್ದೇವೆ ಯಾವುದೇ ಯೋಚನೆ ಮಾಡಬೇಡಿ ಎಂದಿದ್ದಾರೆ. ಮುಂದೆ ದೆಹಲಿಗೆ ಬರೋದಿದ್ರೆ ಬನ್ನಿ ಎಂದು ಹೇಳಿದ್ರು, ನಾನು ಬರ್ತೀನೆ ಎಂದು ಹೇಳಿದ್ದೀನೆ. ಹಿಂದುಳಿದ ಸಮುದಾಯದ ಪರವಾಗಿ ನೀವಿದ್ದೀರಿ ಯಾವಾಗಾದ್ರೂ ಬನ್ನಿ ಎಂದು ಹೇಳಿದ್ದಾರೆಂದರು.

ಇನ್ನೂ ರಾಜ್ಯ ಕೋರ್ ಕಮಿಟಿ ವಿಚಾರದ ಬಗ್ಗೆಯೂ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರಿಗೆ ಸುದ್ದಿ ಮುಟ್ಟಿಸಿದ್ದೇನೆ. ಅವರು ಸಹ ನಿಮ್ಮ ಪರವಾಗಿ ನಾವಿದ್ದೇವೆ ಎಂದಿದ್ದಾರೆ. ರಾಜಕಾರಣದಲ್ಲಿ ಕ್ರೆಡಿಬಿಲಿಟಿ ಬಹಳ ಮುಖ್ಯ ಅದನ್ನ ನಾವು ಕಳೆದುಕೊಳ್ಳಬಾರದು ಸ್ವಾಭಿಮಾನಕ್ಕೆ ತೊಂದ್ರೆ, ಆಗಿದ್ರಿಂದ ನಾನು ಮಾತನಾಡಿದ್ದೇನೆ ಇದೀಗ ನನಗೆ ಎಲ್ಲರೂ ಸಹಕಾರ ಕೊಟ್ಟಿದ್ದಾರೆ. ಅವರು ಇಟ್ಟಿರುವ ವಿಶ್ವಾಸಕ್ಕೆ ಚ್ಯುತಿ ಬಾರದಂತೆ ನಡೆದುಕೊಳ್ತೇನೆ ಒಂದು ದಿನ ನಿಗದಿ ಮಾಡಿಕೊಂಡು ದೆಹಲಿಗೆ ಹೋಗ್ತೇನೆ ಕಷ್ಟಕ್ಕೆ ಕೂಲಿ ಕೊಡಿ, ಅಗೌರವ ಮಾಡಬೇಡಿ, ಅಪಮಾನ ಮಾಡಬೇಡಿ, ಸ್ವಾಭಿಮಾನಕ್ಕೆ ಧಕ್ಕೆ ತರಬೇಡಿ ಎಂದು ಕೇಳ್ತೇನೆ ಎಂದರು.

ಗೌರವದಿಂದ ಕರೆದಿದ್ದಾರೆ

ಕಾಂಗ್ರೆಸ್ ನಾಯಕರ ವಿರುದ್ಧ ರಾಮುಲು ಸಾಫ್ಟ್ ಕಾರ್ನರ್ ಇದ್ದಂತೆ ತೋರುತ್ತಿದೆ. ಒಳ್ಳೆಯವರಿದ್ರೇನೇ ಕರೆಯೋದು ರಾಮುಲು ಒಳ್ಳೆಯವರಾಗಿದಕ್ಕೆ ಗೌರವದಿಂದ ಕಾಂಗ್ರೆಸ್‌ನವರು ನನ್ನನ್ನು ಕರೆದಿರುವುದು. ಕಾಂಗ್ರೆಸ್‌ನವರು ರಾಜಕೀಯ ಹೊರತುಪಡಿಸಿ, ಅಭಿಮಾನದಿಂದ ಮಾತನಾಡಿದ್ದಾರೆ. ಆಫರ್ ಬಂದಿರಲಿ, ಬರದಿರಲಿ ಕರೆದಿರಬಹುದು ಯಾರೇ ಕರೆದ್ರೂ ಹೋಗಲು ನನ್ನ ಮನಸ್ಥಿತಿ ಇರಬೇಕು. ನನಗೆ ಗೌರವ ಕೊಟ್ಟಿರುವ ಕಾಂಗ್ರೆಸ್ ನವರಿಗೆ ನಾನು ಕೃತಜ್ಞತೆ ಸಲ್ಲಿಸ್ತೇನೆಂದರು.

ಮನೆಯ ಗೇಟ್ ಬಂದ್ ಮಾಡಿದ ರಾಮುಲು



ಜನಾರ್ದನ ರೆಡ್ಡಿ ಶ್ರೀರಾಮುಲು ನಡುವೆ ದೋಸ್ತಿಯಲ್ಲಿ ಬಿರುಕು ಮೂಡಿದ ಹಿನ್ನೆಲೆ, ರೆಡ್ಡಿ ಮನೆ ಸಂಪರ್ಕದ ಗೇಟ್ ಅನ್ನು ರಾಮುಲು ಬಂದ್ ಮಾಡಿಸಿದ್ದಾರೆ. ಜನಾರ್ದನ ರೆಡ್ಡಿ ಮನೆಗೆ ಸಂಪರ್ಕಿಸುತ್ತಿದ್ದ ರಾಮುಲು ಮನೆಯ ಕಂಪೌಂಡ್‌ಗೆ ಗೇಟ್ ಹಾಕಲಾಗಿತ್ತು. ಇಬ್ಬರ ಸಂಬಂಧ ಹಳಸಿದ್ರಿಂದ ವಾಸ್ತು ಹೆಸರನಲ್ಲಿ ಗೇಟ್ ಬಂದ್ ಮಾಡಿಸಲಾಗಿದೆ. ಬಳ್ಳಾರಿ ನಗರದ ಅವಂಬಾವಿ ಯಲ್ಲಿ ಅಕ್ಕಪಕ್ಕದಲ್ಲೇ ಕೇವಲ 50 ಮೀಟರ್ ಅಂತರದಲ್ಲಿ ಜನಾರ್ದನರೆಡ್ಡಿ ಹಾಗೂ ಶ್ರೀರಾಮುಲು ಮನೆಗಳಿವೆ. ರಸ್ತೆಯಿಂದ ಬರಬಾರದು ಅನ್ನೋ ಕಾರಣಕ್ಕೆ ಕಂಪೌಂಡ್‌ಗೆ ಒಂದು ಗೇಟ್ ಮಾಡಿಸಲಾಗಿತ್ತು. ಇಬ್ಬರ ನಡುವೆ ವೈಮನಸ್ಸು ಆಗ್ತಿದಂತೆ ಇಟ್ಟಿಗೆ ಸಿಮೆಂಟ್ ಹಾಕಿ ಗೇಟನ್ನು ರಾಮುಲು ಬಂದ್ ಮಾಡಿಸಿದ್ದಾರೆ.

ಅಕ್ಕಿ ಮೆಲ್ಲುತ್ತ ನಿಂತ ಕಾಡಾನೆಗಳು ಬಂಡೀಪುರ: ಟ್ರಾಫಿಕ್ ಜಾಮ್

ಗುಂಡ್ಲುಪೇಟೆ: ತಾಲೂಕಿನ ಬಂಡೀಪುರ ಅಭಯಾರಣ್ಯದ ರಸ್ತೆಯಲ್ಲಿ ಆನೆಗಳು ನಿಲ್ಲುವ ಪ್ರಸಂಗ ಮರುಕಳಿಸುತ್ತಿದ್ದು, ಎರಡು ಕಾಡಾನೆಗಳು ರಸ್ತೆಯಲ್ಲಿ ಆಕಸ್ಮಿಕವಾಗಿ ಚೆಲ್ಲಿದ ಅಕ್ಕಿಯನ್ನು ಮೆಲ್ಲುತ್ತಿದ್ದರಿಂದ ಅರ್ಧ ತಾಸು ಟ್ರಾಫಿಕ್ ಜಾಮ್ ಉಂಟಾದ ಘಟನೆ ನಡೆದಿದೆ. ಮೈಸೂರು-ಊಟಿ ರಾಷ್ಟ್ರೀಯ ಹೆದ್ದಾರಿ-766 ಮೂಲಕ ಹಾದು ಹೋಗಿರುವ ತಾಲೂಕಿನ ಬಂಡೀಪುರ ರಸ್ತೆಯಲ್ಲಿ ಸಂಚರಿಸುತ್ತಿದ್ದ ಗೂಡ್ಸ್ ವಾಹನವೊಂದು ನುಚ್ಚಕ್ಕಿಯನ್ನು ಹೊತ್ತೊಯ್ಯುವಾಗ ಆಕಸ್ಮಿಕವಾಗಿ ರಸ್ತೆಯಲ್ಲಿ ಅಕ್ಕಿ ಚೆಲ್ಲಿದೆ. ಇದನ್ನು ಕಂಡ ಎರಡು ಕಾಡಾನೆಯು ಅಕ್ಕಿ ಮೆಲ್ಲುತ್ತಾ ರಸ್ತೆಯಲ್ಲೇ ನಿಂತ ಪರಿಣಾಮ ಸುಮಾರು ಅರ್ಧ ತಾಸಿಗಿಂತಲೂ ಅಧಿಕ ಸಮಯ ಟ್ರಾಫಿಕ್ ಜಾಮ್ ಆಗಿತ್ತು. ಇದರಿಂದ ಊಟಿ ಹಾಗೂ ಗುಂಡ್ಲುಪೇಟೆ ಕಡೆಗೆ ತೆರಳುತ್ತಿದ್ದ ವಾಹನಗಳು ಎರಡು ಕಿ.ಮೀ ದೂರದವರೆಗೂ ಸಾಲುಗಟ್ಟಿ ಎರಡು ಬದಿಯಲ್ಲೂ ನಿಂತಿದ್ದವು. ಈ ಕಾರಣ ಅಂತಾರಾಜ್ಯ ಸಂಚಾರ ಅಸ್ತವ್ಯಸ್ತ ಉಂಟಾಯಿತು.

ಭಾರತಾಂಬೆಗೆ ಅವಮಾನ: ಕರ್ನಾಟಕ ವಿಶ್ವವಿದ್ಯಾಲಯದಿಂದ ಪಠ್ಯ ಹಿಂದಕ್ಕೆ

ಧಾರವಾಡ: ಭಾರತಾಂಬೆಗೆ ಅವಮಾನ ಮಾಡುವ ಅಂಶಗಳನ್ನು ಒಳಗೊಂಡಿದೆ ಎಂಬ ಹಿನ್ನೆಲೆಯಲ್ಲಿ ಸಾರ್ವಜನಿಕರಿಂದ ತೀವ್ರ ವಿರೋಧಕ್ಕೆ ಒಳಗಾಗಿದ್ದ ಬೆಳಗು ಪಠ್ಯದಲ್ಲಿನ ಪಾಠವನ್ನು ಕರ್ನಾಟಕ ವಿಶ್ವವಿದ್ಯಾಲಯ ಹಿಂಪಡೆದಿದೆ.

ಕವಿವಿ 2024-25 ಸಾಲಿನ ಕನ್ನಡ ಸ್ನಾತಕ ಪದವಿ ಬಿ.ಎ ಪ್ರಥಮ ಸೆಮಿಸ್ಟರ್ ಪಠ್ಯಪುಸ್ತಕ ಬೆಳಗು -1 ರಲ್ಲಿ ಪ್ರಕಟವಾಗಿದ್ದ ಆಕ್ಷೇಪನಾರ್ಹ ಅಂಶಗಳಿಗೆ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಪಠ್ಯಪುಸ್ತಕದ ಲೇಖನ ಹಿಂಪಡೆಯಲು ಕವಿವಿ ತುರ್ತಾಗಿ ನಿರ್ಣಯ ಕೈಗೊಂಡಿದೆ.

ಬೆಳಗು-1 ರ ನಾಲ್ಕನೇ ಅಧ್ಯಾಯದ ರಾಷ್ಟ್ರೀಯತೆಯ ಆಚರಣೆಯ ಸುತ್ತ ಕುರಿತು ರಾಮಲಿಂಗಪ್ಪ ಟಿ. ಬೇಗೂರ ಅವರು ಬರೆದ ಲೇಖನದಲ್ಲಿ ಕೆಲವು ಆಕ್ಷೇಪನಾರ್ಹ ಅಂಶಗಳನ್ನು ಒಳಗೊಂಡಿವೆ ಎಂಬ ವಿಷಯ ಮಾಧ್ಯಮಗಳಲ್ಲಿ ಹಾಗೂ ಗಣ್ಯರಿಂದ ವ್ಯಕ್ತವಾದ ಹಿನ್ನೆಲೆಯಲ್ಲಿ ಕರ್ನಾಟಕ ವಿಶ್ವ ವಿದ್ಯಾಲಯ ಆಡಳಿತವು ಈ ಲೇಖನ ವನ್ನು ನಿಯಮಾನುಸಾರ ವಿವಿಧ ಪ್ರಾಧಿಕಾರಗಳ ಸಭೆ ಜರುಗಿಸಿ, ಘಟಕ-1 ರ ನಾಲ್ಕನೆಯ ಅಧ್ಯಾಯದ ಈ ಲೇಖನ ವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕೈಬಿಟ್ಟು ಬೆಳಗು-1ಪಠ್ಯ ಪುಸ್ತಕ ವನ್ನು ಮುಂದುವರಿಸಲು ನಿರ್ಧರಿಸಲಾಯಿತು.

ವಿಶ್ವವಾಣಿ

ಸಂಪಾದಕೀಯ

ಇಂಥ ವಿಕೃತಿಗೆ ಕೊನೆಯೆಂದು?

ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಮಾಜಿ ಸೈನಿಕನೊಬ್ಬ ತನ್ನ ಪತ್ನಿಯನ್ನು ಕೊಂದು ತುಂಡಾಗಿ ಕತ್ತರಿಸಿ, ಕುಕ್ಕರ್‌ನಲ್ಲಿ ಬೇಯಿಸಿ ಬಳಿಕ ಕೆರೆಗೆ ಎಸೆದಿರುವ ಘಟನೆ ಆಂಧ್ರಪ್ರದೇಶದ ಪ್ರಕಾಶಂ ಜಿಲ್ಲೆಯಿಂದ ವರದಿಯಾಗಿದೆ. ಪತ್ನಿ ಕಾಣೆಯಾಗಿದ್ದಾಳೆಂದು ಈತ ಸಂಬಂಧಿಕರಿಗೆ ತಿಳಿಸಿದ್ದನಂತೆ; ಆದರೆ ಅನುಮಾನಕ್ಕೊಳಗಾದ ಪೊಲೀಸರು ಈತನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ಪತ್ನಿಯನ್ನು ತಾನೇ ಕೊಲೆಮಾಡಿದ್ದಾಗಿ ಒಪ್ಪಿಕೊಂಡ ಎಂದು ತಿಳಿದುಬಂದಿದೆ. ಇನ್ನು, ಪತ್ನಿಯ ಮನೆಯಲ್ಲಿ ಪೆಟ್ರೋಲ್ ಸುರಿದುಕೊಂಡು ಪತಿಯು ಆತ್ಮಹತ್ಯೆ ಮಾಡಿಕೊಂಡ ಘಟನೆ ಬೆಂಗಳೂರಿನ ನಾಗರಬಾವಿಯಿಂದ ವರದಿಯಾಗಿದೆ. ಕೌಟುಂಬಿಕ ಕಲಹದಿಂದ ರೋಸತ್ತು ಆತ ಇಂಥ ಅತಿರೇಕದ ಕ್ರಮಕ್ಕೆ ಮುಂದಾದ ಎನ್ನಲಾಗಿದೆ. ಈ ಎರಡೂ ಪ್ರಕರಣಗಳಲ್ಲಿ ಜೀವನಾಶಕ್ಕೆ ಕಾರಣವಾಗಿರುವುದು 'ಕೌಟುಂಬಿಕ ಕಲಹ'. ಸಣ್ಣಪುಟ್ಟ ಜಗಳ, ತಕರಾರು, ಅಸಮಾಧಾನ, ನೋವು, ಅಸಹನೆ ಇಲ್ಲದ ಕುಟುಂಬಗಳನ್ನು ಹುಡುಕುವುದು ಕಷ್ಟ. ಜತೆಗೆ ಕೌಟುಂಬಿಕ ಕಲಹ ಎಂಬುದು ನಿನ್ನೆ-ಮೊನ್ನೆಯಷ್ಟೇ ಚಾಲ್ತಿಗೆ ಬಂದಿರುವ ಅಸಹಜ ಬೆಳವಣಿಗೆಯಲ್ಲ; ಯುಗಯುಗಗಳ ಇತಿಹಾಸದಲ್ಲಿ ಇದಕ್ಕೆ ಪುರಾವೆಗಳಿವೆ. ಆದರೆ ಇತ್ತೀಚಿನ ದಿನಗಳಲ್ಲಿ, ಕೌಟುಂಬಿಕ ಕಲಹದಿಂದಾಗಿ ಆತ್ಮಹತ್ಯೆಗೆ ಮುಂದಾಗುವ ಅಥವಾ ಸಂಗಾತಿಯ ಜೀವ ತೆಗೆಯುವ ಅನಪೇಕ್ಷಿತ ಪರಿಪಾಠಗಳು ಹೆಚ್ಚಾಗುತ್ತಿರುವುದು ಗಂಭೀರವಾಗಿ ಆಲೋಚಿಸಬೇಕಾದ ಸಂಗತಿ. ಇಂಥ ಅತಿರೇಕದ ವರ್ತನೆಗೆ ಕಾರಣವಾಗುವುದು ಒತ್ತಡವೇ, ಧಾವಂತದ ಜೀವನಶೈಲಿಯೇ, ಸಾಮಾಜಿಕ ಪರಿಸರವೇ ಅಥವಾ ಆ ಕ್ಷಣದ ದುಡುಕೇ ಎಂಬುದರ ಕುರಿತು ತಜ್ಞರು ವಿಶ್ಲೇಷಿಸಬೇಕಾಗಿದೆ. ದಶಕಗಳ ಹಿಂದಿನ ಕೌಟುಂಬಿಕ ಚಿತ್ರಣ ಹೀಗಿರುತ್ತಿರಲಿಲ್ಲ; ಎಂಥದೇ ಸವಾಲು ಅಥವಾ ಸಮಸ್ಯೆ ಎದುರಾದರೂ, ಒಂದೆಡೆ ಕುಳಿತು ನಿಧಾನವಾಗಿ ವಿಚಾರಮಾಡಿ ಪರಿಹಾರವನ್ನು ಕಂಡುಕೊಳ್ಳುವ ಪರಿಪಾಠವಿತ್ತು. ಅಥವಾ ಹಿಂದಿದ್ದ ಕೂಡುಕುಟುಂಬಗಳು, ಊರ ಪಂಚಾಯತಿ ಕಟ್ಟೆಯಂಥ ಸಜ್ಜಿಕೆಗಳು ಇಂಥ ಸಮಸ್ಯೆಗಳನ್ನು ಕೂಲಂಕಷವಾಗಿ ಆಲಿಸಿ, ಅಲ್ಲಲ್ಲೇ ಅವನ್ನು ಬಗೆಹರಿಸಿಬಿಡುತ್ತಿದ್ದವು ಹಾಗೂ ಕುಟುಂಬದಲ್ಲಿ ಸಹನೆ, ಹೊಂದಾಣಿಕೆಗಳಿಗೆ ಇರುವ ಮಹತ್ವವನ್ನು ಮನವರಿಕೆ ಮಾಡಿಕೊಡುತ್ತಿದ್ದವು. ದಿನಗಳೆದಂತೆ ಇಂಥ ಸಜ್ಜಿಕೆಗಳು ಮಾಯವಾಗುತ್ತಿವೆ. ಅದುವೇ ಇಂಥ ದುರಂತಗಳಿಗೆ ಒಂದು ಕಾರಣವಾಗಿರಬಹುದೇ?

ಸೊಂಪಾದಕೀಯ

ರಣಜಿಗರ ಪಾಡು

ಆಸ್ಟ್ರೇಲಿಯಾ ಜತೆಗಿನ ಕ್ರಿಕೆಟ್ ಸರಣಿಯಲ್ಲಿ ಭಾರತ ಸೋಲುಂಡು ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನಿಂದ ಹೊರಬಿದ್ದ ಮೇಲೆ ನಮ್ಮ ಚಾಂಪಿಯನ್ ಆಟಗಾರರ ವಿಶ್ವವೇ ಬದಲಾಗಿದೆ. ನಾಯಕ ರೋಹಿತ್ ಶರ್ಮಾ ಅಂತೂ ಇಡೀ ಟೂರ್ನಿಯಲ್ಲಿ ವಿಫಲರಾದರು. ಇನ್ನು ಕೊಹ್ಲಿ ಕೂಡಾ ಒಂದು ಸೆಂಚುರಿ ಬಿಟ್ಟರೆ ಇನ್ನೇನೂ ಗಳಿಸಲಿಲ್ಲ. ಹಾಗಾಗಿ ಭಾರತ ತಂಡದ ಆಯ್ಕೆಗಾರರು, ಹಿರಿಯ ಆಟಗಾರರ ಮೇಲೆ ಕೆಂಗಣ್ಣು ಬೀರಿದ್ದು, ಅವರಿಗೆ ವಿಶ್ರಾಂತಿ ನೀಡುವ ಬದಲು ರಣಜಿ ಪಂದ್ಯಗಳನ್ನು ಆಡುವಂತೆ ತಾಕೀತು ಮಾಡಿದ್ದಾರೆ. ಇದರ ಫಲವಾಗಿ ದೇಸಿ ಕ್ರಿಕೆಟ್ ಅಂಗಳದಲ್ಲಿ ನಮ್ಮ ಹಿರಿಯ ಸ್ಟಾರ್‌ಗಳು ಬ್ಯುಸಿ ಆಗಿದ್ದಾರೆ. ಈ ಪಟ್ಟಿಯಲ್ಲಿ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಅಷ್ಟೇ ಅಲ್ಲದೆ ಅಜಿಂಕ್ಯಾ ರಹಾನೆ, ಶ್ರೇಯಸ್ ಅಯ್ಯರ್ ಮತ್ತು ಆಸ್ಟ್ರೇಲಿಯಾ ಪ್ರವಾಸದ ತಂಡದಲ್ಲಿದ್ದ ರಿಷಬ್ ಪಂತ್, ಯಶಸ್ವಿ ಜೈಸ್ವಾಲ್ ಕೂಡಾ ಇದ್ದಾರೆ. ಈಗಾಗಲೇ ಇವರೆಲ್ಲರ ರಣಜಿ ಅಗ್ನಿಪರೀಕ್ಷೆ ಶುರು ಆಗಿದ್ದು, ಇದರಲ್ಲಿ ರಿಷಬ್ ಪಂತ್, ರೋಹಿತ್ ಶರ್ಮಾ, ರಹಾನೆ, ಶ್ರೇಯಸ್ ಅಯ್ಯರ್, ಜೈಸ್ವಾಲ್ ಮತ್ತೊಮ್ಮೆ ವೈಫಲ್ಯದ ಹಾದಿ ತುಳಿದಿದ್ದಾರೆ. ಕಳಪೆ ಮೊತ್ತಕ್ಕೆ ಔಟ್ ಆಗುವ ಮೂಲಕ ರಣಜಿ ಪಂದ್ಯಗಳಲ್ಲೂ ತಮ್ಮ ಪ್ರತಿಭೆ ತೋರಿಸಲು ಇವರಿಗೆ ಸಾಧ್ಯ ಆಗಿಲ್ಲ. ಇನ್ನು ವಿರಾಟ್ ಕೊಹ್ಲಿ ಅವರ ಅಗ್ನಿಪರೀಕ್ಷೆ ಬಾಕಿಯಿದೆ. ಆದರೆ ರಾಷ್ಟ್ರೀಯ ತಂಡದಲ್ಲಿ ತಮ್ಮ ಸ್ಥಾನ ಗಟ್ಟಿ ಮಾಡಿಕೊಂಡು, ದೇಸಿ ಕ್ರಿಕೆಟ್‌ನತ್ತ ತಲೆಯೂ ಹಾಕದೆ ಮಲಗೋ ಈ ಹಿರಿಯ ಆಟಗಾರರು, ಸದ್ಯಕ್ಕೆ ರಣಜಿ ಪಂದ್ಯಗಳಲ್ಲಿ ತಮ್ಮ ಜೂನಿಯರ್ ಆಟಗಾರರ ನಾಯಕತ್ವದಲ್ಲಿ ಆಡ್ತಾ ಇರೋದು ಸೋಷಿಯಲ್ ಮೀಡಿಯಾಗಳಲ್ಲಿ ಟ್ರೋಲ್ ಆಗುತ್ತಿದೆ. ನಮ್ಮ ಹಳೆಯ ಸಿನಿಮಾಗಳಲ್ಲಿ, ಒಂದಾನೊಂದು ಕಾಲದಲ್ಲಿ ಸಾಹುಕಾರರಾಗಿ ಮೆರೆದು ನಂತರ ಎಲ್ಲವನ್ನೂ ಕಳೆದುಕೊಂಡು ಮದುವೆ ಮನೆಯಲ್ಲಿ ಮುಖ ಮುಚ್ಚಿಕೊಂಡು ಊಟದ ಸಾಲಿನಲ್ಲಿ ಕುಳಿತಿರೋ ನಾಯಕನೊಂದಿಗೆ ಈ ಆಟಗಾರರನ್ನು ಹೋಲಿಸಿ ಟ್ರೋಲ್ ಮಾಡಲಾಗುತ್ತಿದೆ. ಒಟ್ಟಿನಲ್ಲಿ ನಿನ್ನೆ ಮೊನ್ನೆ ಜೀನಿಯಸ್ ಎನಿಸಿಕೊಂಡಿದ್ದ ಈ ಆಟಗಾರರರು ಈ ಜೂನಿಯರ್ ಲೆವೆಲ್‌ನಲ್ಲಿ ಆಡ್ತಾ ಇರೋದು ಮಾತ್ರ ಆಸ್ಟ್ರೇಲಿಯಾ ತಂಡ ಕೊಟ್ಟ ಗಿಫ್ಟ್ ಎಂದೇ ಪರಿಗಣಿಸಲಾಗುತ್ತಿದೆ.

ಸಂಪಾದಕರ ಸದ್ಯಶೋಧನೆ

ಇಲ್ಲಿ ಸಕ್ರಮ, ಅಲ್ಲಿ ಅಕ್ರಮ

ಜಪಾನ್ ಒಂದು ವಿಶಿಷ್ಟ ಸಂಸ್ಕೃತಿಯ ನಾಡಾಗಿದ್ದು, ಅಲ್ಲಿನ ದೈನಂದಿನ ಜೀವನ, ಕಾನೂನುಗಳು ಮತ್ತು ಸಂಪ್ರದಾಯಗಳು ಅನೇಕರಿಗೆ ಹೊಸ ಅನುಭವವನ್ನು ನೀಡಬಹುದು. ಬೇರೆ ದೇಶಗಳಲ್ಲಿ ವಿಚಿತ್ರ, ಅಕ್ರಮ ಅಥವಾ ಕಾನೂನುಬಾಹಿರ ಎಂದು ಅನಿಸಿಕೊಂಡಿದ್ದು ಜಪಾನಿನಲ್ಲಿ ಸಹಜ, ಸಕ್ರಮ ಅಥವಾ ಸ್ವೀಕಾರಾರ್ಹ ಅಂತ ಅನಿಸಿಕೊಂಡಿರುವುದುಂಟು. ಉದಾಹರಣೆಗೆ, ಬಹುತೇಕ ದೇಶಗಳಲ್ಲಿ ಯಾರೂ ಸಾರ್ವಜನಿಕ ಸ್ಥಳಗಳಲ್ಲಿ ಮದ್ಯಪಾನ ಮಾಡುವುದಿಲ್ಲ, ಕೆಲವು ದೇಶಗಳಲ್ಲಿ ಅದು ಕಾನೂನುಬಾಹಿರ ಚಟುವಟಿಕೆ ಎಂದು ಪರಿಗಣಿತವಾಗಿದೆ. ಆದರೆ ಜಪಾನಿನಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಮದ್ಯಪಾನ (alcohol consumption) ಮಾಡಬಹುದು. ಕಾನೂನಿನ ಪ್ರಕಾರ ಅದು ತಪ್ಪಲ್ಲ. ಸಾರ್ವಜನಿಕ ಉದ್ಯಾನಗಳಲ್ಲಿ, ರಸ್ತೆಗಳಲ್ಲಿ ಅಥವಾ ರೈಲು ನಿಲ್ದಾಣಗಳಲ್ಲಿ ಸಹ ಜನರು ಮದ್ಯಪಾನ ಮಾಡಬಹುದು. ಇದನ್ನು ಅಲ್ಲಿನ ಸಮಾಜ ಸಾಮಾನ್ಯ ಚಟುವಟಿಕೆಯಾಗಿ ನೋಡುತ್ತದೆ. ಆದರೆ ವಿಶ್ವದ ಅನೇಕ ರಾಷ್ಟ್ರಗಳಲ್ಲಿ, ವಿಶೇಷವಾಗಿ ದಕ್ಷಿಣ ಕೊರಿಯಾ ಮತ್ತು ಅರಬ್ ದೇಶಗಳಲ್ಲಿ, ಸಾರ್ವಜನಿಕವಾಗಿ ಮದ್ಯಪಾನ ಮಾಡುವುದನ್ನು ನಿಷೇಧಿಸಲಾಗಿದೆ. ಜಪಾನಿನಲ್ಲಿ ಬೀದಿ ಬದಿಯಲ್ಲಿಯೇ ಸಾಕಿ (Brewed alcohol) ಅಥವಾ ಬಿಯರ್‌ಗಳನ್ನು ವೆಂಡಿಂಗ್ ಮಷಿನ್‌ಗಳ ಮೂಲಕ ಮಾರುವುದು ಸಾಮಾನ್ಯ. ಈ ವೆಂಡಿಂಗ್ ಮಷಿನ್‌ಗಳು ಎಲ್ಲೆಡೆಯೂ ಸುಲಭವಾಗಿ ಲಭ್ಯ. ಆದರೆ ಇಂಥ ಮಷಿನ್‌ಗಳ ಮೂಲಕ ಮದ್ಯ ಮಾರಾಟವು ಅನೇಕ ದೇಶಗಳಲ್ಲಿ ಅಕ್ರಮವಾಗಿದೆ, ಜಪಾನಿನಲ್ಲಿ ಮಾತ್ರ ಇದಕ್ಕೆ ಯಾವ ನಿರ್ಬಂಧವೂ ಇಲ್ಲ. ಜಪಾನಿನಲ್ಲಿ ಪಚಿಂಕೋ (Pachinko) ಎಂಬ ಒಂಥರಾ ಜೂಜಿನ ಆಟವಿದೆ. ಅದನ್ನು ಆಟೋಮ್ಯಾಟಿಕ್ ಗೇಮ್ ಮಷಿನ್‌ಗಳಲ್ಲಿ ಆಡುವುದು ಬಹಳ ಜನಪ್ರಿಯ. ಪಚಿಂಕೋ ಮಷೀನನ್ನು ಕಾನೂನಾತ್ಮಕವಾಗಿ ಸ್ಥಾಪಿಸಲಾಗಿದೆ. ಅಸಲಿಗೆ ಇದು ಗ್ಯಾಂಬಲಿಂಗ್ ಅಂದರೆ ಜೂಜು. ಅನೇಕ ದೇಶಗಳಲ್ಲಿ ಇದನ್ನು ನಿಷೇಧಿಸಲಾಗಿದೆ. ಆದರೆ ಜಪಾನಿನಲ್ಲಿ ಈ ಮಷೀನನ್ನು ಎಲ್ಲೆಡೆ ಕಾಣಬಹುದು. ಜಪಾನಿನಲ್ಲಿ ದನದ ಕಚ್ಚಾ ಮಾಂಸ (raw beef), ಕುದುರೆ ಕಚ್ಚಾ ಮಾಂಸ ಮತ್ತು ಕಚ್ಚಾ ಮೀನು (sashimi) ಮಾಂಸ ಸೇವಿಸುವುದು ಸಾಮಾನ್ಯ. ಈ ಬಗೆಯ ಆಹಾರ ಪದ್ಧತಿಗಳನ್ನು ಜಪಾನ್‌ನಲ್ಲಿ ವೈಭವೀಕರಿಸಿದ್ದಾರೇನೋ ಎಂದು ಅನಿಸುವುದುಂಟು. ಆದರೆ ಅನೇಕ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕಚ್ಚಾ ಮಾಂಸ ಸೇವನೆಯನ್ನು ನಿಯಂತ್ರಿಸಲಾಗಿದೆ ಅಥವಾ ನಿಷೇಧಿಸಲಾಗಿದೆ. ಜಪಾನಿನಲ್ಲಿ ಹಸ್ತಿ (ಐವರಿ) ದಂತ ಕಲಾಕೃತಿ ಅಥವಾ ಉತ್ಪನ್ನಗಳನ್ನು ಬಳಸುವುದನ್ನು, ಮಾರಾಟ ಮಾಡುವುದನ್ನು ಕೆಲವೊಂದು ವಿನಾಯತಿ ನಿಯಮಗಳ ಮೂಲಕ ಅನುಮತಿ ನೀಡಲಾಗಿದೆ. ಇದು ಜಪಾನಿನ ಸಂಸ್ಕೃತಿಯ ಭಾಗವಾಗಿದೆ. ಆದರೆ ಅನೇಕ ದೇಶಗಳಲ್ಲಿ, ದಂತ ಕಲಾಕೃತಿಗಳ ಮಾರಾಟವು ಅಕ್ರಮವಾಗಿದೆ. ಏಕೆಂದರೆ ಇದು ಪ್ರಾಣಿ ಸಂರಕ್ಷಣೆ ನೀತಿಗಳಿಗೆ ವಿರುದ್ಧವಾಗಿದೆ. ಹಾಗೆಯೇ ಜಪಾನಿನಲ್ಲಿ ಪೋಲ್ ಡ್ಯಾನ್ಸಿಂಗ್ ಅನ್ನು ಜನರು ಸಾಮಾನ್ಯ ಮನರಂಜನೆಯ ರೂಪವಾಗಿ ಕಾಣುತ್ತಾರೆ. ಅನೇಕ ದೇಶಗಳಲ್ಲಿ ಇದು ಅಸಭ್ಯ ಹುಟ್ಟಿಸುವ ಕ್ರಿಯೆ. ಆದರೆ ಜಪಾನಿನಲ್ಲಿ ಇದು ಸಂಪೂರ್ಣ ಕಾನೂನುಬದ್ಧ. ಅಲ್ಲಿ ಪೋಲ್ ಡಾನ್ಸಿಂಗ್‌ಗೆ ಜನ ಕುಟುಂಬ ಸಮೇತ ಹೋಗುವುದುಂಟು. ಜತೆಗೆ ಪ್ರವಾಸಿಗರಿಗೂ ಮುಕ್ತವಾಗಿದೆ. ಜಪಾನಿನಲ್ಲಿ ಹಲವು ಅಂಗಡಿಗಳಲ್ಲಿ ಕಾಮೋತ್ತೇಜಕ ವಸ್ತುಗಳನ್ನು ಮುಕ್ತವಾಗಿ ಮಾರಾಟ ಮಾಡಬಹುದು. ಇದು ಯುರೋಪಿನ ಹಲವು ದೇಶಗಳ ಸಂಸ್ಕೃತಿಗೆ ಸಂಪೂರ್ಣ ವಿರುದ್ಧ. ಅನೇಕ ದೇಶಗಳಲ್ಲಿ ಹನ್ನೆರಡು ವರ್ಷದೊಳಗಿನ ಅಪ್ರಾಪ್ತ ವಯಸ್ಕ ವ್ಯಕ್ತಿಗಳನ್ನು ಚಿತ್ರಿಸುವ ಅಥವಾ ಪ್ರತಿನಿಧಿಸುವ ಯಾವುದೇ ಮಾಧ್ಯಮ ಅಕ್ರಮ. ಆದರೆ ಜಪಾನಿನ ಮಾಂಗಾ ಮತ್ತು ಅನಿಮೆಯಲ್ಲಿ, ಕೆಲವು ಕಥಾ ಹಂದರಗಳು ವಿವಾದಾತ್ಮಕವಾಗಿ ಕಾಣಬಹುದು. ಇದನ್ನು ಜಪಾನ್‌ನಲ್ಲಿ ಸಹಜವೆಂದು ಪರಿಗಣಿಸಲಾಗುತ್ತದೆ, ಆದರೆ ಇತರ ದೇಶಗಳಲ್ಲಿ ಇದು ಕಾನೂನುಬಾಹಿರ.

ಸುಭಾಷ್‌ಚಂದ್ರ ಬೋಸ್ ಸಂಗ್ರಹಿಸಿದ್ದ ಸಂಪತ್ತೇನಾಯಿತು?

ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
camohanbn@gmail.com

ಭಾರತದಿಂದ ಬ್ರಿಟಿಷರನ್ನು ಓಡಿಸಲು ಕ್ರಾಂತಿಮಾರ್ಗವೇ ಸೂಕ್ತವೆಂದರಿತಿದ್ದ ಸುಭಾಷ್‌ಚಂದ್ರ ಬೋಸರು, ಭಾರತದಾಚೆಗಿನ ಬ್ರಿಟಿಷರ ವೈರಿಗಳ ಸಹಾಯ ಪಡೆಯಲು ನಿರ್ಧರಿಸಿದ್ದರು. ಜಪಾನ್, ಜರ್ಮನಿ, ವಿಯೆಟ್ನಾಂ, ಸಿಂಗಾಪುರ, ಇಟಲಿ, ಆಸ್ಟ್ರಿಯಾ ಹಾಗೂ ರಷ್ಯಾ ದೇಶಗಳ ನೆರವು ಪಡೆದು, ಬ್ರಿಟಿಷ್ ಆಡಳಿತದಲ್ಲಿ 2ನೇ ಮಹಾಯುದ್ಧದಲ್ಲಿ ಸೆರೆ ಸಿಕ್ಕ ಅಲ್ಲಿನ ಭಾರತೀಯ ಯುದ್ಧಖೈದಿಗಳ ಸಹಾಯದಿಂದ ದೊಡ್ಡದೊಂದು ಸೈನ್ಯವನ್ನು ಕಟ್ಟಿ, ಬ್ರಿಟಿಷರ ಮೇಲೆ ಆಕ್ರಮಣ ಮಾಡುವ ಯೋಜನೆಯನ್ನು ಅವರು ತಯಾರಿಸಿದ್ದರು.

ದೊಡ್ಡ ಸೈನ್ಯವನ್ನು ಕಟ್ಟುವುದು ಸುಲಭವಲ್ಲ. ಇತ್ತ ಭಾರತದಲ್ಲಿ ನೆಹರು ನೇತೃತ್ವದ ಕಾಂಗ್ರೆಸ್ ಪಕ್ಷವು ಸುಭಾಷರ ಕ್ರಾಂತಿಕಾರಿ ಚಿಂತನೆಗೆ ಎಳ್ಳಷ್ಟೂ ನೆರವಾಗಲಿಲ್ಲ. ಬದಲಿಗೆ ಸುಭಾಷರ ವಿರುದ್ಧ ನೆಹರು ಹೇಳಿಕೆಗಳನ್ನು ಕೊಟ್ಟಿದ್ದರು. ಆದರೆ ಸುಭಾಷರ ಅನುಯಾಯಿಗಳು ನೆಹರುರ ಮಾತಿಗೆ ಸೊಪ್ಪುಹಾಕುತ್ತಿರಲಿಲ್ಲ. ಸುಭಾಷರು ಭಾರತದಲ್ಲಿದ್ದುಕೊಂಡು, ಬ್ರಿಟಿಷರ ವಿರುದ್ಧ ಯುದ್ಧ ಮಾಡಲು ಬೇಕಿದ್ದ ಸಂಪನ್ಮೂಲಗಳನ್ನು ಸಂಗ್ರಹಿಸುವುದು ಕಷ್ಟವಾಗಿತ್ತು. ಬ್ರಿಟಿಷರ ಕಣ್ಗಾವಲು ಹಾಗೂ ಅವರಿಗೆ ಕಾಂಗ್ರೆಸ್ ನೀಡುತ್ತಿದ್ದ ಪರೋಕ್ಷ ಬೆಂಬಲದಿಂದಾಗಿ ಸುಭಾಷರು ದೇಶಬಿಟ್ಟು ಹೊರಗಿನಿಂದ ಬ್ರಿಟಿಷರ ಮೇಲೆ ಆಕ್ರಮಣ ಮಾಡುವಂಥ ಪರಿಸ್ಥಿತಿ ಎದುರಾಗಿತ್ತು. ಭಾರತದ ಹೊರಗೆ ದೊಡ್ಡ ಸೈನ್ಯವನ್ನು ಕಟ್ಟಿ ಬ್ರಿಟಿಷರ ವಿರುದ್ಧ ತಿರುಗಿಬೀಳಲು ಸುಭಾಷರಿಗೆ ದೊಡ್ಡ ಮಟ್ಟದ ಆರ್ಥಿಕ ಸಂಪನ್ಮೂಲದ ಅವಶ್ಯಕತೆಯಿತ್ತು. ಇದನ್ನು ಕ್ರೋಡೀಕರಿಸಲು ಅವರು ಭಾರತೀಯರಿಗೆ ಬಹಿರಂಗವಾಗಿ ಕರೆ ಕೊಟ್ಟಿದ್ದರು ಹಾಗೂ ಸ್ವತಃ ಜನರ ಮುಂದೆ ಕೈಚಾಚುವ ಮೂಲಕ ಹಣಸಂಗ್ರಹಕ್ಕೆ ಮುಂದಾಗಿದ್ದರು.

ಬ್ರಿಟಿಷರ ಗೃಹಬಂಧನದಿಂದ ತಪ್ಪಿಸಿಕೊಂಡು ಜರ್ಮನಿ-ಜಪಾನ್ ದೇಶಗಳ ಸಹಾಯ ಪಡೆಯಲು, ಹಿಟ್ಲರ್ ಮತ್ತು ಜಪಾನಿ ನಾಯಕರನ್ನು ಭೇಟಿಮಾಡಿದ ಬೋಸರು, 'ಇಂಡಿಯನ್ ನ್ಯಾಷನಲ್ ಆರ್ಮಿ' ಕಟ್ಟಲು ಬೇಕಿದ್ದ ಭಾರತೀಯ ಯುದ್ಧಖೈದಿಗಳನ್ನು ಹಸ್ತಾಂತರಿಸುವಂತೆ ಅವರನ್ನು ಕೇಳಿದರು. ನಂತರ ಬೋಸರು ಸದರಿ ಯುದ್ಧಖೈದಿಗಳಲ್ಲಿ ಆತ್ಮಸ್ಥೈರ್ಯ ತುಂಬಿ, ಭಾರತೀಯ ರಾಷ್ಟ್ರೀಯ ಸೈನ್ಯವನ್ನು ಕಟ್ಟುವಲ್ಲಿ ಯಶಸ್ವಿಯಾಗಿದ್ದರು. 1943ರಲ್ಲಿ ಸುಭಾಷರು, ಜಪಾನ್ ಹಿಡಿತದಲ್ಲಿದ್ದಂಥ ಮಲೇಷ್ಯಾ ದೇಶದ ಪೆನಾಂಗ್ ಕಡಲ ನಗರಕ್ಕೆ ಬಂದಿದ್ದರು. ಇಂಡಿಯನ್ ನ್ಯಾಷನಲ್ ಆರ್ಮಿಯ ಸೈನಿಕರಿಗೆ ಈ ನಗರದಲ್ಲಿ ಬಹುದೊಡ್ಡ ಸ್ವಾಗತ ಸಿಕ್ಕಿತ್ತು. ಈ ನಗರದಲ್ಲಿ ತಮಿಳುನಾಡಿನ ಜನ ಹೆಚ್ಚಾಗಿ ವಾಸಿಸುತ್ತಿದ್ದರು, ಅಲ್ಲಿನ ದೊಡ್ಡ ವ್ಯವಹಾರಗಳಲ್ಲಿ ಅವರ ಪಾಲು ಬಹಳಷ್ಟಿತ್ತು. ಸುಭಾಷರ ಸೇನೆಗೆ ಅಗತ್ಯವಿದ್ದ ಧನಸಹಾಯವನ್ನು 'ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್' ಸಂಸ್ಥೆಯಡಿ ಮಾಡಲಾಗುತ್ತಿತ್ತು. ಬ್ರಿಟಿಷರ ವಿರುದ್ಧ ಯುದ್ಧಮಾಡಿ ಗೆಲ್ಲುವುದೇ ಇಬ್ಬರದೂ ಉದ್ದೇಶವಾಗಿತ್ತು. ಅಷ್ಟು ಹೊತ್ತಿಗೆ ಬೋಸರ ಮಾರ್ಗದರ್ಶನದಲ್ಲಿ 'ಇಂಡಿಯನ್ ನ್ಯಾಷನಲ್ ಆರ್ಮಿ'ಯ ಒಟ್ಟಾರೆ ಸೈನಿಕರ ಸಂಖ್ಯೆ 40,000 ದಾಟಿತ್ತು. 1943ರಲ್ಲಿ ಪೆನಾಂಗ್ ನಗರದಲ್ಲಿ ಜರ್ಮನಿಯ ಸುಮಾರು 17 ಸಬ್‌ಮರೀನ್‌ಗಳಿದ್ದವು. ಇವು 'ಮಾನ್ಸೂನ್ ಗ್ರೂಪ್' ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಅಲ್ಲಿನ ರಹಸ್ಯ ಸಭೆಯೊಂದರಲ್ಲಿ ಸುಭಾಷರು ಜಪಾನ್ ಮತ್ತು ಜರ್ಮನಿಯ ಸೇನಾಧಿಕಾರಿಗಳನ್ನು ಭೇಟಿಯಾಗಿದ್ದರು. ವಿಯೆಟ್ನಾಂ ದೇಶದ ದೊಡ್ಡ ನಗರವಾದ ಸೈಗಾನ್‌ನಲ್ಲಿ ತಮಿಳುನಾಡಿನ ಚೆಟ್ಟಿಯಾರ್‌ಗಳು ಹೆಚ್ಚಾಗಿ ವಾಸಿಸುತ್ತಿದ್ದರು. ಇವರು ಬೋಸರ ಸೈನ್ಯಕ್ಕೆ ದೊಡ್ಡ ಮಟ್ಟದಲ್ಲಿ ಧನಸಹಾಯ ಮಾಡಿದ್ದರು, ಚಿನ್ನ-ವಜ್ರ-ವೈಡೂರ್ಯಗಳನ್ನು ನೀಡಿದ್ದರು ಹಾಗೂ ಆಗ್ನೇಯ ಏಷ್ಯಾದ ಇತರ ರಾಷ್ಟ್ರಗಳಲ್ಲಿದ್ದಂಥ ಚೆಟ್ಟಿಯಾರ್‌ಗಳಿಂದಲೂ ಸಂಪತ್ತನ್ನು ಸಂಗ್ರಹಿಸಿ ಸುಭಾಷರಿಗೆ ನೀಡಿದ್ದರು.

1945ರ ಯುದ್ಧದಲ್ಲಿ ಸೋತ ನಂತರ ಜಪಾನ್ ತನ್ನ ತೆಕ್ಕೆಯಲ್ಲಿದ್ದ ಆಗ್ನೇಯ ಏಷ್ಯಾ ದೇಶಗಳನ್ನು ಬಿಟ್ಟುಕೊಡಬೇಕಾದ ಪರಿಸ್ಥಿತಿ ಎದುರಾಗಿತ್ತು. ಅದಕ್ಕೂ ಮೊದಲು ಅಲ್ಲೆಲ್ಲ ತಾನು ಕ್ರೋಡೀಕರಿಸಿದ್ದ ಸಂಪತ್ತನ್ನು ತನ್ನಲ್ಲಿಗೆ ರವಾನಿಸಲು ಜಪಾನ್ ತೀರ್ಮಾನಿಸಿತ್ತು. ಯುದ್ಧದ ವೇಳೆ ಜಪಾನ್ ದೊಡ್ಡ ದೊಡ್ಡ ನಗರಗಳನ್ನು ವಶಪಡಿಸಿಕೊಂಡ ನಂತರ ಅಲ್ಲಿ ಸಿಕ್ಕಿದ ಚಿನ್ನಾಭರಣಗಳನ್ನು ಒಂದೆಡೆ ಕಲೆಹಾಕಿತ್ತು. ಅವನ್ನು ಕರಗಿಸಿ ಗಟ್ಟಿಗಳನ್ನಾಗಿ ಮಾಡಲು ಇಂಡಿಯನ್ ನ್ಯಾಷನಲ್ ಆರ್ಮಿಯ ನೆರವನ್ನು ಜಪಾನ್ ಕೇಳಿತ್ತು. ಕರಗಿಸಿದ ಈ ಚಿನ್ನವನ್ನು, ಬ್ರಿಟಿಷ್ ಸೈನ್ಯವು ಆಗ್ನೇಯ ಏಷ್ಯಾದ ದೇಶಗಳೆಡೆಗೆ ಮುನ್ನುಗ್ಗುವ ಮುನ್ನ ಜಪಾನಿಗೆ ಸಾಗಿಸಬೇಕಿತ್ತು.

ಆಜಾದ್ ಹಿಂದ್ ಸರಕಾರದ ವಿತ್ತ ಸಚಿವರಾಗಿದ್ದ ಜನರಲ್ ಎ.ಸಿ.ಚಟರ್ಜಿಯವರು 1945ರ ಆಗಸ್ಟ್ 20ರಂದು, ಸುಭಾಷರಿಗೆ ನೆರವಿನ ರೂಪದಲ್ಲಿ ಬಂದಿದ್ದ ಚಿನ್ನಾಭರಣಗಳನ್ನು ಕರಗಿಸಿ ಸುಮಾರು 150 ಕೆ.ಜಿ.ಯಷ್ಟು ಗಟ್ಟಿಯಾಗಿಸಿದ್ದರು. ಆದರೆ ಆ ಚಿನ್ನವು ಎಲ್ಲಿಗೆ ಹೋಯಿತೆಂಬುದು ಇಂದಿಗೂ ಯಾರಿಗೂ ತಿಳಿದಿಲ್ಲ. ಕೆಲವರ ಪ್ರಕಾರ, ಅಲ್ಪ-ಸ್ವಲ್ಪ ಚಿನ್ನದ ಗಟ್ಟಿಯನ್ನು ಫ್ರೆಂಚರು ವಶಪಡಿಸಿಕೊಂಡಿದ್ದರಂತೆ. ನಂತರ ಬ್ರಿಟಿಷರು ಈ ಚಿನ್ನದ ಗಟ್ಟಿಗಳನ್ನು ಹುಡುಕಿಕೊಂಡು ಆಗ್ನೇಯ ಏಷ್ಯಾ ದೇಶಗಳಲ್ಲಿ ತಿರುಗಾಡಿದ್ದರು. ಬ್ರಿಟಿಷ್ ಗ್ರಂಥಾಲಯಗಳಲ್ಲಿನ ದಾಖಲೆಗಳ ಪ್ರಕಾರ, 'ಇಂಡಿಯನ್ ನ್ಯಾಷನಲ್ ಆರ್ಮಿ' ಹಾಗೂ 'ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್' ಶರಣಾದಾಗ ಬ್ರಿಟಿಷರಿಗೆ ಸುಮಾರು 262 ಕೆ.ಜಿ. ಚಿನ್ನದ ಗಟ್ಟಿ, 262 ಬರ್ಮಾ ರೂಬಿಗಳು, ಚಿನ್ನ-ಬೆಳ್ಳಿ ಆಭರಣಗಳು ಸಿಕ್ಕಿದ್ದವಂತೆ. ಭಾರತ ಸ್ವತಂತ್ರವಾದ ನಂತರ, ಅಂತಾರಾಷ್ಟ್ರೀಯ ಒಪ್ಪಂದಗಳ ಪ್ರಕಾರ ಭಾರತಕ್ಕೆ ಸೇರಬೇಕಿದ್ದ ಈ ಸಂಪತ್ತು ಎಲ್ಲಿ ಹೋಯಿತೆಂಬುದು ಯಾರಿಗೂ ತಿಳಿದಿಲ್ಲ. ಬ್ರಿಟಿಷರು ವಶಪಡಿಸಿಕೊಂಡಂಥ ಸಂಪತ್ತುಗಳನ್ನು ಜಪಾನ್‌ಗೆ ನೀಡಲಾಗಿದೆಯೆಂದು ಆಸ್ಟ್ರೇಲಿಯಾದ ಪತ್ರಿಕೆಯೊಂದು 1947ರಲ್ಲಿ ಬರೆದಿತ್ತು. ಅದಾದ 5 ವರ್ಷಗಳ ನಂತರ, ಜಪಾನ್ ಎರಡು ದೊಡ್ಡ ಸೂಟ್‌ಕೇಸ್‌ಗಳನ್ನು ನೆಹರು ನೇತೃತ್ವದ ಕಾಂಗ್ರೆಸ್ ಸರಕಾರಕ್ಕೆ ಒಪ್ಪಿಸಿತ್ತು. ಬೋಸರು ವಿಮಾನಾಪಘಾತದಲ್ಲಿ ಮೃತರಾದ ನಂತರ ವಿಮಾನದಲ್ಲಿ ಸಿಕ್ಕಂಥ ವಸ್ತುಗಳನ್ನು ಈ ಸೂಟ್‌ಕೇಸ್‌ಗಳಲ್ಲಿ ನೀಡಲಾಗಿದೆ ಎನ್ನಲಾಗಿತ್ತು.

ಇದಾದ ನಂತರ, ಭಾರತ ಹಾಗೂ ಜಪಾನ್ ನಡುವೆ ಒಪ್ಪಂದವೊಂದಕ್ಕೆ ಸಹಿಹಾಕಲಾಗಿತ್ತು ಮತ್ತು ಅದನ್ನು ಶಾಂತಿ ಒಪ್ಪಂದವೆಂದು ಕರೆಯಲಾಗಿತ್ತು. ಹಾಗಾದರೆ, ಸೂಟ್‌ಕೇಸ್‌ನಲ್ಲಿ ನೀಡಿದ್ದಂಥ ಬೋಸರ ವಸ್ತುಗಳು ಇಂಡಿಯನ್ ನ್ಯಾಷನಲ್ ಆರ್ಮಿಯ ಸಂಪತ್ತಿನ ಒಂದು ಸಣ್ಣ ಭಾಗವಾಗಿರಬಹುದೆಂಬ ಅನುಮಾನ ಹಲವರಿಗಿದೆ. 2016ರಲ್ಲಿ ಭಾರತ ಸರಕಾರವು ಇದೇ ವಿಷಯವಾಗಿ ಜಪಾನ್ ಸರಕಾರದಿಂದ ಹೆಚ್ಚಿನ ಮಾಹಿತಿಯನ್ನು ಕೇಳಿದಾಗ ಮತ್ತೊಂದು ಅಂಶ ಬೆಳಕಿಗೆ ಬಂದಿತ್ತು. ಅದು- 1958 ಮತ್ತು 1961ರ ನಡುವೆ, ಬೋಸರಿಗೆ ಸೇರಿದ್ದ ಅತ್ಯಮೂಲ್ಯ ರತ್ನ ಸಂಪತ್ತನ್ನು ಭಾರತೀಯ ರಾಯಭಾರ ಕಚೇರಿಗೆ ನೀಡಲಾಗಿತ್ತು ಎಂಬುದು. 1958ರಲ್ಲಿ, ಸುಮಾರು 18,400 ಕ್ಯಾರಟ್/3.68 ಕೆ.ಜಿ. ತೂಕದ 'ಕತ್ತರಿಸದ ಪಚ್ಚೆಕಲ್ಲು', ಸುಮಾರು 17,880 ಕ್ಯಾರಟ್/3.56 ಕೆ.ಜಿ. ತೂಕದ 'ಪಚ್ಚೆಕಲ್ಲಿನಿಂದ ಮಾಡಿದ ಬುದ್ಧನ ವಿಗ್ರಹ' ಹಾಗೂ 1961ರಲ್ಲಿ, ಸುಮಾರು 1 ಅಡಿ ಎತ್ತರದ, ಸುಮಾರು 14,700 ಕ್ಯಾರಟ್/2 ಕೆ.ಜಿ. ತೂಕದ 'ಪಚ್ಚೆಕಲ್ಲಿನ ಬುದ್ಧನ ವಿಗ್ರಹ'ವನ್ನು ಟೋಕಿಯೋ ನಗರದಲ್ಲಿನ ಭಾರತೀಯ ದೂತಾವಾಸ ಕಚೇರಿಗೆ ನೀಡಲಾಗಿತ್ತೆಂಬ ಅಂಶ ಬೆಳಕಿಗೆ ಬಂತು. ಹಾಗಾದರೆ, ಭಾರತದ ಸ್ವಾತಂತ್ರ್ಯಕ್ಕಾಗಿ ಅಪ್ರತಿಮ ರಾಷ್ಟ್ರಭಕ್ತನೊಬ್ಬ ಸಂಗ್ರಹಿಸಿದ್ದ, ಬೆಲೆ ಕಟ್ಟಲಾಗದಂಥ ಚಿನ್ನ-ವಜ್ರ-ವೈಡೂರ್ಯದ ಸಂಪತ್ತು ಹೋದದ್ದೆಲ್ಲಿಗೆ?

ಹಿಟ್ಲರ್ ನೇತೃತ್ವದಲ್ಲಿ ಮುನ್ನುಗ್ಗುತ್ತಿದ್ದ ಜರ್ಮನಿಗೆ ಎರಡನೇ ಮಹಾಯುದ್ಧದ ಕೊನೆಯಲ್ಲಿ ಜಯ ದೊರಕಲಿಲ್ಲ. ಹಿಟ್ಲರ್ ಸತ್ತುಹೋದ. ಅತ್ತ, ಜಪಾನಿನ ಹಿರೋಶಿಮಾ ಮತ್ತು ನಾಗಾಸಾಕಿ ನಗರಗಳ ಮೇಲೆ ಅಮೆರಿಕ ಅಣುಬಾಂಬ್ ದಾಳಿಮಾಡುವ ಮೂಲಕ ಈ ಯುದ್ಧದಲ್ಲಿ ವಿಶ್ವದ ದೊಡ್ಡಣ್ಣನಾಗಿ ಹೊರಹೊಮ್ಮಿತ್ತು. ಈ ದಾಳಿಗೆ ತತ್ತರಿಸಿದ್ದ ಜಪಾನ್ 1945ರ ಆಗಸ್ಟ್ 15ರಂದು ಶರಣಾಗತಿಯನ್ನು ಘೋಷಿಸಿತು, ಅಲ್ಲಿಗೆ 2ನೇ ಮಹಾಯುದ್ಧ ಕೊನೆಗೊಂಡಿತ್ತು. ಜರ್ಮನಿ ಮತ್ತು ಜಪಾನ್ ದೇಶಗಳು ಯುದ್ಧದಲ್ಲಿ ಸೋತಿದ್ದು ಬೋಸರ ಮೇಲೆ ನೇರ ಪರಿಣಾಮ ಬೀರಿತ್ತು. ತಮಗೆ ಬೆನ್ನೆಲುಬಾಗಿದ್ದ ಈ ಎರಡೂ ದೇಶಗಳ ಸೋಲಿನಿಂದಾಗಿ ಬೋಸರು ರಷ್ಯಾದೆಡೆಗೆ ಮುಖಮಾಡಿದ್ದರು. ಯುದ್ಧದಲ್ಲಿ ಸೋತ ನಂತರ ಜಪಾನ್, ಆಗ್ನೇಯ ಏಷ್ಯಾ ದೇಶಗಳ ಮೇಲಿನ ತನ್ನ ಹಿಡಿತವನ್ನು ಕಳೆದುಕೊಂಡಿತು. ಜರ್ಮನಿ ಹಾಗೂ ಜಪಾನ್ ಶರಣಾದ ಮೇಲೆ ರಹಸ್ಯ ಸಬ್‌ಮರೀನ್, ಮಾನ್ಸೂನ್ ಗ್ರೂಪ್ ಬಗ್ಗೆ ಬೋಸರಿಗೆ ತಿಳಿದಿತ್ತು. ಸೈಗಾನ್ ನಗರದಿಂದ ಸಿಂಗಾಪುರಕ್ಕೆ ವಿಮಾನದಲ್ಲಿ ಬಂದ ಬೋಸರನ್ನು, ತರುವಾಯದಲ್ಲಿ ಕೋಲ್ಕತ್ತಾದಲ್ಲಿ ಹತ್ಯೆಯಾದ ಪೊಲೀಸ್ ಅಧಿಕಾರಿಯು ಸಬ್‌ಮರೀನ್ ಬಳಿ ಕರೆದುಕೊಂಡು ಬಂದಿದ್ದ. ಪತ್ರಿಕೆಯೊಂದಕ್ಕೆ ಆತ 1969ರಲ್ಲಿ ನೀಡಿದ ಹೇಳಿಕೆಯಂತೆ, ಬೋಸರು 1945ರ ಸೆಪ್ಟೆಂಬರ್ 18ರಂದು ಸಬ್‌ಮರೀನ್ ಮೂಲಕ ರಷ್ಯಾಕ್ಕೆ ತೆರಳಿದ್ದರು. ಆಸ್ಟ್ರಿಯಾ ದೇಶದ ವಿಯೆನ್ನಾ ನಗರದಲ್ಲಿ ಬೋಸರ ಮಡದಿ ಹಾಗೂ ಮಗಳಿದ್ದರು. ಆಗ ಆಸ್ಟ್ರಿಯಾ ದೇಶವು ಸೋವಿಯತ್ ಒಕ್ಕೂಟದ ಭಾಗವಾಗಿತ್ತು. ಬ್ರಿಟಿಷರ ವಿರುದ್ಧದ ಹೋರಾಟವನ್ನು ಮುಂದುವರಿಸಲೆಂದು ಇಂಡಿಯನ್ ನ್ಯಾಷನಲ್ ಆರ್ಮಿ ಸಂಗ್ರಹಿಸಿದ್ದ ಸಂಪತ್ತನ್ನು ಬೋಸರು ಸಬ್‌ಮರೀನ್‌ನಲ್ಲಿ ತೆಗೆದುಕೊಂಡು ಹೋಗಿರಬಹುದೆಂಬ ದಟ್ಟ ಅನುಮಾನವಿದೆ. ಆದರೆ 1945ರ ಆಗಸ್ಟ್ 17ರಂದು, ಬೋಸರು ವಿಯೆಟ್ನಾಂನಿಂದ ಜಪಾನಿನ ಉನ್ನತ ಸೇನಾಧಿಕಾರಿಯೊಬ್ಬರ ಜತೆ ವಿಮಾನದಲ್ಲಿ ಹೊರಟರು, ತದನಂತರ ಆ ವಿಮಾನ ತೈಪೆ ಬಳಿ ಅಪಘಾತಕ್ಕೊಳಗಾಯಿತು ಎಂದು ಇಂದಿಗೂ ಹೇಳಲಾಗುತ್ತದೆ. ಆದರೆ ಬೋಸರು ಅಂದು ಆ ವಿಮಾನದಲ್ಲಿ ಇರಲೇ ಇಲ್ಲವೆನ್ನಲು ಹಲವು ಪುರಾವೆಗಳು ಸಿಕ್ಕಿವೆ. ಬೋಸರ ಬಗ್ಗೆ ಮತ್ತಷ್ಟು ಮಾಹಿತಿ ಕಲೆಹಾಕಲೆಂದು 1996ರ ಅಕ್ಟೋಬರ್‌ನಲ್ಲಿ ಭಾರತೀಯ ಸಂಸತ್ತಿನ ನಿಯೋಗವೊಂದು ರಷ್ಯಾದ ಮಾಸ್ಕೋ ನಗರಕ್ಕೆ ತೆರಳಿತ್ತು. ಬೋಸರ ಫಾರ್ವರ್ಡ್ ಬ್ಲಾಕ್‌ನ ಸದಸ್ಯರಿಬ್ಬರು ಆ ನಿಯೋಗದಲ್ಲಿದ್ದರು. 1945ರ ನಂತರ ಬೋಸರು ರಷ್ಯಾದಲ್ಲಿದ್ದುದಕ್ಕೆ ಬೇಕಿದ್ದ ಹಲವು ಸಾಕ್ಷ್ಯಗಳನ್ನು ಅವರಿಗೆ ರಷ್ಯಾದ ಸೇನಾಧಿಕಾರಿಗಳು ಒದಗಿಸಿದ್ದರು. ಸಾಕ್ಷ್ಯಗಳನ್ನು ಸಂಗ್ರಹಿಸಿ ಭಾರತಕ್ಕೆ ಬಂದ ನಂತರ, 1997ರ ಅಕ್ಟೋಬರ್‌ನಲ್ಲಿ ಫಾರ್ವರ್ಡ್ ಬ್ಲಾಕ್‌ನ ಸದಸ್ಯರೊಬ್ಬರು ಬಿಹಾರದಲ್ಲಿ ರೈಲಿನಲ್ಲಿ ಪ್ರಯಾಣಿಸುತ್ತಿರುವಾಗ ಹೃದಯಾಘಾತವಾಗಿ ಮೃತರಾದರು.

ಇಂಡಿಯನ್ ನ್ಯಾಷನಲ್ ಆರ್ಮಿಯನ್ನು ಕಟ್ಟಿದ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ ಸುಭಾಷ್‌ಚಂದ್ರ ಬೋಸರು ಸಂಗ್ರಹಿಸಿದ್ದಂಥ ಆರ್ಥಿಕ ಸಂಪತ್ತು ಏನಾಯಿತೆಂಬ ವಿಷಯದ ಬಗ್ಗೆ ಚರ್ಚೆಯಾಗಬೇಕಿದೆ.

ಟ್ರಂಪ್ ಅಭಿಯಾನ, ಮೋದಿಯವರ ವಿಶ್ವಗುರು ಎರಡೂ ಒಂದೇ

ಪ್ರಭು ಪ್ರವರ
ಪ್ರಭು ಚಾವ್ಲಾ
vveditoped@gmail.com

ಜಾಗತಿಕ ರಾಜಕೀಯದ ಗೋಳಾರ್ಧಗಳು, ರಾಷ್ಟ್ರೀಯವಾದಿ ಹಿತಾಸಕ್ತಿಗಳ ಕಲಸುಮೇಲೋಗರವಾಗಿರುವ ಮೈತ್ರಿಕೂಟಗಳ ಸಂಘದಿಂದ ವಿಭಜಿಸಲ್ಪಟ್ಟಿವೆ. 'ಅಮೆರಿಕ ಮೊದಲು' ಮತ್ತು 'ವಿಕಸಿತ ಭಾರತ' ಎಂಬೆರಡು ಪರಿಕಲ್ಪನೆಗಳು ಇದಕ್ಕೆ ಉದಾಹರಣೆ. ಈಗಾಗಲೇ ತಿಳಿದಿರುವಂತೆ, 78ರ ಹರೆಯದ ಡೊನಾಲ್ಡ್ ಟ್ರಂಪ್ 2ನೇ ಅವಧಿಗೆ ಶ್ವೇತಭವನವನ್ನು ಪ್ರವೇಶಿಸಿದ್ದಾರೆ. ಇದು, ಹಗರಣ, ದೋಷಾರೋಪಣೆ ಮತ್ತು ಕ್ರಿಮಿನಲ್ ಅಪರಾಧದಂಥ ಅಸಾಧ್ಯ-ಅಡಚಣೆಗಳನ್ನು ಅವರು ಜಯಿಸಿದ ನಂತರ ಹಾಗೂ ಭಾರತದ ನರೇಂದ್ರ ಮೋದಿಯವರು 3ನೇ ಬಾರಿಗೆ ಗದ್ದುಗೆ ಏರಿದ ಕೆಲ ತಿಂಗಳ ನಂತರ ಘಟಿಸಿರುವ ಮಹತ್ವದ ವಿದ್ಯಮಾನ. ಹೀಗಾಗಿ, 4 ವರ್ಷಗಳ ಅವಧಿಯ ಅನಿರೀಕ್ಷಿತ 'ಯು-ಟರ್ನ್'ಗಳು ಹಾಗೂ ಸೈದ್ಧಾಂತಿಕ ಸಂಘರ್ಷಗಳು ಮತ್ತೊಮ್ಮೆ ತಮ್ಮ ಕರಾಮತ್ತನ್ನು ತೋರಿಸುವ ದರ್ಬಾರು ಈಗ ಸಜ್ಜುಗೊಂಡಂತಾಗಿದೆ.

ವಿಭಿನ್ನವಾಗಿ ಹೇಳುವುದಾದರೆ, ರಾಜತಾಂತ್ರಿಕತೆ ಎಂಬುದು ಒಂದು ಭೋಜನಕೂಟವಾಗಿದ್ದು, ವಿನಮ್ರತೆಯನ್ನು ಒಳಗೊಂಡ ಭಕ್ಷ್ಯವನ್ನು ಇಲ್ಲಿ ಆಗಾಗ ಬಡಿಸುವುದು ಅನಿವಾರ್ಯವಾಗುತ್ತದೆ. ಒಂದು ಕಾಲಕ್ಕೆ ರಾಜತಾಂತ್ರಿಕರಾಗಿದ್ದು, ಈಗ ಅರೆ-ರಾಜಕಾರಣಿ ಎನಿಸಿರುವ ಭಾರತದ ವಿದೇಶಾಂಗ ಖಾತೆಯ ಸಚಿವ ಎಸ್.ಜೈಶಂಕರ್, ಟ್ರಂಪ್ ಅವರ ಈ ಉದ್ಘಾಟನಾ ಔತಣಕೂಟದಲ್ಲಿ ತಮ್ಮ ಪಾಲಿನ ಖಾದ್ಯವನ್ನು ಸವಿದಿದ್ದಾರೆ. ಆದರೆ, ಈ ಹೊಸ ಭೂರಾಜಕೀಯದ ಮೆನುವಿನಲ್ಲಿ ಉಲ್ಲೇಖಿಸಿರುವ ವಿಶ್ವದ ಅತ್ಯಂತ ಶಕ್ತಿಶಾಲಿ ನಾಯಕನ ಭಾಷಣದ ನಿಜಸಾರವನ್ನು ಜೈಶಂಕರ್ ಸವಿಯುವುದು ಬಾಕಿಯಿದೆ! ಏಕೆಂದರೆ, 'ಮೇಕ್ ಅಮೆರಿಕ ಗ್ರೇಟ್ ಅಗೇನ್' (MAGA) ಎಂಬ ತಮ್ಮ ಪ್ರತಿಪಾದನೆಯನ್ನು ಕೊಂಚ ವಿಸ್ತರಿಸಿ 'ಮೇಕ್ ಅಮೆರಿಕ ಗ್ರೇಟ್ ಅಗೇನ್ ಅಂಡ್ ಅಗೇನ್' ಅಥವಾ MAGAA ಎಂದು ಒತ್ತಿಹೇಳಲು ತಮ್ಮ ಈ ವಿಜಯಪರ್ವವನ್ನು ಟ್ರಂಪ್ ಬಳಸಿಕೊಳ್ಳಲಿದ್ದಾರೆ. ಇನ್ನೊಂದು ಗೋಳಾರ್ಧದಲ್ಲಿ, ಎಲ್ಲರಿಗೂ ಗೊತ್ತಿರುವಂತೆ ಮೋದಿಯವರು ಭಾರತವನ್ನು ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ ನೆಲೆಗಳಲ್ಲಿ 'ವಿಶ್ವಗುರು' ಆಗಿಸುವ ಧ್ಯೇಯವನ್ನು ಇಟ್ಟುಕೊಂಡಿದ್ದಾರೆ.

ಬಹುತೇಕರಿಗೆ ಗೊತ್ತಿರುವಂತೆ, ಅಮೆರಿಕವು ಜಾಗತಿಕ ಮಟ್ಟದಲ್ಲಿ ಕಾರ್ಯತಂತ್ರಗಾರನೂ ಹೌದು, ಆರ್ಥಿಕ ಶಕ್ತಿಯೂ ಹೌದು. ಆದರೆ, ಮೋದಿಯವರು ಅಧಿಕಾರಕ್ಕೆ ಬಂದ ನಂತರ, ಭಾರತದ ಅಂತಾರಾಷ್ಟ್ರೀಯ ಸರಹದ್ದು ಪಲ್ಲಟಗೊಂಡಿದೆ ಅಥವಾ ವಿಸ್ತಾರಗೊಂಡಿದೆ. ಜಾಗತಿಕ ಔನ್ನತ್ಯದ ಕೋಷ್ಟಕದಲ್ಲಿನ ತನ್ನ ನ್ಯಾಯಸಮ್ಮತ ಸ್ಥಾನವನ್ನು ಬಿಟ್ಟುಕೊಡಲು ಇಷ್ಟವಿಲ್ಲದ ಮತ್ತು ಈಗಾಗಲೇ ಸಾಕಷ್ಟು ಸದೃಢವಾಗಿರುವ 'ಮೋದಿ ಭಾರತ'ವು ಗೂಢಾರ್ಥದ ರಾಜತಾಂತ್ರಿಕ ಮಾತು-ವರ್ತನೆಗಳಲ್ಲಿ ಆಕ್ರಮಣಕಾರಿಯಾಗಿ ತೊಡಗಿಸಿಕೊಂಡಿದೆ. ಪ್ರಸ್ತುತ ಚಾಲ್ತಿಯಲ್ಲಿರುವ ಜನಪ್ರಿಯ ಮಾದರಿಯೆಂದರೆ- 'ಇಲ್ಲಿ ಕಾಯಂ ಶತ್ರುಗಳಾಗಲೀ ಅಥವಾ ಮಿತ್ರರಾಗಲೀ ಇಲ್ಲ; ಇಲ್ಲಿ ಶಾಶ್ವತವಾಗಿ ಕಾಣಬರುವುದು ಮಹತ್ವಾಕಾಂಕ್ಷೆಯೊಂದೇ' ಎಂಬುದು.

ಟ್ರಂಪ್ ಅವರಂತೂ ವಿರೋಧಾಭಾಸಗಳ ಅರಾಜಕ ರಸವೈದ್ಯನೇ ಆಗಿಬಿಟ್ಟಿದ್ದಾರೆ; 'ರೆಡ್ ನೆಕ್' ಎಂದೇ ಕರೆಯಲ್ಪಡುವ, ಅಮೆರಿಕದ ದಕ್ಷಿಣ ಭಾಗದ ಕಾರ್ಮಿಕ ವರ್ಗಕ್ಕೆ ಸೇರಿದ ರಾಜಕೀಯ ಸಂಪ್ರದಾಯವಾದಿಗಳ ಬೆಂಬಲ ಮತ್ತು ಹೊರಗಿದ್ದುಕೊಂಡೇ ಆಡಳಿತವನ್ನು ನಿಯಂತ್ರಿಸುವ ಕೆಲವೇ ಪ್ರಭಾವಿಗಳು/ಶ್ರೀಮಂತರ ಗಾಢಮೈತ್ರಿಯ ಬಲದೊಂದಿಗೆ ತೇಲುವ ಒಬ್ಬ 'ಗಣ್ಯ-ವಿರೋಧಿ' ಗಣ್ಯರು ಈ ಡೊನಾಲ್ಡ್ ಟ್ರಂಪ್! ಅವರ ಚಿಂತನೆಗಳ ಗೋಜಲಿನ ಗಂಟು ಬಿಡಿಸಲು, ಅಮೆರಿಕದ ಆಳುಗ ವ್ಯವಸ್ಥೆಯೊಂದಿಗೆ ನಂಟು ಹೊಂದಿರುವ ಭಾರತೀಯ ರಾಜತಾಂತ್ರಿಕರು, ವಿದೇಶಾಂಗ ನೀತಿ ಪರಿಣತರು ಮತ್ತು ಕಾರ್ಪೊರೇಟ್ ನಾಯಕರು, ಭಾರತ ಮತ್ತು ಅಮೆರಿಕದಲ್ಲಿ ಇನ್ನಿಲ್ಲದ ಕಸರತ್ತು ಮಾಡುತ್ತಿದ್ದಾರೆ. ಟ್ರಂಪ್ ಮತ್ತು ಅವರ ಸಲಹೆಗಾರರು ವಾಷಿಂಗ್ಟನ್ನಿನ ಜಾಗತಿಕವಾದಿ, ಪ್ರಜಾಸತ್ತಾತ್ಮಕ ಸೌಧವನ್ನು ಕೆಡವಲು ಬಾಗಿದ್ದಾರೆ. ಇಂಥದೊಂದು ಪಾರಸ್ಪರಿಕ ಪ್ರಕ್ರಿಯೆಗೆ ಅಗತ್ಯವಿರುವ ಮಾರ್ಗಸೂಚಿಯನ್ನು ರೂಪಿಸಲು ಅಮೆರಿಕ ಮತ್ತು ಭಾರತದ ರಾಜತಾಂತ್ರಿಕರು ಪೆಸಿಫಿಕ್ ಸಾಗರವನ್ನು ಪರಸ್ಪರ ಅಡ್ಡಹಾಯುತ್ತಿದ್ದಾರೆ. ಯಾರೂ ಊಹಿಸಲಾಗದ ಟ್ರಂಪ್ ಅವರ ಮಾತು ಮತ್ತು ವರ್ತನೆಗಳು ಈ ಇಬ್ಬರ ಪಾಲಿಗೆ ಅಡ್ಡಗೋಡೆಗಳಾಗಿಬಿಟ್ಟಿವೆ. ಟ್ರಂಪ್ ಅವರ ಅಸ್ಪಷ್ಟ ಭರವಸೆಗಳು ಮತ್ತು ಗ್ರಹಿಕೆಗಳನ್ನು ಅಂದಾಜಿಸಲು ಅವರಿಗೆ ಆಗುತ್ತಿಲ್ಲ. ಇದರಿಂದಾಗಿ, ದೇಶೀಯ ಮತ್ತು ಅಂತಾರಾಷ್ಟ್ರೀಯ ಸ್ಥಿರತೆಗೆ ಗಮನಾರ್ಹ ಅಪಾಯಗಳಾಗುತ್ತವೆ.

ಮೋದಿ ಮತ್ತು ಟ್ರಂಪ್ ನಡುವೆ ಈ ಹಿಂದಿದ್ದ ಬಾಂಧವ್ಯಕ್ಕೆ ಮರುಜೀವ ನೀಡಲು ಭಾರತೀಯ ಆಳುಗ ವ್ಯವಸ್ಥೆಯು ಆಶಿಸುತ್ತಿದೆ. ಈ ಹಿಂದೆ ಇವರಿಬ್ಬರೂ ಮೂರು ಬಾರಿ ಭೇಟಿಯಾಗಿದ್ದಾರೆ. ಆ ವೇಳೆ ಇವರಿಬ್ಬರ ನಡುವೆ ರೂಪುಗೊಂಡಿದ್ದ 'ಕೆಮಿಸ್ಟ್ರಿ'ಯನ್ನು ಕಂಡು ವಿಶ್ವದ ಇತರ ನಾಯಕರು 'ಇವರಿಬ್ಬರೂ ಆಪ್ತಮಿತ್ರರು' ಎಂದು ನಂಬುವಂತಾಗಿತ್ತು ಮತ್ತು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಒಂದು ಸಾಮಾನ್ಯ ದ್ವಿಪಕ್ಷೀಯ ಕಾರ್ಯಸೂಚಿಯನ್ನು ಜತೆಜತೆಯಾಗೇ ಇವರು ಪ್ರಸ್ತಾಪಿಸುತ್ತಾರೆ ಎಂದು ಪರಿಭಾವಿಸಲು ಅದು ಕಾರಣವಾಗಿತ್ತು. ಟ್ರಂಪ್ ಅವರ ಮೊದಲ ಅಧಿಕಾರಾವಧಿಯಲ್ಲಿ, ಹೂಸ್ಟನ್‌ನಲ್ಲಿ ನಡೆದ 'ಹೌಡಿ ಮೋದಿ' ಮತ್ತು ಅಹ್ಮದಾಬಾದ್‌ನಲ್ಲಿ ನಡೆದ 'ನಮಸ್ತೆ ಟ್ರಂಪ್'ನಂಥ ಕಾರ್ಯಕ್ರಮಗಳು ಜಾಗತಿಕ ಸಮ್ಮಿಲನವನ್ನು ಸೂಚಿಸಿದ್ದವು ಮತ್ತು ಭಾರತವು ಅಮೆರಿಕದ ಪ್ರಬಲ ಮಿತ್ರರಾಷ್ಟ್ರಗಳಲ್ಲಿ ಒಂದಾಗಿದೆ ಎಂಬ ಭಾವ ಮೂಡುವುದಕ್ಕೆ ಕಾರಣವಾಗಿದ್ದವು. 2020ರಲ್ಲಿ ಟ್ರಂಪ್ ಸೋಲುವುದರೊಂದಿಗೆ ನರೇಂದ್ರ ಮೋದಿಯವರು ಶ್ವೇತಭವನದಲ್ಲಿನ ಒಬ್ಬ ಮಿತ್ರನನ್ನು ಕಳೆದುಕೊಂಡಿದ್ದರು. ಇಷ್ಟಾಗಿಯೂ, ಬಾಂಧವ್ಯದ ಮರುನಿರ್ಮಾಣಕ್ಕಿದ್ದ ಅವಕಾಶವನ್ನು ಮೋದಿಯವರು ಕೈಚೆಲ್ಲಲಿಲ್ಲ. ಟ್ರಂಪ್‌ರ ವಿಜಯದ ಅಧಿಕೃತ ಘೋಷಣೆಯಾದ ಕೆಲವೇ ಗಂಟೆಗಳಲ್ಲಿ, ಅಭಿನಂದನಾ ಕರೆ ಮಾಡಿದ ಮೊದಲ ಅಂತಾರಾಷ್ಟ್ರೀಯ ನಾಯಕರುಗಳಲ್ಲಿ ಮೋದಿ ಒಬ್ಬರಾಗಿದ್ದರು. ಸಾಲದೆಂಬಂತೆ, ಎಕ್ಸ್ (ಟ್ವಿಟರ್) ಮಾಧ್ಯಮದಲ್ಲಿ ಮೋದಿಯವರು ಬರೆದುಕೊಂಡ ಪರಿ ಹೀಗಿತ್ತು: ''ನಿಮ್ಮ ಹಿಂದಿನ ಅಧಿಕಾರಾವಧಿಯ ಯಶಸ್ಸನ್ನು ನೀವು ಮರುನಿರ್ಮಾಣ ಮಾಡಿರುವ ಈ ಘಟ್ಟದಲ್ಲಿ, ಭಾರತ ಮತ್ತು ಅಮೆರಿಕದ ನಡುವಿನ ಜಾಗತಿಕ ಮತ್ತು ವ್ಯೂಹಾತ್ಮಕ ಕಾರ್ಯತಂತ್ರದ ಸಹಭಾಗಿತ್ವವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿನ ನಮ್ಮ ಸಹಯೋಗವನ್ನು ನವೀಕರಿಸಲು ನಾನು ಎದುರುನೋಡುತ್ತಿರುವೆ. ನಾವಿಬ್ಬರೂ ನಮ್ಮ ಜನರ ಕಲ್ಯಾಣಕ್ಕಾಗಿ, ಸುಧಾರಣೆಗಾಗಿ ಮತ್ತು ಜಾಗತಿಕ ಶಾಂತಿ, ಸ್ಥಿರತೆ, ಸಮೃದ್ಧಿಯನ್ನು ಉತ್ತೇಜಿಸುವುದಕ್ಕಾಗಿ ಪರಸ್ಪರ ಕೈಜೋಡಿಸಿ ಕಾರ್ಯತತ್ಪರರಾಗೋಣ''.

ಬಾಯಲ್ಲಿ ಹೇಳುವುದೇನೋ ಸುಲಭ, ಆದರೆ ಅದನ್ನು ಕೈಗೂಡಿಸುವುದು ಕಷ್ಟ! ಅಮೆರಿಕನ್ನರ ಐಹಿಕ ಮತ್ತು ಸಾಂಸ್ಕೃತಿಕ ಹಕ್ಕುಗಳನ್ನು ರಕ್ಷಿಸುವುದರ ಕುರಿತಾಗಿ ಟ್ರಂಪ್ 2016ರಿಂದಲೂ ಒಂದೇ ಸಮನೆ ಬೊಬ್ಬೆ ಹೊಡೆಯುತ್ತಿದ್ದಾರೆ. ಮೋಟಾರ್ ಸೈಕಲ್ಲುಗಳಿಂದ ಮೊದಲ್ಗೊಂಡು ಡಾಲರ್‌ವರೆಗೆ, ಯಾವೆಲ್ಲ ಬಾಬತ್ತುಗಳು ಅಮೆರಿಕವನ್ನು 'ಶ್ರೇಷ್ಠ'ವಾಗಿಸಬಲ್ಲವೋ ಅವುಗಳ ಕುರಿತಾಗಿ ಅವರು ಅಚಲ ನಿಷ್ಠೆಯನ್ನು ತೋರುತ್ತಿದ್ದಾರೆ. ಅಂತೆಯೇ, 'ಮೇಕ್ ಅಮೆರಿಕ ಗ್ರೇಟ್ ಅಗೇನ್' (MAGA) ಎಂಬುದು ಟ್ರಂಪ್ ಅವರ ಪ್ರಧಾನ ಯೋಜನೆಯಾಗಿಬಿಟ್ಟಿದೆ; ಹೋಲಿಕೆಯ ದೃಷ್ಟಿಯಲ್ಲಿ ಹೇಳುವುದಾದರೆ, ಇದು ನಮ್ಮ ಮೋದಿಯವರ 'ವಿಕಸಿತ ಭಾರತ' ಪರಿಕಲ್ಪನೆಗೆ ಸರಿಸಮನಾದುದು. ಬರಾಕ್ ಒಬಾಮ ಆಗಾಗ ಹೊಮ್ಮಿಸುತ್ತಿದ್ದ Yes, we can ಉದ್ಘೋಷದ ನೆರಳಲ್ಲೇ Trump will fix it ಎಂಬ ಪ್ರತಿಜ್ಞೆ ಮಾಡಿದರು ಈ ದೊಡ್ಡಣ್ಣ!

ಡೊನಾಲ್ಡ್ ಟ್ರಂಪ್ ಅವರ ಅಧಿಕಾರ ಸ್ವೀಕಾರ ಸಮಾರಂಭಕ್ಕೆ ಆಹ್ವಾನಿತರಾಗಿದ್ದ ನಮ್ಮ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರೇನೋ ಆಹ್ವಾನಿತರ ಪೈಕಿ ಮುಂದಿನ ಸಾಲಿನಲ್ಲೇ ಕೂತಿದ್ದರು. ಆದರೆ ಅವರ ಮನಸ್ಸಿನಲ್ಲಿ, ''ಟ್ರಂಪ್ ಅವರು ಭಾರತವನ್ನೂ ಮಟ್ಟ ಹಾಕುತ್ತಾರೆಯೇ? ಭಾರತೀಯ ವಿದ್ಯಾರ್ಥಿಗಳಿಗೆ ನೀಡಬೇಕಾಗುವ ವೀಸಾಗಳಿಗೆ ಅವರು ಮಿತಿಯನ್ನು ಹೇರುತ್ತಾರೆಯೇ?'' ಎಂಬ ಚಿಂತೆಗಳು ಸುಳಿದಾಡುತ್ತಿದ್ದಿರಬಹುದು! ಏಕೆಂದರೆ, ''ಕೋಟಿಗಟ್ಟಲೆ ಹಣವನ್ನು ಕೊಟ್ಟರೂ ಕೂಡ, ಅಮೆರಿಕದ ವಿಶ್ವವಿದ್ಯಾಲಯಗಳಿಗೆ ತೆರಳಲು ಕೆಲವೇ ವಿದ್ಯಾರ್ಥಿಗಳಿಗೆ ವೀಸಾ ದಕ್ಕಲಿವೆ'' ಎನ್ನುವ ಮೂಲಕ ಈ ವಿಷಯದ ಕುರಿತಂತೆ ಸುಳಿವು ನೀಡಿದ್ದರು ಟ್ರಂಪ್. ಇಷ್ಟು ಮಾತ್ರವಲ್ಲದೆ, ''ಅಮೆರಿಕದ ಹಾರ್ಲೆ-ಡೇವಿಡ್‌ಸನ್ ಬೈಕುಗಳ ಮೇಲೆ ವಿಧಿಸಿರುವ ಸುಂಕವನ್ನು ತಗ್ಗಿಸಬೇಕೆಂಬ ತಮ್ಮ ಬೇಡಿಕೆಯನ್ನು ಟ್ರಂಪ್ ಪುನರುಚ್ಚರಿಸಲಿದ್ದಾರೆಯೇ? ಚೀನಾ ಮತ್ತು ರಷ್ಯಾ ಸಂಬಂಧಿತ ಚರ್ಚಾವಿಷಯಗಳಿಂದ ದೂರ ಸರಿಯುವಂತೆ ಟ್ರಂಪ್ ಭಾರತವನ್ನು ಆಗ್ರಹಿಸಲಿದ್ದಾರೆಯೇ?'' ಎಂಬ ಆಲೋಚನೆಯ ಕಾರ್ಮೋಡಗಳೂ ಜೈಶಂಕರ್‌ರನ್ನು ಅಂದು ಮುತ್ತಿಕೊಂಡಿದ್ದಿರಬೇಕು!

ಬಹುತೇಕರಿಗೆ ಗೊತ್ತಿರುವಂತೆ, ಟ್ರಂಪ್ ಅವರ ಮೊದಲ ಅಧಿಕಾರಾವಧಿಯು 'ಅಮೆರಿಕ ಮೊದಲು' ಕಾರ್ಯನೀತಿಯ ಸ್ಪಷ್ಟ ಉಲ್ಲೇಖಕ್ಕೆ ಸಾಕ್ಷಿಯಾಗಿತ್ತು ಮತ್ತು ಇದು 'ರಕ್ಷಣಾನೀತಿ'ಗೆ ಸಂಬಂಧಿಸಿದ ಮಾತಿನ ಮತ್ತೊಂದು ರೂಪವೇ ಆಗಿತ್ತು. ಆ ಘಟ್ಟದಲ್ಲಿ ಅವರು ಭಾರತವನ್ನು 'ಸುಂಕದ ರಾಜ' ಎಂದು ಕರೆದಿದ್ದುಂಟು. ಭಾರತವು ನ್ಯಾಯಸಮ್ಮತವಲ್ಲದ ವ್ಯಾಪಾರಿ ಪರಿಪಾಠಗಳನ್ನು ಅನುಸರಿಸುತ್ತಿದೆ ಎಂದು ಆರೋಪಿಸುವ ಮೂಲಕ ಟ್ರಂಪ್ ಆಡಳಿತವು 2019ರಲ್ಲಿ ಸಾಮಾನ್ಯೀಕೃತ ಆದ್ಯತೆಗಳ ವ್ಯವಸ್ಥೆಯನ್ನು ಹಿಂತೆಗೆದುಕೊಂಡಿತು. ಸಾಲದೆಂಬಂತೆ, ''ಭಾರತವು ಅತಿರೇಕದ ಸುಂಕಗಳನ್ನು ವಿಧಿಸುತ್ತದೆ. ಹೀಗಾಗಿ ನಾವೂ ಪಾರಸ್ಪರಿಕ ತೆರಿಗೆ ಪದ್ಧತಿಗೆ ಮುಂದಾಗುತ್ತೇವೆ. ಅಂದರೆ, ಭಾರತವು ನಮಗೆ ಏನನ್ನಾದರೂ ಹೆಚ್ಚುವರಿಯಾಗಿ ವಿಧಿಸಿದರೆ, ನಾವು ಕೂಡ ಭಾರತಕ್ಕೆ ಅದನ್ನೇ ತಿರುಮಂತ್ರವಾಗಿ ಹೇಳುತ್ತೇವೆ'' ಎಂದು 2020ರಲ್ಲಿ ಟ್ರಂಪ್ ಸಿಡುಗುಟ್ಟಿದ್ದರು. ಹೀಗಾಗಿ ತಮ್ಮ ಎರಡನೇ ಅಧಿಕಾರಾವಧಿಯಲ್ಲಿ ಟ್ರಂಪ್, ಹಿಂದೆ ತಾವು ಹೇಳಿದ್ದನ್ನೇ ಆಚರಣೆಗೆ ತಂದರೆ ಅಚ್ಚರಿಯಿಲ್ಲ!

ಡಾಲರ್ ಕರೆನ್ಸಿಗೆ ಮತ್ತೊಂದು ಪರ್ಯಾಯವನ್ನು ಹುಡುಕುವ ಭಾರತದ ಕಸರತ್ತು ಡೊನಾಲ್ಡ್ ಟ್ರಂಪ್ ಅವರಿಗೆ ಅಚ್ಚರಿಯನ್ನೇನೂ ತಂದಿಲ್ಲ, ಆದರೆ ಅವರಿಗೆ ನಿರ್ದಿಷ್ಟವಾಗಿ 'ಬ್ರಿಕ್ಸ್' ಶೃಂಗಸಭೆಯ ಆರ್ಥಿಕ ಕಾರ್ಯಸೂಚಿಯ ಬಗ್ಗೆ ಶಂಕೆ ಇರುವಂತಿದೆ. ಡಾಲರ್ ಅನ್ನು 'ಮೂಲೆಗುಂಪು ಮಾಡುವ' ಸಂಚಿನಲ್ಲಿ ಭಾರತವು ಒಂದು 'ಸುಪ್ತ ಪಾಲುದಾರ' ಆಗಿದೆ ಎಂಬುದು ಟ್ರಂಪ್ ಅವರ ಶಂಕೆ! 'ಟ್ರಂಪ್ ವಿಜೇತರು' ಎಂದು ಘೋಷಣೆಯಾದ 2 ವಾರಗಳ ನಂತರ, ತನ್ನ ಕರೆನ್ಸಿ ಲೆಕ್ಕಾಚಾರದ ಕುರಿತು ಜಾಗ್ರತೆಯಿಂದಿರುವಂತೆ 'ಬ್ರಿಕ್ಸ್' ಒಕ್ಕೂಟಕ್ಕೆ ಟ್ರಂಪ್ ಬಿಸಿ ಮುಟ್ಟಿಸಿದ್ದುಂಟು. ಈ ಕುರಿತು ಅವರು 'ಎಕ್ಸ್' ಮಾಧ್ಯಮದಲ್ಲಿ ಬರೆದುಕೊಂಡಿದ್ದು ಹೀಗೆ: ''ಬ್ರಿಕ್ಸ್ ಹೊಸತೊಂದು ಕರೆನ್ಸಿಯನ್ನು ಹುಟ್ಟುಹಾಕುವುದಿಲ್ಲ ಅಥವಾ ಪ್ರಬಲವಾಗಿರುವ ಡಾಲರ್ ಅನ್ನು ಪಲ್ಲಟಗೊಳಿಸಿ ಬದಲಿ ಆಯ್ಕೆಯನ್ನು ಅಲ್ಲಿ ಪ್ರತಿಷ್ಠಾಪಿಸಲು ಒತ್ತಾಸೆ ನೀಡುವುದಿಲ್ಲ ಎಂಬುದರ ಕುರಿತು ಬ್ರಿಕ್ಸ್ ಸದಸ್ಯ ರಾಷ್ಟ್ರಗಳು ಬದ್ಧತೆಯನ್ನು ತೋರಬೇಕೆಂದು ನಾವು ಬಯಸುತ್ತೇವೆ. ಹಾಗೊಮ್ಮೆ ಮಾಡದಲ್ಲಿ, ಶೇ.100ರಷ್ಟು ಸುಂಕಗಳನ್ನು ಅವು ಎದುರಿಸಬೇಕಾಗುತ್ತದೆ''. ತಮಾಷೆಯೆಂದರೆ, ಬ್ರೆಜಿಲ್, ರಷ್ಯಾ, ಚೀನಾ ಮತ್ತು ದಕ್ಷಿಣ ಆಫ್ರಿಕಾ ದೇಶಗಳು ಈ ಬೆದರಿಕೆಯನ್ನು ಬಹುತೇಕವಾಗಿ ನಿರ್ಲಕ್ಷಿಸಿದರೆ, ಜೈಶಂಕರ್ ಅವರು ಅಂತಾರಾಷ್ಟ್ರೀಯ ಶೃಂಗಸಭೆಯೊಂದರಲ್ಲಿ ಹೀಗೆ ಸ್ಪಷ್ಟೀಕರಣವನ್ನು ನೀಡಿದರು: ''ಇಂಥದೊಂದು ಮಾತಿಗೆ/ಧೋರಣೆಗೆ ಪ್ರಚೋದನೆ ನೀಡಿದ ಅಂಶವಾದರೂ ಯಾವುದು ಎಂಬುದು ನನಗೆ ನಿಖರವಾಗಿ ತಿಳಿದಿಲ್ಲ, ಆದರೆ ಡಾಲರ್ ಅನ್ನು ಪಲ್ಲಟಗೊಳಿಸುವ ಯತ್ನದಲ್ಲಿ ಭಾರತ ಎಂದಿಗೂ ತೊಡಗಿಲ್ಲ ಎಂದು ನಾವು ಹೇಳುತ್ತಲೇ ಬಂದಿದ್ದೇವೆ. ಸದ್ಯಕ್ಕೆ, 'ಬ್ರಿಕ್ಸ್' ಕರೆನ್ಸಿಯನ್ನು ಹೊಂದುವ ಯಾವುದೇ ಪ್ರಸ್ತಾವವೂ ನಮ್ಮೆದುರು ಇಲ್ಲ''.

ಹಾಗೆ ನೋಡಿದರೆ, ಇತರ ದೇಶಗಳ ಹಂಗಿಲ್ಲದೆ ಸ್ವತಂತ್ರವಾಗಿ ಅಮೆರಿಕದೊಂದಿಗೆ ಭಾರತವು ವ್ಯವಹರಿಸಬೇಕೆಂದೂ, ಇಲ್ಲವಾದಲ್ಲಿ ಪರಿಣಾಮಗಳನ್ನು ಎದುರಿಸಲು ಸಿದ್ಧವಿರಬೇಕೆಂದೂ ಟ್ರಂಪ್ ಮೂಲಭೂತವಾಗಿ ಹೇಳುತ್ತಿದ್ದುದುಂಟು. ಪೂರ್ವನಿಗದಿತ ಅಭಿಪ್ರಾಯಗಳ ಬಗ್ಗೆ ಟ್ರಂಪ್ ಅವರಿಗೆ ಯಾವುದೇ ಗೊಂದಲವಿಲ್ಲದ ಕಾರಣ, ಕಾರ್ಯನೀತಿಗೆ ಸಂಬಂಧಿಸಿದ ಅವರ ಚಂಚಲತೆಯನ್ನು ನಿರ್ವಹಿಸಿ ನಿಭಾಯಿಸಲು ಭಾರತಕ್ಕೆ ಒಂದು ವಿನೂತನ 'ರಾಜತಾಂತ್ರಿಕ ಕಾರ್ಯತಂತ್ರ'ದ ಅಗತ್ಯವಿದೆ. ಏಕೆಂದರೆ, ಭ್ರಾಂತಿ ಮತ್ತು ಕಲ್ಪನೆಯ ನಡುವಿನ ವ್ಯತ್ಯಾಸದ ಗೆರೆ ತುಂಬಾ ತೆಳುವಾಗಿರುತ್ತದೆ. 'ರಾಜತಾಂತ್ರಿಕ ದ್ವಂದ್ವವಾದಿ' ಎಂದೇ ಯಾವತ್ತೂ ಕರೆಸಿಕೊಳ್ಳುವ ಟ್ರಂಪ್, ತಮ್ಮ ದೇಶದ ಆಯಕಟ್ಟಿನ ಸ್ಥಾನಗಳಿಗೆ ಭಾರತೀಯ ಮೂಲದ 'ಹೈ-ಪ್ರೊಫೈಲ್' ವ್ಯಕ್ತಿಗಳನ್ನು ಕೂರಿಸಲು ಕೂಡ ಪ್ರಸ್ತಾಪಿಸಿದ್ದಾರೆ; ಇದು ಸುದೀರ್ಘ ಚರ್ಚೆಗಳಲ್ಲಿ ಭಾರತವು ತೊಡಗಿಸಿಕೊಳ್ಳುವುದಕ್ಕೆ ಅನುವು ಮಾಡಿಕೊಡುವ ನಡೆಯೂ ಹೌದು. ಇದರನ್ವಯ, ತುಳಸಿ ಗಬ್ಬಾರ್ಡ್ ಅವರು ರಾಷ್ಟ್ರೀಯ ಗುಪ್ತಚರ ವ್ಯವಸ್ಥೆಯ ನಿರ್ದೇಶಕರಾಗಿ, ವಿವೇಕ್ ರಾಮಸ್ವಾಮಿಯವರು ಹೊಸದಾಗಿ ರೂಪುಗೊಂಡ 'Department of Government Efficiency'ಯ ಸಹ-ನಾಯಕರಾಗಿ, ಕಶ್ ಪಟೇಲ್ ಅವರು ಎಫ್‌ಬಿಐ ಸಂಸ್ಥೆಯ ಮುಖ್ಯಸ್ಥರಾಗಿ, ಜಯ್ ಭಟ್ಟಾಚಾರ್ಯ ಅವರು ಆರೋಗ್ಯ ವ್ಯವಸ್ಥೆಯ ನಿರ್ವಾಹಕರಾಗಿ ಮತ್ತು ಕೃತಕ ಬುದ್ಧಿಮತ್ತೆ ವಿನಿಮಯ ಕೇಂದ್ರದ ಆಡಳಿತಗಾರರಾಗಿ ಶ್ರೀರಾಮ್ ಕೃಷ್ಣನ್ ಅವರು ನಿಯೋಜನೆಗೊಳ್ಳಲಿದ್ದಾರೆ. ಇಲ್ಲೊಂದು ಸಂಗತಿಯನ್ನು ಗಮನಿಸಬೇಕು- ಇವರೆಲ್ಲರೂ ಭಾರತೀಯ ಹೆಸರುಗಳನ್ನೂ, ವಂಶಾವಳಿಯನ್ನೂ ಹೊಂದಿರಬಹುದು, ಆದರೆ ಅವರು ಮೊದಲಿಗೆ 'ರಾಜಿಮಾಡಿಕೊಳ್ಳದ ಅಮೆರಿಕನ್ನರು' ಆಗಿರುತ್ತಾರೆ. ಇದನ್ನು ನಾವು ಮರೆಯಲಾಗದು!

ಹೊರಗಿದ್ದುಕೊಂಡೇ ಆಡಳಿತವನ್ನು ನಿಯಂತ್ರಿಸುವ ಕೆಲವೇ ಪ್ರಭಾವಿಗಳು/ಶ್ರೀಮಂತರು ಹಾಗೂ ಅಧಿಕಾರದ ಗದ್ದುಗೆ ಏರಿರುವ ರಾಜಕಾರಣಿಗಳ ನಡುವಿನ ಹೊಸ ಸಂಬಂಧವೇ ಭಾರತದ ಪ್ರಜಾಪ್ರಭುತ್ವಕ್ಕೆ ಒದಗಿರುವ ದೊಡ್ಡ ಬೆದರಿಕೆಯಾಗಿದೆ. ಸ್ವತಃ ಒಬ್ಬ ಶತಕೋಟ್ಯಧಿಪತಿ ಆಗಿರುವ ಟ್ರಂಪ್ ಅವರು ತಮ್ಮ ರಾಜಕೀಯ ಮತ್ತು ಆಡಳಿತಾತ್ಮಕ ಸಹವರ್ತಿಗಳನ್ನಾಗಿ ಇಂಥ ಬಾಹ್ಯ ಪ್ರಭಾವಿಗಳಿಗೆ/ಉದ್ಯಮಿಗಳಿಗೆ ಕುಣಿಕೆ ಹಗ್ಗ ಹಾಕಿ ಸೆಳೆದುಬಿಟ್ಟಿದ್ದಾರೆ. ಟ್ರಂಪ್ ಅವರ ಮಾರ್ಗದರ್ಶಕರಾಗಿ ಮತ್ತು ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಎಲಾನ್ ಮಸ್ಕ್ ಅವರು, ''ಮಸ್ಕ್ ಅವರೇ ಅಮೆರಿಕ ನಿಜವಾದ ಅಧ್ಯಕ್ಷರು'' ಎಂದು ಬಿಂಬಿಸುವ ಮೀಮ್‌ಗಳನ್ನು ಈಗಾಗಲೇ ಹುಟ್ಟುಹಾಕಿಬಿಟ್ಟಿದ್ದಾರೆ! ಮಾರ್ಕ್ ಜುಕರ್‌ಬರ್ಗ್, ಜೆಫ್ ಬೆಜೋಸ್ ಮತ್ತು ಟಿಮ್ ಕುಕ್ ಮುಂತಾದ ಶ್ರೀಮಂತ ಕುಳಗಳ ಹಾಗೂ ವಿವಿಧ ಬಹುರಾಷ್ಟ್ರೀಯ ಕಂಪನಿಗಳ ಭಾರತೀಯ ಮೂಲದ ಮುಖ್ಯಸ್ಥರ ಇಂಥದೊಂದು ಕೂಟವು, ಭಾರತದ ತೆಕ್ಕೆಯಿಂದ ಅತ್ಯುತ್ತಮ ವ್ಯವಹಾರಗಳನ್ನು ದಕ್ಕಿಸಿಕೊಳ್ಳುವುದಕ್ಕೆ ಸೆಣಸಲು ರೂಪುಗೊಂಡಿರುವ 'ಟ್ರಂಪ್ ತಂಡ'ದ ಅಧ್ವರ್ಯುವಾಗಿರಬಹುದು! ಇಂಥ ಭಾರಿ 'ಲಕ್ಷ್ಮೀಪುತ್ರರು' ಭಾರತೀಯ ಆಡಳಿತ ವ್ಯವಸ್ಥೆಯಲ್ಲಿ ವಿಶೇಷ ವರಪ್ರಸಾದಗಳನ್ನು ದಕ್ಕಿಸಿಕೊಂಡ ವ್ಯಕ್ತಿಗಳಾಗಿ ಮಹತ್ವದ ಸ್ಥಾನಮಾನಗಳನ್ನು ಅನುಭವಿಸುವುದಿದೆ ಹಾಗೂ ಎಲ್ಲ ಅಗ್ರಗಣ್ಯ ನಾಯಕರು ಮತ್ತು ವ್ಯಾಪಾರೋದ್ಯಮಿಗಳ ನೆಲೆಗಳಿಗೆ ಮುಕ್ತ ಹಾಗೂ ಕಾಯಮ್ಮಾದ ಪ್ರವೇಶ-ಭಾಗ್ಯವನ್ನು ದಕ್ಕಿಸಿಕೊಳ್ಳುವುದಿದೆ!

2020-2024ರ ಅವಧಿಯು ಭಾರತದ ಪಾಲಿಗೆ ಸೋಲಿಲ್ಲ-ಗೆಲುವಿಲ್ಲ ಎನ್ನುವಂಥ ಕಾಲಘಟ್ಟವಾಗಿತ್ತು. 2024-28ರ ಕಾಲಘಟ್ಟವು ಭಾರತ ಮತ್ತು ಅಮೆರಿಕದ ಪಾಲಿಗೆ ದ್ವಂದ್ವಯುದ್ಧದ ಸಮಯವಾಗಲಿದೆ. ನಾಲ್ಕು ವರ್ಷಗಳ ಹಿಂದೆ, ಮೋದಿಯವರು ಟ್ರಂಪ್ ಅವರ ಕೈಯನ್ನು ಎತ್ತಿಹಿಡಿದು, ''ಅಗಲಿ ಬಾರ್, ಟ್ರಂಪ್ ಸರ್ಕಾರ್!'' ಎಂದು ಘೋಷಿಸಿದ್ದರು. ಆ ಕೈ ಒಂದು ಮುಷ್ಟಿಯಾಗುವುದೋ ಅಥವಾ ಮೋದಿಯವರು ಟ್ರಂಪ್ ಕಾರ್ಡ್ ಅನ್ನು ಹಿಡಿಯುತ್ತಾರೋ ಎಂಬುದು, 'ಅಮೆರಿಕ ಮೊದಲು' ಎಂಬ ಕಾರ್ಯನೀತಿಯೊಂದಿಗೆ ದಕ್ಷಿಣ ಏಷ್ಯಾ ಹೇಗೆ ತೊಡಗಿಸಿಕೊಳ್ಳುತ್ತದೆ ಎಂಬುದನ್ನು ನಿರ್ಧರಿಸುತ್ತದೆ.

(ಲೇಖಕರು ಹಿರಿಯ ಪತ್ರಕರ್ತರು)

ಭಟ್ಟರ್ ಸ್ಕಾಚ್

- **ರವೀಂದ್ರ ಎಂ., (ಇಮೇಲ್ ಮೂಲಕ)**
ಭಟ್ರೇ, ವೇದಗಳಲ್ಲಿ ವೇದ ಪಠಣ ಸರಿಯಾ ಎಂದು ಸಾಣೇಹಳ್ಳಿ ಶ್ರೀ ಪ್ರಶ್ನಿಸಿದ್ದಾರಲ್ಲ?
– ಸಾಣೇಹಳ್ಳಿ ಶ್ರೀಗಳಿಗೆ ಒಳ್ಳೆಯದ್ಯಾವುದೂ ಬೇಕಿಲ್ಲವಂತೆ!

- **ಬಿ.ರಮೇಶ ಬಾಬು, ರಾಜಾಜಿನಗರ**
ಭಟ್ರೇ, ರೆಡ್ಡಿ–ಶ್ರೀರಾಮುಲು ಜಗಳವನ್ನು ನೀವಾದರೂ ಬಗೆಹರಿಸಬಾರದಾ?
– ಪತ್ರಕರ್ತರಿಗೆ ಜಗಳ ಬಗೆಹರಿಸಿ ಗೊತ್ತಿಲ್ಲ, ಬಾಬು!

- **ವೆಂಕಟೇಶ ನಾಯಕ, ಜಯನಗರ**
ಭಟ್ರೇ, ಚಾಕು ಇರಿತಕ್ಕೊಳಗಾದರೆ ಐದು ದಿನಗಳಲ್ಲಿ ಗುಣವಾಗಬಹುದಾ?
– ಆರು ಸಲ ಚುಚ್ಚಿಸಿಕೊಂಡ ಸೈಫ್ ಅಲಿ ಖಾನ್ ಐದು ದಿನಗಳಲ್ಲಿ ಗುಣವಾಗಿಲ್ಲವಾ?!

- **ಕೆ.ವಿ.ಪಾಟೀಲ, ಹುಬ್ಬಳ್ಳಿ**
ಭಟ್ರೇ, ಬಿಜೆಪಿ ಜಗಳವನ್ನು ಯಾರು ಬಗೆಹರಿಸಬಲ್ಲರು?
– ಯಾರು ಜಗಳವನ್ನು ತಂದಿಟ್ಟಿದ್ದಾರೋ ಅವರೇ!

- **ಮುಕುಂದ ಶೆಟ್ಟಿ, ಕುಂದಾಪುರ**
ಭಟ್ರೇ, ಬಿಜೆಪಿ ನಾಯಕರ ಬೀದಿ ಜಗಳವನ್ನು ನಿಲ್ಲಿಸಲು ಸಂತೋಷ ಜೀ ಏನೂ ಪ್ರಯತ್ನಿಸುತ್ತಿಲ್ಲವಲ್ಲ?
– 'ಬೆಂಕಿ ಹಚ್ಚಿದವರು ನಂದಿಸಬಾರದು' ಅಂತ ಸುಮ್ಮನಿದ್ದಾರಂತೆ!

- **ರಾಜು, (ಇಮೇಲ್ ಮೂಲಕ)**
ಭಟ್ರೇ, ಉಸ್ತುವಾರಿಗಳು ವಿಫಲವಾದರೆ?
– ಸುಸ್ತುವಾರಿ!

- **ನಿರ್ಮಲಾ ನಾಗರಾಜ, ಜೆ.ಪಿ.ನಗರ**
ಭಟ್ರೇ, ನಟ ಸುದೀಪ್ ಪ್ರಶಸ್ತಿ ನಿರಾಕರಿಸಿದ್ದೇಕೆ?
– ಪ್ರಶಸ್ತಿ ಹಣ 25 ಸಾವಿರ ರುಪಾಯಿ ಎಂದು ಹೇಳಬಾರದಿತ್ತು!

- **ನವೀನ ಬಾರಕೂರು, ಬೆಂಗಳೂರು**
ಭಟ್ರೇ, ಆಮ್ ಆದ್ಮಿ ಪಾರ್ಟಿಗೆ ಸಾರಾಯಿ ಘಮಲು ಅಂಟಿಕೊಂಡಿದೆಯಲ್ಲ?
– ಆಪ್ (ಎಎಪಿ) ಅಂದ್ರೆ 'ಆಲ್ಕೋಹಾಲ್ ಅಫೆಕ್ಟೆಡ್ ಪಾರ್ಟಿ' ಅಂತ ಗೊತ್ತಿಲ್ಲವಾ?!

- **ವಾಸುದೇವ ಸೋಮಯಾಜಿ, ಮೈಸೂರು**
ಭಟ್ರೇ, ಕೆಲವರನ್ನು ನೋಡಿದಾಕ್ಷಣ ಅವರು ಇಂಥವರೇ ಎಂದು ಹೇಳಬಹುದಾ?
– ಡೊನಾಲ್ಡ್ ಟ್ರಂಪ್ ಹೇರ್ ಸ್ಟೈಲ್ ನೋಡಿ ಅವರು ಇಂಥವರೇ ಎಂದು ಹೇಳಬಹುದಂತೆ!

- **ಎಸ್.ಎನ್.ಮಹಾಬಲ ರಾವ್, ಹಾಸನ**
ಭಟ್ರೆ, ಕೆಲವೊಂದು ಉತ್ತರಗಳು ಪ್ರಶ್ನಾರ್ಥಕ ಚಿಹ್ನೆಯಿಂದ ಕೂಡಿರುತ್ತದಲ್ಲ?
– ಅಂಥ ಉತ್ತರಗಳು ಮುಂದಿನ ಪ್ರಶ್ನೆಗೆ ನಾಂದಿಯಾಗಿರುತ್ತವಲ್ಲ?!

'ಪ್ರಯಾಣ'ದಲ್ಲಿ ಪಾಲಿಸಿ ಆಯುರ್ವೇದದ 'ಪ್ರಮಾಣ'

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
vveditoped@gmail.com

ಮಹಾ ಕುಂಭಮೇಳವು ಭಾರತೀಯ ಸಂಸ್ಕೃತಿಯ ಅತ್ಯಂತ ಪವಿತ್ರ ಮತ್ತು ಮಹತ್ವದ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಒಂದು. ಇದು ಪ್ರತಿ 12 ವರ್ಷಗಳಿಗೊಮ್ಮೆ ಗಂಗಾ–ಯಮುನಾ–ಸರಸ್ವತಿ ನದಿಗಳ ಸಂಗಮದಲ್ಲಿ, ಪ್ರಯಾಗ್‌ರಾಜ್, ಹರಿದ್ವಾರ, ಉಜ್ಜಯಿನಿ ಮತ್ತು ನಾಸಿಕ್‌ನಂಥ ಪವಿತ್ರ ಸ್ಥಳಗಳಲ್ಲಿ ನಡೆಯುತ್ತದೆ. ಕುಂಭಮೇಳವು ಜ್ಞಾನ, ಶ್ರದ್ಧೆ ಮತ್ತು ಪವಿತ್ರತೆಯ ಸಂಕೇತವಾಗಿದೆ.

ಈ ಮೇಳದಲ್ಲಿ ಲಕ್ಷಾಂತರ ಭಕ್ತರು, ಸಾಧು–ಸಂತರು, ಪೀಠಾಧಿಪತಿಗಳು ಮತ್ತು ಜನಸಾಮಾನ್ಯರು ಸೇರಿಕೊಂಡು ನದಿಯಲ್ಲಿ ಸ್ನಾನ ಮಾಡುತ್ತಾರೆ. ಇದು ಪಾಪವನ್ನು ತೊಡೆದು, ಮೋಕ್ಷವನ್ನು ನೀಡುತ್ತದೆ ಎಂಬ ನಂಬಿಕೆಯಿದೆ. ಇದು ಕೇವಲ ಧಾರ್ಮಿಕ ಕಾರ್ಯಕ್ರಮವಲ್ಲದೆ, ವೈದಿಕ ಸಂಸ್ಕೃತಿ, ಯೋಗ, ಧ್ಯಾನ ಮತ್ತು ಶ್ರದ್ಧಾಳುಗಳ ಉತ್ಸಾಹವನ್ನು ಪ್ರದರ್ಶಿಸುವ ಅಚ್ಚುಕಟ್ಟಾದ ವೇದಿಕೆಯಾಗಿದೆ.

ಮಹಾ ಕುಂಭಮೇಳವು ವೈವಿಧ್ಯಮಯ ಭಾರತದ ಏಕತ್ವವನ್ನು, ಭಾರತೀಯ ಪರಂಪರೆಯ ವೈಶಿಷ್ಟ್ಯವನ್ನು ಮತ್ತು ಆಧ್ಯಾತ್ಮಿಕತೆಯ ಆಳವನ್ನು ತೋರಿಸುತ್ತದೆ. ಇದು ವಿಶ್ವದ ಅತ್ಯಂತ ದೊಡ್ಡ ಧಾರ್ಮಿಕ ಸಮಾರಂಭವಾಗಿ ಗುರುತಿಸಲ್ಪಟ್ಟಿದೆ. ಮೊನ್ನೆ ಎಲ್ಲೋ ಓದಿದ ಪ್ರಕಾರ ವಿಶ್ವದ ಶೇ.5ರಷ್ಟು ಜನರು ಈ ಕುಂಭಮೇಳದಲ್ಲಿ ಭಾಗವಹಿಸುತ್ತಾರೆಂದರೆ ಇದರ ಪ್ರಭಾವವನ್ನು ಊಹಿಸಬಹುದು. ಈ ಕುಂಭಮೇಳಕ್ಕೆ ಹೋಗಿ ಅನನ್ಯ ಅನುಭವ ಪಡೆದ ಮೂವರು ಸ್ನೇಹಿತರು ಮೊನ್ನೆ ನನ್ನ ಕ್ಲಿನಿಕ್ಕಿಗೆ ಬಂದ ಪ್ರಸಂಗ ಅದು. ಬಂದ ಕಾರಣ, ಕುಂಭಮೇಳದಿಂದ ಹಿಂತಿರುಗಿದ ನಂತರದ ಅನಾರೋಗ್ಯ. ಒಬ್ಬನಿಗೆ ಹೊಟ್ಟೆ ನೋವು ಮತ್ತು ಮಲಸ್ತಂಭವಾದರೆ, ಇನ್ನೊಬ್ಬನಿಗೆ ವಾಂತಿ–ಬೇಧಿ ಮತ್ತು ಜ್ವರ. ಮೂರನೇ ವ್ಯಕ್ತಿಗೆ ಆಯಾಸ, ತಲೆನೋವು ಮತ್ತು ಮೈ ಕೈ ನೋವು. ಅವರ ಕಳೆದ ವಾರದ ಆಹಾರ–ವಿಹಾರಗಳನ್ನು ವಿಚಾರಿಸಿದಾಗ, ನನಗೆ ಹೊಳೆದ ಮೊದಲ ವಿಚಾರವೇನೆಂದರೆ– ''ಅಯ್ಯೋ, ಪ್ರಯಾಣದ ವೇಳೆ ಆಯುರ್ವೇದದ ಕೆಲವು ಸರಳ ನಿಯಮಗಳನ್ನು ಪಾಲಿಸಿದ್ದರೆ ಈ ಏರುಪೇರುಗಳನ್ನು ನಿವಾರಿಸಬಹುದಿತ್ತಲ್ಲಪ್ಪ!'' ಅಂತ. ಹಾಗಾಗಿ ಈ ವಾರ, ಪ್ರಯಾಣದಲ್ಲಿ ನಮ್ಮ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳಬಹುದು ಎಂಬ ಕುರಿತಾಗಿ ಮಾಹಿತಿ ಹಂಚಿಕೊಳ್ಳುವೆ.

ನಾವೆಲ್ಲರೂ ಪ್ರಯಾಣ ಅಥವಾ ಪ್ರವಾಸವನ್ನು ಅತಿಯಾಗಿ ಇಷ್ಟಪಡಲು ಕೆಲವು ಕಾರಣಗಳೆಂದರೆ, ಪ್ರಯಾಣದಿಂದ ಶರೀರವು ಆಲಸ್ಯವನ್ನು ತೊಡೆದು ಚೈತನ್ಯವನ್ನು ತುಂಬಿಕೊಳ್ಳುತ್ತದೆ, ಮನಸ್ಸಿಗೆ ಮುದ ದೊರೆಯುತ್ತದೆ ಹಾಗೂ ಸಂಬಂಧಗಳಲ್ಲಿ ನಾವೀನ್ಯ ಬರುತ್ತದೆ. ಬೇಕೋ ಬೇಡವೋ, 'ದೇಶ ಸುತ್ತಿ ನೋಡು, ಕೋಶ ಓದಿ ನೋಡು' ಎಂಬುವಂತೆ ಅಪಾರ ಜ್ಞಾನಸಂಚಯವೂ ಆಗುತ್ತದೆ. ಆದ್ದರಿಂದ, ಪ್ರಯಾಣವೆಂದರೆ ಎಲ್ಲರಿಗೂ ಇಷ್ಟ. ಹೋಗುವ ಮುನ್ನ ಅತಿಯಾಗಿ ಇಷ್ಟಪಟ್ಟು ಹೊರಡುವುದಂತೂ ನಿಜ. ಆದರೆ, ಬಂದ ಮೇಲೆ ಪಡುವ ಕಷ್ಟ ಯಾರಿಗೂ ಬೇಡ. ಪ್ರಯಾಣದ ನಂತರ 90 ಪ್ರತಿಶತ ಜನರು ಒಂದಲ್ಲ ಒಂದು ಆರೋಗ್ಯ ಸಮಸ್ಯೆಯಿಂದ ಬಳಲುವುದು ಖಚಿತ. ಹಾಗಾದರೆ, ಪ್ರಯಾಣ ಮುಗಿಸಿ ಬಂದಾಗಲೆಲ್ಲ ಆರೋಗ್ಯದ ಏರುಪೇರು ಆಗುವುದು ಸಹಜವೇ? ಎಲ್ಲರೂ ಹೀಗೆ ನರಳಲೇಬೇಕೆ? ಸುಖಪ್ರಯಾಣ ಮುಗಿಸಿ ಬಂದ ಮೇಲೂ ಸುಖವಾಗಿರುವುದು ಹೇಗೆ ಎಂಬುದರ ಬಗ್ಗೆ ಸ್ವಲ್ಪ ಚರ್ಚಿಸೋಣ.

ಪ್ರಯಾಣ ಮಾಡುವಾಗ ನಮ್ಮ ಶರೀರದಲ್ಲಿ ಏನು ಬದಲಾವಣೆಗಳಾಗುತ್ತವೆ ಎಂಬುದನ್ನು ಮೊದಲು ಅರಿಯೋಣ. ಸಾಮಾನ್ಯವಾಗಿ ಪ್ರಯಾಣದಲ್ಲಿ ಎಲ್ಲರಿಗೂ ಆಗುವ ವ್ಯತ್ಯಾಸವೆಂದರೆ ನಮ್ಮ ಹಸಿವು, ಬಾಯಾರಿಕೆ, ಮಲ–ಮೂತ್ರ ಮತ್ತು ನಿದ್ದೆಗಳಲ್ಲಿ ಏರುಪೇರು. ಇದು ನೇರವಾಗಿ ನಮ್ಮ ಜೈವಿಕ ಗಡಿಯಾರವನ್ನು ಬದಲಿಸುತ್ತದೆ. ಮೊಟ್ಟ ಮೊದಲಿಗೆ ಪ್ರಯಾಣ ಮಾಡುವಾಗ ನಾವು ದೇಹದ ಸಹಜ ಪ್ರವೃತ್ತಿಗಳನ್ನು ತಡೆಯದೆ ಅಥವಾ ಅವುಗಳನ್ನು ಒತ್ತಾಯದಿಂದ ಪ್ರವೃತ್ತಿಗೊಳಿಸದೆ ಇರುವುದರಿಂದ ಸಹಜವಾಗಿ ಆರೋಗ್ಯದ ರಕ್ಷಣೆಯಾಗುತ್ತದೆ. ಅವುಗಳಲ್ಲಿ ಮುಖ್ಯವಾದ ಕೆಲವನ್ನು ನೋಡೋಣ.

- **ಮಲ–ಮೂತ್ರ–ಅಪಾನವಾಯು ಪ್ರವೃತ್ತಿಗಳು:** ಪ್ರಯಾಣದಲ್ಲಿ ಸಾಮಾನ್ಯವಾಗಿ ನಾವು ಮಲ, ಮೂತ್ರ ಹಾಗೂ ಅಪಾನವಾಯುವಿನ ಪ್ರವೃತ್ತಿಯನ್ನು ತಡೆಯುತ್ತೇವೆ. ಇದರಿಂದ ಖಂಡಿತವಾಗಿಯೂ ಹೊಟ್ಟೆ ನೋವು, ತಲೆನೋವು, ಆಯಾಸ ಮತ್ತು ಅಜೀರ್ಣದ ಸಮಸ್ಯೆಗಳು ಉದ್ಭವಿಸಬಹುದು. ಅಂತೆಯೇ, ಮೂತ್ರ ಪ್ರವೃತ್ತಿಯನ್ನು ತಡೆಯುವುದರಿಂದ ಮೂತ್ರಾಶ್ಮರಿ, ಕೆಳಹೊಟ್ಟೆ ನೋವು ಮತ್ತು ಮೂತ್ರ ಮಾರ್ಗಗಳಲ್ಲಿ ವೇದನೆಯ ತೊಂದರೆಗಳು ಕಾಣಿಸಿಕೊಳ್ಳಬಹುದು. ಹಾಗಾಗಿ, ಸಕಾಲದಲ್ಲಿ ಮಲ ಮೂತ್ರಗಳ ಪ್ರವೃತ್ತಿಗೆ ಅನುಕೂಲವಾಗುವಂತೆ ಪ್ರಯಾಣದ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಇಲ್ಲವೇ, ಕನಿಷ್ಠ 3–4 ತಾಸುಗಳಿಗೊಮ್ಮೆ ಆದರೂ ಮೂತ್ರ ನಿಸ್ಸರಣಕ್ಕೆ ಅವಕಾಶವಿರುವ ವಾಹನದಲ್ಲಿ ಪ್ರಯಾಣಿಸಬೇಕು.
- **ಹಸಿವು–ನೀರಡಿಕೆಗಳ ಪ್ರವೃತ್ತಿ:** ವಾಹನ ನಿಲ್ಲಿಸಿದಾಗಲೆಲ್ಲ ಆಹಾರ ಸೇವಿಸುವುದು ಅಥವಾ ಆಹಾರ ಕಾಲದಲ್ಲಿ ಆಹಾರ ತೆಗೆದುಕೊಳ್ಳದೆ ಇರುವುದು ಅಥವಾ ಪ್ರಯಾಣದುದ್ದಕ್ಕೂ ಏನನ್ನಾದರೂ ಸೇವಿಸುತ್ತಿರುವುದು ನಾವು ಮಾಡುವ ಪ್ರಮುಖ ತಪ್ಪುಗಳು. ಹೀಗೆ ಕ್ರಮರಹಿತವಾಗಿ ಆಹಾರ ಸೇವಿಸಿ ಪ್ರಯಾಣಿಸುವುದರಿಂದ ಅಗ್ನಿಮಾಂದ್ಯ, ಮಲಬದ್ಧತೆ, ತಲೆನೋವು ಮತ್ತು ಅಮ್ಲ ಪಿತ್ತಗಳು ಕಾಣಿಸಿಕೊಳ್ಳಬಹುದು. ಅಂತೆಯೇ, ಅಭ್ಯಾಸವಿಲ್ಲದ ಆಹಾರ, ಕರಿದ ಪದಾರ್ಥಗಳು ಅಥವಾ ಜಡ ಆಹಾರವನ್ನು ಪ್ರಯಾಣದ ವೇಳೆ ಸೇವಿಸಿದಾಗ ವಾಂತಿ–ಬೇಧಿ ಹಾಗೂ ತೀವ್ರ ಜ್ವರ ಕಾಣಿಸಿಕೊಳ್ಳಬಹುದು. ಅಂತೆಯೇ, ಬಾಯಾರಿಕೆಯನ್ನು ತಡೆದರೆ ತಲೆ ತಿರುಗುವಿಕೆ ಹಾಗೂ ತಲೆನೋವು ಉಂಟಾಗಬಹುದು. ದಾಹವನ್ನು ತಡೆಯುವುದರಿಂದ ತೊಂದರೆಯಾಗುವಂತೆ ಬಾಯಾರಿಕೆ ಇಲ್ಲದೆಯೇ ಪದೇಪದೆ ದ್ರವಹಾರವನ್ನು ಸೇವಿಸುವುದರಿಂದಲೂ, ಕಾರಣವಿಲ್ಲದೆಯೇ ಹೆಚ್ಚಾಗಿ ನೀರು ಕುಡಿಯುವುದರಿಂದಲೂ, ಪದೇ ಪದೆ ಜ್ಯೂಸ್ ಮತ್ತು ಎಳನೀರು ಹೀರುವುದರಿಂದಲೂ ಪಚನಶಕ್ತಿ ಕಡಿಮೆಯಾಗಿ ಅಮ್ಲ ಪಿತ್ತ, ತಲೆನೋವು, ತಲೆಭಾರ, ನೆಗಡಿ ಮತ್ತು ಹೊಟ್ಟೆ ನೋವುಗಳ ತೊಂದರೆಗಳಾಗಬಹುದು.
- **ನಿದ್ರೆಯ ಪ್ರವೃತ್ತಿ:** ಪ್ರತಿಯೊಬ್ಬರಿಗೂ ಅವರವರ ಪ್ರಕೃತಿಗೆ ಅನುಸರಿಸಿ 6ರಿಂದ 9 ತಾಸಿನವರೆಗೆ ನಿದ್ರೆಯ ಅವಶ್ಯಕತೆ ಇರುತ್ತದೆ. ಅನೇಕ ಸಲ ರಾತ್ರಿ ಪ್ರಯಾಣದಲ್ಲಿ ಈ ನಿದ್ರೆಗೆ ಬಾಧೆ ಉಂಟಾಗುತ್ತದೆ. ಹೀಗೆ, ನಿದ್ರೆಗೆಡುವುದರಿಂದ ಆಕಳಿಕೆ, ಮೈಕೈ ನೋವು, ತಲೆ ಸುತ್ತುವುದು, ಅರೆ ತಲೆನೋವು, ಕಣ್ಣು ಭಾರವಾಗುವುದು ಇತ್ಯಾದಿ ಸಮಸ್ಯೆಗಳಾಗಬಹುದು. ಆದಷ್ಟು ರಾತ್ರಿ ಪ್ರಯಾಣವನ್ನು ವರ್ಜಿಸಿ, ಅನಿವಾರ್ಯದಲ್ಲಿ ಮಾತ್ರ ರಾತ್ರಿ ನಿದ್ರೆಗೆಡದೆ ಇರುವಂತೆ ಪ್ರಯಾಣದ ವ್ಯವಸ್ಥೆ ಮಾಡಿಕೊಳ್ಳುವುದು ಒಳಿತು.
- **ವಾಂತಿಯ ಪ್ರವೃತ್ತಿ:** ಹಲವರಿಗೆ ವಾಹನದಲ್ಲಿನ ಪ್ರಯಾಣದಿಂದ ವಾಂತಿಯಾಗುವುದು ಸಾಮಾನ್ಯ. ನಮ್ಮಲ್ಲಿ ವಾಂತಿಯ ಕುರಿತು ಅಕಾರಣ ಭೀತಿ ಮನೆಮಾಡಿದೆ. ಯಾರಿಗೆ ವಾಂತಿಯಾದರೂ ತಕ್ಷಣವೇ ಅದನ್ನು ನಿಲ್ಲಿಸುವ ಪ್ರಯತ್ನ ಮಾಡುತ್ತೇವೆ. ಔಷಧಿಗಳನ್ನು ತೆಗೆದುಕೊಂಡು ಅದನ್ನು ಬಲವಂತವಾಗಿ ಅವರೋಧಿಸುತ್ತೇವೆ. ಹೀಗೆ ವಾಂತಿಯನ್ನು ತಡೆಯುವುದರಿಂದ ಭಯಾನಕ ಚರ್ಮರೋಗಗಳು, ಹೊಟ್ಟೆ ಉಬ್ಬರ, ಕಣ್ಣಿನ ತೊಂದರೆ, ಅರ್ದಿತ, ಅಜೀರ್ಣ, ಯಕೃತ್ ವಿಕಾರ, ಹೊಟ್ಟೆ ನೋವು, ಜಲೋದರದವರೆಗೂ ಆಗಬಹುದು. ಪ್ರಯಾಣಕ್ಕೆ ಮೊದಲೇ ವಾಂತಿ ನಿಲ್ಲಿಸುವ ಮಾತ್ರೆಗಳನ್ನು ಸೇವಿಸುವುದನ್ನು ನಾವು ಬಿಡಬೇಕು. ಇಂಥ ಅಸಹಜ ಒತ್ತಡಗಳಿಂದ ಸಹಜವಾಗಿ ಶರೀರದ ಧಾತುಗಳಲ್ಲಿ ವಿಷಮತೆ ಮನೆಮಾಡಿ ಕ್ರಮೇಣ ಗುಣಪಡಿಸಲಾಗದ ವ್ಯಾಧಿಗಳು ಉದ್ಭವಿಸಬಹುದು. ಆದ್ದರಿಂದ ಪ್ರಯಾಣದಲ್ಲಿ ವಾಂತಿಯಾದಾಗ ಯಾವುದೇ ಸಂಕೋಚವಿಲ್ಲದೆ ಸಂಪೂರ್ಣವಾಗಿ ವಾಂತಿ ಮಾಡಬೇಕು. ವಾಂತಿ ನಿಲ್ಲಿಸುವ ಔಷಧಗಳನ್ನು ಪ್ರಯೋಗ ಮಾಡಬಾರದು. ವಾಂತಿ ನಿಂತ ಮೇಲೆ ಕನಿಷ್ಠ 4–6 ತಾಸು ಏನೂ ಕೊಡದೆ ವಿಶ್ರಾಂತಿ ಮಾಡಿಸಬೇಕು. ವಾಂತಿಯಾದ ಮೇಲೆ ಹುಳಿ–ಸಿಹಿ ಹಣ್ಣಿನ ರಸಗಳನ್ನು ಹನಿ ಹನಿಯಾಗಿ ನಾಲಿಗೆಗೆ ನೆಕ್ಕಿಸಬೇಕು. ಕ್ರಮೇಣ ಪಚನಕ್ಕೆ ಹಗುರವಾದ ಆಹಾರಗಳನ್ನು ಸ್ವಲ್ಪ ಸ್ವಲ್ಪವಾಗಿ ಕೊಟ್ಟರೆ ತೊಂದರೆ ಆಗದು.

ಪ್ರಯಾಣಿಸುವಾಗ ಆರೋಗ್ಯವನ್ನು ರಕ್ಷಣೆ ಮಾಡಿಕೊಳ್ಳಲು, ಮೇಲೆ ಹೇಳಿರುವ ಪ್ರವೃತ್ತಿಗಳನ್ನು ಕಾಪಾಡಿಕೊಳ್ಳುವುದು ಮೊದಲ ಕರ್ತವ್ಯವಾಗುತ್ತದೆ. ಇದರೊಂದಿಗೆ ಇನ್ನಿತರ ಕೆಲವು ಸುಲಭ ನಿಯಮಗಳನ್ನು ಹಂಚಿಕೊಳ್ಳಲು ಬಯಸುವೆ.

ಹೊರಡುವ ಮುನ್ನ ಕೆಲವು ಪೂರ್ವ ತಯಾರಿಗಳನ್ನು ಮಾಡಿಕೊಂಡರೆ ಸಹಕಾರಿ. ಉದಾಹರಣೆಗೆ, ಹೋಗುತ್ತಿರುವ ಪ್ರದೇಶದ ವಾತಾವರಣ, ಅಲ್ಲಿನ ಆಹಾರ, ಜೀವನಕ್ರಮದ ಪರಿಚಯ ಮಾಡಿಕೊಳ್ಳುವುದು. ವಾತಾವರಣವನ್ನು ಎದುರಿಸಲು ಅಗತ್ಯವಾದ ಬಟ್ಟೆ, ಹಾಸಿಗೆ–ಹೊದಿಕೆ ಮತ್ತು ಆಹಾರ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗುವುದು. ಪ್ರವಾಸ ಮಾಡುವಾಗ ದಿನನಿತ್ಯದ ಆಹಾರ ನಿದ್ರೆಗಳ ಸಮಯವು ವ್ಯತ್ಯಾಸವಾಗದ ಹಾಗೆ ಯೋಜನೆ ಹಾಕಿಕೊಳ್ಳುವುದು. ಹೀಗೆ ಮಾಡಿದಲ್ಲಿ ಸಾಕಷ್ಟು ತೊಂದರೆಗಳನ್ನು ತಪ್ಪಿಸಬಹುದು.

ಪ್ರಯಾಣದಿಂದ ಮೈ ಕೈ ನೋವು, ಆಯಾಸ, ಮಲಬದ್ಧತೆ, ಕಾಲಿನ ಊತ ಮತ್ತು ತಲೆನೋವು ಸಾಮಾನ್ಯವಾಗಿ ಕಾಡುತ್ತದೆ. ಇವೆಲ್ಲವೂ ವಾತ ದೋಷದಿಂದಲೇ ಸಂಭವಿಸುವುದು. ಆದ್ದರಿಂದ, ಪ್ರಯಾಣ ಮಾಡುವ ಮುನ್ನ, ಮಾಡುವಾಗ ಮತ್ತು ಮಾಡಿ ಬಂದ ಬಳಿಕ ನಿತ್ಯವೂ ಬೆಚ್ಚಗಿನ ಎಳ್ಳೆಣ್ಣೆಯನ್ನು ಇಡೀ ಮೈಗೆ ಸವರಿಕೊಳ್ಳುವುದು, ನಂತರ ಬಿಸಿನೀರಿನ ಸ್ನಾನ ಮಾಡುವುದು ಅತ್ಯಂತ ಹಿತಕರ. ಇದು ಸಹಜವಾಗಿಯೇ ವಾತ ದೋಷವನ್ನು ನಿಯಂತ್ರಿಸಲು ಸಹಕಾರಿ. ಇದು ನಿದ್ರೆಯಲ್ಲಾಗುವ ಏರುಪೇರುಗಳನ್ನು ಸಹಿಸಿಕೊಳ್ಳುವ ಶಕ್ತಿಯನ್ನು ನೀಡುತ್ತದೆ. ಮೈಯನ್ನು ಹದವಾಗಿಸಿ ನೋವುಗಳನ್ನು ನಿವಾರಿಸುತ್ತದೆ. ಆದರೆ ಪ್ರಯಾಣದಿಂದ ಅಜೀರ್ಣವಾಗಿದ್ದರೆ, ಜ್ವರ ಇದ್ದರೆ ಅಭ್ಯಂಗ ಮಾಡಬಾರದು.

ಪ್ರಯಾಣ ಮಾಡುವಾಗ ತಲೆಸುತ್ತುವುದು, ಕಿವಿಯಲ್ಲಿ ಶಬ್ದ, ಕಣ್ಣು ಕತ್ತಲೆ ಸಾಮಾನ್ಯವಾಗಿ ಸಂಭವಿಸುವುದು ತಲೆಯಲ್ಲಿ ಆಗುವ ರಕ್ತ ಸಂಚಾರದ ವ್ಯತ್ಯಾಸದಿಂದ. ಹಾಗಾಗಿ, ಪ್ರಯಾಣ ಮಾಡುವ ಮುನ್ನ ಸಾಕಷ್ಟು ಜಿಡ್ಡಿನ ಪೋಷಣೆಯನ್ನು ತಲೆಗೆ/ಕಿವಿಗಳಿಗೆ ನೀಡಿ. ತಲೆಗೆ ಚೆನ್ನಾಗಿ ಎಣ್ಣೆ ಹಚ್ಚಿಕೊಳ್ಳುವುದು, ಕಿವಿಗಳಿಗೆ ಬೆಚ್ಚಗಿನ ಎಣ್ಣೆಯನ್ನು ಹಾಕುವುದು ನಮ್ಮನ್ನು ರಕ್ಷಿಸುತ್ತದೆ.

ಇನ್ನು ಚಲಿಸುವ ವಾಹನದಲ್ಲಿ ವಾಂತಿ ಮಾಡಿಕೊಳ್ಳುವುದು ಸರ್ವೇಸಾಮಾನ್ಯ. ಇದಕ್ಕೆ ಮುಖ್ಯ ಕಾರಣವೆಂದರೆ ಹೊಟ್ಟೆತುಂಬಾ ತಿಂದು, ತಿಂದ ಕೂಡಲೇ ಪ್ರಯಾಣಿಸುವುದು. ಹಾಗಾಗಿ ಹಗುರವಾದ, ಜೀರ್ಣಕ್ಕೆ ಸುಲಭವಾದ ಆಹಾರವನ್ನು ಕನಿಷ್ಠ ಪಕ್ಷ ಪ್ರಯಾಣಕ್ಕೆ ಒಂದು ತಾಸು ಮುನ್ನವೇ ಸೇವಿಸುವುದು ಒಳ್ಳೆಯದು. ಹಾಗೆಯೇ, ಪ್ರಯಾಣದಲ್ಲಿ ಮಧ್ಯ ಮಧ್ಯ ತಿನ್ನುವುದನ್ನು ತಡೆದರೆ ಒಳಿತು.

ಇನ್ನು ಪ್ರಯಾಣ ಮಾಡುವಾಗ ಪಾಲಿಸಬೇಕಾದ ಆಹಾರ ನಿಯಮಗಳ ಬಗ್ಗೆ ತಿಳಿದುಕೊಳ್ಳೋಣ. ಪ್ರಯಾಣದಲ್ಲಿ ಹಸಿವೆ ಇದ್ದಾಗ ಮಾತ್ರ ಆಹಾರವನ್ನು, ಬಾಯಾರಿಕೆ ಆದಾಗ ಮಾತ್ರ ಪಾನೀಯವನ್ನು ಕುಡಿಯುವುದು. ಇಲ್ಲವಾದರೆ ಕಾಯುವುದು. ಇದು ಬಹುದೊಡ್ಡ ರಕ್ಷಾಕವಚ. ಪ್ರಯಾಣ ಮಾಡುವಾಗ ಸದಾ ಅಭ್ಯಾಸವಿರುವ, ಜೀರ್ಣಕ್ಕೆ ಹಗುರವಾಗುವ ಆಹಾರವೇ ಸೂಕ್ತ. ಪ್ರಯಾಣದ ನಂತರ ಆಹಾರದಲ್ಲಿ ತುಪ್ಪ, ಬೆಣ್ಣೆ, ಹಾಲು, ಮಾಂಸ ರಸಗಳ ಬಳಕೆಯು ಪ್ರಯಾಣದಿಂದ ಉಂಟಾದ ಆಯಾಸವನ್ನು ನಿವಾರಿಸುತ್ತದೆ. ಹಾಗೆಯೇ ಮಲಬದ್ಧತೆಯನ್ನು ಪರಿಹರಿಸುತ್ತದೆ. ಇದು ನೋವುನಿವಾರಕ ಹಾಗೂ ನಿದ್ರಾಜನಕ. ಪ್ರಯಾಣ ಮಾಡುವಾಗ ಸದಾ ಆಹಾರದ ಜತೆ ಕಾಯಿಸಿದ ಬಿಸಿನೀರನ್ನೇ ಸೇವಿಸುವುದು ಒಳ್ಳೆಯದು. ಅತಿಯಾದ ತಂಪಾದ ಪಾನೀಯ, ಐಸ್ ಕ್ರೀಮ್, ಎಳನೀರುಗಳನ್ನು ಊಟದ ನಂತರ ಪದೇ ಪದೆ ಸೇವಿಸುವುದರಿಂದ ಗಂಟಲುನೋವು, ನೆಗಡಿ, ತಲೆಭಾರ ಕಾಣಿಸಿಕೊಳ್ಳುತ್ತದೆ.

ಇನ್ನು ನಿದ್ರೆಯ ವ್ಯತ್ಯಾಸವನ್ನು ಸುಧಾರಿಸಿಕೊಳ್ಳುವ ಬಗ್ಗೆ ಹೇಳುವುದಾದರೆ, ಬೆಳಗ್ಗೆ ತಲುಪಬೇಕಾದ ಸ್ಥಳವನ್ನು ತಲುಪಿದ ಕೂಡಲೇ 3–4 ತಾಸು ಸುಖನಿದ್ರೆ ಮಾಡಿ, ನಂತರ ಮೈಗೆ ಬೆಚ್ಚಗಿನ ಎಣ್ಣೆ ಹಚ್ಚಿ, ಅಭ್ಯಂಜನ ಸ್ನಾನ ಮಾಡಿ, ನಂತರ ಪಚನಕ್ಕೆ ಹಗುರವಾದ ಸಿಹಿಯಾದ ಆಹಾರ ಸೇವನೆ ಮಾಡುವುದು ಒಳ್ಳೆಯದು. ಆ ದಿನ ಶರೀರಕ್ಕೆ ಶ್ರಮವಾಗದ ಕೆಲಸಗಳನ್ನು ಮಾಡಿ ಹೆಚ್ಚು ವಿಶ್ರಾಂತಿ ಪಡೆದರೆ ಅನುಕೂಲವಾಗುತ್ತದೆ.

ಪ್ರಯಾಣದ ಅನುಕೂಲತೆಗಳು ವಿಸ್ತರಿಸುತ್ತಿರುವಂತೆ ವಿಶ್ವವೂ ಕಿರಿದಾಗುತ್ತಿದೆ. ಕಿರಿದಾದ ವಿಶ್ವದಲ್ಲಿ ಪ್ರಯಾಣದ ಸಂದರ್ಭಗಳು ಹೆಚ್ಚಾಗುತ್ತಿವೆ. ದೀರ್ಘಕಾಲದ ಪ್ರಯಾಣ ಅಥವಾ ಅನಿವಾರ್ಯವಾಗಿ ಪ್ರತಿನಿತ್ಯ ನಡೆಯುವ ಪ್ರಯಾಣದಿಂದ ರೋಗೋತ್ಪತ್ತಿಯ ಸಾಧ್ಯತೆಯೂ ಹೆಚ್ಚುತ್ತಿದೆ. ಹಾಗಾಗಿ, ಮೇಲೆ ಹೇಳಿದ ಎಚ್ಚರಿಕೆಯ ಕ್ರಮಗಳನ್ನು ಪ್ರಯಾಣಕ್ಕೆ ಹೊರಡುವ ಮೊದಲು ಹಾಗೂ ಪ್ರಯಾಣದ ನಂತರ ಪಾಲಿಸಿದರೆ ಪ್ರಯಾಣವು ಸುಖಕರವು ಆಹ್ಲಾದಕರವೂ ಆಗುವುದರಲ್ಲಿ ಸಂದೇಹವೇ ಇಲ್ಲ!

ಬನ್ನಿ, ಆಯುರ್ವೇದದೊಂದಿಗೆ ವಿಶ್ವವನ್ನೇ ಗೆಲ್ಲೋಣ!

ಕಳಕಳಿ

ಮರಿಲಿಂಗಗೌಡ ಮಾಲೀಪಾಟೀಲ್

ಕೆಪಿಎಸ್ ಶಾಲೆಯ ಉಸಾಬರಿಯೇಕೆ?

ಉತ್ತಮ ಗುಣಮಟ್ಟದ, ಇಂಗ್ಲಿಷ್ ಮಾಧ್ಯಮದ ಮತ್ತು ದುಬಾರಿ ಶುಲ್ಕವಿರುವ ಖಾಸಗಿ ಶಾಲೆಗಳಲ್ಲಿ ಬಡವರ ಮಕ್ಕಳು ಕಲಿಯುವುದು ಅಸಾಧ್ಯ; ಹೀಗಾಗಿ ಸರಕಾರವೇ ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನು ಆರಂಭಿಸಲಿ ಎಂಬುದು ಪೋಷಕರ ಅಭಿಪ್ರಾಯವಾಗಿತ್ತು. ಅಂತೆಯೇ, ಗುಣಮಟ್ಟದಲ್ಲಿ ಖಾಸಗಿ ಶಾಲೆಗೆ ಸೆಡ್ಡು ಹೊಡೆಯುವಂಥ 'ಕರ್ನಾಟಕ ಪಬ್ಲಿಕ್ ಶಾಲೆ'ಗಳನ್ನು ಸರಕಾರ ಪ್ರಾರಂಭಿಸಿತು. ಆದರೆ, ಇವಕ್ಕೆ ಸಂಬಂಧಿಸಿದ 'ಶಾಲಾಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ'ಗೆ (ಎಸ್‌ಡಿಎಂಸಿ) ಶಾಸಕರನ್ನು ಅಧ್ಯಕ್ಷರನ್ನಾಗಿ ಪರಿಗಣಿಸುವ ಶಿಕ್ಷಣ ಇಲಾಖೆಯ ನಿರ್ಧಾರವು ಈ ಹೊಸ ವ್ಯವಸ್ಥೆಯನ್ನು ಹಾಳುಗೆಡವಬಹುದು ಎಂಬ ಆತಂಕ ಪೋಷಕರಿಗಿದೆ. ಈ ಶಾಲೆಗಳನ್ನು ಪೋಷಕರ, ಅಧ್ಯಾಪಕರ ಮತ್ತು ಶಿಕ್ಷಣ ತಜ್ಞರ ಸುಪರ್ದಿಯಲ್ಲಿಯೇ ನಡೆಸಬಾರದೇಕೆ ಎಂಬ ಬಗ್ಗೆ ಒಂದು ವಿಶ್ಲೇಷಣೆ ಇಲ್ಲಿದೆ.

ಬಡವ–ಶ್ರೀಮಂತರೆಂಬ ಭೇದವಿಲ್ಲದೆ ಎಲ್ಲಾ ಮಕ್ಕಳಿಗೂ ಶಿಕ್ಷಣವು ದೊರೆಯಬೇಕಿರುವುದು ಸಾಮಾಜಿಕ ಅಗತ್ಯ. ಆದರೆ ಖಾಸಗಿ ಶಾಲೆಗಳು ಹೆಚ್ಚತೊಡಗಿದಂತೆ, 'ಇದು ಅಸಾಧ್ಯ' ಎನಿಸತೊಡಗಿದ್ದೂ ವಾಸ್ತವವೇ. ಇಷ್ಟಾಗಿಯೂ ಖಾಸಗಿ ಶಾಲೆಗಳು ಜನಪ್ರಿಯವಾಗತೊಡಗಿದವು, ಅದೇ ವೇಳೆಗೆ ಸರಕಾರಿ ಶಾಲೆಗಳಲ್ಲಿನ ತೇರ್ಗಡೆ ಪ್ರಮಾಣವು ವರ್ಷದಿಂದ ವರ್ಷಕ್ಕೆ ಕುಸಿಯುತ್ತಿತ್ತು. ಇದನ್ನು ತಹಬಂದಿಗೆ ತರಲು ಹಾಗೂ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ರಾಜ್ಯ ಸರಕಾರವು 'ಕರ್ನಾಟಕ ಪಬ್ಲಿಕ್ ಶಾಲೆ'ಗಳನ್ನು ಆರಂಭಿಸಿತು. 'ಬಡವರ ಮಕ್ಕಳೂ ಬೆಳೆಯಬೇಕು' ಎನ್ನುವವರಿಗೆ ಈ ಶಾಲೆಗಳು ವರದಾನವಾದವು. ಈ ಶಾಲೆಗಳಲ್ಲಿ ಕನ್ನಡದ ಜತೆಗೆ ಇಂಗ್ಲಿಷ್ ಮಾಧ್ಯಮವೂ ಇದ್ದು, ಎಲ್‌ಕೆಜಿಯಿಂದ 12ನೇ ತರಗತಿವರೆಗೆ ಶಿಕ್ಷಣ ನೀಡಲಾಗುತ್ತದೆ. ಹೀಗಾದಾಗ ಪ್ರತಿ ವಿದ್ಯಾರ್ಥಿಯ ಮೇಲೂ ಶಿಕ್ಷಕರು ಗಮನಹರಿಸಲು ಸಾಧ್ಯ ಮತ್ತು ಶಿಕ್ಷಕರ ಬೋಧನಾ ಸಾಮರ್ಥ್ಯವೂ ಹೆಚ್ಚುತ್ತದೆ. ಈ ಶಾಲೆಗಳಲ್ಲಿ ಸ್ಮಾರ್ಟ್‌ಕ್ಲಾಸ್, ಇಂಟರಾಕ್ಟಿವ್ ಬ್ಲ್ಯಾಕ್‌ಬೋರ್ಡ್, ಸುಸಜ್ಜಿತ ಪ್ರಯೋಗಾಲಯ ಮತ್ತು ಗ್ರಂಥಾಲಯ, ಸಿಸಿಟಿವಿ, ಅಗತ್ಯವಿರುವಷ್ಟು ಕೋಣೆಗಳು, ರಾಷ್ಟ್ರೀಯ ವಿದ್ಯಾರ್ಥಿ ವೇತನದ ಪರೀಕ್ಷೆಗಳನ್ನು ಎದುರಿಸಲು ವಿಶೇಷ ತರಗತಿಗಳು ಇಂಥ ವ್ಯವಸ್ಥೆ/ಪರಿಕರಗಳಲ್ಲದೆ ಸಾಕಷ್ಟು ಶಿಕ್ಷಕರೂ ಲಭ್ಯ. ಒಟ್ಟಾರೆಯಾಗಿ, ಯಾವುದೇ ಖಾಸಗಿ ಶಾಲೆಗೆ ಸೆಡ್ಡು ಹೊಡೆಯಬಲ್ಲ ಸಜ್ಜಿಕೆಯಿಲ್ಲಿದೆ. ಈ ಶಾಲೆಗೆ ಹಿರಿಯ ಉಪನ್ಯಾಸಕರೊಬ್ಬರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಲಾಗುತ್ತಿದ್ದು, ಅವರು ತಿಂಗಳಲ್ಲಿ ಕನಿಷ್ಠ 2 ಬಾರಿ ಭೇಟಿ ನೀಡಿ ಶೈಕ್ಷಣಿಕ ಚಟುವಟಿಕೆಗಳ ಮೇಲ್ವಿಚಾರಣೆ ಮಾಡಬೇಕಿರುತ್ತದೆ. ಈ ಸಜ್ಜಿಕೆ ಜನಪ್ರಿಯವಾದ ಕಾರಣದಿಂದಾಗಿ ಇಂದು ರಾಜ್ಯದಲ್ಲಿ ಸಾವಿರಕ್ಕೂ ಹೆಚ್ಚು ಕರ್ನಾಟಕ ಪಬ್ಲಿಕ್ ಶಾಲೆಗಳಿವೆ.

ಆದರೆ, ಪಾತ್ರೆಯಲ್ಲಿನ ಹಾಲಿಗೆ ಹನಿಯಷ್ಟು ಹುಳಿ ಬೆರೆತರೆ ಹಾಳಾಗುವಂತೆಯೇ, ಉತ್ತಮ ವ್ಯವಸ್ಥೆಯೊಂದು ಒಂದು ತಪ್ಪು ನಿರ್ಧಾರದಿಂದಾಗಿ ಕುಸಿಯಬಹುದು. ಕೆಡಹುವುದು ಸುಲಭ, ಆದರೆ ಕಟ್ಟುವುದು ಕಷ್ಟ! ಶಿಕ್ಷಣ ಇಲಾಖೆಯು ಇತ್ತೀಚೆಗೆ ಕೈಗೊಂಡ ನಿರ್ಧಾರವೊಂದು ಈ ಅಭಿಪ್ರಾಯಕ್ಕೆ ಕಾರಣವೆನ್ನಬಹುದು. ಕರ್ನಾಟಕ ಪಬ್ಲಿಕ್ ಶಾಲೆಗಳ 'ಶಾಲಾಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ'ಗೆ ಸ್ಥಳೀಯ ಶಾಸಕರನ್ನು ಪರಿಗಣಿಸಬೇಕೆಂದು ಇಲಾಖೆಯು ಸುತ್ತೋಲೆ ಹೊರಡಿಸಿದ್ದು, 'ಶಾಸಕರು ಇಲ್ಲೇಕೆ?' ಎಂಬ ಪ್ರಶ್ನೆಯು ಪೋಷಕರಲ್ಲಿ ಮೂಡುವುದಕ್ಕೆ ಅದು ಕಾರಣವಾಗಿದೆ. ಶಾಸಕರಿಲ್ಲದೆ ವಿದ್ಯಾಸಂಸ್ಥೆಯನ್ನು ನಡೆಸಲು ಸಾಧ್ಯವಿಲ್ಲವೆಂದು ಇಲಾಖೆ ಭಾವಿಸಿದೆಯೇ? ನಡೆಸಬಹುದು ಎಂದಾದರೆ ಶಾಸಕರನ್ನು ಈ ಶಾಲೆಗಳಿಂದ ದೂರವಿಡಬಾರದೇಕೆ? ಎಲ್ಲಾ ಕಡೆಗಳಲ್ಲೂ ಸ್ಥಳೀಯ ಶಾಸಕರು ಮೂಗು ತೂರಿಸುವುದು ಅನಿವಾರ್ಯವೇ?

ಶಾಸಕರನ್ನು ಹೀಗೆ ಒಳಗೆ ಬಿಟ್ಟುಕೊಂಡರೆ ಅನುಕೂಲಕ್ಕಿಂತ ಅನನುಕೂಲವೇ ಹೆಚ್ಚು. ಏಕೆಂದರೆ, ಬಹುತೇಕ ಶಾಸಕರು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಖಾಸಗಿ ಶಾಲೆಗಳ ಜತೆ ನಂಟುಹೊಂದಿದ್ದಾರೆ. ಬಹಳಷ್ಟು ವಿಧಾನಸಭಾ ಕ್ಷೇತ್ರಗಳಲ್ಲಿ, ಶಾಸಕರಲ್ಲದಿದ್ದರೆ ಅವರ ಸಂಬಂಧಿಕರು ಖಾಸಗಿ ಶಾಲೆಗಳನ್ನು ನಡೆಸುತ್ತಿರುವಂಥ ನಿದರ್ಶನಗಳಿವೆ. ಹೀಗೆ ಖಾಸಗಿ ಶಾಲೆಯೊಂದಿಗೆ ನಂಟು ಹೊಂದಿರುವ ಶಾಸಕರು, ಕರ್ನಾಟಕ ಪಬ್ಲಿಕ್ ಶಾಲೆಗಳ 'ಶಾಲಾಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ'ಯನ್ನು ಸೇರಿಕೊಂಡರೆ/ಅಧ್ಯಕ್ಷರಾದರೆ ಏನಾಗಬಹುದು? ಅದರಿಂದಾಗಿ ಒಳ್ಳೆಯ ವ್ಯವಸ್ಥೆಯೊಂದು ಕುಲಗೆಡುವ ಸಾಧ್ಯತೆಯೇ ಹೆಚ್ಚು. ಶಾಸಕರ ಪ್ರವೇಶವಾಯಿತೆಂದರೆ, ರಾಜಕೀಯವೂ ಅಡಿಯಿಟ್ಟಿತು ಎಂದೇ ಅರ್ಥ. ಸ್ಥಳೀಯ ಶಾಸಕರು ಇಂಥ ಸಮಿತಿಯ ಅಧ್ಯಕ್ಷರಾದರೆ, ರಾಜಕೀಯವಾಗಿ ತಮ್ಮ ಎದುರಾಳಿಯಾಗಿರುವ ಪೋಷಕರ ಬಗ್ಗೆ ಅವರೆಂಥ ನಿಲುವು ತಳೆಯುತ್ತಾರೆಂಬುದನ್ನು ಯಾರಾದರೂ ಅರ್ಥಮಾಡಿಕೊಳ್ಳಬಹುದು. ಶಾಸಕರಿಗೆ ಸ್ವಂತ ಶಾಲೆಯ ಮೇಲಿರುವ ಆಸಕ್ತಿ ಮತ್ತು ಆದ್ಯತೆ ಸರಕಾರಿ ಶಾಲೆಗಳ ಮೇಲಿರಲು ಸಾಧ್ಯವೇ? ಇಂಥ ಸಂದರ್ಭದಲ್ಲಿ ಸ್ವಂತ ಶಾಲೆಯ ಉನ್ನತಿಗಾಗಿ ಕರ್ನಾಟಕ ಪಬ್ಲಿಕ್ ಶಾಲೆಯ ಅಭಿವೃದ್ಧಿಗೆ ಅವರು ಪರೋಕ್ಷವಾಗಿ ಅಡ್ಡಗಾಲು ಹಾಕಿದರೆ ಅದನ್ನು 'ಮಾನವ ಸಹಜ ವರ್ತನೆ' ಎಂದಷ್ಟೇ ಭಾವಿಸಬಹುದು; ಆದರೆ ಇಂಥ ಸ್ವಾರ್ಥದ ಚರ್ಯೆಯಿಂದಾಗಿ ನಷ್ಟಕ್ಕೊಳಗಾಗುವುದು ಮಾತ್ರ ಇಂದಿನ ವಿದ್ಯಾರ್ಥಿಗಳು, ಅರ್ಥಾತ್ ಭವಿಷ್ಯದ ಭಾರತದ ಪ್ರಜೆಗಳು.

ಶಾಸಕರು ಶಾಲಾಭಿವೃದ್ಧಿ ಮತ್ತು ಮೇಲ್ವಿಚಾರಣೆ ಸಮಿತಿಯ ಅಧ್ಯಕ್ಷರಾದರೆ, ಹಲವು ಪರೋಕ್ಷ ವಿಧಾನಗಳ ಮೂಲಕ ಕರ್ನಾಟಕ ಪಬ್ಲಿಕ್ ಶಾಲೆಯ ಶೈಕ್ಷಣಿಕ ಗುಣಮಟ್ಟವನ್ನು ನಿಯಂತ್ರಿಸಿ ತಮ್ಮ ಸ್ವಂತದ ಶಾಲೆಗೆ ನೆರವಾಗಬಹುದು. ಶಾಲಾಭಿವೃದ್ಧಿಗೆ ಹಣ ಪಡೆಯಲು ಶಾಲಾ ಮುಖ್ಯಸ್ಥರು ಮತ್ತು ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರು ಚೆಕ್‌ಗೆ ಸಹಿ ಹಾಕಬೇಕಾಗುತ್ತದೆ. ಆಗ ಶಾಸಕರು ಯಾವುದಾದರೂ ಕುಂಟುನೆಪ ಹೇಳಿ ಚೆಕ್‌ಗೆ ಸಹಿಹಾಕುವುದನ್ನು ವಿಳಂಬಿಸಬಹುದು, ಅನುದಾನ ಬಳಕೆಯಾಗದಂತೆ ಪರೋಕ್ಷವಾಗಿ ಯತ್ನಿಸಬಹುದು (ಕರ್ನಾಟಕ ಪಬ್ಲಿಕ್ ಶಾಲೆಗಳ ನಿರ್ವಹಣೆಗೆ ವಾರ್ಷಿಕ 5 ಲಕ್ಷ ರು. ಮತ್ತು ಪ್ರತಿ ತರಗತಿ ಕೊಠಡಿಯ ದುರಸ್ತಿಗೆ 1 ಲಕ್ಷ ರು. ಅನುದಾನ ಲಭ್ಯವಿದೆ), ಶಿಕ್ಷಕರನ್ನು ನಿರುತ್ಸಾಹಗೊಳಿಸಬಹುದು, ಪರೋಕ್ಷ ಒತ್ತಡ ಹೇರಿ ಚೆನ್ನಾಗಿ ಪಾಠ ಮಾಡಲಾಗದಂಥ ವಾತಾವರಣವನ್ನು ಸೃಷ್ಟಿಸಬಹುದು (ಇದೆಲ್ಲಾ ನಡೆಯುತ್ತಿದೆ ಎನ್ನುತ್ತಿಲ್ಲ, ಆದರೆ ನಡೆಯುವ ಸಾಧ್ಯತೆಗಳಿವೆ). ಹೀಗೆಲ್ಲಾ ಆಗಿ ಸಕಾಲಕ್ಕೆ ಸರಿಯಾಗಿ ಹೆಜ್ಜೆಯಿಡದಿದ್ದಾಗ ಅಭಿವೃದ್ಧಿಯಲ್ಲಿ ಹಿಂದೆ ಬೀಳುವುದು ಸಹಜ.

ಶಾಸಕರಿಗೆ ತಂತಮ್ಮ ಕ್ಷೇತ್ರಗಳಲ್ಲಿ ಮಾಡಬೇಕಿರುವ ಅಭಿವೃದ್ಧಿ ಕೆಲಸಗಳು ಸಾಕಷ್ಟಿವೆ. ಕೆಲವು ಕ್ಷೇತ್ರಗಳನ್ನು ನೋಡಿದರೆ, ಶಾಸಕರು ಕೆಲಸವನ್ನೇ ಮಾಡುತ್ತಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಹೀಗಿರುವಾಗ, ಅವರಿಗೆ ಅನಗತ್ಯ ಹೊರೆ ಹೊರಿಸುವುದು ವಿವೇಕದ ನಡೆ ಅಲ್ಲ. ಕೆಲವೊಮ್ಮೆ ಏನೋ ಲೆಕ್ಕಾಚಾರ ಹಾಕಿ, ಇನ್ನಾವುದೋ ಯೋಚನೆಗಳ ಪ್ರಭಾವದಿಂದಾಗಿ ಇಂಥ ಒಂದಷ್ಟು ನಿರ್ಧಾರಗಳನ್ನು ಕೈಗೊಳ್ಳಲಾಗುತ್ತದೆ. ಶಾಸಕರನ್ನು ಕರ್ನಾಟಕ ಪಬ್ಲಿಕ್ ಶಾಲೆಗಳ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿಗೆ ಪರಿಗಣಿಸುವಂತೆ ಶಿಕ್ಷಣ ಇಲಾಖೆಯಿಂದ ಹೊಮ್ಮಿರುವ ಸೂಚನೆಯು ಅಂಥದೇ ಒಂದು ತಪ್ಪು ನಿರ್ಧಾರ. ಇದರಿಂದ ಲಾಭಕ್ಕಿಂತಲೂ ನಷ್ಟವೇ ಹೆಚ್ಚು ಎಂಬುದು ಮನವರಿಕೆಯಾದ ನಂತರ, ಅದರಿಂದ ಹಿಂದೆ ಸರಿಯುವುದು ಜಾಣತನ. ಈ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆಯು ತನ್ನ ನಿರ್ಧಾರವನ್ನು ಮರುಪರಿಶೀಲಿಸುವ ಅಗತ್ಯವಿದೆ. ಯಾಕೆಂದರೆ, ಶಿಕ್ಷಣ ಕ್ಷೇತ್ರ ಕಲುಷಿತವಾದರೆ ಒಂದು ತಲೆಮಾರೇ ಅದರಿಂದ ಹಾನಿಗೊಳಗಾಗುತ್ತದೆ, ಅದರ ಪರಿಣಾಮವನ್ನು ನಾಡು ಅನುಭವಿಸಬೇಕಾಗುತ್ತದೆ. ಸದ್ಯಕ್ಕಂತೂ ಕರ್ನಾಟಕ ಪಬ್ಲಿಕ್ ಶಾಲೆಗಳು ಉತ್ತಮ ಗುಣಮಟ್ಟದ ಶಿಕ್ಷಣದ ಅಗತ್ಯವನ್ನು ಪೂರೈಸುತ್ತಿವೆ; ಅವನ್ನು ಹಾಗೇ ಮುಂದುವರಿಸುವುದು ಸರಿಯಾದ ನಿರ್ಧಾರ.

(ಲೇಖಕರು ಸಾಮಾಜಿಕ ಕಾರ್ಯಕರ್ತರು)

ಪಂಚ್ ಭಕ್ಷ್ಯ ಪರಮಾನ್ನ..!

ಯಗಟಿ ರಘು ನಾಡಿಗ್



ಜನಾಭಿಪ್ರಾಯ ತಿರುಚುವ ಪರಿಪಾಠಕ್ಕೆ ನಾಂದಿ ಹಾಡಿದ ಚುನಾವಣೆ

ವಿಶ್ಲೇಷಣೆ
ಸಂದೀಪ್ ಬಾಲಕೃಷ್ಣ
vveditoped@gmail.com

ಭಾಗ–2

ಕೃಪಲಾನಿಗೆ 75 ವರ್ಷವಾಗಿತ್ತು. ಆ ವಯಸ್ಸಿನಲ್ಲೂ ಉತ್ಸಾಹದಿಂದ ಪ್ರಚಾರ ನಡೆಸಿದರು. ತಮ್ಮ ಪ್ರಚಾರದ ರಣತಂತ್ರವನ್ನು ತಾವೇ ಹೆಣೆದಿದ್ದರು. ಮೈಮೇಲೆ ದೇವರು ಬಂದವರಂತೆ ಒಂದು ದಿನಕ್ಕೆ 10 ಪ್ರಚಾರ ರ್‍ಯಾಲಿಗಳಲ್ಲಿ ಭಾಷಣ ಮಾಡುತ್ತಿದ್ದರು. ಮನೆಮನೆಗೆ ಹೋಗಿ ಮತ ಯಾಚಿಸಿದರು. ಮತದಾರರಿಗೆ ತಾವು ಯಾವಾಗಲೂ ಲಭ್ಯವಿರುವಂತೆ ನೋಡಿಕೊಂಡಿದ್ದರು. ನಾರ್ತ್ ಬಾಂಬೆ ಕ್ಷೇತ್ರದಲ್ಲಿ ಮತದಾನ ನಡೆಯುವ ದಿನದವರೆಗೂ ಅವರು ವಿಶ್ರಾಂತಿ ತೆಗೆದುಕೊಳ್ಳಲಿಲ್ಲ.

ಆದರೆ ಕೃಷ್ಣ ಮೆನನ್ ಮತ್ತು ನೆಹರುಗೆ ಅತಿದೊಡ್ಡ ತಲೆನೋವು ಕೃಪಲಾನಿ ಅಥವಾ ಅವರ ಜನಪ್ರಿಯತೆಯಾಗಿರಲಿಲ್ಲ. ಬದಲಿಗೆ ಅವರಿಬ್ಬರಿಗೂ ಪಕ್ಷದ ಒಳಗಿನಿಂದಲೇ ಸಮಸ್ಯೆ ಶುರುವಾಗಿತ್ತು.

1957ರ ಚುನಾವಣೆಯಲ್ಲಿ ಕೃಷ್ಣ ಮೆನನ್‌ರ ಗೆಲುವಿಗಾಗಿ ಕಾಂಗ್ರೆಸ್‌ನ ಎಲ್ಲಾ ನಾಯಕರೂ ಬೆವರು ಹರಿಸಿ ದುಡಿದಿದ್ದರು. ಅವರ ಅತಿಯಾದ ಎಡಪಂಥೀಯ ಧೋರಣೆಯ ಬಗ್ಗೆ ತಿಳಿದಿದ್ದರೂ ಅವರ ಪರ ಕೆಲಸ ಮಾಡಿದ್ದರು. ಆದರೆ, ಮುಂದಿನ ಚುನಾವಣೆಯಲ್ಲಿ ಯಾವಾಗ ನೆಹರು ಅವರು ಮತ್ತೆ ಮೆನನ್‌ರನ್ನೇ ಕಣಕ್ಕಿಳಿಸಿದರೋ ಆಗ ಪಕ್ಷದಲ್ಲಿ ಪ್ರತಿಭಟನೆಗಳು ಆರಂಭವಾದವು. ಮಹಾರಾಷ್ಟ್ರದ ಕಾಂಗ್ರೆಸ್ ನಾಯಕರಾದ ಎಸ್.ಕೆ.ಪಾಟೀಲ್ ಮತ್ತು ಮೊರಾರ್ಜಿ ದೇಸಾಯಿಯಂಥವರು ಮೆನನ್ ವಿರುದ್ಧ ಬಹಿರಂಗವಾಗಿ ಮಾತನಾಡತೊಡಗಿದರು. ಅವರ ಕಮ್ಯುನಿಸ್ಟ್ ಪರ ಚಿಂತನೆಗಳು ದೇಶದ ಭವಿಷ್ಯಕ್ಕೆ ಒಳ್ಳೆಯದಲ್ಲ ಎಂದು ಹೇಳತೊಡಗಿದರು. ಎಂದಿನಂತೆ ನೆಹರು ಇದಕ್ಕೆಲ್ಲ ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ. ಆದರೆ, ಬಾಂಬೆ ಪ್ರದೇಶ ಯೂತ್ ಕಾಂಗ್ರೆಸ್‌ನ 25 ಸದಸ್ಯರು ಪಕ್ಷ ತೊರೆದಾಗ ಅವರಿಗೆ ಎಚ್ಚರವಾಯಿತು. ಅವರೆಲ್ಲರೂ ಕೃಪಲಾನಿಯವರ ಪಾಳಯಕ್ಕೆ ಸೇರಿಕೊಂಡಿದ್ದರು.

ಸಿಟ್ಟಿಗೆದ್ದ ನೆಹರು ಬಾಂಬೆಗೆ ಧಾವಿಸಿದರು. ಶಿವಾಜಿ ಪಾರ್ಕ್‌ನಲ್ಲಿ ನಡೆದ ಸಮಾವೇಶದಲ್ಲಿ ಆ 25 ಸದಸ್ಯರ ಹೆಸರು ಹೇಳಿ 'ನೀವೆಲ್ಲ ನರಕಕ್ಕೆ ಹೋಗಿ' ಎಂದು ವಾಚಾಮಗೋಚರವಾಗಿ ಬೈದರು. ನಂತರ ಆ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗಿ, ಖಾರವಾದ ಸಂಪಾದಕೀಯಗಳು ಕಾಣಿಸಿಕೊಂಡಾಗ ಕ್ಷಮೆ ಯಾಚಿಸಿದರು. ತಮ್ಮ ಬೆಂಬಲಿಗರನ್ನು ಮತ್ತು ವೈಯಕ್ತಿಕ ಇಮೇಜನ್ನು ರಕ್ಷಿಸಿಕೊಳ್ಳಲು ನೆಹರು ಯಾವ ಮಟ್ಟಕ್ಕೆ ಬೇಕಾದರೂ ಇಳಿಯಬಲ್ಲರು ಎಂಬುದು ಆಗ ಮೊದಲ ಬಾರಿ ಬೆಳಕಿಗೆ ಬಂದಿತ್ತು. ಚುನಾವಣಾ ಪ್ರಚಾರವನ್ನು ದಾರಿ ತಪ್ಪಿಸಿ, ಸಾರ್ವಜನಿಕ ಅಭಿಪ್ರಾಯವನ್ನು ತಿರುಚುವ ಪರಿಪಾಠಕ್ಕೆ ಭಾರತದಲ್ಲಿ ನಾಂದಿ ಹಾಡಿದ ಮೊದಲ ಚುನಾವಣೆ ಅದಾಗಿತ್ತು.

ಕೃಪಲಾನಿಯವರ ಚುನಾವಣೆ ಪ್ರಚಾರ ಸಂಪೂರ್ಣವಾಗಿ ಕೃಷ್ಣ ಮೆನನ್‌ಗೆ ಕಮ್ಯುನಿಸ್ಟರ ಜತೆ ಇದ್ದ ಗೆಳೆತನವನ್ನು ಖಂಡಿಸುವುದಕ್ಕೆ ಮೀಸಲಾಗಿತ್ತು. ಕೃಷ್ಣ ಮೆನನ್ ಮಾವೋವಾದಿ ಚೀನಾದ ಏಜೆಂಟ್. ಹೀಗಾಗಿ ಭಾರತದ ಭದ್ರತೆಗೆ ಅವರು ಅಪಾಯಕಾರಿ ಎಂದು ಕೃಪಲಾನಿ ಭಾಷಣ ಮಾಡುತ್ತಿದ್ದರು. ಅವರ ಘೋಷಣೆಗಳು ದೊಡ್ಡ ದೊಡ್ಡ ಪೋಸ್ಟರ್‌ಗಳಲ್ಲಿ 'ಮೆನನ್ ಚೀನಾದ ಪ್ರತಿನಿಧಿ, ಭಾರತದ ಪ್ರತಿನಿಧಿ ಅಲ್ಲ' ಎಂದು ದಪ್ಪ ಅಕ್ಷರಗಳಲ್ಲಿ ಮುದ್ರಿತವಾಗಿರುತ್ತಿದ್ದವು. ಅವರ ಬೆನ್ನಿಗೆ ಇನ್ನಿಬ್ಬರು ಮಾಜಿ ಕಾಂಗ್ರೆಸಿಗರಾದ ಸಿ.ರಾಜಗೋಪಾಲಾಚಾರಿ ಹಾಗೂ ಜಯಪ್ರಕಾಶ್ ನಾರಾಯಣ್ ಇದ್ದರು.

ಮತದಾನದ ಮುನ್ನಾದಿನ ರಾಜಾಜಿ ಸಾರ್ವಜನಿಕ ಕರೆಯೊಂದನ್ನು ನೀಡಿ, 'ಸಾಕಷ್ಟು ಮಾತನಾಡಿದ್ದೇನೆ. ವಿ.ಕೆ.ಕೃಷ್ಣ ಮೆನನ್ ನಾರ್ತ್ ಬಾಂಬೆಯಲ್ಲಿ ಏಕೆ ಗೆಲ್ಲಬಾರದು ಎಂಬುದರ ಬಗ್ಗೆ ಬೇಕಾದಷ್ಟು ವಾದಗಳನ್ನು ಮಂಡಿಸಿದ್ದೇನೆ. ಈಗ ಮತ್ತೊಮ್ಮೆ ಎಲ್ಲಾ ದೇಶಭಕ್ತ ಮತದಾರರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಅನಗತ್ಯ ವಿಚಾರಗಳಿಗೆ ಮಾರುಹೋಗಬೇಡಿ. ಕೃಷ್ಣ ಮೆನನ್‌ರನ್ನು ಗೆಲ್ಲಿಸದಿರಲು ಮತ್ತು ತನ್ಮೂಲಕ ದೇಶದ ಭದ್ರತೆಯನ್ನು ರಕ್ಷಿಸಿಕೊಳ್ಳಲು ಸಾಕಷ್ಟು ಕಾರಣಗಳಿವೆ' ಎಂದು ಹೇಳಿದರು.

ಆದರೆ ಅದಕ್ಕೂ ಮುನ್ನ ನಡೆದ ಪ್ರಚಾರ ರ್‍ಯಾಲಿಗಳಲ್ಲಿ ಜಯಪ್ರಕಾಶ್ ನಾರಾಯಣ್ ಬಹಳ ರೋಷಾವೇಶದಿಂದ ಮಾತನಾಡಿದ್ದರು. 1962ರ ಫೆಬ್ರವರಿ 12ರಂದು ಅವರು ಮಾಡಿದ ಭಾಷಣದಲ್ಲಿ, 'ಮೆನನ್ ಕಮ್ಯುನಿಸ್ಟ್ ಪಾರ್ಟಿಯ ಕೈಗೊಂಬೆಯಾಗಿದ್ದಾರೆ. ಕೇಂದ್ರ, ಸರಕಾರ ಮತ್ತು ಕಾಂಗ್ರೆಸ್ ಪಕ್ಷದಲ್ಲಿ ತನ್ನ ಬೇಳೆ ಬೇಯಿಸಿಕೊಳ್ಳಲು ಕಮ್ಯುನಿಸ್ಟ್ ಪಕ್ಷವು ಮೆನನ್‌ರನ್ನು ಬಳಸಿಕೊಳ್ಳುತ್ತಿದೆ. ಇದು ಮೆನನ್‌ಗೂ ತಿಳಿದಿದೆ. ಅವರು ಗೆದ್ದರೆ ಕಮ್ಯುನಿಸ್ಟ್ ಪಕ್ಷವೇ ಗೆದ್ದಂತೆ. ಹೀಗಾಗಿ ಇದು ಕೇವಲ ಒಬ್ಬ ವ್ಯಕ್ತಿಯ ಸೋಲು ಗೆಲುವಿನ ಪ್ರಶ್ನೆಯಲ್ಲ, ಅಥವಾ ಇದು ಕೇವಲ ಪ್ರಧಾನ ಮಂತ್ರಿಗೆ ಸಂಬಂಧಿಸಿದ ವಿಷಯವೂ ಅಲ್ಲ. ಇದು ಇಡೀ ದೇಶದ ಭವಿಷ್ಯದ ಪ್ರಶ್ನೆ. ದೇಶದ ಪ್ರಜಾಪ್ರಭುತ್ವ ಮತ್ತು ನಮ್ಮ ಆಧ್ಯಾತ್ಮಿಕ ಮೌಲ್ಯಗಳು ಇಲ್ಲಿ ಪಣಕ್ಕಿವೆ' ಎಂದು ಹೇಳಿದ್ದರು.

ಇಂಥ ವಾಗ್ದಾಳಿಗಳು ನೆಹರು ಅವರನ್ನು ಕಂಗಾಲು ಮಾಡಿದವು. ಅವರು ನಾರ್ತ್ ಬಾಂಬೆಯಲ್ಲಿ ಹೆಚ್ಚೆಚ್ಚು ಪ್ರಚಾರ ಮಾಡತೊಡಗಿದರು. ಎಲ್ಲಿಂದ ಸಣ್ಣದೊಂದು ಬೆಂಬಲ ಸಿಕ್ಕರೂ ಬಾಚಿ ಸ್ವೀಕರಿಸಿದರು. ಅವರಿಗಿದ್ದ ಮೂರು ಬೆಂಬಲದ ಮೂಲವೆಂದರೆ ಕಮ್ಯುನಿಸ್ಟ್ ಪಕ್ಷ, ಬಾಲಿವುಡ್ ಮತ್ತು ಬ್ಲಿಟ್ಜ್ ಎಂಬ ಟ್ಯಾಬ್ಲಾಯ್ಡ್ ಸಿನಿಮಾ ಪತ್ರಿಕೆ. ಅದು ಕಾಂಗ್ರೆಸ್‌ನ ಐದನೇ ಆಧಾರ ಸ್ತಂಭದಂತೆ ಕೆಲಸ ಮಾಡುತ್ತಿತ್ತು.

ನಾರ್ತ್ ಬಾಂಬೆಯಲ್ಲಿ ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಚಾರವನ್ನು ಸಿಪಿಐ ಹೇಗೆ ಕಬಳಿಸಿಕೊಂಡಿತ್ತು ಎಂಬ ಬಗ್ಗೆ ಕೆಲ ಕಾಂಗ್ರೆಸಿಗರು ಎಸ್.ಕೆ.ಪಾಟೀಲ್, ಬಿ.ಎಂ.ಯಾಗ್ನಿಕ್ (ಬಾಂಬೆ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ) ಹಾಗೂ ಮುಖ್ಯಮಂತ್ರಿ ವೈ.ಬಿ.ಚೌಹಾಣ್‌ರಿಗೆ ಬರೆದ ಬಹಿರಂಗ ಪತ್ರವೇ ಸಾಕ್ಷಿ. 'ಇತ್ತೀಚೆಗೆ ಕಮ್ಯುನಿಸ್ಟರು ನಾರ್ತ್ ಬಾಂಬೆ ಕ್ಷೇತ್ರದಲ್ಲಿ ಕೇವಲ ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಚಾರವನ್ನು ಮಾತ್ರ ಹೈಜಾಕ್ ಮಾಡಿಕೊಂಡಿಲ್ಲ, ಅದರ ಜತೆಗೆ ಕಾಂಗ್ರೆಸ್ ಪಕ್ಷದ ಕಚೇರಿಗಳನ್ನೂ ಆಕ್ರಮಿಸಿಕೊಂಡಿದ್ದಾರೆ. ಇದನ್ನೆಲ್ಲ ನೋಡಿ ನಾವು ಅಸಮಾಧಾನಗೊಂಡಿದ್ದೇವೆ' ಎಂದು ಅದರಲ್ಲಿ ಬರೆಯಲಾಗಿತ್ತು. ಕೊನೆಗೆ ಆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಸಾಕಷ್ಟು ಕಾರ್ಯಕರ್ತರು ಕೃಷ್ಣ ಮೆನನ್‌ರನ್ನು ಸೋಲಿಸಲು ಬಹಿರಂಗವಾಗಿಯೇ ಕೆಲಸ ಮಾಡಿದ್ದರು.

ಇದಕ್ಕೆ ಪ್ರತಿಯಾಗಿ ಬಾಲಿವುಡ್‌ನ ಕೆಲವು ಖ್ಯಾತನಾಮರು ಬ್ಲಿಟ್ಜ್ ಪತ್ರಿಕೆಗೆ 1962ರ ಫೆಬ್ರವರಿ 24ರಂದು ಬಹಿರಂಗ ಪತ್ರ ಬರೆದು, 'ಕೃಷ್ಣ ಮೆನನ್ ವಿರುದ್ಧ ನಡೆಯುತ್ತಿರುವ ಸಂಚು ನಮ್ಮ ಪ್ರೀತಿಯ ಪ್ರಧಾನಿಯ ವಿರುದ್ಧ ನಡೆಯುತ್ತಿರುವ ಸಂಚಾಗಿದೆ. ಅವರು ಈ ದೇಶಕ್ಕೆ ನೀಡುತ್ತಿರುವ ಕೊಡುಗೆಗಳನ್ನು ಮರೆಮಾಚಲು ಮತ್ತು ಅವರ ಅದ್ಭುತ ನಾಯಕತ್ವದಿಂದ ಈ ದೇಶವನ್ನು ವಂಚಿತಗೊಳಿಸಲು ಪ್ರಯತ್ನಗಳು ನಡೆಯುತ್ತಿವೆ' ಎಂದು ದೂರಿದ್ದರು. ಅದಕ್ಕೆ ರಾಜ್ ಕಪೂರ್, ದಿಲೀಪ್ ಕುಮಾರ್, ಮೆಹಬೂಬ್ ಖಾನ್, ಬಿಮಲ್ ರಾಯ್, ದೇವಾನಂದ್, ರಾಜೇಂದ್ರ ಕುಮಾರ್, ಖ್ವಾಜಾ ಅಹಮದ್ ಅಬ್ಬಾಸ್, ಬಿ.ಆರ್.ಚೋಪ್ರಾ ಮತ್ತು ಬಾಲರಾಜ್ ಸಾಹ್ನಿ ಸಹಿ ಮಾಡಿದ್ದರು. ಆ ಪತ್ರಕ್ಕೆ ಜಯಪ್ರಕಾಶ್ ನಾರಾಯಣ್ ಅಷ್ಟೇ ತೀಕ್ಷ್ಣವಾಗಿ ಪ್ರತಿಕ್ರಿಯಿಸಿ, ನೇರವಾಗಿ ನೆಹರುಗೇ ಬಾಣ ಬಿಟ್ಟರು. 'ಕೊನೆಗೆ ಪ್ರಧಾನ ಮಂತ್ರಿ ಕೂಡ ವಿಷಯಾತ್ಮಕ ವಾದ ಮಂಡನೆಯನ್ನು ಕೈಬಿಟ್ಟು, ಕೆಸರೆರಚಾಟಕ್ಕೆ ಇಳಿದಿದ್ದಾರೆ. ಅವರ ಪಾಳಯ ಎಷ್ಟು ದುರ್ಬಲಗೊಂಡಿದೆ ಎಂಬುದಕ್ಕೆ ಇದು ಸಾಕ್ಷಿ. ಮೆನನ್ ಗೆದ್ದರೆ ಅದು ಕಮ್ಯುನಿಸ್ಟ್ ಪಕ್ಷದ ಗೆಲುವು ಎಂಬುದನ್ನು ಇದು ಎತ್ತಿ ತೋರಿಸುತ್ತದೆ. ಮೆನನ್ ಗೆದ್ದರೆ ಕಾಂಗ್ರೆಸ್ ಪಕ್ಷವೆಂಬ ಆನೆಗೆ ಕಮ್ಯುನಿಸ್ಟ್ ಪಕ್ಷವೇ ಮಾವುತನಾಗುತ್ತದೆ ಎಂಬುದಕ್ಕೆ ಕಾಂಗ್ರೆಸಿಗರ ನಡೆಯೇ ನಿದರ್ಶನ' ಎಂದು ತಿರುಗೇಟು ನೀಡಿದ್ದರು. ಜಯಪ್ರಕಾಶ್ ನಾರಾಯಣ್ ನಿಜವಾದ ಭವಿಷ್ಯವನ್ನೇ ನುಡಿದಿದ್ದರು.

ಕೃಪಲಾನಿ ಮತ್ತು ಜೆಪಿಯ ಆರೋಪಗಳಿಗೆ ಉತ್ತರ ನೀಡಲು ಸಾಧ್ಯವಾಗದೆ ನೆಹರು ಬಹಿರಂಗವಾಗಿ ದ್ವೇಷ ಸಾಧಿಸಲು ತೊಡಗಿದರು. 'ಅವರು ಎಲ್ಲಿ ನಿಂತಿದ್ದಾರೋ ನನಗೆ ಗೊತ್ತಿಲ್ಲ, ಮೊದಲು ಅವರು ನನ್ನ ಕಡೆ ಇದ್ದಾರೋ ಅಥವಾ ಇನ್ನೊಂದು ಕಡೆ ಇದ್ದಾರೋ ಅಥವಾ ರಾಜಕೀಯದಲ್ಲಿದ್ದಾರೋ ಅಥವಾ ಹೊರಗಿದ್ದಾರೋ ಎಂಬುದನ್ನು ಸ್ಪಷ್ಟಪಡಿಸಲಿ' ಎಂದು ಜೆಪಿ ವಿರುದ್ಧ ನೇರವಾಗಿ ವಾಗ್ದಾಳಿ ನಡೆಸಿದರು.

ತಮ್ಮ ವಿರೋಧಿ ಪಾಳಯದಲ್ಲಿ ಸಿಐಎ ಕೈಯಾಡಿಸುತ್ತಿದೆ ಎಂದು ನೆಹರು ಆರೋಪಿಸಿದರು. ಅದರ ಜತೆಗೇ, ಕೃಪಲಾನಿಯನ್ನು ಬೆಂಬಲಿಸುತ್ತಿದ್ದ ಬಾಂಬೆಯ ಶ್ರೀಮಂತರಿಗೆ ಹಾಗೂ ದೊಡ್ಡ ದೊಡ್ಡ ದಿನಪತ್ರಿಕೆಗಳ ಮಾಲೀಕರಿಗೆ ಎಚ್ಚರಿಕೆಗಳನ್ನು ನೀಡಿದರು. ಅವರ ಎಚ್ಚರಿಕೆಗಳು ಇಂಡಿಯನ್ ಎಕ್ಸ್‌ಪ್ರೆಸ್ ಮತ್ತು ಟೈಮ್ಸ್ ಆಫ್ ಇಂಡಿಯಾದ ಮಾಲೀಕರನ್ನು ಗುರಿಯಾಗಿಸಿಕೊಂಡಿದ್ದವು. ಉಪ ಗೃಹ ಸಚಿವೆಯಾಗಿದ್ದ ವೈಲೆಟ್ ಆಳ್ವಾ (ಮಾರ್ಗರೆಟ್ ಆಳ್ವಾರ ಅತ್ತೆ) ಅವರು ಬಾಂಬೆಯಲ್ಲಿರುವ ಇಂಡಿಯನ್ ಎಕ್ಸ್‌ಪ್ರೆಸ್ ಕಚೇರಿಗೆ ಬೆಂಕಿ ಹಚ್ಚುವಂತೆ ಕರೆ ನೀಡಿದ್ದರು ಎಂದು ವರದಿಯಾಗಿತ್ತು.

ಮತದಾನದ ದಿನ ನಾರ್ತ್ ಬಾಂಬೆಯಲ್ಲಿದ್ದ ಒಟ್ಟು 7.5 ಲಕ್ಷ ಮತದಾರರಲ್ಲಿ ಶೇಕಡಾ ಅರವತ್ತರಷ್ಟು ಜನರು ಮತ ಚಲಾಯಿಸಿದರು. ವಿ.ಕೆ.ಕೃಷ್ಣ ಮೆನನ್ ಭಾರಿ ಬಹುತದೊಂದಿಗೆ ಜಯ ಸಾಧಿಸಿದರು. ಕೃಪಲಾನಿಗೆ ಬಂದ ಮತಗಳ ದುಪ್ಪಟ್ಟು ಮತ ಮೆನನ್‌ಗೆ ಬಂದಿತ್ತು. ಆ ಚುನಾವಣೆಯ ಅದ್ಭುತ ವಿಶ್ಲೇಷಣೆಯನ್ನು ನಾರ್ಮನ್ ಡಿ. ಪಾಲ್ಮರ್ (ಪೆಸಿಫಿಕ್ ಅಫೇರ್ಸ್, ಸಂಪುಟ 36, ನಂ.2, ಸಮ್ಮರ್ 1963) ಮಾಡಿದ್ದರು. ಮೆನನ್ ಏಕೆ ಗೆದ್ದರು ಎಂಬುದನ್ನು ಬರೆಯುತ್ತಾ ಅವರು ಕೊನೆಗೆ ಈ ಗೆಲುವು ನಿಜವಾಗಿಯೂ ನೆಹರು ಅವರ ಗೆಲುವು ಎಂದು ಹೇಳಿದ್ದರು.

ಆದರೆ ಆ ಚುನಾವಣೆಯಲ್ಲಿ ಅತಿಹೆಚ್ಚು ಗಮನ ಸೆಳೆದಿದ್ದು ಕೃಪಲಾನಿಯವರ ಪ್ರಚಾರದ ವೈಖರಿ. ಅದು ನೆಹರು ಮತ್ತು ಅವರ ಪಾಳಯವನ್ನು ಯಾವ ಪರಿ ನಡುಗಿಸಿತ್ತು ಅಂದರೆ, ಕೊನೆಗೆ ಖುದ್ದು ನೆಹರು ಅವರೇ ಕೀಳು ರಾಜಕಾರಣದಲ್ಲಿ ತೊಡಗಿದ್ದರು. ಇದನ್ನು ರಾಜಾಜಿಯವರು ಮೊದಲೇ ಊಹಿಸಿದ್ದರು. 'ನಾವು ಗೆಲ್ಲಲಿ ಅಥವಾ ಸೋಲಲಿ, ಇಂಥ ರಾಜಕಾರಣವನ್ನು ವಿರೋಧಿಸುವುದು ಕೂಡ ಮೌಲಿಕವಾದ ನಡೆಯೇ ಆಗುತ್ತದೆ' ಎಂದು ಪ್ರಚಾರ ಭಾಷಣದಲ್ಲಿ ಹೇಳಿದ್ದರು.

1962ರ ಮಾರ್ಚ್ 9ರ ಟೈಮ್ ನಿಯತಕಾಲಿಕೆಯಲ್ಲಿ ಇದರ ಬಗ್ಗೆ ಪ್ರಕಟವಾದ ವರದಿ ಹೀಗೆ ಹೇಳುತ್ತದೆ: 'ಮೆನನ್‌ರ ಗೆಲುವು ಕಾಂಗ್ರೆಸ್ ಪಕ್ಷದೊಳಗಿರುವ ಹಾಗೂ ಸರಕಾರದಲ್ಲಿರುವ ಎಡಪಂಥೀಯ ಶಕ್ತಿಗಳಿಗೆ ಇನ್ನಷ್ಟು ಬಲ ತುಂಬಿದೆ. ಅವು ಮೊದಲಿಗಿಂತ ಹೆಚ್ಚು ಪ್ರಬಲವಾಗಿವೆ. ನೆಹರು ಅವರ ರಾಜಕಾರಣದ ಕೊನೆಯ ವರ್ಷಗಳಲ್ಲಿ ಅವರ ನಿರ್ಧಾರಗಳು ಮತ್ತು ನೀತಿಗಳನ್ನು ಎಡಪಂಥೀಯ ಶಕ್ತಿಗಳು ಪ್ರಭಾವಿಸತೊಡಗಿವೆ. ನೆಹರು ತಮ್ಮ ಉತ್ತರಾಧಿಕಾರವನ್ನು ಬಿಟ್ಟುಕೊಟ್ಟು ತೆರೆಯ ಮರೆಗೆ ಸರಿದಾಗ ಕಾಂಗ್ರೆಸ್ ಮತ್ತು ಸರಕಾರದ ನಾಯಕತ್ವವನ್ನು ಎಡಪಂಥೀಯರು ವಹಿಸಿಕೊಳ್ಳುವುದಕ್ಕೆ ದಾರಿ ಮಾಡಿಕೊಟ್ಟಂತಾಗಿದೆ'.

ಕೃಪಲಾನಿ ಭವಿಷ್ಯ ನುಡಿದಿದ್ದಂತೆ ಮೆನನ್‌ರ ಗೆಲುವಿನ ಅಂತಿಮ ಪರಿಣಾಮ ಭಾರತದ ಸೇನೆಯ ಸೋಲಿನಲ್ಲಿ ಪರ್ಯವಸಾನಗೊಂಡಿತು. ಆ ವರ್ಷ ನಡೆದ ಯುದ್ಧದಲ್ಲಿ ಚೀನಾದ ಎದುರು ಭಾರತ ಸೋತಿತು.

(ಲೇಖಕರು ಹಿರಿಯ ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10 Issue:11

ಸಮಾಚಾರ ಸಣ್ಣದಲ್ಲ

ಮಹಾರಾಷ್ಟ್ರಕ್ಕೆ 3ನೇ ಡಿಸಿಎಂ ನೇಮಕ ?

ಮುಂಬೈ: ಮಹಾರಾಷ್ಟ್ರಕ್ಕೆ ಮೂರನೇ ಉಪಮುಖ್ಯಮಂತ್ರಿ ಬರಲಿದ್ದಾರೆ. ಶಿವಸೇನೆ ಮುಖ್ಯಸ್ಥ ಮತ್ತು ಉಪ ಮುಖ್ಯಮಂತ್ರಿ ಏಕನಾಥ್ ಶಿಂಧೆ ಪಕ್ಷದಲ್ಲಿ ಬಿರುಕು ಕಾಣಿಸಿಕೊಂಡಿದೆ ಎಂದು ಶಿವಸೇನೆ (ಯುಬಿಟಿ) ನಾಯಕ ಸಂಜಯ್ ರಾವತ್ ಶುಕ್ರವಾರ ಹೇಳಿದ್ದಾರೆ. ಕೈಗಾರಿಕಾ ಸಚಿವ ಉದಯ್ ಸಮಂತ್ ಅವರು 20 ಶಾಸಕರ ಬೆಂಬಲವನ್ನು ಹೊಂದಿರುವುದರಿಂದ ಶಿಂಧೆ ನೇತೃತ್ವದ ಶಿವಸೇನೆ ವಿಭಜನೆಯಾಗಬಹುದು ಎಂದು ಹೇಳಿಕೊಂಡ ಕೆಲವು ದಿನಗಳ ನಂತರ ರಾವತ್ ಅವರ ಈ ಹೇಳಿಕೆ ಮಹತ್ವ ಪಡೆದುಕೊಂಡಿದೆ. ಸುದ್ದಿಗಾರರ ಜತೆ ಮಾತನಾಡಿದ ಅವರು, ತೆರೆಮರೆಯ ಚಟುವಟಿಕೆಗಳನ್ನು ನೋಡಿದರೆ ಭವಿಷ್ಯದಲ್ಲಿ ರಾಜ್ಯಕ್ಕೆ ಮೂವರು ಉಪಮುಖ್ಯಮಂತ್ರಿಗಳನ್ನು ನೇಮಕ ಮಾಡುವ ಸಾಧ್ಯತೆ ಇದೆ ಎಂದಿದ್ದಾರೆ. ಕಳೆದ ವರ್ಷ ನವೆಂಬರ್‌ನಲ್ಲಿ ನಡೆದ ವಿಧಾಸಭೆ ಚುನಾವಣೆಯ ನಂತರ ಶಿಂಧೆ ಅವರಿಗೆ ಮುಖ್ಯಮಂತ್ರಿ ಸ್ಥಾನ ನಿರಾಕರಿಸಿದ್ದರಿಂದ ಬೇಸರಗೊಂಡಿದ್ದಾಗ, ತಮ್ಮನ್ನು ಡಿಸಿಎಂ ಮಾಡುವ ಬಗ್ಗೆ ಯೋಚಿಸಲಾಗಿತ್ತು ಎಂದು ಸಮಂತ್ ಹೇಳಿದ್ದರು. ಮಹಾರಾಷ್ಟ್ರದಲ್ಲಿ ಪ್ರಸ್ತುತ ಶಿಂಧೆ ಮತ್ತು ಎನ್‌ಸಿಪಿ ಮುಖ್ಯಸ್ಥ ಅಜಿತ್ ಪವಾರ್ ಉಪಮುಖ್ಯಮಂತ್ರಿಗಳಾಗಿದ್ದಾರೆ.

ಕಂಗನಾಗೆ ಪಟನಾ ಹೈಕೋರ್ಟ್ ಸಮನ್ಸ್



ಮುಂಬೈ: ಕಂಗನಾ ರನೌತ್ ಅಭಿನಯದ 'ಎಮರ್ಜೆನ್ಸಿ' ಸಿನಿಮಾ ಮೇಲೆ ಕೃತಿಚೌರ್ಯದ ಆರೋಪ ಕೇಳಿಬಂದಿದೆ. ರಾಷ್ಟ್ರಕವಿ ರಾಮಧಾರಿ ಸಿಂಗ್ ದಿನಕರ್ ಅವರ ಸೊಸೆ ಕಲ್ಪನಾ ಸಿಂಗ್ ಪಟನಾ ಹೈಕೋರ್ಟ್‌ನಲ್ಲಿ ಕೇಸ್ ದಾಖಲಿಸಿದ್ದಾರೆ. 'ಸಿಂಹಾ ಸನ ಖಾಲಿ ಕರೋ ಕಿ ಜನತಾ ಆತಿ ಹೈ' ಎಂಬ ದಿನಕರ್ ಅವರ ಪ್ರಸಿದ್ಧ ಸಾಲನ್ನು ಅನುಮತಿ ಯಿಲ್ಲದೆ ಬಳಸಿದ್ದಾರೆಂದು ಆರೋಪಿಸಿದ್ದಾರೆ. ಹೈಕೋರ್ಟ್ ಕಂಗನಾ ಸೇರಿದಂತೆ ಚಿತ್ರತಂಡಕ್ಕೆ ನೋಟಿಸ್ ಜಾರಿ ಮಾಡಿದೆ. ಆದರೆ, ಸದ್ಯಕ್ಕೆ ಚಿತ್ರ ಪ್ರದರ್ಶನಕ್ಕೆ ತಡೆ ನೀಡಿಲ್ಲ. ಕಲ್ಪನಾ ಸಿಂಗ್ ತಮ್ಮ ದೂರಿನಲ್ಲಿ, ಚಿತ್ರದ ಪ್ರಚಾರ ಮತ್ತು ಹಾಡಿನಲ್ಲಿ ತಮ್ಮ ಮಾವನ ಪ್ರಸಿದ್ಧ ಸಾಲನ್ನು ಅನುಮತಿಯಿಲ್ಲದೆ ಬಳಸಲಾಗಿದೆ ಎಂದು ಹೇಳಿದ್ದಾರೆ.

ಇದರಿಂದ ತಮ್ಮ ಹಕ್ಕುಸ್ವಾಮ್ಯ ಉಲ್ಲಂಘನೆಯಾಗಿದೆ ಎಂದು ಆರೋಪಿ ಸಿದ್ದಾರೆ. ಗುರುವಾರ ಪಟ್ನಾ ಹೈಕೋರ್ಟ್‌ನ ನ್ಯಾಯ ಮೂರ್ತಿ ಎ. ಅಭಿಷೇಕ್ ರೆಡ್ಡಿ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ಕಂಗನಾ ರನೌತ್ 'ಎಮರ್ಜೆನ್ಸಿ' ಚಿತ್ರದ ನಿರ್ಮಾಪಕಿ ಮತ್ತು ನಿರ್ದೇಶಕಿ. ಈ ಚಿತ್ರದಲ್ಲಿ ಅವರು ಮಾಜಿ ಪ್ರಧಾನಿ ಇಂದಿರಾ ಗಾಂಧಿ ಪಾತ್ರದಲ್ಲಿ ನಟಿಸಿದ್ದಾರೆ.

ಅಕ್ರಮವಾಸಿಗಳ ವಿರುದ್ಧ ಟ್ರಂಪ್ ಕಾರ್ಯಾಚರಣೆ ಆರಂಭ, ಲಕ್ಷಾಂತರ ಜನರಿಗೆ ಆತಂಕ

500 ಅಕ್ರಮ ವಲಸಿಗರು ಅರೆಸ್ಟ್: 100 ಜನರ ಗಡಿಪಾರು

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷರಾಗಿ ಎರಡನೇ ಅವಧಿಗೆ ಅಧಿಕಾರ ವಹಿಸಿಕೊಳ್ಳುತ್ತಿದ್ದಂತೆ ಅಕ್ರಮ ವಲಸಿಗರ ವಿರುದ್ಧ ಸಮರ ಸಾರಿದ್ದ ಡೊನಾಲ್ಡ್ ಟ್ರಂಪ್, ಅಕ್ರಮವಾಸಿಗಳನ್ನು ತಕ್ಷಣವೇ ಗಡಿಪಾರ ಮಾಡಲು ಆದೇಶಿಸಿದ್ದಾರೆ. ಟ್ರಂಪ್ ಆದೇಶದ ಮೇರೆಗೆ ಅಧಿಕಾರಿಗಳು ಈವರೆಗೆ ಸುಮಾರು 500ಕ್ಕೂ ಹೆಚ್ಚು ಅಕ್ರಮ ವಲಸಿಗರನ್ನು ಬಂಧಿಸಿದೆ. ಮಿಲಿಟರಿ ವಿಮಾನದ ಸಹಾಯದಿಂದ 100ಕ್ಕೂ ಹೆಚ್ಚು ಜನರನ್ನು ಗಡಿಪಾರು ಮಾಡಲಾಗಿದೆ.

ಈ ನಡುವೆ ಅಮೆರಿಕದ ಫೆಡರಲ್ ಕೋರ್ಟ್ ಅಕ್ರಮ ವಲಸಿಗರ ಗಡಿಪಾರು ಆದೇಶಕ್ಕೆ ತಾತ್ಕಾಲಿಕ ತಡೆ ನೀಡಿದ್ದು ಸದ್ಯ, ಈ ಕಾರ್ಯಾಚರಣೆಗೆ ಬ್ರೇಕ್ ಬೀಳುವ ನಿರೀಕ್ಷೆ ಇದೆ. ಶ್ವೇತಭವನದ ಅಧಿಕೃತ ಖಾತೆಯ ಪೋಸ್ಟ್‌ನಲ್ಲಿ ಕಾರ್ಯಾಚರಣೆಯ ಮಾಹಿತಿ ನೀಡಲಾಗಿದೆ. ಮಿಲಿಟರಿ ವಿಮಾನವನ್ನು ಬಳಸಿಕೊಂಡು ನೂರಾರು ಜನರನ್ನು ಗಡಿಪಾರು ಮಾಡಲಾಗಿದೆ ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ



ಕ್ಯಾರೋಲಿನ್ ಲೀವಿಟ್ ಹೇಳಿದ್ದಾರೆ.

ರಹಸ್ಯ ದಾಖಲೆ ಬಹಿರಂಗ: ಅಮೆರಿಕದ ಅಧ್ಯಕ್ಷರಾಗಿದ್ದ ಜಾನ್ ಎಫ್. ಕೆನಡಿ, ಸೆನೆಟರ್ ರಾಬರ್ಟ್ ಎಫ್ ಕೆನಡಿ ಮತ್ತು ರೆವರೆಂಡ್ ಡಾ.ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಅವರ ಹತ್ಯೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಬಹಿರಂಗಪಡಿಸುವ ಆದೇಶಕ್ಕೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಹಿ ಹಾಕಿದ್ದಾರೆ. ಈ ಹತ್ಯೆಗಳ ಬಗೆಗಿನ ಸತ್ಯ ಅಮೆರಿಕದ ಜನರಿಗೆ ತಿಳಿಯಲಿ ಎಂದು ಅವರು ಹೇಳಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿರುವ ಶ್ವೇತಭವನ, ಆರು ದಶಕಗಳ ರಹಸ್ಯದ ನಂತರ ಅಮೆರಿಕನ್ನರಿಗೆ ಸತ್ಯ ತಿಳಿಸಲಾಗುತ್ತಿದೆ ಎಂದು ಹೇಳಿದೆ. ಈ ಹತ್ಯೆಗಳು ನಡೆದು 50 ವರ್ಷಗಳೇ ಕಳೆದು ಹೋಗಿದ್ದು, ಹತ್ಯೆಗೀಡಾದವರ ಕುಟುಂಬಸ್ಥರು ಮತ್ತು ಅಮೆರಿಕದ ಜನ ಈ ಕುರಿತಾದ ಸತ್ಯಗಳನ್ನು ತಿಳಿಯಲು ಈ ಆದೇಶವು ಅನುವು ಮಾಡಿ ಕೊಡಲಿದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. 15 ದಿನಗಳೊಳಗೆ ರಹಸ್ಯ ದಾಖಲೆಗಳನ್ನು ಬಹಿರಂಗಪಡಿಸುವ ಪ್ರಕ್ರಿಯೆಯನ್ನು ತಯಾರಿಸಬೇಕೆಂದು ಆದೇಶದಲ್ಲಿ ಅಧಿಕಾರಿಗಳಿಗೆ ತಿಳಿಸಲಾಗಿದೆ.

ಅಧ್ಯಕ್ಷ ಜಾನ್ ಎಫ್ ಕೆನಡಿ ಅವರನ್ನು 1963 ರಲ್ಲಿ ಡಲ್ಲಾಸ್‌ನಲ್ಲಿ ಹತ್ಯೆಗೈಯಲಾಗಿತ್ತು. ಅಮೆರಿಕದ ಅತ್ಯಂತ ಪ್ರಸಿದ್ಧ ನಾಗರಿಕ ಹಕ್ಕುಗಳ ಹೋರಾಟಗಾರ ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಅವರು ಟೆನ್ನೆಸ್ಸಿಯ ಮೆಂಫಿಸ್‌ನಲ್ಲಿ 1968ರಲ್ಲಿ ಕೊಲೆಗೀಡಾಗಿದ್ದರು. ಇದಾಗಿ ಎರಡು ತಿಂಗಳ ನಂತರ, ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಜಾನ್ ಎಫ್ ಕೆನಡಿ ಅವರ ಸಹೋದರ ರಾಬರ್ಟ್ ಎಫ್ ಕೆನಡಿ ಅವರನ್ನು 1968ರಲ್ಲಿ ಕ್ಯಾಲಿಫೋರ್ನಿಯಾದಲ್ಲಿ ಹತ್ಯೆ ಮಾಡಲಾಗಿತ್ತು.

15 ದಿನಗಳಲ್ಲಿ ಜಾನ್ ಎಫ್ ಕೆನಡಿ ಮತ್ತು ಮಾರ್ಟಿನ್ ಲೂಥರ್ ಕಿಂಗ್ ಅವರ ಹತ್ಯೆಗೆ ಸಂಬಂಧಿಸಿದ ದಾಖಲೆಗಳನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಲು ಯೋಜನೆ ಪ್ರಸ್ತುತಪಡಿಸಲು ತಿಳಿಸಲಾಗಿದೆ. 45 ದಿನಗಳಲ್ಲಿ ಅವರ ಹತ್ಯೆ ಕುರಿತಾದ ಸಂಪೂರ್ಣ ಮಾಹಿತಿ ಬಿಡುಗಡೆಗೆ ರಾಷ್ಟ್ರೀಯ ಗುಪ್ತಚರ ನಿರ್ದೇಶಕರು ಮತ್ತು ಸಂಬಂಧಿಸಿದ ಇತರ ಅಧಿಕಾರಿಗಳಿಗೆ ಆದೇಶದಲ್ಲಿ ತಿಳಿಸಲಾಗಿದೆ.

ತೈಲ ಬೆಲೆ ಇಳಿದರೆ ಯುದ್ಧ ಅಂತ್ಯ?

ವಾಷಿಂಗ್ಟನ್: ಸೌದಿ ಅರೇಬಿಯಾ ಮತ್ತು ಪೆಟ್ರೋಲಿಯಂ ರಫ್ತು ಮಾಡುವ ರಾಷ್ಟ್ರಗಳ ಸಂಘಟನೆಯ (ಒಪೆಕ್) ತೈಲ ಬೆಲೆ ಕಡಿತಗೊಳಿಸಿದರೆ ರಷ್ಯಾ ಮತ್ತು ಯುಕ್ರೇನ್ ನಡುವಿನ ಯುದ್ಧ ತಕ್ಷಣವೇ ಕೊನೆಗೊಳ್ಳಲಿದೆ ಎಂದು ಟ್ರಂಪ್ ಹೇಳಿದ್ದಾರೆ. ಸ್ವಿಟ್ಜರ್ಲೆಂಡ್‌ನ ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆ ಸಭೆಯಲ್ಲಿ ಮಾತನಾಡಿದ ಟ್ರಂಪ್, ಭಾರತದಂತಹ ದೇಶಗಳಿಗೆ ಇಂಧನ ರಫ್ತು ಮಾಡುವ ಮೂಲಕವೇ ರಷ್ಯಾ ಯುದ್ಧಕ್ಕೆ ಬೇಕಾದ ಸಂಪನ್ಮೂಲ ಸಂಗ್ರಹಿಸುತ್ತಿದೆ ಎಂದು ಪರೋಕ್ಷವಾಗಿ ತಿಳಿಸಿದ್ದಾರೆ.

ನಾಗ್ಪುರ ಸಮೀಪದಲ್ಲಿರುವ ಮಿಲಿಟರಿ ಕಾರ್ಖಾನೆಯಲ್ಲಿ ಭಾರೀ ಅವಘಡ

ಶಸ್ತ್ರಾಸ್ತ್ರ ಕಾರ್ಖಾನೆಯಲ್ಲಿ ಸ್ಫೋಟ: 8 ಸಾವು

ಮುಂಬೈ: ಮಹಾರಾಷ್ಟ್ರದ ಭಂಡಾರ ಜಿಲ್ಲೆಯ ಮಿಲಿಟರಿ ಶಸ್ತ್ರಾಸ್ತ್ರಗಳನ್ನು ತಯಾರಿಸುವ ಕಾರ್ಖಾನೆಯಲ್ಲಿ ಸಂಭವಿಸಿದ ಭಾರೀ ಸ್ಫೋಟದಲ್ಲಿ ಕನಿಷ್ಠ 8 ಮಂದಿ ಸಾವನ್ನಪ್ಪಿದ್ದು, 7 ಮಂದಿ ಗಾಯಗೊಂಡಿದ್ದಾರೆ.

ನಾಗ್ಪುರ ಸಮೀಪದಲ್ಲಿರುವ ಕಾರ್ಖಾನೆಯಲ್ಲಿ ಶುಕ್ರವಾರ ಬೆಳಗ್ಗೆ 10:30ರ ಸುಮಾರಿಗೆ ಈ ದುರ್ಘಟನೆ ಸಂಭವಿಸಿದೆ. ಸ್ಥಳದಲ್ಲಿ ರಕ್ಷಣಾ ಸಿಬ್ಬಂದಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಜವಾಹರ್ ನಗರ ಪ್ರದೇಶದಲ್ಲಿರುವ ಕಾರ್ಖಾನೆಯ ಎಲ್‌ಟಿಪಿ ವಿಭಾಗದಲ್ಲಿ ಸ್ಫೋಟ ಸಂಭವಿಸಿದೆ. ಸ್ಫೋಟದ ಸಮಯದಲ್ಲಿ ಛಾವಣಿ ಕುಸಿದಿದ್ದು ಅದರ ಅಡಿಯಲ್ಲಿ 12 ಮಂದಿ ಸಿಲುಕಿದ್ದರು. ಈ ಪೈಕಿ ಇಬ್ಬರನ್ನು ರಕ್ಷಿಸಲಾಗಿದ್ದು, ಉಳಿದವರು ಅವಶೇಷಗಳ ಅಡಿಯಲ್ಲಿ ಸಿಲುಕಿದ್ದಾರೆ ಎನ್ನಲಾಗಿದೆ. ಅವರನ್ನು ಹೊರ ತೆಗೆಯುವ ಕಾರ್ಯಾಚರಣೆ ನಡೆದಿದೆ ಎಂದು ಸ್ಥಳಕ್ಕೆ ಕೇಂದ್ರ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಇನ್ನೂ ಸ್ಫೋಟದ ತೀವ್ರತೆ ಎಷ್ಟಿತ್ತೆಂದರೆ ಸುಮಾರು 5 ಕಿಮೀ ವರೆಗೂ ಶಬ್ಧ ಕೇಳಿಸಿದೆ. ಸ್ಥಳದಲ್ಲಿ ದಟ್ಟ ಹೊಗೆ ಮುಗಿಲೆತ್ತರಕ್ಕೆ ವ್ಯಾಪಿಸಿರುವುದು ವಿಡಿಯೋ, ಫೋಟೋಗಳಲ್ಲಿ ಸೆರೆಯಾಗಿದೆ. ಎಲ್‌ಟಿಪಿ ವಿಭಾಗದಲ್ಲಿ ಸ್ಫೋಟ

ಸ್ಫೋಟದ ಜಾಗದಲ್ಲಿ ತೀವ್ರಗತಿಯ ಕಾರ್ಯಾಚರಣೆ ನಡೆಯುತ್ತಿರುವುದು.

ಸಂಭವಿಸಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸ್ಫೋಟದ ಸಮಯದಲ್ಲಿ ವಿಭಾಗದಲ್ಲಿ 14 ನೌಕರರು ಕೆಲಸ ಮಾಡುತ್ತಿದ್ದರು, ಅವರಲ್ಲಿ ಮೂವರನ್ನು ಜೀವಂತವಾಗಿ ರಕ್ಷಿಸಲಾಗಿದೆ ಮತ್ತು ಒಬ್ಬರು ಸಾವನ್ನಪ್ಪಿದ್ದಾರೆ ಎಂದು ಅವರು ಹೇಳಿದರು.

ಪಾರುಗಾಣಿಕಾ ಮತ್ತು ವೈದ್ಯಕೀಯ ಸಿಬ್ಬಂದಿ ಬದುಕುಳಿದವರಿಗಾಗಿ ಹುಡುಕಾಟ ನಡೆಸುತ್ತಿದ್ದರೆ, ಅಗ್ನಿಶಾಮಕ ಸಿಬ್ಬಂದಿ ಪರಿಸ್ಥಿತಿಯನ್ನು ನಿಯಂತ್ರಿಸುತ್ತಿದ್ದಾರೆ.

ಸ್ಫೋಟದ ತೀವ್ರತೆ ಎಷ್ಟು ಇತ್ತೆಂದರೆ ಸುಮಾರು 5 ಕಿಮೀ ದೂರದ ವರೆಗೆ ಶಬ್ದ ಕೇಳಿಸಿತು. ಫ್ಯಾಕ್ಟರಿಯಿಂದ ದಟ್ಟ ಹೊಗೆ ಏಳುತ್ತಿರುವುದು ದೂರದಿಂದ ಸೆರೆ ಹಿಡಿದಿರುವ ವಿಡಿಯೋದಲ್ಲಿ ಕಂಡು ಬಂದಿದೆ. ಸ್ಫೋಟಕ್ಕೆ ಕಾರಣ ಇನ್ನೂ ತಿಳಿದುಬಂದಿಲ್ಲ.

ನಾಗರಿಕ ಪರೀಕ್ಷೆ: ಆರಂಭಲ್ಲೇ ದಾಖಲೆ ಸಂಗ್ರಹ

ದೆಹಲಿ: ಕೇಂದ್ರ ಲೋಕಸೇವಾ ಆಯೋಗದ ನೇಮಕಾತಿಗಾಗಿ ಪ್ರಾಥಮಿಕ ಪರೀಕ್ಷೆಯ ಹಂತದಲ್ಲೇ ಆಕಾಂಕ್ಷಿಗಳು ಆನ್‌ಲೈನ್ ಮೂಲಕ ಶೈಕ್ಷಣಿಕ, ಜಾತಿ ಮತ್ತು ದೈಹಿಕ ಅಂಗವೈಕಲ್ಯದ ಕುರಿತು ಪ್ರಮಾಣಪತ್ರಗಳನ್ನು ಸಲ್ಲಿಸುವುದನ್ನು ಕೇಂದ್ರ ಸರಕಾರ ಕಡ್ಡಾಯಗೊಳಿಸಿದೆ. ಈ ಮೊದಲು ಅಭ್ಯರ್ಥಿಗಳು ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆದ ನಂತರವೇ ದಾಖಲೆಗಳನ್ನು ಅಪ್ಲೋಡ್ ಮಾಡಬೇಕಾಗಿತ್ತು. ಆದರೆ ಸಿಬ್ಬಂದಿ ಸಚಿವಾಲಯವು ನಾಗರಿಕ ಪರೀಕ್ಷೆ ನೇಮಕ ನಿಯಮಗಳಿಗೆ ತಿದ್ದುಪಡಿ ಮಾಡಿ ಈ ಆದೇಶ ಹೊರಡಿಸಿದೆ.

ಇತ್ತೀಚೆಗೆ ಪೂಜಾ ಖೇಡ್ಕರ್ ಅವರು ನಕಲಿ ದಾಖಲೆ ನೀಡಿ ಐಎಎಸ್ ಹುದ್ದೆ ಪಡೆದು ಕೊಂಡಿದ್ದಾರೆ ಎಂಬ ಆರೋಪ ಕೇಳಿ ಬಂದಿತ್ತು ಇದರ ಬೆನ್ನಲ್ಲೇ ಕೇಂದ್ರ ಲೋಕಸೇವಾ ಆಯೋಗ ಈ ಕ್ರಮ ಕೈಗೊಂಡಿದೆ.

ಎಕ್ಸ್ ಪ್ರತಿಸ್ಪರ್ಧಿ ಒಪನ್ ಎಐಗೆ ಸ್ಟಾರ್‌ಗೇಟ್ ಪ್ರಾಜೆಕ್ಟ್ ನೀಡಿದ ಅಮೆರಿಕ ಅಧ್ಯಕ್ಷ

ಎಲಾನ್ ಮಸ್ಕ್‌ಗೆ ಶಾಕ್ ನೀಡಿದ ಟ್ರಂಪ್

ವಾಷಿಂಗ್ಟನ್: ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಿತ್ರ ಸ್ಪೇಸ್ ಎಕ್ಸ್ ಸಂಸ್ಥಾಪಕ ಎಲಾನ್ ಮಸ್ಕ್‌ಗೆ ದೊಡ್ಡ ಆಘಾತವನ್ನೇ ನೀಡಿದ್ದಾರೆ. ಜಗತ್ತಿನ ಅತಿದೊಡ್ಡ ಎಐ ಪ್ರಾಜೆಕ್ಟ್ ಸ್ಟಾರ್ ಗೇಟ್ ಅನ್ನು ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಈ ಯೋಜನೆಯಲ್ಲಿ ಎಲಾನ್ ಮಸ್ಕ್ ವೈರಿ ಹಾಗೂ ಒಪನ್ ಎಐನ ಸಂಸ್ಥಾಪಕ ಸ್ಯಾಮ್ ಅಲ್ಟಮನ್ ಅವರನ್ನು ಪಾಲುದಾರರನ್ನಾಗಿ ಸೇರಿಸಿಕೊಂಡಿದ್ದಾರೆ. ಎಲಾನ್ ಮಸ್ಕ್ ಅವರ ಎಕ್ಸ್ ಎಐ ಸಂಸ್ಥೆಯನ್ನು ಈ ಒಪ್ಪಂದದಿಂದ ಹೊರಗಿಡಲಾಗಿದೆ. ಟ್ರಂಪ್ ಅವರ ಈ ನಡೆ ಮಸ್ಕ್‌ಗೆ ಅಚ್ಚರಿ ಹುಟ್ಟಿಸಿದ್ದು, ಒಪನ್ ಎಐ ವಿರುದ್ಧ ವಾಗ್ದಾಳಿ ನಡೆಸುವ ಮೂಲಕ ಟ್ರಂಪ್ ಮೇಲಿನ ಕೋಪವನ್ನು ಮಸ್ಕ್ ಹೊರ ಹಾಕಿದ್ದಾರೆ.

ಶ್ವೇತಭವನದಲ್ಲಿ ನಡೆದ ವಿಶೇಷ ಸುದ್ದಿಗೋಷ್ಠಿಯಲ್ಲಿ ಸ್ಟಾರ್‌ಗೇಟ್ ಯೋಜನೆಯನ್ನು ಡೊನಾಲ್ಡ್ ಟ್ರಂಪ್ ಘೋಷಿಸಿದರು. ಇದು ಜಗತ್ತಿನ ಅತಿದೊಡ್ಡ ಎಐ ಪ್ರಾಜೆಕ್ಟ್ ಆಗಿದ್ದು, ಚಾಟ್ ಜಿಪಿಟಿಯ ಮಾತೃ ಸಂಸ್ಥೆ ಒಪನ್ ಎಐನ ಸಂಸ್ಥಾಪಕ ಸ್ಯಾಮ್ ಅಲ್ಟಮನ್, ಒರಾಕಲ್ ಚೇರ್‌ಮನ್ ಲ್ಯಾರಿ ಎಲಿಸನ್, ಸಾಫ್ಟ್ ಬ್ಯಾಂಕ್ ಸಿಇಒ ಮಸಾಯೋಶಿ ಸನ್ ಅವರ ಸಮ್ಮುಖದಲ್ಲಿ ಈ ಸ್ಟಾರ್‌ಗೇಟ್ ಪ್ರಾಜೆಕ್ಟ್ ಅನ್ನು ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಆದರೆ, ಈ ವೇಳೆ ಎಲಾನ್ ಮಸ್ಕ್ ಇಲ್ಲದಿರುವುದು ಕುತೂಹಲ ಕೆರಳಿಸಿದೆ.

500 ಬಿಲಿಯನ್ ಡಾಲರ್ ಮೊತ್ತದ ಬಿಗ್ ಪ್ರಾಜೆಕ್ಟ್ : ಡೊನಾಲ್ಡ್ ಟ್ರಂಪ್ ಘೋಷಿಸಿದ ಸ್ಟಾರ್‌ಗೇಟ್ ಪ್ರಾಜೆಕ್ಟ್‌ನಲ್ಲಿ ಒಪನ್ ಎಐ, ಒರಾಕೆಲ್, ಸಾಫ್ಟ್ ಬ್ಯಾಂಕ್ ಮಾತ್ರವಲ್ಲದೇ ಎನ್‌ವಿಡಿಯಾ ಕೂಡ ಸೇರಿದೆ. ಈಗಾಗಲೇ ಎನ್‌ವಿಡಿಯಾ ಕಂಪನಿ ಯೋಜನೆಯ ಭಾಗವಾಗಲು ಮಾತುಕತೆ ಶುರು ಮಾಡಿದ್ದು, ಶೀಘ್ರದಲ್ಲಿಯೇ ಈ ಬಗ್ಗೆ ಅಂತಿಮ ನಿರ್ಧಾರ ಹೊರಬೀಳಲಿದೆ. ಆದರೆ, ಎಲಾನ್ ಮಸ್ಕ್ ಅವರ

ಎಕ್ಸ್ ಕೂಡ ಎಐ ಕ್ಷೇತ್ರಕ್ಕೆ ಕಾಲಿಟ್ಟಿದ್ದು, ಎಕ್ಸ್ ಸಂಸ್ಥೆ ಸ್ಟಾರ್ ಗೇಟ್ ಪ್ರಾಜೆಕ್ಟ್ ಆಗಿಲ್ಲದಿರುವುದು ಅಚ್ಚರಿಗೆ ಕಾರಣವಾಗಿದೆ. ಇದು ಅತಿದೊಡ್ಡ ಎಐ ಮೂಲಸೌಕರ್ಯ ಯೋಜನೆಯಾಗಿದ್ದು, ಕನಿಷ್ಠ 500 ಬಿಲಿಯನ್ ಡಾಲರ್ ಹೂಡಿಕೆ ಮಾಡುವ ಸಾಧ್ಯತೆ ಇದೆ. ಸದ್ಯ 100 ಬಿಲಿಯನ್ ಡಾಲರ್ ಬಿಡುಗಡೆಯಾಗಲಿದ್ದು, ಅಮೆರಿಕದಲ್ಲಿ ಲಕ್ಷಕ್ಕೂ ಹೆಚ್ಚು ಉದ್ಯೋಗವನ್ನು ಸೃಷ್ಟಿಸಲಿದೆ ಎಂದು ಟ್ರಂಪ್ ಘೋಷಿಸಿದ್ದಾರೆ. ಎಐನ ನೆಕ್ಸ್ಟ್ ಜನರೇಷನ್‌ಗಾಗಿ ಭೌತಿಕ ಹಾಗೂ ವರ್ಚುವಲ್ ಮೂಲಸೌಕರ್ಯ ಶುರುಮಾಡಲು ಟೆಕ್ಸಾಸ್‌ನಲ್ಲಿ ಒನ್ ಮಿಲಿಯನ್ ಚದರ ಅಡಿ ಡೇಟಾ ಸೆಂಟರ್ ಅನ್ನು ನಿರ್ಮಿಸಲಾಗುತ್ತದೆ.

ಮಿತ್ರರು ಈಗ ಪ್ರತಿಸ್ಪರ್ಧಿಗಳು: 2015ರಲ್ಲಿ ಎಲಾನ್ ಮಸ್ಕ್ ಹಾಗೂ ಸ್ಯಾಮ್ ಅಲ್ಟಮನ್ ಇಬ್ಬರು ಸೇರಿ ಒಪನ್ ಎಐ ಅನ್ನು ಸ್ಥಾಪಿಸಿದ್ದರು. ಆದರೆ, 2018ರಲ್ಲಿ ಎಲಾನ್ ಮಸ್ಕ್ ಒಪನ್ ಎಐನಿಂದ ಹೊರಬಂದು ಎಕ್ಸ್ ಎಐ ಅನ್ನು ಸ್ಥಾಪಿಸಿದ್ದರು. ಇದರಿಂದ ಸ್ಯಾಮ್ ಅಲ್ಟಮನ್ ಹಾಗೂ ಎಲಾನ್ ಮಸ್ಕ್ ನಡುವೆ ಬಿರುಕು ಮೂಡಿತ್ತು.

ರಿಲಯನ್ಸ್‌ನಿಂದ ವಿಶ್ವದ ಅತಿದೊಡ್ಡ ಡೇಟಾ ಕೇಂದ್ರ

ಮುಂಬೈ: ಕೃತಕ ಬುದ್ಧಿಮತ್ತೆ (ಎಐ) ಸೇವೆಗಳಿಗೆ ಹೆಚ್ಚುತ್ತಿರುವ ಬೇಡಿಕೆಯ ಲಾಭವನ್ನು ಪಡೆಯಲು ಮುಂದಾಗಿರುವ ಮುಖೇಶ್ ಅಂಬಾನಿಯವರ ರಿಲಯನ್ಸ್ ಗ್ರೂಪ್ ಗುಜರಾತ್‌ನ ಜಾಮ್‌ನಗರದಲ್ಲಿ ವಿಶ್ವದ ಅತಿದೊಡ್ಡ ಡೇಟಾ ಕೇಂದ್ರವನ್ನು ನಿರ್ಮಿಸಲು ಸಿದ್ಧವಾಗಿದೆ. ಜಾಮ್‌ನಗರದಲ್ಲಿ ರಿಲಯನ್ಸ್ ಮತ್ತು ಎನ್ವಿಡಿಯಾ ಎಐ ಮೂಲಸೌಕರ್ಯದಲ್ಲಿ ಒಟ್ಟಿಗೆ ಕೆಲಸ ಮಾಡುವ ಯೋಜನೆಯನ್ನು ಹಂಚಿಕೊಂಡಿವೆ. ರಿಲಯನ್ಸ್ ಯೋಜಿಸಿರುವ ಒಂದು ಗಿಗಾವ್ಯಾಟ್ ಡೇಟಾ ಸೆಂಟರ್‌ಗಾಗಿ ಎನ್‌ವಿಡಿಯಾ ಬ್ಲ್ಯಾಕ್‌ವೆಲ್ ಎಐ ಪ್ರೊಸೆಸರ್‌ಗಳನ್ನು ಪೂರೈಸಲಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಯೋಜನಾ ವಿಭಾಗ,
ರಾಜರಾಜೇಶ್ವರಿ ನಗರ ವಲಯ, ಬೆಂಗಳೂರು – 98

ಸಂ. ಬೃಬೆಂಮಪಾ/ಕಾಅ(ಯೋ)/ರಾರಾನ/ಟೆಂಡರ್/04/2024-25/ಕರೆ-2 ದಿನಾಂಕ : 24-01-2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಯೋಜನಾ ವಿಭಾಗ), ರಾಜರಾಜೇಶ್ವರಿ ನಗರ ವಲಯ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಅಡಿಯಲ್ಲಿ ವಿದ್ಯುನ್ಮಾನ ಟೆಂಡರಿಂಗ್ ವ್ಯವಸ್ಥೆಯ (ಕೆಪಿಪಿ ಪೋರ್ಟಲ್) ಮೂಲಕ ನಿಗದಿತ ನಮೂನೆಯಲ್ಲಿ ಕೆಳಕಂಡ ಸೇವೆಗಳಿಗಾಗಿ ಬೃಬೆಂಮಪಾ ದಲ್ಲಿ ನೋಂದಣಿಯಾದ ಅಥವಾ ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ / ರೈಲ್ವೆ / ಎಂಇಎಸ್ ಅಥವಾ ರಾಜ್ಯ ಸರ್ಕಾರದ ಯಾವುದೇ ಸಂಸ್ಥೆಯಲ್ಲಿ ಸಮಾನ ನೋಂದಣಿ ಹೊಂದಿರುವ ಸೇವಾ ಪೂರೈಕೆದಾರರು / ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.	ಕಾಮಗಾರಿಯ ಹೆಸರು
	(ದ್ವಿಲಕೋಟೆ ಟೆಂಡರ್ ಪದ್ಧತಿ)
1	ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದಲ್ಲಿ ವಾರ್ಡ್ ಸಂ.45 ರಾಜರಾಜೇಶ್ವರಿನಗರದಲ್ಲಿ ರಾಜರಾಜೇಶ್ವರಿ ನಗರ ವಲಯ ಕಟ್ಟಡದ ನಿರ್ವಹಣೆ ಮತ್ತು ದುರಸ್ತಿಗಳು ಹಾಗೂ ಇತರ ಸಂಬಂಧಿತ ಕಾಮಗಾರಿಗಳು. **ಅಂದಾಜು ಮೊತ್ತ** : ರೂ.85.00 ಲಕ್ಷಗಳು. **ಇಎಂಡಿ** : ರೂ.1,70,000/- **ವರ್ಗ** : ಇತರೆ
2	ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ ಶಾಲೆ ಮತ್ತು ಕಾಲೇಜು ಕಟ್ಟಡಗಳ ದುರಸ್ತಿಗಳು ಮತ್ತು ನಿರ್ವಹಣೆ ಹಾಗೂ ಇತರ ಸಂಬಂಧಿತ ಕಾಮಗಾರಿಗಳು ಹಂತ-3. **ಅಂದಾಜು ಮೊತ್ತ** : ರೂ.69.00 ಲಕ್ಷಗಳು. **ಇಎಂಡಿ** : ರೂ.1,38,000/- **ವರ್ಗ** : ಇತರೆ
3	ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದಲ್ಲಿ ಶಾಲೆ ಮತ್ತು ಕಾಲೇಜು ಕಟ್ಟಡಗಳ ದುರಸ್ತಿಗಳು ಮತ್ತು ನಿರ್ವಹಣೆ ಹಾಗೂ ಇತರ ಸಂಬಂಧಿತ ಕಾಮಗಾರಿಗಳು ಹಂತ-3. **ಅಂದಾಜು ಮೊತ್ತ** : ರೂ.48.00 ಲಕ್ಷಗಳು. **ಇಎಂಡಿ** : ರೂ.48,000/- **ವರ್ಗ** : ಪ.ಜಾತಿ
4	ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದಲ್ಲಿ ವಿದ್ಯುತ್ ಚಿತಾಗಾರದ ನಿರ್ವಹಣೆ ಮತ್ತು ದುರಸ್ತಿಗಳು. **ಅಂದಾಜು ಮೊತ್ತ** : ರೂ.40.00 ಲಕ್ಷಗಳು. **ಇಎಂಡಿ** : ರೂ.40,000/- **ವರ್ಗ** : ಪ.ಜಾತಿ

(1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಬಹುದಾದ ದಿನಾಂಕ : **28-01-2025 ರಿಂದ** (2) ಟೆಂಡರ್ ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : **30-01-2025, ಸಂಜೆ 3.00 ಗಂಟೆ** (3) ಟೆಂಡರ್ ದಾಖಲೆಯನ್ನು ಸಲ್ಲಿಸಲು ಕೊನೆಯ ದಿನಾಂಕ : **10-02-2025 ರಂದು ಸಂಜೆ 4.00 ಗಂಟೆಯವರೆಗೆ** (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **11-02-2025 ರಂದು ಸಂಜೆ 4.30 ಗಂಟೆಯವರೆಗೆ** (5) ಆರ್ಥಿಕ ಬಿಡ್ ತೆರೆಯುವ ದಿನಾಂಕ : ತಾಂತ್ರಿಕವಾಗಿ ಅರ್ಹಗೊಂಡ ಬಿಡ್ದುದಾರರಿಗೆ ಸೂಚಿಸಲಾಗುವುದು.

ಕ್ರ.	(ಏಕ ಲಕೋಟೆ ಟೆಂಡರ್ ಪದ್ಧತಿ)
1	ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ತಿಗಳು ಮತ್ತು ನಿರ್ವಹಣೆ ಹಂತ-3. **ಅಂದಾಜು ಮೊತ್ತ** : ರೂ.7.00 ಲಕ್ಷಗಳು. **ಇಎಂಡಿ** : ರೂ.8,750/- **ವರ್ಗ** : ಪ.ಪಂಗಡ
2	ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಬೃಬೆಂಮಪಾ ಕಟ್ಟಡಗಳಲ್ಲಿ ಮಳೆ ನೀರು ಕೊಯ್ಲನ್ನು ಒದಗಿಸುವುದು. ಹಂತ-2. **ಅಂದಾಜು ಮೊತ್ತ** : ರೂ.5.00 ಲಕ್ಷಗಳು. **ಇಎಂಡಿ** : ರೂ.6,250/- **ವರ್ಗ** : ಪ.ಜಾತಿ

(1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಬಹುದಾದ ದಿನಾಂಕ : **28-01-2025 ರಿಂದ** (2) ಟೆಂಡರ್ ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : **30-01-2025, ಸಂಜೆ 3.00 ಗಂಟೆ** (3) ಟೆಂಡರ್ ದಾಖಲೆಯನ್ನು ಸಲ್ಲಿಸಲು ಕೊನೆಯ ದಿನಾಂಕ : **10-02-2025 ರಂದು ಸಂಜೆ 4.00 ಗಂಟೆಯವರೆಗೆ** (4) ಆರ್ಥಿಕ ಬಿಡ್ ತೆರೆಯುವ ದಿನಾಂಕ : **11-02-2025 ರಂದು ಸಂಜೆ 4.30 ಗಂಟೆಯವರೆಗೆ**

ಟೆಂಡರ್ ತೆರೆಯಲು ನಿಗದಿಪಡಿಸಿದ ದಿನಾಂಕದಂದು ಉದ್ಯೋಗದಾತರಿಗೆ ರಜಾದಿನವೆಂದು ಘೋಷಿತವಾಗಿದ್ದಲ್ಲಿ, ಮುಂದಿನ ಕೆಲಸದ ದಿನದಂದು ನಿಗದಿತ ಸಮಯ ಮತ್ತು ಸ್ಥಳದಲ್ಲಿ ಟೆಂಡರ್‌ಗಳನ್ನು ತೆರೆಯಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ರಾಜರಾಜೇಶ್ವರಿ ನಗರ

ಕರ ಭಾರದ ಇಳಿಕೆ ನಿರೀಕ್ಷೆಯಲ್ಲಿ ಮೂಲಸೌಕರ್ಯ ಕ್ಷೇತ್ರ, ರಿಯಲ್ ಎಸ್ಟೇಟ್

ಕೇಶವ ಪ್ರಸಾದ್ ಬಿ. ಬೆಂಗಳೂರು

ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆಬ್ರವರಿ 1ರಂದು 2025ರ ಬಜೆಟ್ ಮಂಡಿಸಲಿದ್ದಾರೆ. ಹಾಗಾದರೆ ದೇಶದ ಕೋಟ್ಯಂತರ ಜನ ಸಾಮಾನ್ಯರು ಮತ್ತು ಮಧ್ಯಮ ವರ್ಗದ ಜನತೆಗೆ ಈ ಮುಂಗಡಪತ್ರದಿಂದ ಯಾವೆಲ್ಲ ಪ್ರಯೋಜನಗಳು ಸಿಕ್ಕಿದರೆ ಒಳ್ಳೆಯದು ಎಂಬುದನ್ನು ನೋಡೋಣ.

ಈ ಸಲದ ಬಜೆಟ್ ಮೇಲೆ ರಿಯಲ್ ಎಸ್ಟೇಟ್ ವಲಯ ಹಲವು ನಿರೀಕ್ಷೆಗಳನ್ನು ಒಳಗೊಂಡಿದೆ. ದೇಶದ ಮಧ್ಯಮ ವರ್ಗದ ಜನತೆಗೆ ಒಂದು ಮನೆಯನ್ನು ಖರೀದಿಸುವುದು ಅಥವಾ ಸೈಟ್ ತೆಗೆದುಕೊಂಡು ಮನೆ ಕಟ್ಟುವುದು ಜೀವಮಾನದ ಕನಸಾಗಿರುತ್ತದೆ. ಇನ್ನೂ ಸ್ವಲ್ಪ ಉಳ್ಳವರು 2ನೇ ಮನೆಯನ್ನು ಹೊಂದಲು ಬಯಸುತ್ತಾರೆ. ಮತ್ತೆ ಕೆಲವರು ಬಾಡಿಗೆ ಮನೆಯನ್ನು ಕಟ್ಟಿ, ಇಳಿಗಾಲ ದಲ್ಲಿ ಆದಾಯದ ಮತ್ತೊಂದು ಮೂಲ ಇರಲಿ ಎಂದು ಬಯಸು ತ್ತಾರೆ. ಹೀಗಾಗಿ ರಿಯಾಲ್ಟಿ ಕ್ಷೇತ್ರದ ಚೇತರಿಕೆಗೆ ಬಜೆಟ್ ಏನೆಲ್ಲ ಕೊಡುಗೆ ನೀಡಲಿದೆ ಎಂಬ ಕುತೂಹಲ ಉಂಟಾಗಿದೆ.

ವಿಶಾಲಾರ್ಥದಲ್ಲಿ ನೋಡುವುದಿದ್ದರೆ ಮೂಲಸೌಕರ್ಯ ಅಭಿವೃದ್ಧಿ, ಮೆಟ್ರೊ, ರೈಲ್ವೆ ನೆಟ್ ವರ್ಕ್, ಮಲ್ಟಿ ಮಾಡೆಲ್ ಕಾರಿ ಡಾರ್‌ಗಳು ನಗರ ಮತ್ತು ನಗರಗಳು ಸುತ್ತು ಮುತ್ತಲು ವಾಣಿಜ್ಯೋದ್ದೇ ಶದ ರಿಯಾಲ್ಟಿ ಚಟುವಟಿಕೆ ಗಳನ್ನು ಪುಷ್ಟಿಗೊಳಿಸುತ್ತದೆ. ಇದು ದೊಡ್ಡ ಸಂಖ್ಯೆಯಲ್ಲಿ ಉದ್ಯೋಗಗಳನ್ನೂ ಸೃಷ್ಟಿಸುತ್ತದೆ.

ಸಿಮೆಂಟ್, ಉಕ್ಕಿನ ಜಿಎಸ್‌ಟಿ ಕಡಿಮೆ ಆಗುತ್ತಾ?: ಮನೆ ಕಟ್ಟುವಾಗ ಮುಖ್ಯವಾಗಿ ಬೇಕಾಗುವ ಸಿಮೆಂಟ್ ಮೇಲೆ ಈಗ ಬರೋಬ್ಬರಿ ಶೇ.28ರಷ್ಟು ಜಿಎಸ್‌ಟಿ ಇದೆ. ಇದನ್ನು ಶೇ.18ಕ್ಕೆ ಇಳಿಸಿದರೆ ಮಧ್ಯಮ ವರ್ಗದ ಜನತೆಗೆ ಮತ್ತು ಜನ ಸಾಮಾನ್ಯರಿಗೆ ಸ್ವಂತ ಸೂರು ಕಟ್ಟುವ ಕನಸಿಗೆ ಪುಷ್ಟಿ ನೀಡಿದಂತಾಗುತ್ತದೆ. ಸಿಮೆಂಟ್ ಕಂಪನಿ ಗಳೂ ಈ ಬೇಡಿಕೆಯನ್ನು ಮುಂದಿಟ್ಟಿವೆ. ಆರ್ಥಿ ಕತೆಯನ್ನು ಚುರುಕು ಗೊಳಿಸಬಲ್ಲ ವಸ್ತುಗಳಲ್ಲಿ ಸಿಮೆಂಟ್ ಕೂಡ ನಿರ್ಣಾಯಕ. ಕಾಂಕ್ರಿಟ್ ರಸ್ತೆಗಳೂ ದೀರ್ಘ ಕಾಲ ಬಾಳಿಕೆ ಬರುತ್ತವೆ. ಉಕ್ಕು, ಕಬ್ಬಿಣ ಕೂಡ ನಿರ್ಮಾಣ ಕ್ಷೇತ್ರದಲ್ಲಿ ಅಗತ್ಯ. ಇವುಗಳ ಮೇಲೆ ಶೇ. 18 ಜಿಎಸ್ ಟಿ ಇದ್ದು, ಇದು ಕಡಿಮೆಯಾದರೆ ಅನುಕೂಲವಾಗಲಿದೆ.

ಪ್ರಧಾನ ಮಂತ್ರಿ ಆವಾಸ್ ಸ್ಕೀಮ್ ಇರುವುದರಿಂದ ಮಧ್ಯಮ ವರ್ಗದ ಜನರಿಗೂ ಇವತ್ತು ಕ್ರೆಡಿಟ್ ಲಿಂಕ್ಡ್ ಸಬ್ಸಿಡಿ ಸ್ಕೀಮ್‌ನ ಪ್ರಯೋಜನ ಸಿಗುವಂತಾಗಿದೆ. ಆದರೆ ಇದರ ಜತೆಗೆ ಮನೆ ನಿರ್ಮಾಣದ ಕಚ್ಚಾ ವಸ್ತುಗಳ ಮೇಲಿನ ಜಿಎಸ್‌ಟಿ ಇಳಿದರೆ ಉತ್ತಮ. ವಸತಿ ಮತ್ತು ವಾಣಿಜ್ಯೋ ದ್ದೇಶದ ರಿಯಾಲ್ಟಿ ಪ್ರಾಜೆಕ್ಟ್‌ಗಳ ಜಿಎಸ್‌ಟಿ ಮತ್ತು ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅನ್ನು ಏಕರೂಪಗೊಳಿಸುವುದರಿಂದ ವೆಚ್ಚ ಕಡಿಮೆಯಾಗಲಿದೆ.

ಪಿಎಂ ಕಿಸಾನ್ ಸಮ್ಮಾನ್ ನಿಧಿ ಹೆಚ್ಚಳ ?

ಪಿಎಂ ಕಿಸಾನ್ ಸಮ್ಮಾನ್ ನಿಧಿಯಲ್ಲಿ ನೀಡುತ್ತಿರುವ ಸಹಾಯ ಧನವನ್ನು ಹೆಚ್ಚಿಸಲು ಮೋದಿ ಸರಕಾರ ಚಿಂತನೆ ನಡೆಸಿದೆ ಎಂ ಮಾತುಗಳು ಕೇಳಿ ಬರುತ್ತಿವೆ. ಈಗ ದೇಶದ ರೈತರಿಗೆ ವರ್ಷಕ್ಕೆ 6 ಸಾವಿರ ರೂಪಾಯಿಯನ್ನು ಕೇಂದ್ರ ಸರಕಾರ ನೀಡುತ್ತಿದ್ದು, ಇದನ್ನು ವರ್ಷಕ್ಕೆ 12 ಸಾವಿರ ರೂಪಾಯಿಗೆ ಹೆಚ್ಚಿಸುವ ನಿರೀಕ್ಷೆ ಇದೆ. ಇದರಿಂದ ಕೋಟ್ಯಂತರ ರೈತರಿಗೆ ಅನುಕೂಲ ಆಗಲಿದ್ದು, ಹಣದುಬ್ಬರದ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ಈ ನಿರ್ಧಾರಕ್ಕೆ ಬರಲಿದೆ ಎಂದು ಹೇಳಲಾ ಗುತ್ತಿದೆ. ಕಿಸಾನ್ ಕ್ರೆಡಿಟ್ ಕಾರ್ಡ್‌ನಡಿ ನೀಡುವ ಸಾಲದ ಮಿತಿಯನ್ನು ಹೆಚ್ಚಿಸುವ ನಿರೀಕ್ಷೆ ಇದೆ. ಸದ್ಯ ಇದರಡಿ 3 ಲಕ್ಷ ರೂಪಾಯಿವರೆಗೆ ಸಬ್ಸಿಡಿ ಕೃಷಿ ಸಾಲ ವನ್ನು ನೀಡಲಾಗುತ್ತಿದೆ. ಇದನ್ನು ಈಗ 5 ಲಕ್ಷ ರೂಪಾಯಿವರೆಗೆ ಏರಿಸುವ ಸಾಧ್ಯತೆ ಇದೆ. ಅದಲ್ಲದೇ ಬೆಳೆ ವಿಮೆಯನ್ನು ವಿಸ್ತರಿಸುವ ನಿರೀಕ್ಷೆಯಿದೆ ಎಂದು ಹೇಳಲಾಗುತ್ತಿದೆ.

ಆದಾಯ ತೆರಿಗೆ ವಿನಾಯಿತಿ ಮಿತಿ ವಿಸ್ತರಣೆಯಾಗಲಿದೆಯೇ?

ಮಧ್ಯಮ ವರ್ಗದ ವೇತನದಾರರು ಪ್ರತಿ ಸಲ ಕೇಂದ್ರ ಬಜೆಟ್‌ನಲ್ಲಿ ನಿರೀಕ್ಷಿಸುವ ಬೇಡಿಕೆ ಇದಾಗಿದೆ. ಪ್ರಸ್ತುತ ಆದಾಯ ತೆರಿಗೆಯ ಶ್ರೇಣಿ ಈ ರೀತಿ ಇದೆ. ಸಂಬಳದಾರರಿಗೆ ಅವರ ಆದಾಯದ ಮೇಲೆ ನಿರ್ದಿಷ್ಟ ಮಿತಿಯ ಬಳಿಕ ನೇರ ತೆರಿಗೆಯೂ ಇರುತ್ತದೆ. ಮಾತ್ರವಲ್ಲದೆ ಮಾಡುವ ಖರ್ಚುಗಳ ಮೇಲೆಯೂ ಪರೋಕ್ಷ ತೆರಿಗೆಯನ್ನು ಕಟ್ಟಬೇಕಾಗುತ್ತದೆ. ಎರಡು ತೆರಿಗೆಗಳ ಹೊರೆ ಅವರ ಮೇಲೆ ಬೀಳುತ್ತದೆ.

ಹೀಗಾಗಿ ಆದಾಯ ತೆರಿಗೆ ವಿನಾಯಿತಿ ಮಿತಿ ಹೆಚ್ಚಳವನ್ನು ಹಅಗೂ ತೆರಿಗೆ ದರದ ಶ್ರೇಣಿಯಲ್ಲಿ ಸುಧಾರಣೆ ಯನ್ನು ಮಧ್ಯಮ ವರ್ಗದ ವೇತನದಾ ರರು ನಿರೀಕ್ಷಿಸುತ್ತಿದ್ದಾರೆ.

ಈಗ ವಾರ್ಷಿಕ 3 ಲಕ್ಷ ರೂ. ತನಕ ಆದಾಯ ತೆರಿಗೆ ಇರುವುದಿಲ್ಲ. 3ರಿಂದ 7 ಲಕ್ಷ ರೂಪಾಯಿ ಆದಾಯಕ್ಕೆ ಶೇ.5 ತೆರಿಗೆ ದರ ಇದೆ. 7ರಿಂದ 10 ಲಕ್ಷ ರೂಪಾಯಿ ಆದಾಯಕ್ಕೆ ಶೇ. 10, 10ರಿಂದ 12 ಲಕ್ಷ ರೂಪಾಯಿಗೆ ಶೇ. 15, 12ರಿಂದ 15 ಲಕ್ಷ ರೂಪಾಯಿ ಆದಾಯಕ್ಕೆ ಶೇ. 20 ಮತ್ತು 15 ಲಕ್ಷ ರೂಪಾಯಿ ಮೀರಿದ ವಾರ್ಷಿಕ ಆದಾಯಕ್ಕೆ ಶೇ.30 ತೆರಿಗೆ ಇದೆ. ಹೀಗಾಗಿ ಆದಾಯ ತೆರಿಗೆ ವಿನಾಯಿ ತಿಯ ಮಿತಿಯನ್ನು ಏರಿಸಿದರೆ ಅಥವಾ ಹೊಸ ಆದಾಯ ತೆರಿಗೆ ಸ್ಲ್ಯಾಬ್ ಅನ್ನು ಜಾರಿಗೊಳಿಸಿದರೆ ಮಧ್ಯಮ ವರ್ಗದ ಜನರ ಕೈಯಲ್ಲಿ ಹಣ ಉಳಿತಾಯ ವಾಗಲಿದೆ. ಅವರ ಖರೀದಿ ಸಾಮರ್ಥ್ಯ ಹೆಚ್ಚಲಿದೆ. ಈಗ ತೆರಿಗೆ ರಿಬೇಟ್ ಸೇರಿದಾಗ ಹೊಸ ಆದಾಯ ತೆರಿಗೆ ಪದ್ಧತಿಯಲ್ಲಿ ವಾರ್ಷಿಕ 7 ಲಕ್ಷ ರೂ. ತನಕ ಆದಾಯ ಇರುವವರು ತೆರಿಗೆ ಮುಕ್ತರಾಗಬಹುದು. ಹಳೆ ತೆರಿಗೆ ಪದ್ಧತಿಯಲ್ಲಿ 5 ಲಕ್ಷ ರೂ. ತನಕ ತೆರಿಗೆ ಕಟ್ಟದೆ ಇರಬಹುದು. ಈ ಸಲ ವಾರ್ಷಿಕ 10ರಿಂದ 15 ಲಕ್ಷ ರೂ. ಆದಾ ಯದ ತನಕ ತೆರಿಗೆ ಮುಕ್ತಗೊಳಿಸ ಬೇಕು ಎಂಬ ಬೇಡಿಕೆ ಇದೆ. ಆದರೆ ಈ ಬಂಪರ್ ಘೋಷಣೆ ನಿಜಕ್ಕೂ ಆಗಲಿದೆಯೇ ಎಂಬುದು ಅನು ಮಾನ. ಹೊಸ ತೆರಿಗೆ ಪದ್ಧತಿಯಲ್ಲಿ ಕೆಲವಾ ದರೂ ವಿನಾಯಿತಿ ಗಳನ್ನು ಜನ ನಿರೀಕ್ಷಿಸು ತ್ತಿದ್ದಾರೆ. ಉದಾ ಹರಣೆಗೆ ಸ್ಟ್ಯಾಂಡರ್ಡ್ ಡಿಡಕ್ಷನ್ ಮಿತಿ ಯನ್ನು ಈಗಿನ 75,000 ರೂ.ಗಳಿಂದ ಏರಿಸಬೇಕೆಂಬ ಬೇಡಿಕೆಯೂ ಇದೆ. ತೆರಿಗೆ ಸ್ಲ್ಯಾಬ್ ಪರಿಷ್ಕರಣೆ ಮಾತ್ರ ವಲ್ಲದೆ, ಆರೋಗ್ಯ ವಿಮೆ ಪ್ರೀಮಿಯಂ ಪಾವತಿಗೆ ತೆರಿಗೆ ಅನುಕೂಲ, ಮೊದಲ ಸಲ ಮನೆ ಖರೀದಿಸುವವರಿಗೆ ಟ್ಯಾಕ್ಸ್ ಹೊರೆ ಇಳಿಕೆ ನಿರೀಕ್ಷಿಸಲಾಗಿದೆ. ಗೃಹ ಸಾಲಗಾರ ರಿಗೆ ಹೋಮ್‌ಲೋನ್ ಬಡ್ಡಿಯ ಮೇಲಿನ ಟ್ಯಾಕ್ಸ್ ರಿಬೇಟ್ ಅನ್ನು ಕನಿಷ್ಠ 5 ಲಕ್ಷ ರೂ.ಗೆ ಏರಿಸಬೇಕು ಎಂಮ ಬೇಡಿಕೆಯೂ ಇದೆ. ಒಂದು ವೇಳೆ ಹಾಗೆ ಮಾಡಿದರೆ ಮಧ್ಯಮ ವರ್ಗದ ಜನರಿಗೆ ಸ್ವಂತ ಮನೆ ಹೊಂದಲು ಅನುಕೂಲವಾಗಲಿದೆ. ಪ್ರಸ್ತುತ ಹಿರಿಯ ನಾಗರಿಕರಿಗೆ ಪಿಂಚಣಿ ಯೋಜನೆಗಳಲ್ಲಿ ಹೂಡಿಕೆಯು ತೆರಿಗೆ ಮುಕ್ತವಾಗಿದೆ.

ನಗರಗಳಲ್ಲಿ ಬಾಡಿಗೆ ಮನೆಗಳಲ್ಲಿ ವಾಸಿಸುವವರಿಗೆ ಕೈಗೆಟಕುವ ಬಾಡಿಗೆ ಅಪಾರ್ಟ್‌ಮೆಂಟ್‌ಗಳನ್ನು ಸರಕಾರವೇ ನಿರ್ಮಿಸಿಕೊಟ್ಟರೆ ಮಧ್ಯಮ ವರ್ಗದ ಜನರಿಗೆ ಸಾಕಷ್ಟು ಹಣ ಉಳಿತಾಯವಾಗಲಿದೆ. ಉದ್ಯೋಗಕ್ಕಾಗಿ ನಗರಗಳಿಗೆ ವಲಸೆ ಬರುವ ಜನರಿಗೆ ಸಂಬಳದಲ್ಲಿ ಬಾಡಿಗೆ ಖರ್ಚಿನಲ್ಲಿ ಉಳಿತಾಯಕ್ಕೆ ಅವಕಾಶ ಸಿಕ್ಕಂತಾಗುತ್ತದೆ.

ರಸಗೊಬ್ಬರ, ಬೀಜ, ವಿದ್ಯುತ್ ಸಬ್ಸಿಡಿ ಹೆಚ್ಚಳ?: ಹಣದುಬ್ಬರದ ಸವಾಲು ಕೇಂದ್ರ ಸರಕಾರದ ಮುಂದಿದೆ. ಇದರ ಪರಿಣಾಮ ನಗರ -ಹಳ್ಳಿಗಳಲ್ಲಿ ಉಂಟಾಗಿದೆ. ರೈತರಿಗೆ ಕೃಷಿ ಉತ್ಪಾದನೆಗೆ ತಗಲುತ್ತಿರುವ ವೆಚ್ಚ ಹೆಚ್ಚಳವಾಗಿದೆ. ಜನರ ಕೈಯಲ್ಲಿ ದುಡ್ಡು ನಿಲ್ಲುತ್ತಿಲ್ಲ. ಹೀಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ರೈತರ ಆದಾಯ ವೃದ್ಧಿಗೆ, ಉಳಿತಾಯಕ್ಕೆ ಪೂರಕವಾಗಿ ರಸಗೊಬ್ಬರ, ಬೀಜ, ವಿದ್ಯುತ್ ಸಬ್ಸಿಡಿಯನ್ನು ಬಜೆಟ್‌ನಲ್ಲಿ ಹೆಚ್ಚಿಸುವ ನಿರೀಕ್ಷೆ ಇದೆ. ಬೆಳೆಗಳ ವೈವಿಧ್ಯತೆಗೆ ಉತ್ತೇಜನ ಸಾಧ್ಯತೆ ಇದೆ. ಆಹಾರ ಹಣದುಬ್ಬರ ಕೂಡ ಸಮಸ್ಯೆ ಯಾಗಿ ಪರಿಣಮಿಸಿದ್ದು, ಕೃಷಿ ಉತ್ಪಾದನೆಗೆ ಬೆಂಬಲ ನೀಡ ಬೇಕಾಗಿದೆ. 2024-25ರಲ್ಲಿ ಇದುವರೆಗೆ 4.15 ಲಕ್ಷ ಕೋಟಿ ರೂ.ಗಳನ್ನು ನೇರ ನಗದು ವಿತರಣೆಯ ಮೂಲಕ ಜನತೆಗೆ ವಿತರಿಸಲಾಗಿದೆ. ಈ ಮೊತ್ತವನ್ನು ಏರಿಸುವ ಸಾಧ್ಯತೆ ಇದೆ.

ಸಮಾಚಾರ ಸಣ್ಣದಲ್ಲ

ಜಾಲತಾಣದ ಲೈಕ್: ಯುವಕ ಆತ್ಮಹತ್ಯೆ

ಮಂಗಳೂರು: ವಿವಾಹ ನಿಶ್ಚಿತಾರ್ಥವಾದ ಯುವಕ ಜಾಲತಾಣದಲ್ಲಿ ಅನ್ಯ ಯುವತಿಗೆ ಲೈಕ್ ನೀಡಿರುವುದನ್ನು ಭಾವಿ ವಧುಪ್ರಶ್ನೆ ಮಾಡಿದ ಬಳಿಕ ಯುವಕ ಆತ್ಮಹತ್ಯೆಗೆ ಶರಣಾಗಿದ್ದಾನೆ. ಬಂಟ್ವಾಳ ತಾಲೂಕು ಕುಕ್ಕಿಪಾಡಿ ಗ್ರಾಮದ ಎಲ್ಡೇಲು ನಿವಾಸಿ ಚೇತನ್ (25) ಆತ್ಮಹತ್ಯೆ ಮಾಡಿಕೊಂಡವನು. ಚೇತನ್ ದೈವದ ಪಾತ್ರಿಯಾಗಿ ಕೆಲಸ ಮಾಡಿಕೊಂಡಿದ್ದು, ಅವರಿಗೆ ಇನ್‌ಸ್ಟಾಗ್ರಾಮ್‌ನಲ್ಲಿ ಪರಿಚಯವಾದ ಮಂಗಳೂರು ತಾಲೂಕು ಕಂದಾವರ ಗ್ರಾಮದ ಓಣಿಬಾಗಿಲು ಮನೆ ನಿವಾಸಿ ದಿ. ಬಾಬು ಅವರ ಪುತ್ರಿ ಚೈತನ್ಯಾ ಜತೆ ಸುಮಾರು 8 ತಿಂಗಳ ಹಿಂದೆ ಮದುವೆ ನಿಶ್ಚಯವಾಗಿತ್ತು. ಚೇತನ್ ಇನ್‌ಸ್ಟಾಗ್ರಾಂನಲ್ಲಿ ಹುಡುಗಿಯೊಬ್ಬಳಿಗೆ ಲೈಕ್ ಮಾಡಿರುವುದನ್ನು ಪ್ರಶ್ನಿಸಲು ತಾನು ಮನೆಗೆ ಬಂದಿರುವುದಾಗಿ, ಈ ವಿಚಾರದ ಬಗ್ಗೆ ಗಲಾಟೆಯಾಗಿತ್ತು. ಇದರಿಂದ ಬೇಸರಗೊಂಡ ಚೇತನ್ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪುಂಜಾಲಕಟ್ಟೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಹಲ್ಲೆ ಪ್ರಕರಣ: ಆರೋಪಿ ಬಂಧನ

ಕಡೂರು: 23 ವರ್ಷಗಳ ಹಿಂದಿನ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ಬಂಧಿಸುವಲ್ಲಿ ಪಂಚನಹಳ್ಳಿ ಪೊಲೀಸರು ಯಶಸ್ವಿಯಾಗಿದ್ದಾರೆ. ಹೆಂಡತಿ ಮೇಲಿನ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪಂಚನಹಳ್ಳಿ ಪೊಲೀಸ್ ಠಾಣೆಯಲ್ಲಿ 2000ನೇ ಇಸವಿಯಲ್ಲಿ ದೂರು ದಾಖಲಾಗಿತ್ತು. ಅಂದಿನಿಂದ ಆರೋಪಿ ವಿ. ಕೋಡಿಹಳ್ಳಿ ಗ್ರಾಮದ ರಾಜಣ್ಣ ತಲೆಮರೆಸಿಕೊಂಡಿದ್ದರು. ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿದ ಪಂಚನಹಳ್ಳಿ ಪೊಲೀಸರು ಹಾಸನ ಜಿಲ್ಲೆಯ ಹಳೇಬೀಡು ಸಮೀಪ ಆರೋಪಿಯನ್ನು ಬಂಧಿಸಿದ್ದಾರೆ.

ಶ್ರೇಷ್ಠ ವಿಜ್ಞಾನಿಗಳ ಪಟ್ಟಿಗೆ ಸೇರ್ಪಡೆ

ಶೃಂಗೇರಿ: ಅಮೇರಿಕಾದ ಸ್ಟನ್‌ಫರ್ಡ್ ವಿಶ್ವವಿದ್ಯಾನಿಲಯ ಬಿಡುಗಡೆ ಮಾಡಿರುವ ವಿಶ್ವದ ಶ್ರೇಷ್ಠ



ಅಗ್ರಮಾನ್ಯ ವಿಜ್ಞಾನಿಗಳ ಪಟ್ಟಿಯಲ್ಲಿ ತಾಲೂಕಿನ ಹರಿಕೆ ಗ್ರಾಮದ ಎಚ್. ಎನ್. ಸುಮೇಧ ಸ್ಥಾನ ಪಡೆದಿದ್ದಾರೆ. ಅಂತಾರಾಷ್ಟ್ರೀಯವಾಗಿ ಪ್ರಕಟವಾದ ಸಂಶೋಧನಾ ಪ್ರಕಟಣೆ ಉಲ್ಲೇಖಗಳು, ಸಹ ಲೇಖನ, ಸಂಶೋಧನಾ ಪ್ರಕಟಣೆ ಪರಿಶೀಲಿಸಿದ ನಂತರ ವಿಶ್ವದ ಶೇ.2ರಷ್ಟು ಅಗ್ರ ವಿಜ್ಞಾನಿಗಳ ಪಟ್ಟಿ ಬಿಡುಗಡೆ ಮಾಡಿದೆ.

ಬ್ಯಾಂಕ್ ಕಿರುಕುಳ, ಊರು ಬಿಟ್ಟ ಕುಟುಂಬ

ಚಿಕ್ಕಮಗಳೂರು: ಖಾಸಗಿ ಬ್ಯಾಂಕ್ ಕಿರುಕುಳಕ್ಕೆ ಬೇಸತ್ತು ಮನೆಗೆ ಬೀಗ ಹಾಕಿ ಊರೇಬಿಟ್ಟಿರುವ ಘಟನೆ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ಎಮ್ಮೆದೊಡ್ಡಿ ಗ್ರಾಮದಲ್ಲಿ ನಡೆದಿದೆ. ಎಮ್ಮೆದೊಡ್ಡಿ ಗ್ರಾಮದ ಶ್ರೀನಿವಾಸ್ ಎಂಬವರು ಮನೆ ನಿರ್ಮಾಣಕ್ಕಾಗಿ ಖಾಸಗಿ ಬ್ಯಾಂಕಿನ ಕಡೂರು ಶಾಖೆಯಲ್ಲಿ 8 ವರ್ಷಗಳ ಅವಧಿಗೆ 7 ಲಕ್ಷ ಲೋನ್ ಮಾಡಿದ್ದರು. ಮೂರು ವರ್ಷಗಳಿಂದ ಕಂತು ಕಟ್ಟಿದರು. ನಂತರ ಆರ್ಥಿಕ ಸಂಕಷ್ಟದಿಂದ ಕಳೆದ ನಾಲ್ಕು ತಿಂಗಳಿನಿಂದ ಕಟ್ಟಿರಲಿಲ್ಲ. ಬ್ಯಾಂಕಿನ ಸಿಬ್ಬಂದಿ ತಿಂಗಳ ಕಂತು ಬಡ್ಡಿ ಕಟ್ಟುವಂತೆ ಮನೆ ಬಾಗಿಲಿಗೆ ಬಂದು ನಿರಂತರ ಕಿರುಕುಳ ನೀಡುತ್ತಿದ್ದರು. ಅಲ್ಲದೆ ಮನೆ ಹರಾಜು ಹಾಕುವುದಾಗಿ ಬೆದರಿಕೆ ಆರೋಪ ಕೂಡ ಕೇಳಿ ಬಂದಿದೆ.

ಊರೇಬಿಟ್ಟ ಕುಟುಂಬ: ಶ್ರೀನಿವಾಸ್ ಅವರ ಮನೆಯ ಗೋಡೆಯ ಮೇಲೆ ಈ ಮನೆ ಬ್ಯಾಂಕಿಗೆ ಸೇರಿದ್ದು ಎಂಬ ಬರಹ ಕೂಡ ಬರೆಯಲಾಗಿದೆ. ಬ್ಯಾಂಕ್ ಸಿಬ್ಬಂದಿಗಳ ಕಿರುಕುಳಕ್ಕೆ ಬೇಸತ್ತು ಊರು ಬಿಟ್ಟು ತುಮಕೂರು ಸೇರಿದ್ದಾರೆ ಎನ್ನಲಾಗಿದೆ.

ಬ್ಯಾಂಕ್ ದರೋಡೆ: ನಗದು, ಚಿನ್ನ ವಶಕ್ಕೆ

ಮಂಗಳೂರು: ಉಳ್ಳಾಲದ ಕೋಟೆಕಾರು ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ನಡೆದ ದರೋಡೆ ಪ್ರಕರಣದ ಬಂಧಿತ ಆರೋಪಿ ಮುರುಗನ್ ದೇವರ್ ಮನೆಯಿಂದ ಚಿನ್ನಾಭರಣಗಳನ್ನು ಮಂಗಳೂರು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಆರೋಪಿ ಮುರುಗನ್ ದೇವರ್ (35) ಪದ್ಮನೇರಿಯ ಮನೆ ಮೇಲೆ ಗುರುವಾರ ರಾತ್ರಿಯಿಂದ ಶುಕ್ರವಾರ ಬೆಳಗಿನ ಜಾವದವರೆಗೆ ಪೊಲೀಸರು ದಾಳಿ ನಡೆಸಿದ್ದಾರೆ. ಈ ದಾಳಿಯಲ್ಲಿ ಪೊಲೀಸರು ಕೋಟ್ಯಂತರ ನಗದು ಮತ್ತು ಸುಮಾರು 15 ಕೆಜಿ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ. ಈ ದಾಳಿ ವೇಳೆ ಪರಿಸರದಲ್ಲಿ ತಮಿಳುನಾಡು ಪೊಲೀಸರು ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು. ಮಂಗಳೂರಿನ ಉಳ್ಳಾಲ ಪೊಲೀಸ್ ಠಾಣೆ ವ್ಯಾಪ್ತಿಯ ಕೃಷಿ ಸಹಕಾರಿ ಬ್ಯಾಂಕ್‌ಗೆ ಜ.17ರಂದು ಡಕಾಯಿತಿ ತಂಡ ದೋಚಿ ಪರಾರಿಯಾಗಿತ್ತು. ಈ ಬಗ್ಗೆ ಮಾಹಿತಿ ಪಡೆದ ಉಳ್ಳಾಲ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದರು. ನಂತರ ಆರೋಪಿಗಳ ಬಂಧನಕ್ಕೆ 6ಕ್ಕೂ ಹೆಚ್ಚು ವಿಶೇಷ ತಂಡಗಳನ್ನು ರಚಿಸಿ ತಮಿಳುನಾಡು, ಕೇರಳ, ಮಹಾರಾಷ್ಟ್ರ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಶೋಧ ಕಾರ್ಯ ನಡೆಸಲಾಗಿತ್ತು.

{ಎಚ್.ಡಿ.ಕುಮಾರಸ್ವಾಮಿ} ಕೇಂದ್ರ ಸಚಿವ

ಕಾಂಗ್ರೆಸ್‌ನವರು ಉತ್ತಮವಾಗಿ ಸರಕಾರ ನಡೆಸಿ, ಜನರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಬದಲಿಗೆ ವಿರೋಧ ಪಕ್ಷಗಳನ್ನು ಅಸ್ಥಿರಗೊಳಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಜನರು ಅವರಿಗೆ ಆಶೀರ್ವದಿಸಿದರು. ಆದರೆ, ಈ ಸರಕಾರದವರು ಮಾಡುತ್ತಿರುವುದೇನು? ಆಡಳಿತದ ವಿಷಯದಲ್ಲಿ ರಾಜ್ಯಕ್ಕೆ ಇದ್ದ ಹೆಸರು ಸರ್ವನಾಶಕ್ಕೆ ಹೊರಟಿದ್ದಾರೆ.

ಮಸಾಜ್ ಪಾರ್ಲರ್ಸ್ ನಿಯಮ ಉಲ್ಲಂಘಿಸಿದರೆ ಕಾರ್ಯಾಚರಣೆ

ಮುಂದಿನ ವಾರದಿಂದಲೇ ಆರಂಭ : ಪಾಲಿಕೆ ಮೇಯರ್ ಮನೋಜ್ ಕುಮಾರ್

ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯ ಮಸಾಜ್ ಪಾರ್ಲರ್, ಯೂನಿಸೆಕ್ಸ್ ಸೆಲೂನ್‌ಗಳು ಪರವಾನಗಿ ನಿಯಮ ವ್ಯಾಪ್ತಿ ಮೀರಿದ್ದರೆ ಮುಂದಿನ ವಾರದಿಂದ ಕಾರ್ಯಾಚರಣೆ ಆರಂಭಿಸಲಾಗುವುದು ಎಂದು ಮೇಯರ್ ಮನೋಜ್ ಕುಮಾರ್ ತಿಳಿಸಿದ್ದಾರೆ.

ನಗರದ ಯುನಿಸೆಕ್ಸ್ ಸೆಲೂನ್ ಮೇಲೆ ಶ್ರೀರಾಮಸೇನೆಯಿಂದ ನಡೆದ ದಾಂಧಲೆ ಪ್ರಕರಣದ ಕುರಿತಂತೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದರು.

ಮಸಾಜ್ ಪಾರ್ಲರ್ಗಳಲ್ಲಿ ಅನೈತಿಕ ಚಟುವಟಿಕೆ ನಡೆದರೆ ಅದರ ಮೇಲ್ವಿಚಾರಣೆಯನ್ನು ಪೊಲೀಸ್ ಇಲಾಖೆ ನೋಡಿಕೊಳ್ಳುತ್ತದೆ. ಆದರೆ ಮಹಾನಗರ ಪಾಲಿಕೆ ನೀಡಿದ ಲೈಸನ್ಸ್ ಮೀರಿ ಬೇರೆ ಚಟುವಟಿಕೆ ನಡೆಸುತ್ತಿದ್ದರೆ ಅಥವಾ ಲೈಸನ್ಸ್ ಉಲ್ಲಂಘನೆ ಮಾಡಿದರೆ ಕ್ರಮ ಕೈಗೊಳ್ಳಲಾಗುವುದು. ಇದಕ್ಕಾಗಿ ಭೇಟಿ ನೀಡಿ ಪರಿಶೀಲಿಸಲು ಅಧಿಕಾರಿಗಳ ತಂಡ ರಚಿಸಲಾಗುವುದು ಎಂದು ಹೇಳಿದರು.

ಎಸ್ ಟಿ ಪಿ ನಿರ್ವಹಣೆ: ನಗರದ ನಾಲ್ಕು ತ್ಯಾಜ್ಯ ನೀರು ಸಂಸ್ಕರಣಾ ಘಟಕ (ಎಸ್ ಟಿ ಪಿ)ಗಳಲ್ಲಿ ಕಾವೂರು ಹೊರತುಪಡಿಸಿ ಉಳಿದವನ್ನು ಗುತ್ತಿಗೆಯಡಿ ನಿರ್ವಹಿಸಲಾಗುತ್ತಿದೆ. ಅವುಗಳ ನಿರ್ವಹಣೆಯನ್ನು ಎಂಆರ್ ಪಿಎಲ್ ಸಂಸ್ಥೆಗೆ ವಹಿಸಿ, ಅದರಿಂದ ಶುದ್ಧೀಕರಣವಾಗುವ ನೀರನ್ನು ಕಂಪೆನಿಯೇ ಬಳಸುವಂತೆ ಕಾರ್ಯಪ್ರವೃತ್ತವಾಗಿದ್ದು, ಈಗಾಗಲೇ ಈ ಬಗ್ಗೆ ಮಾತುಕತೆ ನಡೆದಿದೆ ಎಂದು ಮೇಯರ್ ತಿಳಿಸಿದರು.

ಸುಳ್ಳು ಹೇಳಿಕೆ : ಕಾವೂರು ಎಸ್ಟಿಪಿ ಹೊರತುಪಡಿಸಿ ಉಳಿದ ಮೂರು ಎಸ್ಟಿಪಿಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ, ನದಿಗೆ ತ್ಯಾಜ್ಯ ನೀರು ಸೇರುತ್ತಿದೆ ಎಂಬ ಆರೋಪಕ್ಕೆ ಉತ್ತರಿಸಿದ ಮೇಯರ್, ನಗರದ ಎಲ್ಲ ಎಸ್ಟಿಪಿಗಳು

ಮಂಗಳೂರು ಮಹಾನಗರ ಪಾಲಿಕೆ ಮೇಯರ್ ಮನೋಜ್ ಕುಮಾರ್ ಮಾತನಾಡಿದರು.

ಇರೋದು ನೀರು ಪೂರೈಸುವ ತುಂಬೆ ಅಣೆಕಟ್ಟಿನ ಕೆಳಭಾಗದಲ್ಲಿ ಮಾತ್ರ. ಯಾವ ರೀತಿಯಿಂದಲೂ ಕುಡಿಯುವ ನೀರಿಗೆ ಎಸ್ಟಿಪಿ ತ್ಯಾಜ್ಯ ಸೇರುವ ಪ್ರಶ್ನೆ ಇಲ್ಲ. ವಿಪಕ್ಷದವರು ರಾಜಕೀಯ ಹೇಳಿಕೆ ನೀಡುತ್ತಿದ್ದಾರೆ ಎಂದರು.

ಟೆಂಡರ್ ರದ್ದು ಎಚ್ಚರಿಕೆ : ಗುತ್ತಿಗೆದಾರರಿಗೆ ಕೋಟಿಗಟ್ಟಲೆ ಹಣವನ್ನು ನಿರ್ವಹಣೆಗೆ ನೀಡಲಾಗುತ್ತಿದ್ದರೂ ಎಸ್ಟಿಪಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸದ ಕುರಿತು ಪಾಲಿಕೆಯಿಂದ ಶಿಸ್ತು ಕ್ರಮ ವಹಿಸಲಾಗಿದೆಯೇ ಎಂಬ ಪ್ರಶ್ನೆಗೆ ಈಗಾಗಲೇ ಈ ಬಗ್ಗೆ ಗುತ್ತಿಗೆದಾರರಿಗೆ ಎಚ್ಚರಿಕೆ ನೀಡಲಾಗಿದೆ. ನಿರ್ಲಕ್ಷ್ಯ ವಹಿಸಿದರೆ ಕಪ್ಪು ಪಟ್ಟಿಗೆ ಸೇರಿಸಿ ಟೆಂಡರ್ ರದ್ದುಗೊಳಿಸುವ ಎಚ್ಚರಿಕೆಯನ್ನು ಗುತ್ತಿಗೆದಾರರಿಗೆ ನೀಡಲಾಗಿದೆ ಎಂದರು.

ನೋಟಿಸ್ : 114 ಮಂದಿಗೆ ಬೀದಿ ಬದಿ ವ್ಯಾಪಾರ ಮಾಡಲು ಗುರುತಿನ ಚೀಟಿ ನೀಡಲಾಗಿತ್ತು. ನಗರದ ಸ್ಟೇಟ್ ಬ್ಯಾಂಕ್ ಬಳಿ ಬೀದಿ ಬದಿಯ ಶೇ.10 ವ್ಯಾಪಾರಿಗಳು ಮಾತ್ರ ಸ್ಥಳಾಂತರಗೊಂಡಿದ್ದು, ಉಳಿದವರು ಇನ್ನೂ ಅಲ್ಲೇ ವ್ಯಾಪಾರ ಮಾಡುತ್ತಿದ್ದಾರೆ.

ಅವರಿಗೆ ಒಂದು ವಾರ ಕಾಲಾವಕಾಶ ನೀಡಿ ನೋಟಿಸ್ ನೀಡಲಾಗಿದೆ. ಸ್ಥಳಾಂತರ ಆಗದಿದ್ದರೆ ಅವರ ಗುರುತಿನ ಚೀಟಿ ರದ್ದುಪಡಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಶ್ರೀಲಂಕಾದಲ್ಲಿ ಧರ್ಮಸ್ಥಳ ಸಂಸ್ಥೆ ಯೋಜನೆ ಅನುಷ್ಠಾನ

ಉಜಿರೆ: ಗ್ರಾಮೀಣ ಪ್ರದೇಶದ ಪ್ರಗತಿಗಾಗಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯನ್ನು 1982ರಲ್ಲಿ ಪ್ರಾಯೋಗಿಕವಾಗಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ಪ್ರಾರಂಭಿಸಿದ್ದು ಇದು ಯಶಸ್ವಿಯಾಗಿದೆ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರು ಹೇಳಿದರು.

ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರು ಮಾಹಿತಿ, ಮಾರ್ಗದರ್ಶನ ನೀಡಿದರು.

ಅವರು ಗುರುವಾರ ಧರ್ಮಸ್ಥಳದಲ್ಲಿ ಗ್ರಾಮಾಭಿವೃದ್ಧಿ ಯೋಜನೆಯ ಬಗ್ಗೆ ಅಧ್ಯಯನ ಮಾಡಲು ಶ್ರೀಲಂಕಾದಿಂದ ಆಗಮಿಸಿದ 38 ಮಂದಿ 'ಲಂಕಾ ಮೈಕ್ರೋ ಫೈನಾನ್ಸ್ ಪ್ರಾಕ್ಟೀಶನರ್ಸ್ ಅಸೋಸಿಯೇಶನ್' ಸದಸ್ಯರಿಗೆ ಮಾಹಿತಿ ನೀಡಿದರು.

ಗ್ರಾಮೀಣ ಭಾರತವೇ ನೈಜ ಭಾರತದ ಪ್ರತಿಬಿಂಬವಾಗಿದೆ. ಗಾಂಧೀಜಿ ಸಹಕಾರಿ ಚಳವಳಿ ಮೂಲಕ ದೇಶದ ಪ್ರಗತಿಗೆ ಆದ್ಯತೆ ನೀಡಿದರು. ಮಾನವ ಸಂಪನ್ಮೂಲ ಹಾಗೂ ನೆಲ, ಜಲ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಸದ್ಬಳಕೆಯೊಂದಿಗೆ ಅಭಿವೃದ್ಧಿ ಮತ್ತು ಪ್ರಗತಿ ಸಾಧಿಸಲು ಎಲ್ಲರಿಗೂ ಸಮಾನ ಅವಕಾಶವಿದೆ. ಗ್ರಾಮಾಭಿವೃದ್ಧಿ ಯೋಜನೆಯ ಫಲಾನುಭವಿಗಳು ಪ್ರಗತಿಯ ಪಾಲುದಾರರು. ಜನರ ಸಕ್ರಿಯ ಸಹಕಾರ ಮತ್ತು ಸಹಭಾಗಿತ್ವದಿಂದ ಯೋಜನೆ ಯಶಸ್ವಿಯಾಗಿದೆ ಎಂದರು.

ಜನಸಾಮಾನ್ಯರ ಬೇಡಿಕೆಗಳಿಗೆ ಅನುಗುಣವಾಗಿ ಕಿರು ಆರ್ಥಿಕ ಯೋಜನೆಯನ್ನು ಸ್ವ-ಸಹಾಯ ಸಂಘಗಳ ಮೂಲಕ ಬಿ.ಸಿ. ಮಾದರಿಯಲ್ಲಿ ಅನುಷ್ಠಾನಗೊಳಿಸಲಾಗಿದೆ. ಪ್ರಗತಿಗೆ ಕೊನೆಯಿಲ್ಲ. ಇಂದು ಗ್ರಾಮೀಣ ಜನರ ಜೀವನಶೈಲಿ ಸುಧಾರಣೆಯಾಗಿದೆ. ಅವರ ಮಕ್ಕಳೆಲ್ಲ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ ಎಂದು ಹೆಗ್ಗಡೆಯವರು ಸಂತಸ ವ್ಯಕ್ತಪಡಿಸಿದರು.

ಶ್ರೀಲಂಕಾದಲ್ಲಿ ಯೋಜನೆಯ ಮಾದರಿ ಅನುಷ್ಠಾನಗೊಳಿಸಲು ತಮ್ಮ ಪೂರ್ಣ ಒಪ್ಪಿಗೆ ಇದೆ. ಬೇಕಾದ ಎಲ್ಲಾ ಮಾಹಿತಿ, ಅನುಭವ, ಮಾರ್ಗದರ್ಶನ ನೀಡಲಾಗುವುದು. ಅಲ್ಲಿ ಯೋಜನೆ ಯಶಸ್ವಿಯಾಗುತ್ತದೆ ಎಂದು ಹೇಳಿ ಶುಭ ಹಾರೈಸಿದರು.

ಹೇಮಾವತಿ ವೀ. ಹೆಗ್ಗಡೆಯವರ ನೇತೃತ್ವದಲ್ಲಿ ಜ್ಞಾನದೀಪ ಮತ್ತು ಜ್ಞಾನವಿಕಾಸ ಕಾರ್ಯಕ್ರಮಗಳ ಮೂಲಕ ಮಹಿಳಾ ಸಬಲೀಕರವಾಗಿದೆ ಎಂದರು.

ಲಂಕಾ ಮೈಕ್ರೋ ಫೈನಾನ್ಸ್ ಪ್ರಾಕ್ಟೀಶನರ್ಸ್ ಅಸೋಸಿಯೇಶನ್ ಅಧ್ಯಕ್ಷ ವಾಸಂತ ಗುಣವರ್ಧನ ಮಾತನಾಡಿ, ಧರ್ಮಸ್ಥಳದ ಯೋಜನೆ ಲಂಕಾದಲ್ಲಿ ಇದೇ ಮಾದರಿ ಅನುಷ್ಠಾನಗೊಳಿಸಲು ಹೆಗ್ಗಡೆಯವರ ಅನುಮತಿ ಕೋರಿದರು. ಹೆಗ್ಗಡೆಯವರು ಸಂತೋಷದಿಂದ ಒಪ್ಪಿಗೆ ನೀಡಿ, ಮಾರ್ಗದರ್ಶನ ನೀಡುವುದಾಗಿ ಭರವಸೆ ನೀಡಿದರು.

ಯೋಜನೆಯ ಮುಖ್ಯ ಕಾರ್ಯನಿರ್ವಾಹಕ ನಿರ್ದೇಶಕ ಅನಿಲ್ ಕುಮಾರ್ ಎಸ್.ಎಸ್. ಪ್ರಾಸ್ತಾವಿಕ ಮಾತುಗಳೊಂದಿಗೆ ಯೋಜನೆಯ ಕಾರ್ಯವೈಖರಿಯ ಪಕ್ಷಿನೋಟ ನೀಡಿದರು. ಹೇಮಾವತಿ ವೀ. ಹೆಗ್ಗಡೆ ಉಪಸ್ಥಿತರಿದ್ದರು.

ರಸ್ತೆ ಅಭಿವೃದ್ಧಿಗೆ 13 ಕೋಟಿ

ಉಡುಪಿ: ಕಾರ್ಕಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಅಭಿವೃದ್ಧಿ ಹಾಗೂ ಸೇತುವೆಗಳ ಅಭಿವೃದ್ಧಿಗಾಗಿ 13 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ ಎಂದು ಶಾಸಕ ವಿ. ಸುನಿಲ್ ಕುಮಾರ್ ತಿಳಿಸಿದ್ದಾರೆ.

ಮುದ್ರಾಡಿ - ಹೆಬ್ರಿ - ಬ್ರಹ್ಮಾವರ ರಾಜ್ಯ ಹೆದ್ದಾರಿ ಮುದ್ರಾಡಿ ಪೇಟೆಯಿಂದ ಜರುವತ್ತು ಸೇತುವೆವರೆಗಿನ ರಸ್ತೆ ನವೀಕರಣಕ್ಕಾಗಿ 120 ಲಕ್ಷ ರೂ., ಸುಬ್ರಹ್ಮಣ್ಯ - ಉಡುಪಿ ರಾಜ್ಯ ಹೆದ್ದಾರಿ 37ರ ಚೆಂಡೆ ಬಸದಿ ಕ್ರಾಸ್ (ಬಜಗೋಳಿವರೆಗೆ) ರಸ್ತೆಗೆ 150 ಲಕ್ಷ ರೂ., ಕಾಂಜರಕಟ್ಟೆ - ಇನ್ನಾ - ಸಾಂತೂರು ಕೊಪ್ಪ ಮುಂಡೂರು ಕಜೆ ಮಾರಿಗುಡಿ - ಸಚ್ಚರಿಪೇಟೆ ಜಿಲ್ಲಾ ಮುಖ್ಯ ರಸ್ತೆ ಅಭಿವೃದ್ಧಿಗಾಗಿ 100 ಲಕ್ಷ ರೂ., ಬೆಳುವಾಯಿ - ಕಾಂತಾವರ - ಮಂಜರಪಲ್ಕೆ ಜಿಲ್ಲಾ ಮುಖ್ಯ ರಸ್ತೆಯ ವಂಜಾರಕಟ್ಟೆಯಿಂದ ಬೋಪಾಡಿ ಸೇತುವೆವರೆಗಿನ ರಸ್ತೆಗೆ 180 ಲಕ್ಷ ರೂ., ಅಜೆಕಾರು - ಹೆರ್ಮುಂಡೆ - ಜಾರ್ಕಳ - ಕೆರ್ವಾಶೆ ಜಿಲ್ಲಾ ಮುಖ್ಯ ರಸ್ತೆಗೆ 250 ಲಕ್ಷ ರೂ., ದುರ್ಗಾ - ಮುಂಡ್ಲಿ- ಶಿರ್ಲಾಲು ಜಿಲ್ಲಾ ಮುಖ್ಯ ರಸ್ತೆ ಅಭಿವೃದ್ಧಿಗಾಗಿ 250 ಲಕ್ಷ ರೂ.ನೀಡಲಾಗಿದೆ.

ಮುಡಾರು ರಾಜ್ಯ ಹೆದ್ದಾರಿ ರಾಮೇರುಗುತ್ತು ಬಳಿ ಶಿಥಿಲಗೊಂಡಿರುವ ಕಿರಿದಾದ ಹಳೆಯ ಸೇತುವೆ ಮರು ನಿರ್ಮಾಣಕ್ಕಾಗಿ 100 ಲಕ್ಷ ರೂ., ಬೆಳುವಾಯಿ - ಕಾಂತಾವರ - ಮಂಜರಪಲ್ಕೆ ಜಿಲ್ಲಾ ಮುಖ್ಯ ರಸ್ತೆಯಲ್ಲಿನ ಕಿರಿದಾದ ಸೇತುವೆ ಮರು ನಿರ್ಮಾಣಕ್ಕಾಗಿ 150 ಲಕ್ಷ ರೂ. ಸರಕಾರದಿಂದ ಬಿಡುಗಡೆಯಾಗಿದೆ ಎಂದು ಸುನಿಲ್ ಕುಮಾರ್ ತಿಳಿಸಿದ್ದಾರೆ.

ಸಾರ್ವಜನಿಕರ, ಸರ್ವ ಪಕ್ಷಗಳ ಸಲಹೆ ಅನುಷ್ಠಾನ

ನಗರಸಭೆ ಆಯವ್ಯಯ ಸಮಾಲೋಚನಾ ಸಭೆ | ಅಧ್ಯಕ್ಷೆ ಸುಜಾತ ಭರವಸೆ

ಚಿಕ್ಕಮಗಳೂರು: ಸಾರ್ವಜನಿಕರು, ಸರ್ವ ಪಕ್ಷಗಳ ಮುಖಂಡರು ಹಾಗೂ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ನೀಡಿರುವ ಸಲಹೆ ಸೂಚನೆಗಳನ್ನು ಗಂಭೀರವಾಗಿ ಪರಿಗಣಿಸಿ ಹಂತಹಂತವಾಗಿ ಅನುಷ್ಠಾನಕ್ಕೆ ತರಲಾಗುವುದು ಎಂದು ನಗರಸಭಾ ಅಧ್ಯಕ್ಷೆ ಸುಜಾತ ಶಿವಕುಮಾರ್ ತಿಳಿಸಿದರು.

ನಗರಸಭಾ ಸಭಾಂಗಣದಲ್ಲಿ 2025-26ರ ಆಯವ್ಯಯ ತಯಾರಿಸಲು ಎರಡನೇ ಹಂತದ ಸಾರ್ವಜನಿಕ ಸಮಾಲೋಚನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಾರ್ವಜನಿಕರು ಈ ಸಭೆಯಲ್ಲಿ ನೀಡಿರುವ ಸಲಹೆ, ಸೂಚನೆ, ಅಭಿಪ್ರಾಯಗಳನ್ನು ಅಳವಡಿಸಿಕೊಂಡು ನಗರದ ನಾಗರೀಕರಿಗೆ ಅನುಕೂಲ ಕಲ್ಪಿಸಲು ಕಾರ್ಯಪ್ರವೃತ್ತರಾಗುವುದಾಗಿ ಭರವಸೆ ನೀಡಿದರು.

ನಗರದಲ್ಲಿ ಪ್ಲಾಸ್ಟಿಕ್ ನಿರ್ಮೂಲನೆ ಬಗ್ಗೆ ಒಟ್ಟಾರೆ ಅಭಿಪ್ರಾಯ ವ್ಯಕ್ತವಾಗಿದ್ದು, ಸಂಪೂರ್ಣ ನಿಷೇಧಿಸಲು ವರ್ತಕರಿಗೆ ಸೂಚನೆ ನೀಡಲಾಗಿದೆ. ಅಲ್ಲದೆ ಕಲ್ಯಾಣ ಮಂಟಪಗಳಲ್ಲಿ ಶುಭ ಕಾರ್ಯಗಳು ನಡೆಯುವಾಗ ಅತೀ ಹೆಚ್ಚು ನೀರಿನ ಬಾಟಲಿಗಳು ಹೆಚ್ಚು ಕಸದ ರಾಶಿ ಸೇರುತ್ತಿವೆ.

ನಗರಸಭಾ ಅಧ್ಯಕ್ಷೆ ಸುಜಾತ ಮಾತನಾಡಿದರು.

ದೊಡ್ಡ ಪ್ರಮಾಣದ ನೀರು ಸಂಗ್ರಾಹಗಾರವನ್ನು ಅಕ್ವಗಾರ್ಡ್ ಅಳವಡಿಸಿ ಕಲ್ಯಾಣ ಮಂಟಪದವರೇ ನಿರ್ಮಿಸಿಕೊಳ್ಳಬೇಕು. ಇದರಿಂದ ಪ್ಲಾಸ್ಟಿಕ್ ಬಳಕೆ ತಡೆಯಲು ಸಹಕಾರಿ ಎಂದರು.

ಭಯ ಪಡುವ ಅಗತ್ಯ ಇಲ್ಲ: ನಗರಸಭೆಯಿಂದಲೇ ಪ್ರತೀ ಬಾರಿ ಕಂದಾಯ ವಸೂಲಾತಿಗೆ ವಾರ್ಡಿನ ಕಂದಾಯ ಅಧಿಕಾರಿಗಳು ಮನೆ ಮನೆಗೆ ತೆರಳಿ ಕಂದಾಯ ವಸೂಲಿ ಮಾಡಲು ಸೂಚನೆ ನೀಡಲಾಗಿದೆ. ಈ ಮಧ್ಯೆ ದೂರವಾಣಿ ಮೂಲಕ ನಾಗರೀಕರಿಗೆ ಕರೆಮಾಡಿ ಭಯ ಹುಟ್ಟಿಸುತ್ತಿದ್ದು, ಈ ಬಗ್ಗೆ ಸಾರ್ವಜನಿಕರು ಭಯ ಪಡುವ ಅಗತ್ಯ ಇಲ್ಲ ಎಂದು ತಿಳಿಸಿದರು.

ಗಣರಾಜ್ಯೋತ್ಸವ: ಜ.26 ರಂದು ನಗರಸಭೆ ಆವರಣದ ನೀರಿನ ಕಾರಂಜಿ, ಗಣಪತಿ ದೇವಸ್ಥಾನ, ಸಾರ್ವಜನಿಕ ಶೌಚಾಲಯಗಳನ್ನು ಜಿಲ್ಲಾಉಸ್ತುವಾರಿ ಸಚಿವಕೆ.ಜೆ. ಜಾರ್ಜ್ ಹಾಗು ಶಾಸಕರ ನೇತೃತ್ವದಲ್ಲಿ ಉದ್ಘಾಟನೆಯಾಗಲಿದೆ. ವಿದ್ಯುತ್ ದೀಪ ಅಳವಡಿಕೆ ಕಾರ್ಯಕ್ಕೆ ಸಚಿವರು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದರು.

ಹಿರಿಯ ನಾಗರೀಕ ನಂಜುಂಡರು ಮಾತನಾಡಿ, 15ನೇ ವಾರ್ಡಿನಲ್ಲಿಒಂದು ಕಾಲುವೆಗೆ ಮೇಲ್ಭಾಗದ ಕವರಿಂಗ್ ಮಾಡಿಸಬೇಕು, ಜೊತೆಗೆ ಮುಖ್ಯ ಸ್ಥಳಗಳಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸುವಂತೆ ಸಲಹೆ ನೀಡಿದರು.

ಸಭೆಯಲ್ಲಿ ಐಡಿಎಸ್‌ಜಿಕಾಲೇಜಿನಉಪನ್ಯಾಸಕ ಲಕ್ಷ್ಮಿಕಾಂತ್, ಬಿಎಸ್‌ಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಟಿ. ರಾಧಾಕೃಷ್ಣ, ರಚನಾ ಬಿಲ್ಡರ್ಸ್‌ನ ನಾಗೇಂದ್ರ, ಜಿ.ರಮೇಶ್ ಸಲಹೆಗಳನ್ನು ನೀಡಿದರು. ನಗರಸಭೆ ಉಪಾಧ್ಯಕ್ಷೆ ಅನುಮಧುಕರ್, ಎಂಜಿನಿಯರ್ ಲೋಕೇಶ್, ಬಿಜೆಪಿ ಮುಖಂಡ ಸಿ.ಆರ್ ಪ್ರೇಮ್‌ಕುಮಾರ್, ನಾಮಿನಿ ಸದಸ್ಯ ಪ್ರಸಾದ್‌ಅಮೀನ್, ಜಗದೀಶ್, ಪ್ರದೀಪ್ ಉಪಸ್ಥಿತರಿದ್ದರು.

ಕೇಂದ್ರದ ಯೋಜನೆ ಅನುಷ್ಠಾನಕ್ಕೆ ತಾಕೀತು

ಉಡುಪಿ: ಕೇಂದ್ರ ಪುರಸ್ಕೃತ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಪ್ರತಿಶತಃ ನೂರರಷ್ಟು ನಿಗಧಿತ ಕಾಲಾವಧಿಯೊಳಗೆ ಅನುಷ್ಠಾನಗೊಳಿಸಬೇಕು ಎಂದು ಶಿವಮೊಗ್ಗ- ಉಡುಪಿ ಸಂಸದ ಬಿ.ವೈ ರಾಘವೇಂದ್ರ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಂಸದ ಬಿ.ವೈ ರಾಘವೇಂದ್ರ ನಗರದ ಜಿಪಂ ಸಭಾಂಗಣದಲ್ಲಿ ನಡೆದ ದಿಶಾ ಸಭೆಯಲ್ಲಿ ಮಾತನಾಡಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕೇಂದ್ರ ಸರಕಾರ ಜನಸಾಮಾನ್ಯರ ಕಲ್ಯಾಣಕ್ಕಾಗಿ ಅನೇಕ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಇವುಗಳ ಅನುಷ್ಠಾನ ಮಾಡುವ ಕಾರ್ಯವು ಅಧಿಕಾರಿಗಳದ್ದಾಗಿದ್ದು ಯೋಜನೆಗಳಿಗೆ ಬಿಡುಗಡೆಯಾಗಿರುವ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು, ಸರಕಾರ ನಿಗಧಿಪಡಿಸಿರುವ ಕಾಲಮಿತಿಯೊಳಗೆ ಪೂರ್ಣಪ್ರಮಾಣದಲ್ಲಿ ಅನುಷ್ಠಾನಕ್ಕೆ ಮುಂದಾಗಬೇಕು ಎಂದರು.

ಉದ್ಯೋಗ ಖಾತ್ರಿ ಯೋಜನೆಯಡಿ ಸ್ಥಳೀಯ ಜನರಿಗೆ ಉದ್ಯೋಗ ಅವಕಾಶ ಕಲ್ಪಿಸಿ ಶಾಶ್ವತ ಕಾಮಗಾರಿಗಳನ್ನು ಸೃಜನಿಸಲು ಅವಕಾಶವಿದ್ದು, ಜಿಲ್ಲೆಯಲ್ಲಿ ಇದರ ಪ್ರಗತಿ ನಿಗಧಿತ ಗುರಿಗಿಂತ ಹೆಚ್ಚಬೇಕು ಎಂದ ಅವರು, ಈ ಯೋಜನೆಯಡಿ ಕಾಲಸಂಕ ನಿರ್ಮಿಸಲು ಸಹ ಅವಕಾಶವಿದ್ದು, ಇದರ ಸದುಪಯೋಗ ಪಡಿಸಿಕೊಂಡು ಕಾಲಸಂಕ ನಿರ್ಮಿಸಲು ಮುಂದಾಗಬೇಕು ಎಂದು ಸೂಚನೆ ನೀಡಿದರು.

ಕೊರಗ ಸಮಾಜದವರ ಜನಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಈ ಸಮುದಾಯದವರು ಸರಕಾರದ ಯಾವುದೇ ಯೋಜನೆಗಳನ್ನು ಪಡೆಯಲು ಸ್ವಯಂ ಪ್ರೇರಿತವಾಗಿ ಮುಂದೆ ಬರುವುದಿಲ್ಲ. ಹೀಗಾಗಿ ಸಮಾಜದ ಕಟ್ಟಕಡೆಯ ಸಮುದಾಯದವರಾದ ಇವರಿಗೆ ಪಡಿತರ ಚೀಟಿ, ಆಧಾರ್ ಕಾರ್ಡ್, ಆಯುಷ್ಮಾನ್ ಆರೋಗ್ಯ ಭಾಗ್ಯ ಯೋಜನೆ ಸೇರಿದಂತೆ ಮತ್ತಿತರ ಯೋಜನೆಗಳನ್ನು ಅವರು ಇದ್ದಲ್ಲಿಯೇ ಹೋಗಿ ಅಧಿಕಾರಿಗಳು ತಲುಪಿಸಲು ಮುಂದಾಗಬೇಕು. ಪ್ರಧಾನಮಂತ್ರಿ ಜನಮನ್ ಯೋಜನೆಯಡಿ ಕೊರಗ ಸಮುದಾಯದವರಿಗೆ ಗೃಹ ನಿರ್ಮಾಣಕ್ಕೆ 4.05 ಲಕ್ಷ ರೂ. ಅನುದಾನ ನೀಡಲಾಗುತ್ತಿದ್ದು, ಇದು ಪ್ರತಿಯೊಬ್ಬ ಅರ್ಹರಿಗೂ ತಲುಪಬೇಕು ಎಂದು ಸೂಚನೆ ನೀಡಿದರು.

ವಿಶ್ವಕರ್ಮ ಯೋಜನೆಯ ಅರ್ಜಿ ವಿಲೇವಾರಿಯಲ್ಲಿ ರಾಜ್ಯದಲ್ಲಿಯೇ ಮೂರನೇ ಸ್ಥಾನದಲ್ಲಿದ್ದು, ಉತ್ತಮ ಪ್ರಗತಿಯಾಗಿದೆ ಇದು ಶ್ಲಾಘನೀಯ. ಪ್ರಸ್ತುತ ಈ ಯೋಜನೆಯಡಿ ಅರ್ಜಿ ಸಲ್ಲಿಸಿರುವ ಪ್ರತಿಯೊಬ್ಬ ಅರ್ಹ ಅಭ್ಯರ್ಥಿಗಳಿಗೂ ಈ ಯೋಜನೆಯು ತಲುಪಬೇಕು ಎಂದರು.

ಸಂಸದ ಕೋಟಾ ಶ್ರೀನಿವಾಸ ಪೂಜಾರಿ ಮಾತನಾಡಿ, ವಿಶ್ವಕರ್ಮ ಯೋಜನೆ ಫಲಾನುಭವಿಗಳಿಗೆ ತರಬೇತಿ ನೀಡುವುದರೊಂದಿಗೆ ಆರ್ಥಿಕ ಸೌಲಭ್ಯಗಳನ್ನು ಒದಗಿಸುವ ಕಾರ್ಯಗಳು ಆಗಬೇಕು. ಸಂಬಂಧಪಟ್ಟ ಕೈಗಾರಿಕೋದ್ಯಮಿಗಳ ಸಭೆ ನಡೆಸಬೇಕು ಎಂದು ಸೂಚನೆ ನೀಡಿದರು.

ಶಾಸಕರಾದ ಯಶ್‌ಪಾಲ್ ಎ ಸುವರ್ಣ, ಗುರ್ಮೆ ಸುರೇಶ್ ಶೆಟ್ಟಿ ಹಾಗೂ ಗುರುರಾಜ್ ಶೆಟ್ಟಿ ಗಂಟಿಹೊಳೆ, ವಿಧಾನ ಪರಿಷತ್‌ನ ಶಾಸಕ ಡಾ. ಧನಂಜಯ್ ಸರ್ಜಿ, ಜಿಲ್ಲಾಧಿಕಾರಿ ಡಾ. ಕೆ. ವಿದ್ಯಾಕುಮಾರಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್ ಉಪಸ್ಥಿತರಿದ್ದರು.

ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಕ್ಯಾಂಪೋರಿ

ವಿದ್ಯಾಗಿರಿ: ಪಠ್ಯದ ಜೊತೆಗಿನ ಪಠ್ಯೇತರ ಚಟುವಟಿಕೆಗಳು ಸಮಗ್ರ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ನೀಡಬಲ್ಲದು ಎಂದು ದಕ್ಷಿಣ ಕನ್ನಡ ಸ್ಕೌಟ್ಸ್ ಗೈಡ್ಸ್ ಜಿಲ್ಲಾ ಆಯುಕ್ತ ಹಾಗೂ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಮೋಹನ್ ಆಳ್ವ ನುಡಿದರು.

ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ, ಮೂಡುಬಿದಿರೆ ಸ್ಥಳೀಯ ಸಂಸ್ಥೆ ಹಾಗೂ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಸಹಭಾಗಿತ್ವದಲ್ಲಿ ಕೃಷಿ ಸಿರಿ ವೇದಿಕೆಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಕ್ಯಾಂಪೋರಿ ಕಾರ್ಯಕ್ರಮದ ಸ್ಕೌಟ್ಸ್ ಮತ್ತು ಗೈಡ್ಸ್ ಮೇಳ, ರೋವರ್ಸ್ ಮತ್ತು ರೇಂಜರ್ಸ್ ಸಮಾಗಮವನ್ನು ಉದ್ಘಾಟಿಸಿ ಮಾತನಾಡಿದರು.

ಬಾಲ್ಯದ ಕಲಿಕೆ ಉಜ್ವಲ ಭವಿಷ್ಯವನ್ನು ರೂಪಿಸುತ್ತದೆ. ಪರಿಪೂರ್ಣ ವ್ಯಕ್ತಿತ್ವ ನಿರ್ಮಾಣದಲ್ಲಿ ವಿದ್ಯೆ ಮತ್ತು ಬುದ್ಧಿಯ ಜೊತೆಗೆ ಪಠ್ಯೇತರ ವಿಚಾರಗಳಲ್ಲಿ ತೊಡಗಿಸಿಕೊಂಡಾಗ ಸುಂದರ ಮನಸನ್ನು ಕಟ್ಟಿಕೊಳ್ಳಲು ಸಾಧ್ಯ. ಅವಕಾಶಗಳ ಸದುಪಯೋಗ ಹಾಗೂ ಸಂಸ್ಕಾರದ ಗುಣವನ್ನು ಬೆಳೆಸಿಕೊಳ್ಳಿ. ದೇಶಪ್ರೇಮ, ರಾಷ್ಟ್ರ ಪ್ರೇಮದೊಂದಿಗೆ ಬದುಕೋಣ, ಆದರೆ ಅನ್ಯ ದೇಶದ ನಡುವೆ ಸಂಘರ್ಷ ಬೇಡ ಎಂದರು.

ಶಿಸ್ತು,ಸಮಯಪ್ರಜ್ಞೆ,ಸೌಂದರ್ಯ ಪ್ರಜ್ಞೆ, ಸಹಬಾಳ್ವೆ, ಪರೋಪಕಾರ, ಮಾನವೀಯತೆ, ಸೇವಾ ಮನೋಭಾವ, ಸೌಹಾರ್ದತೆ, ಹೋರಾಟ ಮನೋಭಾವ, ವಿನಯತೆ, ಗುರುಹಿರಿಯರಿಗೆ ಗೌರವ ಇವುಗಳನ್ನು ವಿದ್ಯಾರ್ಥಿಗಳು ಅಳವಡಿಸಿಕೊಂಡಾಗ ಸುಂದರ ವ್ಯಕ್ತಿತ್ವ ಸಾಧ್ಯ ಎಂದರು.

ಜಿಲ್ಲಾ ಸ್ಕೌಟ್ ಆಯುಕ್ತ ಮಹಮ್ಮದ್ ತುಂಬೆ, ಜಿಲ್ಲಾ ಗೈಡ್ ಆಯುಕ್ತೆ ವಿಮಲಾ ರಂಗಯ್ಯ, ಜಿಲ್ಲಾ ಕಾರ್ಯದರ್ಶಿ ಪ್ರತಿಮ್ ಕುಮಾರ್, ಜಿಲ್ಲಾ ಜಂಟಿ ಕಾರ್ಯದರ್ಶಿ ಜಯವಂತಿ ಸೋನ್ಸ್, ಜಿಲ್ಲಾ ಸಂಘಟನಾ ಆಯುಕ್ತೆ ಸುನೀತಾ, ಜಿಲ್ಲಾ ತರಬೇತಿ ಆಯುಕ್ತ ಶಾಂತಾರಾಮ ಪ್ರಭು, ಶಿಬಿರ ನಿರ್ದೇಶಕ ನಾರಾಯಣ್ ನಾಯ್ಕ, ಗೈಡ್ ವಿಭಾಗ ನಾಯಕಿ ತ್ರಿಶಲಾ, ರೋವರ್ ಮತ್ತು ರೇಂಜರ್ ನಾಯಕಿ ಡಾ. ಅಪರ್ಣಾ ಇದ್ದರು.

ವಿಶೇಷ ಆಭರಣ ಪ್ರದರ್ಶನ

ಮಂಗಳೂರು: ಕೃಷ್ಣಯ್ಯ ಚೆಟ್ಟಿ ಗ್ರೂಪ್ ಆಫ್ ಜ್ಯುವೆಲರ್ಸ್ ಮಂಗಳೂರಿನ ಗ್ರಾಹಕರಿಗಾಗಿ ನಾಲ್ಕುದಿನಗಳ ವಿಶೇಷ ಆಭರಣಗಳ ಪ್ರದರ್ಶನ ಮತ್ತು ಮಾರಾಟ ಮೇಳ ನಡೆಯಲಿದೆ.

ಜ.24 ರಿಂದ 27 ರವರೆಗೆ ಮಂಗಳೂರಿನ ಗೋಲ್ಡ್ ಫಿಂಚ್ ಹೊಟೇಲ್‌ನಲ್ಲಿ ವಿಶೇಷ ಆಭರಣ ಪ್ರದರ್ಶನಕ್ಕೆ ಮಂಗಳೂರಿನ ಶಾಸಕ ವೇದವ್ಯಾಸ ಕಾಮತ್ ಚಾಲನೆ ನೀಡಿದರು. ಶುದ್ಧ ಚಿನ್ನ ಮತ್ತು ರತ್ನಗಳು ಹಾಗೂ ಅತ್ಯುತ್ತಮವಾದ ಕರಕುಶಲತೆಯೊಂದಿಗೆ ಸಾಂಪ್ರದಾಯಿಕ ಮತ್ತು ಸಮಕಾಲೀನ ಸೃಷ್ಟಿಗಳ ಸಂಗ್ರಹವನ್ನು ವಿಶಿಷ್ಟ ಶ್ರೇಣಿಯೊಂದಿಗೆ ಪ್ರದರ್ಶಿಸಲಿದೆ.

ಸಿ.ಕೃಷ್ಣಯ್ಯ ಚೆಟ್ಟಿ ಜ್ಯುವೆಲರ್ಸ್ ನಲ್ಲಿ ವಜ್ರ, ವೈಡೂರ್ಯ, ಸಿಟ್ರಿನ್, ಮುತ್ತುಗಳು, ನೀಲ, ಮಾಣಿಕ್ಯ ಆಭರಣ ಸೂಕ್ಷ್ಮ ವಿನ್ಯಾಸಗಳೊಂದಿಗೆ ಸೊಬಗಿನ ಸಮ್ಮಿಲನವಾಗಿವೆ.

ಪಿಲಿಕುಳದಲ್ಲಿ ವಿಶೇಷ ಗ್ರಹ ಆಕಾಶ ವೀಕ್ಷಣೆ

ಮಂಗಳೂರು: ಸಾರ್ವಜನಿಕರ ಹಾಗೂ ವಿದ್ಯಾರ್ಥಿಗಳ ವಿನಂತಿಯ ಮೇರೆಗೆ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ಆವರಣದಲ್ಲಿ ಶುಕ್ರವಾರ ಸಂಜೆ 6:30 ರಿಂದ ಆಸಕ್ತರಿಗೆ ಗ್ರಹಗಳ ಮೇಳವನ್ನು ವೀಕ್ಷಿಸಲು ವಿಶೇಷ ಆಕಾಶ ವೀಕ್ಷಣೆಯ ಆಯೋಜಿಸಲಾಗಿತ್ತು. ಆರಂಭದಲ್ಲಿ ವೀಕ್ಷಕರ ಆಸಕ್ತಿಗೆ ಅನುಗುಣವಾಗಿ ದೂರದರ್ಶಕಗಳ ಮೂಲಕ ನೋಡಬಹುದಾದ ಆಕಾಶ ಕಾಯಗಳ ವಿವರಣೆ, ಈಗಿನ ವಿಶೇಷ ಸಂದರ್ಭದಲ್ಲಿ ಅವುಗಳ ವೀಕ್ಷಣೆಗೆ ಅನುಕೂಲತೆಗಳ ಬಗ್ಗೆ ಮಾಹಿತಿ ನೀಡಲಾಯಿತು. ನಂತರ ದೂರದರ್ಶಕಗಳ ಮೂಲಕ ಸೌರವ್ಯೂಹದ ಅತೀ ದೊಡ್ಡ ಗ್ರಹ ಗುರು, ಅದರ ಉಪಗ್ರಹಗಳಾದ ಅಯೋ, ಯುರೋಪಾ, ಕ್ಯಾಲಿಸ್ಟೋ ಮತ್ತು ಗ್ಯಾನಿಮಿಗಳನ್ನು ವೀಕ್ಷಿಸಲು ಅನುವುಮಾಡಿಕೊಡಲಾಯಿತು. ಉಂಗುರ ಸಹಿತ ಶನಿ ಗ್ರಹ, ಬೆಳ್ಳಿ ಚುಕ್ಕಿ ಶುಕ್ರ ಗ್ರಹ ಮತ್ತು ಕೆಂಪು ಮಂಗಳ ಗ್ರಹಗಳನ್ನು ವೀಕ್ಷಕರು ಆಸಕ್ತಿಯಿಂದ ನೋಡುತ್ತಾ ವಿವರಣೆಗಳನ್ನು ಕೇಳುತ್ತಾ ವೀಕ್ಷಣೆಯ ಅನುಭವವನ್ನು ಹಂಚಿಕೊಂಡರು. ಈ ಕಾರ್ಯಕ್ರಮವನ್ನು ತಮ್ಮ ವಿನಂತಿಯ ಮೇರೆಗೆ ಹಮ್ಮಿಕೊಂಡಿದ್ದಕ್ಕಾಗಿ ಕೇಂದ್ರಕ್ಕೆ ಅಭಿನಂದನೆಗಳನ್ನು ಸಲ್ಲಿಸಿದರು. ಕೇಂದ್ರದ ಕ್ಯುರೇಟರ್ ಜಗನ್ನಾಥ, ವೈಜ್ಞಾನಿಕಾಧಿಕಾರಿ ವಿಘ್ನೇಶ್ ಭಟ್, ಶೈಕ್ಷಣಿಕ ಸಹಾಯಕಿ ರಶ್ಮಿ, ಮೆಂಟ???ಗಳಾದ ಹೃತೀಕ್, ಆದರ್ಶ್, ಅಂಬಿಕಾ, ಸಹನಾ, ತಾಂತ್ರಿಕ ಸಿಬ್ಬಂದಿಗಳಾದ ಯತೀಶ್, ತುಕಾರಾಮ್, ವಿರುಪಾಕ್ಷಯ್ಯ, ಮಂಜುನಾಥ್, ಕಿಶೋರ್ ಕುಮಾರ್, ಗಾಯತ್ರಿ, ಶರತ್, ವಂದನಾ, ವಿಕ್ಟರ್ ವೀಕ್ಷಣೆಗೆ ಸಹಕಾರವನ್ನು ನೀಡಿದರು.

ಪಬ್ಲಿಕ್ ಶಾಲೆ ಮಾದರಿ ಶಾಲೆಯಾಗಿ ಪರಿವರ್ತನೆ

ಶಾಲಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ. ನಾಗಣ್ಣ ಗೌಡ ಮಾತನಾಡಿದರು.

ಉಡುಪಿ: ಹಿರಿಯಡ್ಕ ಕರ್ನಾಟಕ ಪಬ್ಲಿಕ್ ಶಾಲೆಯನ್ನು ಮಾದರಿ ಶಾಲೆಯನ್ನಾಗಿ ಪರಿವರ್ತಿಸಲಾಗುವುದು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ. ನಾಗಣ್ಣ ಗೌಡ ಹೇಳಿದರು.

ನಗರದ ಮಣಿಪಾಲ ರಜತಾದ್ರಿಯ ಜಿ.ಪಂ. ಸಭಾಂಗಣದಲ್ಲಿ ಉಡುಪಿ ಜಿಲ್ಲೆಯ ಹಿರಿಯಡಕ ಕರ್ನಾಟಕ ಪಬ್ಲಿಕ್ ಸ್ಕೂಲ್ ಅನ್ನು ಮಾದರಿ ಶಾಲೆಯನ್ನಾಗಿ ಪರಿವರ್ತಿಸುವ ಯೋಜನೆಯ ಕುರಿತ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಹಿರಿಯಡ್ಕದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಹೆಚ್ಚು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ರಾಜ್ಯದಲ್ಲಿಯೇ ಮಾದರಿ ಶಾಲೆಯನ್ನಾಗಿ ಪರಿವರ್ತಿಸಲು ಚಿಂತನೆ ನಡೆಸಿದ್ದು, ಇದಕ್ಕೆ ಪೂರಕ ಸೌಕರ್ಯ ಕಲ್ಪಿಸಿಕೊಡಬೇಕೆಂದು ಅಧಿಕಾರಿಗಳಿಗೆ ತಿಳಿಸಿದರು.

ಶಾಲಾ ಸುತ್ತಮುತ್ತಲಿನ ಪರಿಸರವನ್ನು ಉತ್ತಮವಾಗಿ ಇಟ್ಟುಕೊಳ್ಳಲು ವಿದ್ಯಾರ್ಥಿಗಳಲ್ಲಿ ಅಂಥಹ ಮನೋಭಾವವನ್ನು ಕಲ್ಪಿಸಬೇಕು. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ದೊಂದಿಗೆ ಆಟೋಟಗಳಲ್ಲಿ ಭಾಗವಹಿಸುವುದು ಅವಶ್ಯಕ. ನರೇಗಾ ಯೋಜನೆಯಡಿ ಮಕ್ಕಳ ಆಟದ ಮೈದಾನ, ಕೈತೋಟಗಳ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಬೇಕು ಎಂದರು.

ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಮಾತನಾಡಿ, ಸಮಾಜದಲ್ಲಿ ಪ್ರತಿಯೊಬ್ಬರೂ ಶಿಕ್ಷಣವಂತರಾಗಬೇಕು. ಪ್ರತಿಯೊಬ್ಬ ಮಕ್ಕಳಿಗೂ ಶಿಕ್ಷಣ ಒದಗಿಸುವುದು ಜನಪ್ರತಿನಿಧಿಗಳಾದ ಆದ್ಯ ಕಾರ್ಯ. ಜಿಲ್ಲೆಯಲ್ಲಿ ಇನ್ನು ಹೆಚ್ಚು ಶಾಲೆಗಳನ್ನು ಪಬ್ಲಿಕ್ ಶಾಲೆಗಳನ್ನಾಗಿಸಿ ಸರಕಾರದ ಹಂತದಲ್ಲಿ ಆಗಬೇಕಾಗಿರುವ ಕೆಲಸ ಕಾರ್ಯಗಳನ್ನು ಮಾಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.

ಸಭೆಯಲ್ಲಿ ಜಿಪಂ ಸಿಇಒ ಪ್ರತೀಕ್ ಬಾಯಲ್, ಯೋಜನ ನಿರ್ದೇಶಕ ಶ್ರೀನಿವಾಸ್ ರಾವ್, ಡಿಡಿಪಿಐ ಗಣಪತಿ, ಡಿಡಿಪಿಯೂ ಮಾರುತಿ, ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ ನಾಗರತ್ನ ನಾಯಕ್ ಉಪಸ್ಥಿತರಿದ್ದರು.

ಬಾಯಿ ಮುಚ್ಚಿಸುವ ಪ್ರಯತ್ನ: ಶಾಸಕ

ಮಂಗಳೂರು: ಕೋಟೆಕಾರು ಬ್ಯಾಂಕ್ ದರೋಡೆ ಪ್ರಕರಣದಲ್ಲಿ ಸ್ಥಳೀಯರ ಕೈವಾಡವಿದ್ದು ಅವರನ್ನು ಬಚಾವ್ ಮಾಡುವ ಪ್ರಯತ್ನ ನಡೆಯುತ್ತಿದೆ ಎಂದು ಶಾಸಕ ಡಾ.ವೈ ಭರತ್ ಶೆಟ್ಟಿ ಸ್ಫೋಟಕ ಹೇಳಿಕೆ ನೀಡಿದ್ದಾರೆ. ಮಾಧ್ಯಮಗಳ ಜೊತೆ ಮಾತನಾಡಿದ ಅವರು ಕೋಟೆಕಾರ್ ಬ್ಯಾಂಕ್ ದರೋಡೆ ಪ್ರಕರಣದಲ್ಲಿ ಎಲ್ಲರ ಬಾಯಿ ಮುಚ್ಚಿಸೋಕೆ ಶೂಟೌಟ್ ಮಾಡಲಾಗಿದೆ, ಈ ಪ್ರಕರಣ ದಲ್ಲಿ ಸ್ಥಳೀಯರ ಕೈವಾಡ ಇರುವ ಬಗ್ಗೆ ಮಾಹಿತಿ ಬಂದಿದೆ, ದರೋಡೆಕೋರರನ್ನು ಈಗ ಬಂಧಿಸಲಾಗಿದೆ. ಆದರೆ ಪ್ಲಾನಿಂಗ್ ಮಾಡಿದವರನ್ನು, ಕುಮ್ಮಕ್ಕು ನೀಡಿದವರನ್ನು ಯಾರೋ ಬಚಾವ್ ಮಾಡುತ್ತಿದ್ದಾರೆ. ಅವರನ್ನು ರಕ್ಷಣೆ ಮಾಡುವ ಕಾರ್ಯ ನಡೆಯುತ್ತಿದೆ ಎಂದು ದೂರಿದರು. ಪೊಲೀಸರು ನಿಧಾನಗತಿಯ ತನಿಖೆಯನ್ನು ಮಾಡುತ್ತಿದ್ದಾರೆ, ಪ್ರಕರಣದ ಬಗ್ಗೆ ಪೊಲೀಸರು ಯಾವುದೇ ಮಾಹಿತಿಯನ್ನು ನೀಡುತ್ತಿಲ್ಲ. ಬ್ಯಾಂಕ್ ದರೋಡೆಯಲ್ಲಿ ಸ್ಥಳೀಯರ ಕೈವಾಡವನ್ನ ಮುಚ್ಚಿ ಹಾಕೋ ಪ್ರಯತ್ನ ನಡೆಯುತ್ತಿದೆ ಎಂದರು. ದರೋಡೆಕೋರರನ್ನ ಬಂಧಿಸಿದ್ದಾರೆ. ಆದರೆ ಪ್ಲಾನಿಂಗ್ ಮಾಡಿದವರನ್ನು ಬಚಾವ್ ಮಾಡಲಾಗುತ್ತಿದೆ. ಸಚಿವರು ಆಗಬೇಕು, ಮುಖ್ಯಮಂತ್ರಿ ಆಗಬೇಕೆಂಬ ಉದ್ದೇಶದಿಂದ ರಾಜಕೀಯ ನಾಯಕರು ಆರೋಪಿಗಳನ್ನು ರಕ್ಷಣೆ ಮಾಡುತ್ತಿದ್ದಾರೆ. ಈ ಹಿನ್ನಲೆ ಆರೋಪಿಗೆ ಶೂಟೌಟ್ ಮಾಡುವ ಮೂಲಕ ಬಾಯಿಮುಚ್ಚಿಸುವ ಯತ್ನ ಆಗಿದೆ. ನೈಜ ಆರೋಪಿಗಳು ಯಾರು ದರೋಡೆಕೊರರಿಗೆ ಪೊಲಿಟಿಕಲ್ ಸಪೋರ್ಟ್ ಯಾರು ಕೊಡ್ತಿದ್ದಾರೆ.

ಬಿ ಪಾಸಿಟಿವ್

ಸ್ವ-ಒಳಗೊಳ್ಳುವಿಕೆ ಆದ್ಯತೆಯಾಗಿರಲಿ

ನಮಗೆ ಅಷ್ಟೇನೂ ಮುಖ್ಯವಲ್ಲದ ವ್ಯಕ್ತಿಗಳ ಮುಂದೆ ಅನಗತ್ಯವಾಗಿ ನಾವು ಮಾತನಾಡುವ ಸ್ವಭಾವವನ್ನು ಸಹಜವಾಗಿಯೇ ರೂಢಿಸಿಕೊಂಡಿರುತ್ತೇವೆ. ನಮ್ಮ ಕುರಿತಾಗಿ ಒಂದಷ್ಟು ಹೆಮ್ಮೆಯಿಂದಲೇ ಹೊಗಳಿಕೊಳ್ಳುತ್ತೇವೆ. ನಮ್ಮ ದೈನಂದಿನ ವಿಷಯಗಳ ಕುರಿತು ಚರ್ಚಿಸುತ್ತೇವೆ. ನಮ್ಮ ಸುತ್ತಣ ಬಹುತೇಕ ಜನರು ನಮಗೆ ಮುಖ್ಯವಾದ ವಿಷಯಗಳನ್ನು ತೀರಾ ಅಸಡ್ಡೆಯಿಂದ ನೋಡುತ್ತಾರೆ. ಅವುಗಳಿಗೆ ತಮ್ಮದೇ ಆದ ದೃಷ್ಟಿಕೋನದಿಂದ ವಿಭಿನ್ನ ವ್ಯಾಖ್ಯಾನಗಳನ್ನು ನೀಡಲು ಮುಂದಾಗುತ್ತಾರೆ. ಇದು ನಮ್ಮ ನೋವು ನಿರಾಸೆಗಳಿಗೆ ಕಾರಣವಾಗುತ್ತದೆ.

ಕದ್ದುತಂದ ಬೆಣ್ಣೆಯಲ್ಲಿ ನನಗೆ ಹೆಚ್ಚು ಬೇಕು, ನನ್ನ ಪರಿಶ್ರಮ ಹೆಚ್ಚು, ಇಲ್ಲ ನನಗೆ ಹೆಚ್ಚು ಬೇಕು ನನ್ನ ಬೆಣ್ಣೆ ಕದ್ದು ತರುವಲ್ಲಿ ನನ್ನ ಪಾತ್ರ ದೊಡ್ಡದು ಎಂದು ಜಗಳವಾಡುತ್ತಿದ್ದ ಬೆಕ್ಕುಗಳು ಮಂಗನಿಂದ ಮೋಸಹೋದ ಕಥೆ ನಮಗೆಲ್ಲ ಚೆನ್ನಾಗಿ ಗೊತ್ತು. ತಕ್ಕಡಿಯಲ್ಲಿ ತೂಕಕ್ಕಿಟ್ಟು ಒಂದು ಕಡೆ ಹೆಚ್ಚಾಯಿತು ಎಂದು ಒಂದಷ್ಟು ತಿಂದು, ಮತ್ತೆ ಇನ್ನೊಂದು ಕಡೆ ಇಲ್ಲಿ ಹೆಚ್ಚಾಯಿತು ಎಂದು ಅದರಲ್ಲಿ ಇನ್ನೊಂದಷ್ಟನ್ನು ತಿನ್ನುತ ಹೋಗಿ ಕೊನೆಗೊಮ್ಮೆ ಎಲ್ಲ ಬೆಣ್ಣೆಯನ್ನು ಮಂಗ ತಾನೇ ತಿಂದು ತೇಗಿತ್ತು. ಬೆಕ್ಕುಗಳ ಮಿತಿಯನ್ನು ದುರಪಯೋಗ ಪಡಿಸಿಕೊಂಡು ಮಂಗ ದಿಕ್ಕು ತಪ್ಪಿಸಿದ್ದು ಮಂಗ ಮಾಡಿದ ಮೋಸ ಎನ್ನುವದಕ್ಕಿಂತ ಬೆಕ್ಕುಗಳ ಸ್ವಯಂಕೃತ ಅಪರಾಧಿದಂದ ತಮಷ್ಟಕ್ಕೆ ತಾವೇ ತಂದು ಕೊಂಡು ಸಂಕಷ್ಟವಾಗಿತ್ತು ಎಂಬುದು ಸುಳ್ಳಲ್ಲ.

ಬಹಳಷ್ಟು ಜನರು ಒಂದು ಉತ್ತಮ ಮೌಲ್ಯ, ನಡೆ ನುಡಿಗಳನ್ನು ಧನಾತ್ಮಕವಾಗಿ ನೋಡುವುದೇ ಇಲ್ಲ. ಅವರಿಗೆಲ್ಲ ಸದಾ ಅದರ ಕುರಿತಾಗಿ ಇಲ್ಲ ಸಲ್ಲದ ಋಣಾತ್ಮಕ ವಿಚಾರಗಳನ್ನು ಹರಿಬಿಡುವುದರಲ್ಲಿಯೇ ಹೆಚ್ಚು ಆಸಕ್ತಿ ಇರುತ್ತದೆ. ಸಾಧ್ಯತೆಗಳ ಸಾವಿರಾರು ಬಾಗಿಲುಗಳನ್ನು ಮುಚ್ಚಿ ಮಿತಿಗಳನ್ನೇ ದೀಪ ಹಚ್ಚಿ ಹುಡುಕುವ ಪ್ರಯತ್ನದಲ್ಲಿ ತೊಡಗಿಬಿಡುತ್ತಾರೆ. ಹಾಗಾಗಿಯೇ ನಮ್ಮ ಆದರ್ಶ, ಉತ್ತಮ ವಿಚಾರಗಳನ್ನು ನಿರಾಕರಿಸುವವರ ಮುಂದೆ ಪ್ರದರ್ಶನ ಮಾಡುವುದನ್ನು ನಿಲ್ಲಿಸಿಬೇಕು. ನಾವು ನಮ್ಮ ಉದ್ದೇಶ, ಗುರಿ ಕನಸುಗಳನ್ನು ಅತ್ಯಂತ ಜೋಪಾನವಾಗಿಸಿ ಕೊಳ್ಳಬೇಕು. ನಮ್ಮೊಳಗೆ ಅವುಗಳನ್ನು ದೃಢವಾಗಿರಿಸಿ ಕೊಳ್ಳಬೇಕು. ನಮ್ಮ ಉತ್ಸಾಹದ ಚಿಲುಮೆ ಬತ್ತಿಹೋಗದಂತೆ ಎಚ್ಚರವಹಿಸಬೇಕು. ನಮ್ಮ ಸ್ವ-ಒಳಗೊಳ್ಳುವಿಕೆಯೇ ನಮ್ಮ ಯಶಸ್ಸಿನ ಮೂಲಮಂತ್ರವಾಗಿದೆ.

● ಮಹಾದೇವ ಬಸರಕೋಡ



ಕಣ್ಣೋಟ

ಕುಂಭಮೇಳದಲ್ಲಿ ಮಾರಿದಳು
ರುದ್ರಾಕ್ಷಿ
ಬಹು ಸುಂದರ ಆಕೆಯ ಎರಡು ಅಕ್ಷಿ
ಮೊಬೈಲ್‌ನಲ್ಲಿ ಸೆರೆಯಾಯ್ತು ಆ
ಕಣ್ಣೋಟ
ಅಂತರ್ಜಾಲದಲ್ಲಿ ಬಹು ವೇಗದ
ಓಟ!

● ಕಿರಣ್ ಕೊಕ್ಕರ್ಣೆ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ಇದು ತೀರಾ ಸಾಮಾನ್ಯ ಎನಿಸಿರುವ ಮರ; ಹೆಸರು ಬೇರೆ ತಮಾಷೆಯ ಸ್ವರೂಪದ್ದು! ಆದರೆ, ಈ ಮರದ ಕಾಯಿಗಳನ್ನು ಪಾರಂಪರಿಕ ಔಷಧ ಪದ್ಧತಿಯಲ್ಲಿ ಉಪಯೋಗಿಸುವುದುಂಟು!

ಕೋತಿ ಕಡ್ಲೆಕಾಯಿ ಗೊತ್ತೇ?

● ಅನುಪಮ ಗುಂಡ್ಲುಪೇಟೆ

ನಾವು ಶಾಲೆ ಕಲಿಯುವಾಗ ನೋಡಿದ ಒಂದು ಮರ; ಆ ಮರದ ಕೆಳಗೆ ಉದುರಿದ ತೆಳುವಾದ ಹೂವಿನ ಮಧ್ಯೆ ಪುಟ್ಟ ಕಡಲೆಕಾಯಿ ಅಥವಾ ಗೋಡಂಬಿ ರುಚಿಯ ಕಾಯಿ ಸಿಗುತ್ತಿತ್ತು; ನಾವು ಸ್ನೇಹಿತರೆಲ್ಲಾ ಒಟ್ಟಿಗೆ ಮರದ ಕೆಳಗೆ ನಿಂತು ಅಥವಾ ಹಾರಿಬಂದ ಕಾಯಿಗಳನ್ನು ಆರಿಸಿ ತಿನ್ನುತ್ತಿದ್ದೆವು. ಇಂದು ಅದೇ ಮರ ಅದೇಕೋ ನೆನಪಾಯಿತು; ಅದಾವ ಮರ ಎಂಬ ಕುತೂಹಲವೂ ಮೂಡಿತು; ಅದರ ಒಂದು ಸುತ್ತು ಜಾಲಾಡಿದಾಗ ಸಿಕ್ಕ ಮಾಹಿತಿ ಬಹಳ ಕುತೂಹಲಕಾರಿಯಾಗಿದೆ.

ನೀವು ಸೂಕ್ಷ್ಮವಾಗಿ ಗಮನಿಸಿ: ವಾಕ್ ಮಾಡುವಾಗ ರಸ್ತೆಯ ಬದಿಯ ಇಕ್ಕೆಲೆಗಳಲ್ಲಿ ಅಥವಾ ನೀವು ಪ್ರಕೃತಿಗೆ ಅಂಟಿಕೊಂಡ ಊರುಗಳಲ್ಲಿದ್ದರೆ ನಿಮ್ಮ ಮನೆಯ ಸುತ್ತಲೂ ಈ ಹೂವಿಗಂಟಿಕೊಂಡ ಕಾಯಿಸಿಗುತ್ತೆ. ಕಡುಗೋಧಿ ಬಣ್ಣದ ತೆಳುವಾದ ಹೂವಿನ ಮಧ್ಯೆ ಒಂದು ಪುಟ್ಟ ಹಣೆಬೊಟ್ಟಿನಷ್ಟು ಕಾಯಿ ಅಷ್ಟೇ. ಇದನ್ನು ತಿನ್ನಬಹುದು; ನಾವೆಲ್ಲ ಟೇಸ್ಟ್ ಮಾಡಿದ್ದೀವಿ. ಇದರ ಹೆಸರು ಆಡುಭಾಷೆಯಲ್ಲಿ ಕೋತಿಕಡ್ಲೆಕಾಯಿ, ತಾಮಸ, ನೀಲವಾಹಿ ತವಸಕಾಯಿ - ಹೀಗೆ ಒಂದೊಂದು ಭಾಗದಲ್ಲಿ ಒಂದೊಂದು ಹೆಸರಿನಿಂದ ಕರೆಯುತ್ತಾರೆ.

ಇದನ್ನೇ ಚಿರಬಿಲ್ವ ಎಂದು ಶಾಸ್ತ್ರೀಯವಾಗಿ ಕರೆಯುವರು. ಪಾರಂಪರಿಕ ವೈದ್ಯ ಪದ್ಧತಿಯಲ್ಲಿ ಈ ಕೋತಿ ಕಡ್ಲೆ ಕಾಯಿಯ ಉಪಯೋಗಿವದೆ. ಇದು ಔಷಧೀಯ ಗುಣವಿರುವ ಮರ. ಬೇಸಿಗೆಯಲ್ಲಿ ಮರದ ತುಂಬಾ ಎಲೆಗಳೇ ಮರೆಯಾದಂತೆ ಚಿಕ್ಕ ಚಿಕ್ಕ ಹೂವು ಮತ್ತು ಅದರೊಳಗಣ ಕಾಯಿ ತುಂಬಿರುತ್ತದೆ.

ಇದು 10 ರಿಂದ 15 ಮೀಟರ್ ಎತ್ತರಕ್ಕೆ ಬೆಳೆಯುವ ಮಧ್ಯಮ ಗಾತ್ರದ ಮರವಾಗಿದೆ. ಇದರ ಹೂವುಗಳು ಚಿಕ್ಕದಾಗಿರುತ್ತವೆ; ಬಣ್ಣ ಹಸಿರು ಮತ್ತು ಹಳದಿ ಮಾಗಿ ಗೋಧಿ ಬಣ್ಣ ಆಗಿದ್ದು ಗೊಂಚಲುಗಳಲ್ಲಿ ಗೋಚರಿಸುತ್ತವೆ. ಹೂವುಗಳು ದುಂಡಾಗಿರುತ್ತವೆ ಮತ್ತು ಬೀಜಗಳು ಚಪ್ಪಟೆಯಾಗಿರುತ್ತದೆ. ಹೂವುಗಳು, ಹಣ್ಣುಗಳು ವಸಂತ ಋತುವಿನಲ್ಲಿ ಕಂಡುಬರುತ್ತವೆ. ಇದರ ಹೂವು ತೆಳುವಾದ ಪೇಪರಿನ ಹಾಗೆ ಆ ಕಾಯನ್ನು ಸುತ್ತುವರೆದಿರುತ್ತದೆ. ಕೈಯಿಂದ ಮಡಚಿದಾಗ ಹೂವು ಮತ್ತು ಹಣ್ಣುಪುಡಿಯಾಗುವಷ್ಟು ತೆಳುವಾಗಿರುತ್ತದೆ.

ಭಾರತದ ಸಮಶೀತೋಷ್ಣ ಹವಾಮಾನದಲ್ಲಿ ಮತ್ತು ಜಲಮೂಲ ಇರುವಕಡೆ ಹೆಚ್ಚಾಗಿ ಕಾಣಸಿಗುತ್ತದೆ. ಇನ್ನು ಮುಂದೆ ಓಡಾಡುವಾಗ ಈ ಬಿಸಿಲಿಗೆ ಮರದ ತುಂಬಾ ಸಣ್ಣ ಸಣ್ಣ ಹಸಿರು ಅಥವಾ ಗಾಢವಾದ ಗೋಧಿ ಬಣ್ಣದ ಹೂವು ಹಣ್ಣು ತುಂಬಿರುತ್ತದೆ ಗಮನಿಸಿ, ಆ ಜಾಗದ ಅಕ್ಕ ಪಕ್ಕ

ನೀವಿದ್ದರೆ ಜೋರಾದ ಗಾಳಿ ಬೀಸಿದರೆ ಸಾಕು ಆ ಹೂವು ನಿಮ್ಮ ಕಾಲ್ಬುಡದಲ್ಲಿ ನಿಮ್ಮನ್ನು ತಾಗಿಕೊಂಡು ಬೀಳೋದಂತೂ ಗ್ಯಾರಂಟಿ.

ಇದರ ಹಲವು ಉಪಯೋಗಳಿವೆ. ಅದರಲ್ಲಿ ಮುಖ್ಯವಾದವು :-

- ಈ ಮರದ ತೊಗಟೆಯ ಪೇಸ್ಟ್‌ಅನ್ನು ತುರಿಕೆ ಗಾಯಗಳು ಮತ್ತು ಇತರೆ ಚರ್ಮ ಕಾಯಿಲೆಗಳಿಗೆ ಹಚ್ಚಲಾಗುತ್ತದೆ.
- ಈ ಮರದ ತೊಗಟೆಯ ಕಷಾಯವನ್ನು ಮಧುಮೇಹವನ್ನು ನಿಯಂತ್ರಿಸಲು ಬಳಸುತ್ತಾರೆ.
- ರಕ್ತ ಶುದ್ಧೀಕಾರಕವಾಗಿ, ಹಸಿವನ್ನು ಸುಧಾರಿಸಲು, ಕರುಳಿನ ಹುಳುಗಳನ್ನು ಹೊರಹಾಕಲು ಚಿರಬಿಲ್ವದ ತೊಗಟೆಯ ತಣ್ಣನೆಯ ಕಷಾಯವನ್ನು ಸೇವನೆಗಾಗಿ ನೀಡಲಾಗುತ್ತದೆ.
- ಇದು ವಾತದೋಷಗಳನ್ನು ನಿವಾರಿಸುತ್ತದೆ, ಜೀರ್ಣಕ್ರಿಯೆಗೆ ಸಹಕಾರಿಯಾಗಿರುತ್ತದೆ.

ನಮ್ಮ ರಾಜ್ಯದ ಬಯಲುಸೀಮೆಯಲ್ಲಿ ಇದ ಅಲ್ಲಲ್ಲಿ ಕಾಣಸಿಗುತ್ತದೆ. ಈ ಮರ ನಿಮ್ಮ ಅಕ್ಕ ಪಕ್ಕದಲ್ಲೇ ಇದ್ದರೆ, ಅಥವಾ ಓಡಾಡೋ ಜಾಗದಲ್ಲಿಯಿ ಸಿಕ್ಕರೆ ಮುಂದಿನ ನಿಮ್ಮ ಮಕ್ಕಳಿಗೆ ಒಮ್ಮೆ ಪರಿಚಯಿಸಿಬಿಡಿ!

ಶಿವಮೊಗ್ಗ, ಹಾವೇರಿ ಮೊದಲಾದ ಕಡೆ ಹಳ್ಳಿ ಹಳ್ಳಿಗಳಲ್ಲಿ ಹೋರಿ ಬೆದರಿಸುವ ಸ್ಪರ್ಧೆ ನಡೆಯುತ್ತದೆ. ಇದು ಆ ಪ್ರದೇಶದ ಸಂಸ್ಕೃತಿಯ ಭಾಗವಾಗಿರುವ, ಒಂದು ಉಲ್ಲಾಸಭರಿತ ಹಬ್ಬ.

ಗ್ರಾಮೀಣ ಸೊಗಡಿನ ಹಬ್ಬ

ಉಲ್ಲಾಸದ ಹಬ್ಬ

ಪ್ರತೀವರ್ಷ ಹೋರಿ ಬೆದರಿಸುವ ಸ್ಪರ್ಧೆಯಲ್ಲಿ ಅಲ್ಲಲ್ಲಿ ಸಾವು, ನೋವುಗಳ ಸುದ್ಧಿಯನ್ನು ಕೇಳಿಯೇ ಕೇಳುತ್ತೇವೆ. ತಮಿಳುನಾಡಿನ ಪ್ರಸಿದ್ಧ ಕ್ರೀಡೆ ಜಲ್ಲಿಕಟ್ಟನ್ನೇ ಹೋಲುವ ಕ್ರೀಡೆ ನಮ್ಮ ನಾಡಿನ ಹೋರಿ ಬೆದರಿಸುವ ಸ್ಪರ್ಧೆ. ಉತ್ತರ ಕರ್ನಾಟಕದಲ್ಲಿ ನಡೆಯುವ ಹೋರಿ ಬೆದರಿಸುವ ಸ್ಪರ್ಧೆ ನಡೆಯುವಾಗ ಮುಂಜಾಗ್ರತಾ ಕ್ರಮಗಳು ಮುಖ್ಯ. ಇದೊಂದು ಉಲ್ಲಾಸಭರಿತ ಹಬ್ಬ ಎಂಬುದಂತೂ ನಿಜ.

● ರಾಘವೇಂದ್ರ ಈ ಹೊರಬೈಲು

ಮೊನ್ನೆಯಷ್ಟೇ ಹಾವೇರಿ ಜಿಲ್ಲೆಯ ನಾಗೇಂದ್ರನಹಟ್ಟಿ ಎಂಬಲ್ಲಿ ಹೋರಿ ಬೆದರಿಸುವ ಸ್ಪರ್ಧೆಯಲ್ಲಿ ಹೋರಿ ತಿವಿತಕ್ಕೆ ಸುಮಾರು ಮೂವತ್ತು ಜನರು ತೀವ್ರವಾಗಿ ಗಾಯಗೊಂಡಿದ್ದಾರೆ. ಒಬ್ಬ ವ್ಯಕ್ತಿಯ ಕಣ್ಣು ಗುಡ್ಡೆಯೇ ಕಿತ್ತು ಆಚೆ ಬಂದಿದೆ ಎಂಬ ವರದಿಯಾಗಿತ್ತು. ಇಂತಹ ಘಟನೆಗಳು ಸಾಕಷ್ಟು ನಡೆಯುತ್ತಲೇ ಇವೆ.

ಶಿವಮೊಗ್ಗ, ಹಾವೇರಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಆಚರಿಸಲಾಗುವ ಹಟ್ಟಿ ಹಬ್ಬ, ಕೊಬ್ಬರಿ ಹೋರಿ ಹಬ್ಬ, ಹೋರಿ ಬೆದರಿಸುವ ಸ್ಪರ್ಧೆ ಎಂದು ಕರೆಯಲ್ಪಡುವ ಈ ಹಬ್ಬ ಯುವಜನರ ಹುಚ್ಚು ಸಾಹಸಕ್ಕೆ ಕಿಚ್ಚು ಹಚ್ಚಿಸುವ ಹಬ್ಬ. ಪ್ರತೀ ವರ್ಷ ದೀಪಾವಳಿ ಹಬ್ಬದಿಂದ ಪ್ರಾರಂಭವಾಗಿ ಸಂಕ್ರಾಂತಿಯವರೆಗೆ ಮೇಲಿನ ಜಿಲ್ಲೆಗಳ ವಿವಿಧ ಹಳ್ಳಿಗಳಲ್ಲಿ ಪ್ರತೀ ದಿನಕ್ಕೊಂದರಂತೆ ಎಂಬಂತೆ ಜರುಗುತ್ತಿರುತ್ತದೆ. ಈ ಸ್ಪರ್ಧೆಯಿಂದ ಅನೇಕ ಯುವಜನರ ಸಾವು ನೋವುಗಳೂ ಟಿವಿ, ಪತ್ರಿಕೆಯಲ್ಲಿ ವರದಿಯಾಗುತ್ತಲೇ ಇರುತ್ತವೆ.

ಹದಿಹರೆಯದ ಹುಡುಗರಿಗಂತೂ ಹೋರಿ ಬೆದರಿಸುವ ಹಬ್ಬವೆಂದರೆ ಹುಚ್ಚೇರಿಬಿಡುತ್ತದೆ. ದೀಪಾವಳಿಯಿಂದ ಸಂಕ್ರಾಂತಿಯವರೆಗೆ ಶಿವಮೊಗ್ಗ ಹಾಗೂ ಹಾವೇರಿ ಭಾಗದ ಅನೇಕ ಶಾಲೆಗಳಲ್ಲಿ ಹುಡುಗರು ಶಾಲೆಯ ಮುಖವನ್ನೇ ನೋಡದೆ ಹೋರಿಗಳನ್ನು ಪಳಗಿಸುವ ಹಾಗೂ ಹೋರಿ ಬೆದರಿಸುವ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುವುದರಲ್ಲಿಯೇ ತಲ್ಲೀನರಾಗಿಬಿಡುತ್ತಾರೆ.

ಕೆಲವರು ಹಬ್ಬಕ್ಕಿಂತ ತಿಂಗಳ ಹಿಂದೆ ಬೇರೆ ಊರುಗಳಿಂದ ಐದರಿಂದ ಹತ್ತು ಸಾವಿರ ಕೊಟ್ಟು ಬಾಡಿಗೆಗೆ ಹೋರಿಗಳನ್ನು ತಂದು, ಅವುಗಳಿಗೆ ತಯಾರಿ ಮಾಡಿ, ಬೆದರಿಸುವ ಸ್ಪರ್ಧೆಗೆ ಬಿಡುತ್ತಾರೆ. ಇಂತಹ ಹೋರಿಗಳಿಗೆ ಅಥವಾ ಹೋರಿಗಳಿಂದ ಏನೇ ಅನಾಹುತವಾದರೂ ಬಾಡಿಗೆ ತಂದವರೇ ಜವಾಬ್ದಾರರು. ಹೋರಿ ಬೆದರಿಸುವ ಸ್ಪರ್ಧೆಗೆ ಅನೇಕ ನಿಯಮಗಳಿವೆ. ದೊಡ್ಡ ಬೀದಿಯಲ್ಲಿ ಅಖಾಡವನ್ನು ಗುರುತು ಮಾಡಿ, ತಡೆಗೋಡೆಗಳನ್ನು ಮಾಡಿ, ಟ್ರ್ಯಾಕ್ಟರ್ ಟ್ರಾಲಿ, ಎತ್ತಿನ ಗಾಡಿಗಳನ್ನು ಸಾಲಾಗಿ ನಿಲ್ಲಿಸಿ, ಅವುಗಳ ಮೇಲೆ ಸ್ಪರ್ಧೆಯನ್ನು ವೀಕ್ಷಿಸಲು ಪ್ರೇಕ್ಷಕರಿಗೆ ಅನುವು ಮಾಡಿಕೊಡಲಾಗುತ್ತದೆ.

ಕೊರಳಿನ ಕೊಬ್ಬರಿ ಕೀಳುವುದು

ಸಿದ್ಧಪಡಿಸಿದ ಅಖಾಡವನ್ನು ಹೋರಿ ದಾಟುವುದರೊಳಗೇ ಹೋರಿ ಹಿಡಿಯುವ ಪೈಲ್ವಾನ ಹೋರಿಯನ್ನು ತಡೆದು ನಿಲ್ಲಿಸಬೇಕಾಗುತ್ತದೆ. ಅಥವಾ ಹೋರಿಯ ಕೊರಳಲ್ಲಿನ ಕೊಬ್ಬರಿಯನ್ನು ಕೀಳಬೇಕಾಗುತ್ತದೆ. ಹಾಗೆ ಕಿತ್ತರೆ ಅವನಿಗೆ ಬಹುಮಾನವನ್ನು ನೀಡಲಾಗುತ್ತದೆ. ಯಾರಿಂದಲೂ ಹೋರಿಯ ಕೊರಳಲ್ಲಿನ ಕೊಬ್ಬರಿ ಕೀಳಲಾಗದಿದ್ದರೆ ಆ ಹೋರಿಯೇ ಗೆದ್ದಂತೆ.

ಅನೇಕ ಕಡೆ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ, ಹುಚ್ಚು ಉನ್ಮಾದಕ್ಕೊಳಗಾಗುವ ಪ್ರೇಕ್ಷಕರ ಹುಚ್ಚಾಟದಿಂದ ಹೆಚ್ಚೂ ಕಡಿಮೆ ಪ್ರತೀ ಸ್ಪರ್ಧೆಯಲ್ಲೂ ಜೀವಹಾನಿಯಾಗುತ್ತಿರುವ ವರದಿಯಾಗುತ್ತಿದೆ. ಅಲ್ಲೆಲ್ಲಾ ಯಾವುದೇ ಬಂದೋಬಸ್ತ್ ಇರುವುದಿಲ್ಲ. ಕೆಲವು ಕಡೆ ಆಯೋಜಕರ ಅವ್ಯವಸ್ಥೆಯಿಂದ ಕೇವಲ ಪೈಲ್ವಾನರು ಇರಬೇಕಾದ ಅಖಾಡದೊಳಕ್ಕೆ ನೂರಾರು ಜನ ನುಗ್ಗಿ ಗದ್ದಲವೆಬ್ಬಿಸಿಬಿಡುತ್ತಾರೆ. ಅಲ್ಲದೇ ತಮ್ಮ ಹೋರಿ ಸುಲಭವಾಗಿ ಯಾರಿಗೂ ಸಿಗಬಾರದೆಂದು ಕೆಲವರು ಅವುಗಳಿಗೆ ಹೆಂಡ ಕುಡಿಸುವುದುಂಟು. ಹೋರಿಗಳ ಮೂಗಿಗೆ ನಶೆ ಏರಿಸುವ ವಿವಿಧ ಪುಡಿಗಳನ್ನು ಹಾಕಿ ಬಿಡುವುದೂ ಇದೆ. ಹೀಗೆ ಇನ್ನೂ ಅನೇಕ ವಾಮ ಮಾರ್ಗಗಳನ್ನು ಅನುಸರಿಸಲಾಗುತ್ತದೆ. ಇದರಿಂದ ಬೆದರಿ, ರೊಚ್ಚಿಗೇಳುವ ಹೋರಿಗಳು ಸಿಕ್ಕಸಿಕ್ಕವರಿಗೆ ತಿವಿಯುತ್ತಾ ಮೈಮೇಲೆ ನುಗ್ಗುತ್ತವೆ. ಆಗ ಇಂತಹ ಸಂದರ್ಭಗಳಲ್ಲೇ ಅನೇಕರು ತೀವ್ರ ಗಾಯಕ್ಕೊಳಗಾದರೆ, ಹಲವರು ತಮ್ಮ ಜೀವವನ್ನೇ ಕಳೆದುಕೊಳ್ಳುತ್ತಾರೆ.

ಟ್ರ್ಯಾಕ್ಟರ್, ಟಿಲ್ಲರ್ ಮುಂತಾದ ಉಪಕರಣಗಳ ಆಗಮನವಾದ ಮೇಲೆ ರೈತಾಪಿ ಜನರ ಬೆನ್ನೆಲುಬಾಗಿದ್ದ ಎತ್ತುಗಳು ತೆರೆಮರೆಗೆ ಸರಿಯಲಾರಂಭಿಸಿವೆ. ಮೈತುಂಬ ಹೂವಿನ ಹಾರಗಳಿಂದ, ಕೊಂಬುಗಳಿಗೆ ಬಲೂನುಗಳಿಂದ ಸುಂದರವಾಗಿ ಸಿಂಗರಿಸಿರುವ ಎತ್ತುಗಳನ್ನು ನೋಡುವುದೇ ಚೆಂದ. ಯಾವುದೇ ಜೀವ ಹಾನಿಯಾಗದಂತೆ, ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡು ನಡೆಸುವ ಇಂತಹ ಹಬ್ಬಗಳು ನಡೆಯಲಿ.

ಕುತ್ತಿಗೆ ಸುತ್ತ ಕಲೆ ನಿವಾರಣೆ

ಕೆಲವರಿಗೆ ಬಿಸಿಲಿನ ಅಲರ್ಜಿ ಅಥವಾ ಬೇರೆ ಕಾರಣಗಳಿಂದಾಗಿ ಕುತ್ತಿಗೆಯ ಭಾಗದಲ್ಲಿ ಕಪ್ಪು ಕಲೆಗಳಾ ಗುವುದುಂಟು. ಅದಕ್ಕೆ ಮನೆ ಮದ್ದು ಲಭ್ಯವಿದೆ.

ಬಾದಾಮಿ: ಒಂದು ಟೀ ಚಮಚದಷ್ಟು ಬಾದಾಮಿ ಪುಡಿಗೆ ಹಾಲು ಮತ್ತು ಜೇನು ತುಪ್ಪದೊಂದಿಗೆ ಬೆರೆಸಿ

ಕತ್ತಿನ ಬದಿಗಳಲ್ಲಿ ಮತ್ತು ಹಿಂಭಾಗದಲ್ಲಿ ಹಚ್ಚಿ, ಅರ್ಧ ಘಂಟೆಯ ನಂತರ ಬೆಚ್ಚಗಿನ ನೀರಿನಿಂದ ತೊಳೆಯಿರಿ.

ವಾರದಲ್ಲಿ ನಾಲ್ಕು ಬಾರಿ ಈ ರೀತಿ ಮಾಡಿ.

ಲೋಳೆಸರ: ಲೋಳೆಸರ ಅಥವಾ ಅಲೋವೆರಾದಿಂದ ಜೆಲ್ ಅನ್ನು ಹೊರ ತೆಗೆಯಿರಿ. ಇದನ್ನು ನಿಮ್ಮ ಕುತ್ತಿಗೆಗೆ ಹಚ್ಚಿ 20 ನಿಮಿಷಗಳ ಕಾಲ ನಿಧಾನವಾಗಿ ವೃತ್ತಾಕಾರವಾಗಿ ಮಸಾಜ್ ಮಾಡಿ. ನಂತರ ಶುದ್ಧವಾದ ನೀರಿನಿಂದ ಅದನ್ನು ತೊಳೆಯಿರಿ.

ಸೌತೆಕಾಯಿ: ಕಲೆಯಾದ ಭಾಗಕ್ಕೆ ಸೌತೆಕಾಯಿ ರಸವನ್ನು ಹಚ್ಚಿ. 10 ನಿಮಿಷಗಳ ಕಾಲ ನಯವಾಗಿ ಸ್ಕ್ರಬ್ ಮಾಡಿ, ನಂತರ ತೊಳೆಯಿರಿ. ಇದನ್ನು ಪ್ರತಿದಿನ ಮಾಡಬಹುದು.

ನಿಂಬೆ ರಸ: ಚರ್ಮದ ಟೋನ್‌ಅನ್ನು ಉತ್ತಮಗೊಳಿಸಲು ನಿಂಬೆರಸ ಸಹಾಯ ಮಾಡುತ್ತದೆ. ನಿಂಬೆ ರಸಕ್ಕೆ ನೀರು ಬೆರೆಸಿ, ಅದನ್ನು ಕುತ್ತಿಗೆಗೆ ಹಚ್ಚಬಹುದು. ಆದರೆ, ಈ ಸಮಯದಲ್ಲಿ ಚರ್ಮವನ್ನು ಸೂರ್ಯನ ಬೆಳಕಿಗೆ ಒಡ್ಡಬೇಡಿ. ಕೆಲವು ನಿಮಿಷಗಳ ನಂತರ ನೀರಿನಿಂದ ತೊಳೆಯಿರಿ.

● ಪುರುಷೋತ್ತಮ್ ವೆಂಕಿ

ಆಧ್ಯಾತ್ಮದಲ್ಲಿ ಕಾರ್ಯ-ಕಾರಣ ಸಂಬಂಧ



ನಿತ್ಯ ಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ ● ಕೆ.ಶಿವಪ್ರಸಾದ್

ಸಂತೃಪ್ತನಾದವನ ಬುದ್ಧಿ ಸ್ಥಿರವಾಗಿದ್ದು ಅವನಿಗೆ ಯಾವ ದುಃಖಗಳು ಇರುವುದಿಲ್ಲವೆಂದು ಕೃಷ್ಣ ಹೇಳುತ್ತಾನೆ. (2.65) ಆಸೆಗಳು ಎಲ್ಲಾ ನೆರವೇರಿದಾಗ ನಾವು ಸಂತೃಪ್ತಿ ಹೊಂದಿ ನಮಗೆ ಸುಖ ಸಿಕ್ಕು ದುಃಖ ನಾಶವಾಗುತ್ತದೆ ಎಂಬ ಸಾಮಾನ್ಯ ತಿಳುವಳಿಕೆಗೆ ಇದು ವಿರುದ್ಧವಾಗಿದೆ. ಆದರೆ ಮೊದಲು ನಾವು ಸಂತೃಪ್ತರಾಗಬೇಕು ಹಾಗೂ ಉಳಿದೆಲ್ಲವೂ ತಾನೇ ತಾನಾಗಿ ಬರುತ್ತವೆ ಎಂದು ಕೃಷ್ಣ ತಿಳಿಸುತ್ತಾನೆ.

ಉದಾಹರಣೆಗಾಗಿ ನಮಗೆ ಜ್ವರ ಹಾಗೂ ಇತರ ನೋವು ಉಂಟಾದರೆ ನಮ್ಮ ಆರೋಗ್ಯ ಸರಿ ಇಲ್ಲ ಎಂಬ ನಿರ್ಣಯಕ್ಕೆ ನಾವು ಬಂದುಬಿಡುತ್ತೇವೆ. ಈ ಲಕ್ಷಣಗಳನ್ನು ಹತ್ತಿಕ್ಕಿದರೆ ನಾವು ಆರೋಗ್ಯವಂತರಾಗುವುದಿಲ್ಲ. ಅದಕ್ಕೆ ಹಿಂದಿರುವ ಕಾರಣವನ್ನು ಕಂಡುಹಿಡಿದು ಚಿಕಿತ್ಸೆ ಮಾಡಬೇಕು. ಮತ್ತೊಂದೆಂದರೆ ಪೋಷಕಾಂಶವುಳ್ಳ ಆಹಾರ ಸುಖ ನಿದ್ರೆ, ಸಾಮರ್ಥ್ಯ ನಮ್ಮನ್ನು ಆರೋಗ್ಯವಂತರನ್ನಾಗಿ ಮಾಡುತ್ತವೆ. ಅದರಂತೆಯೇ ಭಯ, ಕ್ರೋಧ, ದ್ವೇಷ ಇವು ದುಃಖದ ಭಾಗಗಳಾಗಿದ್ದು ಅವು ನಮಗೆ ಸಂತೃಪ್ತಿ ಇಲ್ಲದ್ದನ್ನು ಸೂಚಿಸುತ್ತವೆ. ಅವುಗಳನ್ನು ಹತ್ತಿಕ್ಕುವುದರಿಂದ ನಮಗೆ ತೃಪ್ತಿ ಸಿಗುವುದಿಲ್ಲ.

ಈ ಲಕ್ಷಣಗಳನ್ನು ಹತ್ತಿಕ್ಕಿ ಒಪ್ಪತಕ್ಕ ನಡತೆ ಹೊಂದಲು ಅನೇಕ ಉಪಾಯಗಳನ್ನು ತಿಳಿಸಿ ಅನುಷ್ಠಾನಗೊಳಿಸಲಾಗುತ್ತದೆ. ಆದರೆ ಈ ಹತ್ತಿಕ್ಕುವಿಕೆ ಇನ್ನು ಹೆಚ್ಚಿನ ಬಲದಿಂದ ಹಿಂದಿರುಗಿ ಬರುತ್ತದೆ. ಉದಾ- ಮೇಲಾಧಿಕಾರಿಯ ಬಗ್ಗೆ ನಮಗಿರುವ ಸಿಟ್ಟನ್ನು ಹತ್ತಿಕ್ಕಿದಾಗ ನಮ್ಮ ಕೈ ಕೆಳಗಿನವರ ಮೇಲೆ ಅಥವಾ ಕುಟುಂಬದ ಸದಸ್ಯರ ಮೇಲೆ ಅದು ಎರಗುತ್ತದೆ.

ಜಗತ್ತಿನ ದ್ವಂದ್ವ ಸ್ವಭಾವದ ಬಗ್ಗೆ ನಮ್ಮ ಜಾಗೃತಿ, ಕರ್ಮಫಲದ ಆಸೆ ಇಲ್ಲದೆ ಮಾಡುವ ಕರ್ಮದ ಅರಿವು, ನಾವು ಕರ್ತೃ ಅಲ್ಲ ಕೇವಲ ಸಾಕ್ಷಿ ಮಾತ್ರರು (ನಮ್ಮ ಕರ್ಮ, ವಿಚಾರ, ಅನಿಸಿಕೆಗಳ ಬಗ್ಗೆ) ಎಂಬ ತಿಳುವಳಿಕೆ ಇವು ಸಂತೃಪ್ತಿ ಹೊಂದಲು ಇರುವ ಮಾರ್ಗ. ನಮ್ಮ ಅಪ್ರಕಟಿತ ಭಾಗವಾದ ಆತ್ಮ (ದೇಹಿ) ಸದಾ ಸಂತೃಪ್ತಿಯಿಂದಿರುತ್ತದೆ ಮತ್ತು ಹಗ್ಗ ಮತ್ತು ಹಾವಿನ ದೃಷ್ಟಾಂತದಲ್ಲಿಯ ಭ್ರಮೆಯಂತೆ ವ್ಯಕ್ತವಾಗಿರುವುದರೊಂದಿಗೆ ತಪ್ಪಾಗಿ ಗುರುತಿಸಿಕೊಂಡಾಗ ಉಂಟಾಗುವ ತಪ್ಪು ದಾರಿಯ ಹಾಗೆ ಈ ದುಃಖಗಳು ಇರುತ್ತವೆ.

ಇನ್ನೊಂದೆಡೆ ನಾವು ಆತ್ಮತೃಪ್ತಿ (ಆತ್ಮವಾನ್) ಮತ್ತು ಆತ್ಮ ದೊಂದಿಗೆ ಏಕತ್ವ (ಆತ್ಮರಮಣ) ಹೊಂದಿರಬೇಕೆಂದು ಕೃಷ್ಣ ಹೇಳುತ್ತಾನೆ. ಇದು ನಮ್ಮನ್ನು ದುಃಖರಹಿತರನ್ನಾಗಿ ಮಾಡುತ್ತದೆ. (2.45) ಇದು ದುಃಖದ ಹತ್ತಿಕ್ಕುವಿಕೆಯೂ ಅಲ್ಲ, ಅಭಿವ್ಯಕ್ತಿಯು ಅಲ್ಲ. ಆದರೆ ಅದಕ್ಕೆ ಸಾಕ್ಷಿಯಾಗಿರುವ ಹಾಗೂ ಅತೀತವಾಗಿರುವ ಸಾಮರ್ಥ್ಯವಾಗಿದೆ.

ಕುಟುಂಬವೊಂದರಲ್ಲಿ ಕಂಡುಬಂದ ಸಮಸ್ಯೆಗೆ, ಮೌಢ್ಯದ ಹೊರತಾಗಿ ಒಂದು ಪರಿಹಾರವನ್ನು ಸೂಚಿಸಿದ್ದು ಬೇರಾರೂ ಅಲ್ಲ, ಒಬ್ಬ ಮಂತ್ರವಾದಿ!

ಮೌಢ್ಯ ತೊರೆದ ಮಂತ್ರವಾದಿ!

● ಮಿರ್ಲೆ ಚಂದ್ರಶೇಖರ

ಇದು ನಾನು ಕಂಡ ಒಂದು ನೈಜ ಘಟನೆ. ಗ್ರಾಮೀಣ ಪ್ರದೇಶದ ಅವಿಭಕ್ತ ಕುಟುಂಬ ಒಂದರಲ್ಲಿ ಹೆಣ್ಣು ಮಗಳಿಗೆ ಮದುವೆಯಾಗಿ ವರ್ಷವೂ ಕಳೆದಿರಲಿಲ್ಲ, ದೆವ್ವವೊಂದು ಆವರಿಸಿಕೊಂಡು ಇದ್ದಕಿದ್ದಂತೆ ಕಿರುಚುವುದು, ಅಸಂಬದ್ಧವಾಗಿ ಮಾತನಾಡುತ್ತಾ ಕೂಗುವುದು ನಡೆದಿತ್ತು. ಕಂಡಕಂಡ ದೇವರಿಗೆ ಪೂಜೆ ಮಾಡಿಸಿದರು, ವೈದ್ಯರ ಬಳಿ ಕರೆದುಕೊಂಡು ಹೋದರು ಪ್ರಯೋಜನವಾಗಲಿಲ್ಲ. ಕೆಲವು ದಿನಗಳಿಂದ ಇದೇ ಮುಂದುವರಿದಿತ್ತು, ಮನೆಯವರಿಗೋ ಈಕೆಯ ನಡುವಳಿಕೆಯಿಂದ ಭಯ ಆವರಿಸಿತ್ತು. ಪಟ್ಟಣದಲ್ಲಿ ಮಂತ್ರವಾದಿಯೊಬ್ಬ ಇಂತಹ ಸಮಸ್ಯೆಗಳಿಗೆ ಪರಿಹಾರ ನೀಡುತ್ತಾನೆಂದು, ಗ್ಯಾರಂಟಿ ಕಾಯಿಲೆ ವಾಸಿ ಆಗುವುದೆಂದು ತಿಳಿದವರೊಬ್ಬರು ಸಲಹೆ ಕೊಟ್ಟರು. ಮಗನ ಸಂಸಾರ ಚೆನ್ನಾಗಿರಲೆಂಬ ಆಸೆಯಿಂದ ಪಟ್ಟಣದ ಮಂತ್ರವಾದಿಯ ಬಳಿ ಕರೆದುಕೊಂಡು ಹೋದರು, ಸೂಕ್ಷ್ಮವಾಗಿ ಪರೀಕ್ಷಿಸಿದ ಆತ ಇಲ್ಲಿ ಬೇರೆಯದೇ ಸಮಸ್ಯೆ ಇದೆಯೆಂದು ಅರಿತ ಅವನು ದೆವ್ವ ಬಿಡಿಸುವುದಾಗಿ, ಆ ಸಮಯಕ್ಕೆ ಇಲ್ಲಿ ಯಾರೂ ಇರಕೂಡದೆಂದು ಜೊತೆಯಲ್ಲಿ ಬಂದಿದ್ದ ಗಂಡ, ಅತ್ತೆ ಹಾಗೂ ಮಾವ ಮೂವರನ್ನು ಹೊರಗೆ ಕಳುಹಿಸಿದ.

ಅರ್ಧ ಗಂಟೆಯ ನಂತರ ಎಲ್ಲರನ್ನು ಕರೆದು ನಾಲ್ಕು ನಿಂಬೆ ಹಣ್ಣುಗಳನ್ನು ಮಂತ್ರಿಸಿ ಕೊಟ್ಟು, ಹೆಣ್ಣುಮಗಳಿಗೆ ದೆವ್ವ ಆವರಿಸಿಕೊಂಡಾಗ ನಿವಾಳಿಸಿ ನಿಮ್ಮ ಮನೆಯ ನಾಲ್ಕೂ ದಿಕ್ಕುಗಳಿಗೆ ಬಿಸಾಡಿ, ದೆವ್ವವು ತಕ್ಷಣ ಬಿಟ್ಟು ಹೋಗುವುದು ಹಾಗೂ ಒಂದು ಕಂಡಿಷನ್‌ನ್ನು ಕಡ್ಡಾಯವಾಗಿ ಪಾಲಿಸಬೇಕು, ಅದೆಂದರೆ ಯಾವುದೇ ಕಾರಣಕ್ಕೂ ನಿಮ್ಮ ಸೊಸೆಯನ್ನು ಸಗಣಿ ಇರುವ ಜಾಗಕ್ಕೆ ಕಳುಹಿಸಬೇಡಿ, ಕಳುಹಿಸಿದರೆ ಮತ್ತೇ ಅದರ ವಾಸನೆಗೆ ದೆವ್ವವು ಮೈಮೇಲೆ ಬರುವುದೆಂದು ಹೇಳಿ ಒಂದಷ್ಟು ಹಣ ಪಡೆದು ಕಳುಹಿಸಿಕೊಡುತ್ತಾನೆ. ಹತ್ತಾರು ವರ್ಷಗಳು ಕಳೆದರೂ ದೆವ್ವವು ಮತ್ತೇ ಇವಳ ಮೇಲೆ ಬಂದಿಲ್ಲ ಹಾಗೂ ಸಗಣಿ ಇರುವ ಕೊಟ್ಟಿಗೆಯ ಕಡೆಗೆ ಸೊಸೆಯನ್ನು ಕಳುಹಿಸಿಲ್ಲ.

ಇಡೀ ದಿನ ಕೊಟ್ಟಿಗೆ ಕೆಲಸ

ಮದುವೆಯಾದ ಹೊಸದರಲ್ಲಿ ಪ್ರೀತಿಯಿಂದಲೇ ಸೊಸೆಯನ್ನು ನೋಡಿಕೊಂಡಿದ್ದಾರೆ, ಮನೆ ಎಂದ ಮೇಲೆ ಅವಳು ಸಹ ಕೆಲಸಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು, ಒಬ್ಬೊಬ್ಬರಿಗೆ ಹಂಚಿದ ಕೆಲಸಗಳಲ್ಲಿ ಆಕೆಯದೂ ಹೊರಗಿನ ಕೆಲಸ, ಬೆಳಿಗ್ಗೆ ಸೂರ್ಯ ಹುಟ್ಟುವ ಮೊದಲೇ ದನಕರುಗಳನ್ನು ಹೊರಗೆ ಕಟ್ಟಿ ಸಗಣಿ ಬಾಚುವುದು, ಕಸವನ್ನು ತುಂಬಿ ತಿಪ್ಪೆಗೆ ಹಾಕಿ ಬರುವುದು ಮತ್ತು ಕೊಟ್ಟಿಗೆಯನ್ನು ಸ್ವಚ್ಛಗೊಳಿಸುವುದು. ಎಮ್ಮೆದನಗಳು ಜಾಸ್ತಿಯೇ ಇದ್ದುದ್ದರಿಂದ ಮೈಮುರಿಯವಷ್ಟು ಕೆಲಸ. ಮನೆಯೊಳಗಿನ ಅಡುಗೆ ಕೆಲಸ, ಪಾತ್ರೆ ತೊಳೆಯವುದು ಇತ್ಯಾದಿ ಉಳಿದವರಿಗೆ ಹಂಚಿಕೆಯಾಗಿತ್ತು, ಅದರಂತೆ ಸಂಸಾರ ನಡೆಯುತ್ತಿತ್ತು, ಕೊಟ್ಟಿಗೆ ಕೆಲಸ ಕಷ್ಟವಾಗಿದ್ದರಿಂದ ಬದಲಾಗಿ ಅಡುಗೆ ಕೆಲಸವನ್ನು ವಹಿಸುವಂತೆ ಪರಿಪರಿಯಾಗಿ ಬೇಡಿದರೂ ಅತ್ತೆಯು ಒಪ್ಪಿರಲಿಲ್ಲ, ವಿಧಿ ಇಲ್ಲದೆ ಅದನ್ನೇ ಮಾಡಿಕೊಂಡು ಬರುತ್ತಿದ್ದಳು. ತವರು ಮನೆಯವರಿಗೆ ತನ್ನ ಕಷ್ಟವನ್ನು ಹೇಳಿಕೊಳ್ಳಲಾಗಿ ಬೀಗರೊಟ್ಟಿಗೆ ಜಗಳವಾಡಿ ಮಗಳ ಕಷ್ಟವನ್ನು ಬಗೆಹರಿಸುವ ಬದಲು ಉಪಾಯದಿಂದ ಬುದ್ಧಿವಂತಿಕೆ ಉಪಯೋಗಿಸುವುದು ಸೂಕ್ತವೆಂದು ಇಲ್ಲದ ದೆವ್ವವನ್ನು ಮಗಳ ಮೈಮೇಲೆ ತರಿಸಿದರು.

ಅವರು ಕರೆದುಕೊಂಡು ಹೋಗಿದ್ದ ಮಂತ್ರವಾದಿಯು ಪ್ರಾಯೋಗಿಕವಾಗಿ ಯೋಚಿಸುವಂತಹವನಾಗಿದ್ದು, ಇದು ಆ ಕುಟುಂಬಕ್ಕೆ ಸಹಾಯ ಮಾಡಿತ್ತು! ಮಂತ್ರವಾದಿಯು ಆ ಮಹಿಳೆಯನ್ನು ತೀಕ್ಷ್ಣವಾಗಿ ಗಮನಿಸಿ, ದೆವ್ವದ ಬದಲು ಬೇರೋನೋ ಸಮಸ್ಯೆ ಇರುವಂತಿದೆ ಎಂದು ಗುರುತಿಸಿದನು. ಜತೆಯಲ್ಲಿ ಬಂದಿದ್ದವರೆಲ್ಲರನ್ನು ಹೊರಗೆ ಕಳಿಸಿ, ಸೊಸೆ ಒಬ್ಬಳನ್ನೇ ಕೊಠಡಿಯೊಳಗೆ ಇರಿಸಿಕೊಂಡು, ಉಪಾಯವಾಗಿ ವಿವರಗಳನ್ನು ಕೇಳಿದಾಗ ನಿಜವಾದ ಸಮಸ್ಯೆ ಗೊತ್ತಾಯಿತು. 'ಸ್ವಾಮಿ, ನನಗೆ ಆ ಮನೆಯಲ್ಲಿ ಕೊಟ್ಟಿಗೆ ಕೆಲಸ ಒಬ್ಬಳಿಂದಲೇ ಮಾಡಲು ಕಷ್ಟವಾಗುತ್ತಿದೆ; ಅಲ್ಲಿ ಇಬ್ಬರು ಮಾಡುವ ಕೆಲಸವಿದೆ; ಒತ್ತಾಯದಿಂದ ನಾನೊಬ್ಬಳೇ ಮಾಡಬೇಕೆಂದು ಮನೆಯವರೆಲ್ಲರೂ ತಾಕೀತು ಮಾಡಿದ್ದಾರೆ; ಒಬ್ಬರಿಂದ ಆ ಕೆಲಸ ಮುಗಿಯುವುದಿಲ್ಲ ಆದ್ದರಿಂದ, ಈ ಸಮಸ್ಯೆಯಿಂದ ಹೊರ ಬರುವ ಉದ್ದೇಶದಿಂದ ಈ ನಾಟಕವನ್ನು ಆಡುತ್ತಿದ್ದೇನೆ; ನನಗೆ ಬಾಲ್ಯದಿಂದಲೂ ಅಡುಗೆ ಎಂದರೆ ಇಷ್ಟ; ಯಾವುದೇ ರೀತಿಯ ಅಡುಗೆಯನ್ನಾದರೂ ಚೆನ್ನಾಗಿ ಮಾಡುತ್ತೇನೆ. ಆದರೆ ಆ ಕೆಲಸ ಕೊಡಿ ಎಂದು ಸಾರಿ ಸಾರಿ ಕೇಳಿದರೂ ಹಾಕುತ್ತಿಲ್ಲ. ನೀವೇ ಸಮಸ್ಯೆಯನ್ನು ಪರಿಹರಿಸಿಕೊಡಿ' ಎಂದು ಕಣ್ಣೀರಿಡುತ್ತಾ ಕಾಲಿಗೆ ಬಿದ್ದು ಬೇಡಿದಳು.

ಅದರ ಪರಿಣಾಮ ಮಂತ್ರವಾದಿಯು ಆ ಹೆಣ್ಣು ಮಗಳಿಗೆ ಇದ್ದ ಕಷ್ಟವನ್ನು ಪರಿಹರಿಸಿದ; ಕೊಟ್ಟಿಗೆಯ ಕೆಲಸದಿಂದ ದೂರ ಮಾಡಿದರೆ, ಆಕೆ ಸರಿಹೋಗುತ್ತಾಳೆಂದು ಕಂಡುಕೊಂಡ. ಸಗಣಿಯಿಂದಲ್ಲವೇ ಅವಳಿಗೆ ಕಷ್ಟ ಇದ್ದದ್ದು, ಸಗಣಿ ವಾಸನೆಗೆ ದೆವ್ವ ಬರುತ್ತದೆ ಎಂದು ನಂಬಿಸಿ ಆ ಕೆಲಸದಿಂದ ಅವಳಿಗೆ ಮುಕ್ತಿ ಕೊಡಿಸಿದ, ಅವಳಿಚ್ಛೆಯಂತೆ ಅಡುಗೆ ಕೆಲಸಕ್ಕೆ ವರ್ಗಾವಣೆಯಾಗಿ, ಈಗ ಸಂತೋಷದಿಂದಲೇ ಲವಲವಿಕೆಯಿಂದ ಮುದ್ದು ಸೊಸೆಯು ಕುಟುಂಬವನ್ನು ನಡೆಸುತ್ತಿದ್ದಾಳೆ;

ಮಂತ್ರವಾದಿಯಾದರೂ, ಮೌಢ್ಯವನ್ನು ದೂರವಿಟ್ಟು, ನಿಜವಾದ ಕಾರಣವನ್ನು ಗುರುತಿಸಿ, ಅದರ ಪರಿಹಾರವಾಗಿ, ಮೌಢ್ಯದ ಹೊದಿಕೆ ಹೊದಿಸಿದ ಪರಿಹಾರವೊಂದನ್ನು ಸೂಚಿಸಿ ಮನೆಯ ಅತ್ತೆ ಮತ್ತು ಇತರರನ್ನು ನಂಬಿಸಿದ; ಆ ಸೊಸೆಯ ಬದುಕಿನಲ್ಲಿ ಸಂತಸವನ್ನು ತಂದುಕೊಟ್ಟ. ಸೊಸೆಯೂ ಅಷ್ಟೆ, ಸಂತೋಷದಿಂದ ಅಡುಗೆ ಮತ್ತು ಮನೆಯೊಳಗಿನ ಎಲ್ಲಾ ಕೆಲಸಗಳನ್ನು ಮಾಡಿಕೊಟ್ಟಳು; ಆದರೆ ತನಗೆ ಹಿಡಿದಿದ್ದ ದೆವ್ವದ ಗುಟ್ಟನ್ನು ಯಾರಿಗೂ ಬಿಟ್ಟುಕೊಟ್ಟಿಲ್ಲ.

ದಿನ ಭವಿಷ್ಯ

ಮೇಷ: ಧೈರ್ಯವಂತ, ಉತ್ಸಾಹಿ ಗುಣ ಇರುವ ನೀವು ಕರ್ತವ್ಯವನ್ನು ಉತ್ತಮವಾಗಿ ನಿಭಾಯಿಸುತ್ತಿರಿ, ಮಾಡುವ ಕೆಲಸದ ಬಗ್ಗೆ ಅರಿಯಾದ ನಂಬಿಕೆ.

ವೃಷಭ: ಸ್ಥಿರತೆ, ಸಮಾಧಾನ ಮತ್ತು ಶಾಂತತೆಯನ್ನು ಹೆಚ್ಚು ಇಷ್ಟಪಡುವ ನೀವು ಎಲ್ಲರೊಂದಿಗೂ ಪ್ರೀತಿ- ಸೌಹಾರ್ದತೆಯಿಂದ ಇರಲು ಸದಾ ಬಯಸುತ್ತೀರಿ.

ಮಿಥುನ: ನೀವು ಆಗಾಗ ಬದಲಾಗುವ ಚಂಚಲ ಮನಸ್ಸಿನವರು. ಆತ್ಮೀಯರೊಂದಿಗೆ ಸುದೀರ್ಘ ಚರ್ಚೆ ನಡೆಸುವ ಮೂಲಕ ವಿಚಾರ ಅರಿತುಕೊಳ್ಳುತ್ತೀರಿ.

ಕಟಕ: ಸಂತೋಷ, ನೋವುಗಳನ್ನು ಹಂಚಿಕೊಳ್ಳುವ ಹೃದಯ ಸ್ನೇಹಿ ಮನಸ್ಸು ನಿಮ್ಮದು, ಹಾಗಾಗಿ ಕುಟುಂಬದವರಿಗೆ ಇಷ್ಟವಾಗಿರುತ್ತೀರಿ.

ಸಿಂಹ: ಆತ್ಮವಿಶ್ವಾಸ, ಗೌರವವನ್ನು ಸಾಧಿಸಲು ಯಾವುದೇ ಒತ್ತಡವಿಲ್ಲದೆ ಸಮಸ್ಯೆಗಳನ್ನೂ ಲೀಲಾಜಾಲವಾಗಿ ನೀವು ನಿಭಾಯಿಸುತ್ತೀರಿ.

ಕನ್ಯಾ: ದೃಢ ವೈಶಿಷ್ಟ್ಯವನ್ನು ಸದಾ ಬೆಳೆಸುವ ನೀವು ಇಂದು ಎಲ್ಲರ ಮುಕ್ತಕಂಠದ ಪ್ರಶಂಸೆಗೆ ಪಾತ್ರರಾಗುತ್ತೀರಿ, ಅದೃಷ್ಟವೂ ನಿಮನ್ನರಸಿ ಬರಲಿದೆ.

ತುಲಾ: ಸಮತೋಲಿತ ಜೀವನವನ್ನು ಸದಾ ಹಂಬಲಿಸುವ ನೀವು ಎಲ್ಲರ ಸಹಾಯ-ಸಹಕಾರವನ್ನು ಬಹಳ ಸುಲಭವಾಗಿ ಪಡೆಯುತ್ತೀರಿ.

ವೃಶ್ಚಿಕ: ಹಲವಾರು ಸಲ ಬಲಹೀನ ಮನಸ್ಸನ್ನು ನೀವು ತೋರ್ಪಡಿಸಿದ್ದರೂ, ಇಂದು ನೀವು ಉತ್ತಮ ದೃಢ ನಿರ್ಧಾರಗಳನ್ನು ಕೈಗೊಳ್ಳುವ ಸಾಧ್ಯತೆಗಳು ಹೆಚ್ಚು.

ಧನು: ಉತ್ಸಾಹಿ ಮತ್ತು ಸ್ವತಂತ್ರ ಮನೋಭಾವವನ್ನು ಹೊಂದಿರುವ ನೀವು ಸದಾ ಹೊಸ ಆಲೋಚನೆಗಳನ್ನು ಒಗ್ಗಿಕೊಳ್ಳುತ್ತೀರಿ.

ಮಕರ: ಶ್ರಮ, ಸಮರ್ಪಣಾ ಮನೋಭಾವ ಹೊಂದಿರುವ ನೀವು ಕನಸುಗಳನ್ನು ನನಸು ಮಾಡುವ ಸಾಧನೆ ಮಾಡುತ್ತೀರಿ.

ಕುಂಭ: ನೀವು ಇವತ್ತು ಹೊಸ ಉದ್ಯೋಗ ಸಾಧ್ಯತೆಯ ಬಗ್ಗೆ ಗಂಭೀರವಾಗಿ ಯೋಚಿಸುವುದು ಖಚಿತ.

ಮೀನ: ಎಚ್ಚರಿಕೆಯಿಂದ ಸುಪ್ತ ಲೋಕವನ್ನು ಕಾಣುವ ನೀವು ಕಲೆ, ಸಾಹಿತ್ಯದತ್ತ ಒಲವು ತೋರಿಸಿ ಸಾಧನೆ ಮಾಡಬೇಕೆಂಬ ಛಲ ಮೈಗೂಡಿಸುವುದು ಖಚಿತ

• ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1924: ಪ್ರಪ್ರಥಮ ಬಾರಿಗೆ ಚಳಿಗಾಲದ ಒಲಿಂಪಿಕ್ಸ್ ಫ್ರಾನ್ಸ್‌ನಲ್ಲಿ ನಡೆಯಿತು.
- 1977: ಮೊತ್ತಮೊದಲ ಬಾರಿಗೆ ಸೋಲಾರ್ ಘಟಕವು ಫ್ರಾನ್ಸ್‌ನಲ್ಲಿ ಕಾರ್ಯಾರಂಭಗೊಂಡಿತು.
- ಕನ್ನಡದ ಖ್ಯಾತ ಟಿ.ವಿ ನಿರೂಪಕಿ ಅನುಶ್ರೀ ಹುಟ್ಟಿದ ದಿನ

ಚಿತ್ರಸ್ಫೂರ್ತಿ

ದಿನ ದರ್ಶಿಕೆ

ಮಾಘ ಮಾಸ, ಏಕಾದಶಿ ತಿಥಿ, ಜೇಷ್ಠ ಕನ್ಷತ್ರ, ಧ್ರುವ ಯೋಗ, ಕೃಷ್ಣ ಪಕ್ಷ, ಕ್ರೋಧಿ ಸಂವತ್ಸರ, ಧರ್ಗುವ ಯೋಗ, ಬವ ಕರಣ, ರಾಹುಕಾಲ: ಬೆ.9ರಿಂದ 10.30.

ಮನೆಮದ್ದು

ಒಂದು ಚಮಚ ಪುದೀನಾ ರಸಕ್ಕೆ ಅರ್ಧ ನಿಂಬೆ ರಸ ಮತ್ತು ಒಂದು ಚಮಚ ಜೇನುತುಪ್ಪ ಸೇರಿಸಿ ಕುಡಿದರೆ ಎದೆ ಉರಿ ನಿವಾರಣೆಯಾಗುತ್ತದೆ. ಹೊಟ್ಟೆ ಉರಿ ಇದ್ದರೆ ಖಾಲಿ ಹೊಟ್ಟೆಗೆ ಸಮಪ್ರಮಾಣದಲ್ಲಿ ಹುರಿದ ಜೀರಿಗೆ ಮತ್ತು ಒಣಗಿಸಿದ ಬೆಲ್ಲ ಹಾಗೂ ತುಪ್ಪ ಸೇವಿಸಬೇಕು. ಒಂದು ಚಮಚ ಕೊತ್ತಂಬರಿ ಬೀಜವನ್ನು ಎರಡು ಲೋಟ ತಣ್ಣೀರಿನಲ್ಲಿ ಹಾಕಿ ನೆನೆಸಿ, ನಂತರ ಸೋಸಿದ ನೀರನ್ನು ಕುಡಿದರೆ ಆ್ಯಸಿಡಿಟಿ ಗುಣಮುಖವಾಗುತ್ತದೆ.



ಸೌಂದರ್ಯ ಸೂತ್ರ

ಟರ್ಮರಿಕ್ ಫೇಸ್‌ಪ್ಯಾಕ್ ಅನ್ನು ಬಹು ಸುಲಭವಾಗಿ ಮಾಡಬಹುದು. ಬೇಕಾಗುವ ಸಾಮಗ್ರಿ-1 ಚ. ಹಾಲಿನ ಕೆನೆ, 2 ಚ ಕಡ್ಲೆ ಹಿಟ್ಟು, 1ಚ. ಅರಿಶಿಣ. ತಯಾರಿಸುವ ವಿಧಾನ: ಹಾಲಿನ ಕೆನೆ, ಕಡ್ಲೆ ಹಿಟ್ಟು ಹಾಗೂ ಅರಿಶಿನವನ್ನು ಬೆರೆಸಿ, ಪೇಸ್ಟ್ ಅನ್ನು ಮುಖಕ್ಕೆ ಮತ್ತು ಕುತ್ತಿಗೆಯ ಭಾಗಕ್ಕೆ ಹಚ್ಚಿ, 15 ನಿಮಿಷ ಹಾಗೆಯೇ ಬಿಟ್ಟು, ತೊಳೆದುಕೊಳ್ಳಿ. ಇದರಿಂದ ನಿಮ್ಮ ಚರ್ಮಕ್ಕೆ ಕಾಂತಿ ಬರಲಿದೆ.

ಇನ್ಫೋಸಿಸ್ ಪ್ರತಿಷ್ಠಾನ ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ ಶುಕ್ರ ವಾರ ಹಮ್ಮಿಕೊಂಡಿದ್ದ 'ಕಲಾ ಧ್ವನಿ' ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಪಂಜಾಬ್ ಜಾನಪದ ಕಲಾವಿದರು. ▸▸ ಚಿತ್ರ: ಸುಧಾಕರ್. ಡಿ

ಮನಸ್ಸು ಮಾಗಿದ್ದಾಗ ಗೋಚರವಾಗುವ ಗುರಿ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಸಂತರೊಬ್ಬರು ಒಂದು ವೃಕ್ಷದ ಕೆಳಗೆ ಕುಳಿತಿದ್ದರು. ಒಬ್ಬ ಯುವಕ ಅವರ ಬಳಿಗೆ ಬಂದು, 'ನಾನು ಒಬ್ಬ ಸದ್ಗುರುವನ್ನು ಹುಡುಕುತ್ತಿದ್ದೇನೆ, ಅವರೇ ಸದ್ಗುರು ಎಂದು ಗುರುತಿಸಲು ನನಗೆ ಏನಾದರೂ ಸಹಾಯ ನಿಮ್ಮಿಂದ ದೊರೆಯಬಹುದಾ?' ಎಂದು ಕೇಳಿದ. ಆಗ ಸಂತರು ಹೇಳಿದರು, ಇಂಥ ವೃಕ್ಷದ ಕೆಳಗೆ ಕುಳಿತಿರುವವರು ಸಿಕ್ಕರೆ, ಅವರೇ ಸದ್ಗುರುಗಳೆಂದು ಎಂದು ತಿಳಿದುಕೋ.

ಸರಿ, ಎಂದು ಆ ಯುವಕ ಅಲ್ಲಿಂದ ಹೊರಟು ಸಾಕಷ್ಟು ಕಡೆ ಹುಡುಕಿ ಸದ್ಗುರುವಿಗಾಗಿ ಸುಮಾರು ಮೂವತ್ತು ವರ್ಷಗಳ ಕಾಲ ಅಲೆದಾಡಿದ. ಆದರೆ ಸಂತರು ಹೇಳಿದ ವೃಕ್ಷ ಎಲ್ಲೂ ಸಿಗಲಿಲ್ಲ, ವೃಕ್ಷದ ಕೆಳಗೆ ಕುಳಿತ ಸದ್ಗುರುವೂ ಕಾಣಲಿಲ್ಲ. ಎಷ್ಟೇ ಜನ ಸಿಕ್ಕರೂ, ಅವರ್ಯಾರೂ, ಸಂತರು ಹೇಳಿದ ರೀತಿಯಲ್ಲಿ ಇವನಿಗೆ ಕಾಣಿಸಲಿಲ್ಲ.

ಮೂವತ್ತು ವರ್ಷಗಳ ನಂತರ ಮರಳಿ ಅದೇ ಜಾಗಕ್ಕೆ ಬಂದ. ನೋಡುತ್ತಾನೆ, ಮೊದಲು ತಾನು ಕಂಡ ವೃದ್ಧರೇ, ಈಗಲೂ ಅದೇ ವೃಕ್ಷದ ಕೆಳಗೆ ಕುಳಿತಿದ್ದಾರೆ. ಈಗ ಅವನಿಗೆ ಏನು ಮಾಡಬೇಕೆಂದು ತೋಚದೇ, ಆಶ್ಚರ್ಯದಿಂದ ಅವರನ್ನೇ ನೋಡುತ್ತಾ ನಿಂತುಬಿಟ್ಟ. 'ಸ್ವಲ್ಪ ಸುಧಾರಿಸಿಕೋ..' 'ಮಹಾನುಭಾವರೇ, ಮೊದಲೇ ನೀವೇಕೆ ನನಗೆ ಹೇಳಲಿಲ್ಲ? ನಾನು ಎಷ್ಟು ಕಡೆ ಅಲೆದು ಬಂದೆ?' ಎಂದು ಹೇಳಿದ.

ಆಗ ಸಂತರು ಹೇಳಿದರು, 'ನಾನು ಹೇಳಿದ್ದೆ, ಆದರೆ ಆಗ ನಿನಗೆ ಕಣ್ಣುಗಳಿರಲಿಲ್ಲ. ವೃಕ್ಷವನ್ನು ದೃಷ್ಟಿಸಿಯೂ ಸಹ ನೋಡಲಿಲ್ಲ, ನೀನು ಕೇಳಿಸಿಕೊಂಡೆ, ಹಾಗೇ ಹೊರಟೆ. ನಾನು ಹೇಳಿದ್ದು, ಇದೇ ವೃಕ್ಷ ಮತ್ತು ನಾನೇ ಆತ. ನಿನ್ನ ಗೊಂದಲದ ಕಾರಣ ನಾನಿಲ್ಲಿ ಮೂವತ್ತು ವರ್ಷಗಳ ಕಾಲ ಇರಬೇಕಾಯಿತು. ಒಂದಲ್ಲ ಒಂದು ದಿನ ಇಲ್ಲಿಗೆ ಬಂದೇ ಬರುವೆ ಎಂದು ನನಗೆ ಅಂದೇ ತಿಳಿದಿತ್ತು'.

ತನ್ನ ದಡ್ಡತನಕ್ಕೆ ಅವನಿಗೆ ತನ್ನ ಬಗ್ಗೆಯೆ ಬೇಸರವಾಯಿತು. ತಕ್ಷಣವೇ ಎಚ್ಚೆತ್ತುಕೊಂಡು, ಸದ್ಗುರುಗಳ ಪಾದವನ್ನು ಹಿಡಿದು, ತನ್ನನ್ನು ಕ್ಷಮಿಸುವಂತೆ ಬೇಡಿಕೊಂಡ. ಸದ್ಗುರುವಿನೊಂದಿಗಿನ ಭೇಟಿಯು ಮರಳು ಗಾಡಿನಲ್ಲಿ ಹೂ ಅರಳಿದಂತೆಯೂ, ಬಂಡೆ ಸೀಳಿ ನೀರಿನ ಝರಿ ಚಿಮ್ಮಿದಂತಹ ಅನುಭವ ಅವನಿಗಾಯಿತು.

ಇದು ಒಂದು ನಿದರ್ಶನವಷ್ಟೇ. ನಮಗೆ ಜೀವನದಲ್ಲಿ ಸರಿಯಾದ ಗುರು ಗುರಿ ಕಾಣಲು ನಮ್ಮ ಮನಸ್ಸಿನ ಪರಿಪಕ್ವತೆ, ಬದುಕಿನ ದೃಷ್ಟಿಕೋನ, ಸಮಚಿತ್ತ, ಎಲ್ಲಕ್ಕಿಂತ ಹೆಚ್ಚಾಗಿ ನಮ್ಮೊಳಗೆ ನಾವು ಆತ್ಮಶೋಧನೆ ಮಾಡಲು ತಿಳಿದಿರಬೇಕು. ಆಗಲೇ ನಮಗೆ ಏನು ಬೇಕು? ನಾವು ಏನನ್ನು ಹುಡುಕುತ್ತಿದ್ದೇವೆ? ಎನ್ನುವ ವಸ್ತುಸ್ಥಿತಿ ನಮಗೆ ಅರ್ಥವಾಗುತ್ತಾ ಹೋಗುತ್ತದೆ. ನಾವು ನಮಗೆ ಅರ್ಥವಾಗುವವರೆಗೆ, ನಮ್ಮೊಳಗೆ ನಮಗೆ ನಡೆದು ಹೋಗಲು ಸಾಧ್ಯವಾಗುವವರೆಗೆ ಹೊರಗಿನ ಪ್ರಪಂಚ ಮತ್ತದರ ಗುಣವಿಶೇಷಗಳು ನಮ್ಮನ್ನು ಸ್ಪರ್ಶಿಸುವುದಿಲ್ಲ. ಮತ್ತೊಬ್ಬರಲ್ಲಿರುವ ವಿಶೇಷ ಗುಣಗಳು ನಮಗೆ ಅರಿವಾಗಬೇಕೆಂದರೆ, ನಾವು ನಮ್ಮನ್ನು ಮೊದಲು ಅರಿತಿರಬೇಕು. ನಮ್ಮೊಳಗೆ ಒಂದು ಜಾಗೃತಿ ಮೂಡಿದ್ದಾಗ, ಮತ್ತೊಬ್ಬರಲ್ಲಿರುವ ವೈಶಿಷ್ಟ್ಯವನ್ನು ಗುರುತಿಸಲು ನಮಗೆ ಸಾಧ್ಯವಾಗುತ್ತದೆ.

ಕೆಲವೊಮ್ಮೆ ಕೆಲವರಿಗೆ ಯಶಸ್ಸು ಬಹಳ ಬೇಗ ದಕ್ಕಿಬಿಡುತ್ತದೆ. ಇಂದಿನ ಪ್ರಪಂಚದ ಲೆಕ್ಕದಲ್ಲಿ ಯಶಸ್ಸು ಎಂದರೆ ಚೆನ್ನಾಗಿ ದುಡಿಯುವ ಮಾರ್ಗ. ಆದರೆ ಅಷ್ಟೆಲ್ಲಾ ಹಣ ಗಳಿಸಿಯೂ ಕೂಡ ಅದನ್ನು ಉಳಿಸಿಕೊಳ್ಳುವ ಅದನ್ನು ಸದ್ವಿನಿಯೋಗ ಮಾಡುವ, ಸಮತೆ ಅವರಲ್ಲಿ ಇಲ್ಲವಾಗುತ್ತದೆ. ಅದಾದ ಒಂದಷ್ಟು ವರ್ಷದಲ್ಲಿ ಮಾನಸಿಕವಾಗಿ ದೈಹಿಕವಾಗಿ ಅವರು ಅಧೋಗತಿಗೆ ಇಳಿಯಲು ಪ್ರಾರಂಭಿಸುತ್ತಾರೆ. ಇದಕ್ಕೆಲ್ಲಾ ಕಾರಣ ಅವರಿಗೆ ಇರಬೇಕಾದ ಮಾನಸಿಕ ಪರಿಪಕ್ವತೆ. ಗುರು ಒಬ್ಬರು ಅವರನ್ನು ಒಳಗಿನಿಂದ ಸದೃಢವಾಗಿಸಿದಾಗ ಅವರಿಗೆ ಜೀವನವನ್ನು ಸಮಚಿತ್ತದಿಂದ ಹೇಗೆ ಸ್ವೀಕರಿಸಬೇಕು ಎನ್ನುವ ಸೂಕ್ಷ್ಮ ಅರಿವಾಗುತ್ತಾ ಹೋಗುತ್ತದೆ ಹಾಗೂ ಯಾರಾದರೂ ಆಗಿರಬಹುದು, ತಂದೆ-ತಾಯಿ , ಸ್ನೇಹಿತರು, ಗುರುಸಮಾನರು.. ಅವರನ್ನ ಗುರುತಿಸಿ ಗೌರವಿಸುವ ಸಂಸ್ಕಾರವಿರಬೇಕು ಅಷ್ಟೇ.

ಪ ದ ಬಂ ಧ



ಎಡದಿಂದ ಬಲಕ್ಕೆ

2. ಒಳ್ಳೆಯದಲ್ಲ, ಕೆಟ್ಟ ಹೆಸರು (4)
5. ಯುದ್ಧಭೂಮಿಗೆ ಮತ್ತೊಂದು ಹೆಸರು (4)
6. ಮತ್ತೊಂದು ಗೆಲುವು ಇದ್ದರೂ, ಇದು ಸೋಲು (4)
8. ತನ್ನ ಅಣ್ಣನ ಪಾದುಕೆಗಳನ್ನು ಇಟ್ಟುಕೊಂಡು ರಾಜ್ಯಭಾರ ಮಾಡಿದವನು (3)
10. ಸಂದಾಯವಾಗಬೇಕಾದ ಹಣ ಸಿಕ್ಕಿದಾಗ ನೀಡುವ ರಸೀತಿ (3)
12. ಅಸ್ತವ್ಯಸ್ತವಾಗಿ ಬಂದಿರುವ ಗೌರವಕ್ಕೆ ಅರ್ಹನಾದವನು (3)
14. ಶ್ರೀರಾಮನ ಜೊತೆಗೆ ವನವಾಸಕ್ಕೆ ಹೋದವನು (3)
17. ತಾಳ್ಮೆ ಅಥವಾ ಎಚ್ಚರಿಕೆ (4)
20. ಮೆಚ್ಚಿಗೆ ಸೂಚಿಸಲು ಶಿರವನ್ನು ಅಲ್ಲಾಡಿಸು (4)
21. ಅಗಲ ಬಾಯಿಯ ತಟ್ಟೆ ತಿರುಗಿ ಬಂದಿದೆ (4)

ಮೇಲಿನಿಂದ ಕೆಳಕ್ಕೆ

1. ಆಲಾಪವಲ್ಲ, ಅಳುವಿಕೆ (3)
2. ಈ ತಮ್ಮ ಇದ್ದಾನಲ್ಲ, 'ಅಜ'ನ ಮಧ್ಯೆಯೇ ಬಂದಿದ್ದಾನೆ (3)
3. ಕಡೆಗಣಿಸುವಿಕೆ ಎಂದರ್ಥ (4)
4. ಲೋಹದ ಹಾಳೆ ತೆಳುವಾಗಿದೆ (3)
7. ತಾವರೆಗೆ ಮತ್ತೊಂದು ಹೆಸರು (3)
8. ಪೋಷಿಸುವುದು, ಧರಿಸುವುದು ಎಂದರ್ಥ (3)
9. ಎರಡಕ್ಷರದ ಕತ್ತಲೆ (2)
11. ತಿಲಕವಿಟ್ಟಾಗ ಕಂಡಿತು ಎಳ್ಳು (2)
13. ಆತುರವಿಲ್ಲಿ ತಿರುಗಿ ಬಂದಿದೆ (3)
15. ಮತ್ತೊಬ್ಬರ ತಪ್ಪನ್ನು ಮನ್ನಿಸುವ ಗುಣ (4)
18. ಒಂದು ಬಗೆಯ ಚಿನ್ನದ ನಾಣ್ಯ (3)
19. ಜನರು ನೀಡಿದ ಕಾಣಿಕೆ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಸಮೋಸ 6. ವಿರಳ 7. ದತ್ತೂರ 8. ಪದರ 10. ವಾಯಸ 12. ಮಾನ 13. ಹಾವಳಿ 14. ಅಂಕ 15. ಕೆಲಸ 17. ಪಂಕಜ 20. ರಕಜ 21. ವಾಚಾಳಿ 22. ಗೆಳತಿ
ಮೇಲಿನಿಂದ ಕೆಳಕ್ಕೆ: 1. ಸತ್ಕಾರ 2. ಸವಿನಯ 3. ಬಳಪ 4. ಉದಕ 5. ವರಮಾನ 9. ದಬ್ಬಾಳಿಕೆ 10. ವಾದಕ 11. ಸಹಾಯಕ 12. ಮಾನಸ 14. ಅಂಗಾರಕ 16. ಲಟ್ಟಣಿಗೆ 17. ಪಂಜರ 18. ಜವಾನ 19. ಪದಾತಿ.

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಮಡಿವಾಳ ಹಕ್ಕಿ

-ಪ. ನಾ. ಹರೀಶ್ ಕುಮಾರ್. ಶಿರಾ

ಗಿಡಕಂಟಿಗಳ ಸಂದುಗಳಲ್ಲಿ ಕೂತು ಮಧುರವಾಗಿ ಹಾಡುತ್ತಿರುವ ಹಕ್ಕಿಯೇನಾದರೂ ನಿಮ್ಮ ಗಮನಕ್ಕೆ ಬಂದರೆ ಅದು ಮಡಿವಾಳ ಹಕ್ಕಿಯದ್ದೇ ಧ್ವನಿಯಾಗಿರುತ್ತದೆ. ಸುದೀರ್ಘ ಸಿಳ್ಳೆಯ ನಡುವೆ ಅಲ್ಲಲ್ಲಿ ಟ್ರಿಲ್ ಟ್ರಿಲ್ ಎಂಬ ಲಯವಿರುವುದು ಕೂಡಾ ಅದರ ಕೂಗಿನ ವಿಶೇಷ. ಕಪ್ಪು-ಬಿಳುಪು ಬಣ್ಣಗಳ

ಸಮಾಗಮದ ಈ ಹಕ್ಕಿಯು ಗಾತ್ರದಲ್ಲಿ ಗುಬ್ಬಚ್ಚಿಗಿಂತ ದೊಡ್ಡದಾಗಿದ್ದು, ಅದರ ತೂಕ ಸರಾಸರಿ 35 ಗ್ರಾಂ ಗಳಷ್ಟಿರುತ್ತದೆ.

ಭಾರತ, ಬಾಂಗ್ಲಾ, ಶ್ರೀಲಂಕಾ, ಬರ್ಮಾ, ಸಿಂಗಪುರ, ಫಿಲಿಫೈನ್ಸ್ ಹಾಗೂ ಪಾಕಿಸ್ತಾನದಲ್ಲಿ ಹೆಚ್ಚಾಗಿ ಕಂಡುಬರುವ ಮಡಿವಾಳ ಹಕ್ಕಿಯು ತಲೆಯಿಂದ ಬಾಲದವರೆಗೂ ಸುಮಾರು 17ರಿಂದ 20 ಸೆಂಟಿ ಮೀಟರ್‌ಗಳಷ್ಟು ಉದ್ದವಿದ್ದು, ಕಣ್ಣು ಹಾಗೂ ಕಾಲುಗಳು ಕಡು ಕಪ್ಪಾಗಿರುವುದನ್ನು ಕಾಣಬಹುದು. ಈ ಹಕ್ಕಿಯ ವಕ್ಷ, ಉದರ ಭಾಗ ಬಿಳಿ ಬಣ್ಣದಿಂದ ಕೂಡಿದ್ದು, ತಲೆ, ಕತ್ತು ಹಾಗೂ ಹಿಂಬದಿಗಳಲ್ಲಿ ಬಾಲದವರೆಗೂ ನೀಲಿ ಮಿಶ್ರಿತ ಕಪ್ಪುಬಣ್ಣ ಇರುತ್ತದೆ. ರೆಕ್ಕೆ ಮತ್ತು ಬಾಲದ ಅಂಚಿನಲ್ಲಿ ಆಕರ್ಷಕವಾಗಿ ಕಾಣುವಂತೆ ಬಿಳಿಬಣ್ಣವಿರುತ್ತದೆ. ಗಂಡು ಮಡಿವಾಳಗಳಿಗೆ ಬೆನ್ನು ಪೂರ್ತಿ ಕಪ್ಪಾಗಿದ್ದು, ಭುಜದ ಭಾಗದಲ್ಲಿ ಬಿಳಿಬಣ್ಣದ ಪಟ್ಟಿಯಿರುತ್ತದೆ. ಹೆಣ್ಣುಹಕ್ಕಿಗೆ ತಲೆಯಿಂದ ಎದೆಯವರೆಗೂ ಬೂದುಬಣ್ಣವಿರುವುದು ಮಾತ್ರ ವ್ಯತ್ಯಾಸವಾಗಿ ಕಾಣುತ್ತದೆ. ವಿವಿಧ ಪ್ರಬೇಧಗಳ ಮಡಿವಾಳಗಳ ಬಣ್ಣದಲ್ಲಿ ಮಾತ್ರ ವ್ಯತ್ಯಾಸವನ್ನು ಕಾಣಬಹುದಾಗಿದೆ.

ಪುಸ್ತಕ ಲೋಕ

ರಮ್ಯ ಪ್ರೀತಿ, ವಿಜ್ಞಾನ ಮತ್ತು ಪ್ರಕೃತಿ



ಇದು ಇತ್ತೀಚೆಗೆ ಪ್ರಕಟಗೊಂಡಿರುವ ಒಂದು ಅಪರೂಪದ ಪುಸ್ತಕ. ದಂತ ವೈದ್ಯ ಆಗಿರುವ ಮತ್ತು ಇಂಗ್ಲೆಂಡಿನಲ್ಲಿ ವಾಸವಾಗಿರುವ ಡಾ. ಬಿ. ಪ್ರೇಮಲತಾ ಇವರು ರಚಿಸಿರುವ ಈ ಪುಸ್ತಕವನ್ನು ಬೆಂಗಳೂರಿನ ನವ ಕರ್ನಾಟಕ ಪ್ರಕಟಿಸಿದೆ. 'ಪ್ರೀತಿ ಎನ್ನುವುದು ಸರಳವಲ್ಲ, ಅದಕ್ಕೊಂದು ಉದ್ದೇಶವಿದೆ, ಸಾಮಾಜಿಕ ಜವಾಬ್ದಾರಿ ಇದೆ. ನಿಜವಾದ ಪ್ರೀತಿ ಬದ್ಧತೆಯನ್ನು ಬೇಡುತ್ತದೆ. ಪರಸ್ಪರರನ್ನು ಅರ್ಥಮಾಡಿಕೊಳ್ಳುವುದು, ಹೊಂದಾಣಿಕೆ ಮಾಡಿಕೊಳ್ಳುವುದು, ತ್ಯಾಗಕ್ಕೆ ಸಿದ್ಧರಾಗಬೇಕಾದದ್ದು ಮತ್ತು ವಯಸ್ಸಾದಂತೆಲ್ಲ ಪ್ರೀತಿಯ ಹೊಸ ರೂಪಗಳನ್ನು ಕಂಡುಕೊಳ್ಳುತ್ತಾ ನಡೆಯಬೇಕಾದುದ್ದನ್ನು' ಈ ಪುಸ್ತಕದಲ್ಲಿ ಹಂತ ಹಂತವಾಗಿ ಹೇಳಲು ಲೇಖಕರು ಪ್ರಯತ್ನಿಸಿದ್ದಾರೆ.

ನಮ್ಮ ಜ್ಞಾಪಕ ಶಕ್ತಿಯನ್ನು ಹೆಚ್ಚಿಸುವ ಐದು ವಿಶಿಷ್ಟ ಗಿಡಮೂಲಿಕೆಗಳು

ಮೆದುಳಿನ ಆರೋಗ್ಯ ಮತ್ತು ಸ್ಮರಣೆಯನ್ನು ಹೆಚ್ಚಿಸಿಕೊಳ್ಳುವುದು ಅನೇಕರಿಗೆ ಜೀವನದ ಆದ್ಯತೆಗಳಲ್ಲೊಂದು. ವಿಶೇಷವಾಗಿ ನಮಗೆ ಇಂದಿನ ಜಗತ್ತಿನಲ್ಲಿ, ಅರಿವಿನ ಕಾರ್ಯಕ್ಷಮತೆ ಮುಖ್ಯವಾಗಿದೆ. ಅದರಲ್ಲೂ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ ಅತ್ಯವಶ್ಯಕ, ಏಕೆಂದರೆ ಅವರು ಪರೀಕ್ಷೆ ಬರೆದು ತಮ್ಮ ಜೀವನವನ್ನು ರೂಪಿಸಿಕೊಳ್ಳುವುದಿರುತ್ತದೆ. ನಾವು ಸೇವಿಸುವ ಆಹಾರಗಳೂ ಜ್ಞಾಪಕಶಕ್ತಿಯ ಮೇಲೆ ಮಹತ್ವದ ಪರಿಣಾಮ ಬೀರುತ್ತವೆ ಎನ್ನುತ್ತದೆ ಒಂದು ಅಧ್ಯಯನ. ಗಿಡಮೂಲಿಕೆಗಳನ್ನು ಅವುಗಳ ಔಷಧೀಯ ಗುಣಗಳಿಗಾಗಿ ಬಳಸುವ ಈ ನಮ್ಮ ಪ್ರಾಚೀನ ಅಭ್ಯಾಸವು

ಮೆದುಳಿನ ಕಾರ್ಯ ಮತ್ತು ಸ್ಮರಣೆಯನ್ನು ಹೆಚ್ಚಿಸಲು ನೈಸರ್ಗಿಕ ಪರಿಹಾರಗಳನ್ನು ನೀಡುತ್ತದೆ. ವೈಜ್ಞಾನಿಕ ಅಧ್ಯಯನಗಳಲ್ಲಿ ಭರವಸೆಯ ಫಲಿತಾಂಶಗಳನ್ನು ತೋರಿಸಿದ ಅಂತಹ 5 ಗಿಡಮೂಲಿಕೆಗಳ ಬಗ್ಗೆ ನಾವಿಲ್ಲಿ ತಿಳಿದುಕೊಳ್ಳೋಣ. ಸುಧಾರಿತ ಮಾನಸಿಕ ತೀಕ್ಷ್ಣತೆ ಮತ್ತು ಅರಿವಿನ ಯೋಗಕ್ಷೇಮಕ್ಕಾಗಿ ಈ ಗಿಡಮೂಲಿಕೆಗಳನ್ನು ನಮ್ಮ ದೈನಂದಿನ ಜೀವನದಲ್ಲಿ ಬಳಸಿ ನಿರೀಕ್ಷಿತ ಫಲಿತಾಂಶಗಳನ್ನು ಪಡೆಯಬಹುದಾಗಿದೆ.

ಬ್ರಾಹ್ಮಿ

ಬಕೋಪಾ ಮೊನ್ನಿಯೇರಿ ಎಂದೂ ಕರೆಯಲ್ಪಡುವ ಬ್ರಾಹ್ಮಿಯು ಆಯುರ್ವೇದ ಔಷಧದಲ್ಲಿ ಶತಮಾನಗಳಿಂದಲೂ ಶಕ್ತಿಯುತವಾದ ಮೆದುಳಿನ ಟಾನಿಕ್ ಎಂದೇ ಹೆಸರುವಾಸಿ. ಈ ಮೂಲಿಕೆಯು ಸ್ಮರಣೆ ಯನ್ನು ಹೆಚ್ಚಿಸಲು, ಆತಂಕವನ್ನು ಕಡಿಮೆ ಮಾಡಲು ಮತ್ತು ಒಟ್ಟಾರೆ ಅರಿವಿನ ಕಾರ್ಯವನ್ನು ಸುಧಾರಿಸಲು ಹೆಸರುವಾಸಿಯಾಗಿದೆ. 'ಜರ್ನಲ್ ಆಫ್ ಆಲ್ಟರ್ನೇಟಿವ್ ಅಂಡ್ ಕಾಂಪ್ಲಿಮೆಂಟರಿ ಮೆಡಿಸಿನ್'ನಲ್ಲಿ ಇದರ ಬಗ್ಗೆ ಪ್ರಕಟವಾದ ಅಧ್ಯಯನವು ನಿಯಮಿತವಾಗಿ ಬ್ರಾಹ್ಮಿಯನ್ನು ತೆಗೆದುಕೊಂಡು ಈ ಪ್ರಯೋಗದಲ್ಲಿ ಭಾಗವಹಿಸಿದವರು ಜ್ಞಾಪನೆಯ ಕಾರ್ಯಕ್ಷಮತೆ ಮತ್ತು ಅರಿವಿನ ಪ್ರಕ್ರಿಯೆಯಲ್ಲಿ ಗಮನಾರ್ಹ ಸುಧಾರಣೆಗಳನ್ನು ತೋರಿಸಿದ್ದಾರೆ. ಮೂಲಿಕೆಯು ಬಾಕೋಸೈಡ್ಸ್ ಎಂಬ ಸಂಯುಕ್ತಗಳನ್ನು ಹೊಂದಿದೆ, ಇದು ಹಾನಿಗೊಳಗಾದ ನರಕೋಶಗಳನ್ನು ಸರಿಪಡಿಸಲು ಮತ್ತು ನರಗಳ ಪ್ರಚೋದನೆಯ ಪ್ರಸರಣವನ್ನು ಸುಧಾರಿಸುತ್ತದೆ ಎಂದು ತಿಳಿಯಲಾಗಿದೆ.
ಬಳಸುವುದು ಹೇಗೆ?: ಬ್ರಾಹ್ಮಿಯನ್ನು ಕ್ಯಾಪ್ಸುಲ್‌ಗಳು, ಪುಡಿಗಳು ಅಥವಾ ಚಹಾದಂತಹ ವಿವಿಧ ರೂಪ ಗಳಲ್ಲಿ ಸೇವಿಸಬಹುದು. ಬ್ರಾಹ್ಮಿಯನ್ನು ದೈನಂದಿನ ದಿನಚರಿಯಲ್ಲಿ ಸೇರಿಸುವುದೂ ಉತ್ತಮ. ಉದಾಹರಣೆಗೆ ಅದನ್ನು ಸ್ಮೂಥಿಗಳಿಗೆ ಸೇರಿಸುವುದು ಅಥವಾ ಅದನ್ನು ಪೂರಕವಾಗಿ ಸೇವಿಸುವುದು, ಅದರ ಅರಿವಿನ ಪ್ರಯೋಜನಗಳನ್ನು ಪಡೆಯಲು ಸರಳವಾದ ಮಾರ್ಗವಾಗಿದೆ.

ಅಶ್ವಗಂಧ

ಅಶ್ವಗಂಧವು ಆಯುರ್ವೇದ ಔಷಧದ ಮತ್ತೊಂದು ರತ್ನವಾಗಿದ್ದು, ಅದರ ಅಡಾಪ್ಟೋಜೆನಿಕ್ ಗುಣಲಕ್ಷಣಗಳಿಗೆ ಹೆಸರುವಾಸಿಯಾಗಿದೆ. ದೇಹದ ಒತ್ತಡ ಮತ್ತು ಆತಂಕಗಳನ್ನು ನಿರ್ವಹಿಸಲು ಅದು ಸಹಾಯ ಮಾಡುತ್ತದೆ, ಜ್ಞಾನವೃದ್ಧ ಮತ್ತು ಸ್ಮರಣೆಯನ್ನು ಸುಧಾರಿಸುತ್ತದೆ.
ಬಳಸುವುದು ಹೇಗೆ?: ಅಶ್ವಗಂಧವನ್ನು ಪುಡಿ ರೂಪದಲ್ಲಿ ತೆಗೆದುಕೊಳ್ಳಬಹುದು. ಸಾಮಾನ್ಯವಾಗಿ ಹಾಲು ಅಥವಾ ಜೇನುತುಪ್ಪದೊಂದಿಗೆ ಬೆರೆಸಿ ಅಥವಾ ಕ್ಯಾಪ್ಸುಲ್ ಆಗಿಯೂ ಸಹ ಈಗ ಮಾರುಕಟ್ಟೆಯಲ್ಲಿ ಲಭ್ಯವಿದೆ. ನಿಯಮಿತ ಸೇವನೆಯು, ವಿಶೇಷವಾಗಿ ಸಂಜೆಯ ಹೊತ್ತಲ್ಲಿನ ಇದರ ಸೇವನೆ, ಮಾನಸಿಕ ಒತ್ತಡವನ್ನು ಕಡಿಮೆ ಮಾಡಿ ಮತ್ತು ಕಾಲಾನಂತರದಲ್ಲಿ ಮೆದುಳಿನ ಕಾರ್ಯವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.

ಅರಿಶಿಣ

ಇದು ಉರಿಯೂತದ ಗುಣಲಕ್ಷಣಗಳಿಗೆ ಹೆಸರುವಾಸಿಯಾಗಿದೆ. ಅದರ ಸಕ್ರಿಯ ಸಂಯುಕ್ತ ಕರ್ಕ್ಯುಮಿನ್‌ಗೆ ಹಲವು ಲಾಭಗಳನ್ನು ನಮ್ಮ ದೇಹಕ್ಕೆ ಕೊಡುತ್ತದೆ. ಈ ಗೋಲ್ಡನ್ ಮಸಾಲೆ ಮೆದುಳಿನ ಆರೋಗ್ಯವನ್ನು ಹೆಚ್ಚಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. 'ಅಮೆರಿಕನ್ ಜರ್ನಲ್ ಆಫ್ ಜೆರಿಯಾಟ್ರಿಕ್ ಸೈಕಿಯಾಟ್ರಿ'ನಲ್ಲಿ ಪ್ರಕಟವಾದ ಸಂಶೋಧನೆಯು ಕರ್ಕ್ಯುಮಿನ್ ಸೇವನೆಯು ಬುದ್ಧಿಮಾಂದ್ಯತೆಯಿಲ್ಲದ ವಯಸ್ಕರಲ್ಲಿ ಮೆಮೊರಿ ಮತ್ತು ಗಮನವನ್ನು ಸುಧಾರಿಸುತ್ತದೆ ಎಂದು ಸಾಬೀತಾಗಿದೆ. ಕರ್ಕ್ಯುಮಿನ್ ಉರಿಯೂತ ಮತ್ತು ಆಕ್ಸಿಡೇಟಿವ್ ಒತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.
ಬಳಸುವುದು ಹೇಗೆ?: ಅರಿಶಿಣವನ್ನು ಮೇಲೋಗರಗಳು, ಚಿನ್ನದ ಹಾಲು ಅಥವಾ ಅರಿಶಿಣ ಚಹಾದ ಮೂಲಕ ಆಹಾರದಲ್ಲಿ ಸುಲಭವಾಗಿ ಬಳಸಿಕೊಳ್ಳಬಹುದು. ಉತ್ತಮ ಹೀರಿಕೊಳ್ಳುವಿಕೆಗಾಗಿ, ಕರಿಮೆಣಸಿನೊಂದಿಗೆ ಅರಿಶಿಣವನ್ನು ಸೇವಿಸಲು ಸಲಹೆ ನೀಡಲಾಗುತ್ತದೆ, ಇದು ಪೈಪರಿನ್ ಅನ್ನು ಹೊಂದಿರುತ್ತದೆ, ಕರ್ಕ್ಯುಮಿನ್ ಹೀರಿಕೊಳ್ಳುವಿಕೆಯನ್ನು ಹೆಚ್ಚಿಸುತ್ತದೆ.

ತಿಳಿಯೋಣ

• ಎಲ್.ಪಿ.ಕುಲಕರ್ಣಿ

ಗೊಟು ಕೋಲಾ

ಗೊಟು ಕೋಲಾ (ಸೆಂಟೆಲ್ಲಾ ಏಷ್ಯಾಟಿಕಾ) ವನ್ನು ಸೆಂಟೆಲ್ಲಾ ಏಷ್ಯಾಟಿಕಾ ಎಂದೂ ಕರೆಯಲಾಗುತ್ತದೆ. ಇದು ಸಾಂಪ್ರದಾಯಿಕವಾಗಿ ಸ್ಮರಣಶಕ್ತಿ ಮತ್ತು ಅರಿವಿನ ಕಾರ್ಯವನ್ನು ಹೆಚ್ಚಿಸಲು ಬಳಸಲಾಗುವ ಮೂಲಿಕೆಯಾಗಿದೆ. ಇದು ನವನ ರಕ್ತ ಪರಿಚಲನೆ ಸುಧಾರಿಸಲು ಮತ್ತು ನರಮಂಡಲವನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. 'ಜರ್ನಲ್ ಆಫ್ ಎಥ್ನೋಫಾರ್ಮಾಕಾಲಜಿ'ಯಲ್ಲಿನ ಅಧ್ಯಯನವು ಗೊಟು ಕೋಲಾ ಪೂರಕವು ಜ್ಞಾಪನಾ ಕಾರ್ಯವನ್ನು ಸುಧಾರಿಸಿದೆ ಎಂದು ಕಂಡುಹಿಡಿದಿದೆ. ವಿಶೇಷವಾಗಿ ವಯಸ್ಸಾದವರಿಗೆ ಈ ಮೂಲಿಕೆಯ ಅವಶ್ಯಕತೆ ಇದೆ. ಮೂಲಿಕೆಯು ಟ್ರೈಟರ್ಪೆನಾಯ್ಡ್‌ಗಳನ್ನು ಇದು ಹೊಂದಿರುತ್ತದೆಯಲ್ಲದೆ, ಮಾನಸಿಕ ಸ್ಪಷ್ಟತೆ ಮತ್ತು ಏಕಾಗ್ರತೆಯನ್ನು ಹೆಚ್ಚಿಸುತ್ತದೆ.
ಬಳಸುವುದು ಹೇಗೆ?: ಗೋಟು ಕೋಲಾವನ್ನು ಚಹಾ ರೂಪದಲ್ಲಿ, ಕ್ಯಾಪ್ಸುಲ್ ರೂಪದಲ್ಲಿ ಅಥವಾ ಟಿಂಚರ್ ಆಗಿ ಸೇವಿಸಬಹುದು. ಗೋಟು ಕೋಲಾ ಎಲೆಗಳನ್ನು ಸಲಾಡ್‌ಗಳು ಅಥವಾ ಸೂಪ್‌ಗಳಿಗೆ ಸೇರಿಸುವುದು ಈ ಮೆದುಳು-ಉತ್ತೇಜಿಸುವ ಮೂಲಿಕೆಯನ್ನು ನಮ್ಮ ಆಹಾರದಲ್ಲಿ ಸೇರಿಸುವ ಇನ್ನೊಂದು ಮಾರ್ಗವಾಗಿದೆ.

ಗಿಂಕೊ ಬಿಲ್ಲೋಬ

ಗಿಂಕೊ ಬಿಲ್ಲೋಬ ಮೆದುಳಿಗೆ ರಕ್ತದ ಹರಿವನ್ನು ಹೆಚ್ಚಿಸುವ ಮೂಲಕ ಮೆಮೊರಿ ಮತ್ತು ಅರಿವಿನ ಕಾರ್ಯವನ್ನು ಸುಧಾರಿಸುವ ಕೆಲಸಮಾಡುತ್ತದೆ. ಇದನ್ನು ಸಾಂಪ್ರದಾಯಿಕ ಚೀನೀ ಔಷಧದಲ್ಲಿ ವ್ಯಾಪಕವಾಗಿ ಬಳಸಲಾಗುತ್ತದೆ ಮತ್ತು ಇದು ತನ್ನ ಔಷಧೀಯ ಗುಣಗಳಿಂದಾಗಿ ಪ್ರಪಂಚದಾದ್ಯಂತ ಜನಪ್ರಿಯತೆಯನ್ನು ಗಳಿಸಿದೆ. 'ಕೊಕ್ರೇನ್ ಡೇಟಾಬೇಸ್ ಆಫ್ ಸಿಸ್ಟಮ್ಯಾಟಿಕ್ ರಿವ್ಯೂಸ್'ನಲ್ಲಿ ಪ್ರಕಟವಾದ ಇದರ ಕುರಿತಾದ ವಿಮರ್ಶೆಯು ಗಿಂಕೊ ಬಿಲ್ಲೋಬ ಅರಿವಿನ ಕಾರ್ಯವನ್ನು ಸುಧಾರಿಸುವ ಮತ್ತು ವಯಸ್ಸಾದವರಲ್ಲಿ, ವಯಸ್ಕರಲ್ಲಿ ಕಂಡುಬರುವ ಅರಿವಿನ ಅವನತಿಯನ್ನು ರಕ್ಷಿಸುವ ಸಾಮರ್ಥ್ಯವನ್ನು ಹೊಂದಿದೆ. ಮೂಲಿಕೆಯ ಉತ್ಕರ್ಷಣ ನಿರೋಧಕ ಗುಣಲಕ್ಷಣಗಳು ಮೆದುಳಿನ ಕೋಶಗಳನ್ನು ಹಾನಿಯಾಗದಂತೆ ರಕ್ಷಿಸಲು ಸಹಾಯ ಮಾಡುತ್ತದೆ.
ಬಳಸುವುದು ಹೇಗೆ?: ಗಿಂಕೊ ಬಿಲ್ಲೋಬ ಸಾಮಾನ್ಯವಾಗಿ ಕ್ಯಾಪ್ಸುಲ್ ಅಥವಾ ಟ್ಯಾಬ್ಲೆಟ್ ರೂಪದಲ್ಲಿ ಮಾರುಕಟ್ಟೆಯಲ್ಲಿ ಲಭ್ಯವಿದೆ. ಇದನ್ನು ಚಹಾವಾಗಿಯೂ ಸೇವಿಸಬಹುದು. ಗಿಂಕ್ಗೊ ಬಿಲೋಬದ ನಿಯಮಿತ ಸೇವನೆಯು ಮೆದುಳಿನ ಆರೋಗ್ಯವನ್ನು ಬೆಂಬಲಿಸುತ್ತದೆ. ವಿಶೇಷವಾಗಿ ವಯಸ್ಸಾದವರಲ್ಲಿ.

ನೋಡಬನ್ನಿ ಸುತ್ತೂರು ಜಾತ್ರೆ ಸಂಭ್ರಮ

-ಬ್ಯಾ. ರಾ. ಪ್ರಸನ್ನಕುಮಾರ್ ಕೃಷ್ಣರಾಜನಗರ, ಮೈಸೂರು

ಸೋತ್ತೀಯೂರು, ಶ್ರೋತಿಯೂರು, ಪ್ರದಕ್ಷಿಣಾಪುರ ಎಂದು ಕರಯಲಾಗುತ್ತಿದ್ದ ಕಪಿಲಾನದಿ ತೀರದ ಶ್ರೀಕ್ಷೇತ್ರ ಸುತ್ತೂರು ಗಂಗ, ಚೋಳ, ಹೊಯ್ಸಳ ರಾಜಮನೆತನಗಳ ಆಡಳಿತ ಕೇಂದ್ರವಾಗಿತ್ತು. ಕಲ್ಯಾಣ ಕ್ರಾಂತಿಯ ನಂತರ ಅನೇಕ ಶರಣರು ಇಲ್ಲಿ ನೆಲೆಸಿದ್ದರೆಂಬುದನ್ನು ಶಾಸನಗಳು, ಕಾವ್ಯಗಳು ದೇಸೀಯ ಸಾಹಿತ್ಯ ಬರಹಗಳು ಸ್ಪಷ್ಟಪಡಿಸುತ್ತವೆ.

ಮೈಸೂರಿನ ಗೌರಿಶಂಕರ ಮಹಾಸ್ವಾಮಿಯ ಮಾರ್ಗದರ್ಶನದಲ್ಲಿ ಆರಂಭವಾದ ಜಾತ್ರೆಗೆ ಮೈಸೂರಿನ ರಾಮ ಮಂದಿರದಿಂದ ರಥವನ್ನು ತಂದು ಅರಮನೆಯಿಂದ ಬೆಳ್ಳಿ ರಥ ಬಿರುದು ಬಾವಲಿ ಖಿಲ್ಲತ್ತುಗಳನ್ನು ಕುದುರೆ ಸವಾರರನ್ನು ಕರೆತಂದು ಜಾತ್ರೋತ್ಸವನ್ನು ನಡೆಸಲಾಗುತ್ತಿತ್ತು. 1970ರಲ್ಲಿ ಶಿವಯೋಗಿಗಳ ಜಾತ್ರಾ ಉತ್ಸವಕ್ಕಾಗಿ ಕ್ಯಾತನಹಳ್ಳಿ ಶ್ರೀಶಿವಪ್ರಭು ಮಹಾಸ್ವಾಮಿಗಳವರ ಮುಂದಾಳತ್ವದಲ್ಲಿ ಮಹಾರಥ ನಿರ್ಮಾಣವಾಯಿತು.

ಇದೇ 28ರಂದು ಮಹಾ ರಥೋತ್ಸವ ನಡೆಯಲಿದ್ದು ಉತ್ಸವದಲ್ಲಿ ಜಾನ ಪದ ಪಾರಂಪರಿಕ ಕಲಾ ತಂಡಗಳು, ಮರಗಾಲು ಕುಣಿತ, ವೀರಗಾಸೆ, ಛತ್ರಿ ಚಾಮರಗಳು, ಕೊಂಬು-ಕಹಳೆ, ಭಾರೀ ಗಾತ್ರದ ನಡೆದಾಡುವ ಮಾನವ ಗೊಂಬೆಗಳು, ಕರಡಿ ಕುಣಿತ, ಡೊಳ್ಳು ಕುಣಿತ, ಪೂಜಾ ಕುಣಿತ ಸೋಮನ ಕುಣಿತ, ಕಂಸಾಳೆ, ತಮಟೆ ಕುಣಿತ, ಸಾಮಾ ಜಿಕ, ರಾಜಕೀಯ, ಧಾರ್ಮಿಕ ಆಧ್ಯಾತ್ಮಿಕ, ಶೈಕ್ಷಣಿಕ, ಆರೋಗ್ಯ ಸಮಕಾಲೀನ ವಿಷಯಗಳಿಗೆ ಸಂಬಂಧಿಸಿದಂತಹ ಸ್ತಬ್ಧಚಿತ್ರಗಳು ಮತ್ತು ಮಂಗಳವಾದ್ಯಗಳೊಂದಿಗೆ ರಥಯಾತ್ರೆ ಸಾಗುತ್ತಿದ್ದರೆ ಜನರು ಭಕ್ತಿಭಾವಪರಶವಾಗಿ ಮಂತ್ರಮುಗ್ಧರಾಗುತ್ತಾರೆ. ಜಾತ್ರೆಯಲ್ಲಿ ಹರಗುರು ಚರಮೂರ್ತಿಗಳು ಗಣ್ಯಾತಿಗಣ್ಯರ ಸಮ್ಮುಖದಲ್ಲಿ ಎಲ್ಲಾ ಜಾತಿ ಜನಾಂಗದ ನೂರಾರು ವಧುವರರು ಸಾಮೂಹಿಕ ವಿವಾಹದಲ್ಲಿ ಸತಿ-ಪತಿಗಳಾಗಿ ಹೊಸಬಾಳಿನ ಜೀವನ ವನ್ನು ಸಂಭ್ರಮಿಸುತ್ತಾರೆ. ಬಹುಮುಖ್ಯ ಆಕರ್ಷಣೆ ಯೆಂದರೆ ವಸ್ತು ಪ್ರದರ್ಶನ. ಶ್ರೀಮಠದ ಇತಿಹಾಸ, ಪರಂಪರೆ, ಜೆಎಸ್‌ಎಸ್ ಮಹಾವಿದ್ಯಾಪೀಠ ಬೆಳೆದು ಬಂದ ದಾರಿ, ದೇಶ ವಿದೇಶಗಳಿಂದ

ನಾಳೆಯಿಂದ ಇದೇ 31ನೇ ತಾರೀಕಿನ ವರೆಗೂ ಸುತ್ತೂರು ಜಾತ್ರೆಯ ಸಂಭ್ರಮ. ಈ ಹಿನ್ನೆಲೆಯಲ್ಲಿ ಜಾತ್ರಾ ವೈಶಿಷ್ಟ್ಯಗಳ ಬಗ್ಗೆ ಬೆಳಕು ಚೆಲ್ಲುವ ಸಕಾಲಿಕ ಲೇಖನವಿದು.

ಆಗಮಿಸುವ ಸಂತರು, ಮಹಾಮಹಿರು, ಸುತ್ತೂರು ಶ್ರೀಮಠದ ಮೈಲಿ ಗಲ್ಲುಗಳು ಇವೇ ಮೊದಲಾದ ಚಿತ್ರ ಪ್ರದರ್ಶನವಿರುತ್ತದೆ. ಭಕ್ತರ ಪಾಲಿನ ಅಭಿನವ ಬಸವಣ್ಣ ನಾಡಿನ ನಡೆದಾಡುವ ದೇವರು, ಸಮಾಜಮುಖಿ ಕಾಯಕ ಪ್ರೇಮಿ, ಪರಮ ಪೂಜ್ಯ ಜಗದ್ಗುರು ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮಿ ಗಳವರ ದಿವ್ಯ ಸಾನಿಧ್ಯ ಮತ್ತು ಕೃಪಾಶೀರ್ವಾದದ ಮಾರ್ಗದರ್ಶನದಲ್ಲಿ ಸುತ್ತೂರು ಜಾತ್ರೆಯಲ್ಲಿ ಹತ್ತು ಲಕ್ಷಕ್ಕೂ ಮೀರಿ ಭಕ್ತರು ಪಾಲ್ಗೊಳ್ಳುತ್ತಾರೆ. ಆರು ದಿನಗಳ ಕಾಲ ನಡೆಯುವ ಜಾತ್ರೆಯಲ್ಲಿ ಭಕ್ತ ಜನರು ಉಳಿದು ಕೊಳ್ಳಲು ವಸತಿ, ಎಲ್ಲ ಕಾಲದಲ್ಲೂ ಪ್ರಸಾದ, ಸಾರಿಗೆ ಮತ್ತು ಆರೋಗ್ಯದ ಮುನ್ನೆಚ್ಚರಿಕೆಗಾಗಿ ವೈದ್ಯಕೀಯ ವ್ಯವಸ್ಥೆಯನ್ನು ರಕ್ಷಣಾ ವ್ಯವಸ್ಥೆಯನ್ನು ಬಹಳ ಯೋಜನಾಬದ್ಧ, ಶಿಸ್ತುಬದ್ಧವಾಗಿ ಪ್ರಜ್ಞಾಪೂರ್ವಕವಾಗಿ ರೂಪಿಸಲಾಗುತ್ತದೆ.

ಸಮಾಚಾರ ಸಣ್ಣದಲ್ಲ

ಜಡೇಜಾ ಕಮಾಲ್: ಸೌರಾಷ್ಟ್ರಕ್ಕೆ ಗೆಲುವು

ರಾಜ್‌ಕೋಟ್: ಟೀಮ್ ಇಂಡಿಯಾದ ಅನುಭವಿ ಆಲ್‌ರೌಂಡರ್ ರವೀಂದ್ರ ಜಡೇಜಾ ಅವರ ಎರಡೂ ಇನ್ನಿಂಗ್ಸ್‌ನ ಒಟ್ಟು 12 ವಿಕೆಟ್ ಸಾಹಸದಿಂದ ದೆಹಲಿ ವಿರುದ್ಧದ ರಣಜಿ ಪಂದ್ಯದಲ್ಲಿ ಸೌರಾಷ್ಟ್ರ ತಂಡ ಹತ್ತು ವಿಕೆಟ್ ಅಂತರದ ಭರ್ಜರಿ ಗೆಲುವು ಸಾಧಿಸಿದೆ.



ಗುರುವಾರ ಆರಂಭಗೊಂಡ ಈ ಪಂದ್ಯ ಕೇವಲ ಒಂದೂವರೆ ದಿನದಲ್ಲಿಯೇ, ಶುಕ್ರವಾರ ಮಧ್ಯಾಹ್ನ ಮುಕ್ತಾಯ ಕಂಡಿತು. ಬ್ಯಾಟಿಂಗ್ ಪುನರಾಗಮನ ನಿರೀಕ್ಷೆಯಲ್ಲಿದ್ದ ರಿಷಭ್ ಪಂತ್ ಎರಡೂ ಇನಿಂಗ್ಸ್‌ನಲ್ಲಿ ವಿಫಲರಾದರು. ಮೊದಲ ಇನಿಂಗ್ಸ್‌ನಲ್ಲಿ ದೆಹಲಿ 188 ರನ್‌ಗೆ ಆಲೌಟ್ ಆಗಿತ್ತು. ಈ ಮೊತ್ತವನ್ನು ಬೆನ್ನಟ್ಟಿದ ಸೌರಾಷ್ಟ್ರ 271 ರನ್ ಬಾರಿಸಿ 83 ರನ್ ಇನಿಂಗ್ಸ್ ಮುನ್ನಡೆ ಗಳಿಸಿತು. ಬಳಿಕ ದ್ವಿತೀಯ ಇನಿಂಗ್ಸ್ ಆರಂಭಿಸಿದ ದೆಹಲಿ ಕೇವಲ 94 ರನ್‌ಗೆ ಆಲೌಟ್ ಆಯಿತು. ಗೆಲುವಿಗೆ 11 ರನ್ ಗುರಿ ಪಡೆದ ಸೌರಾಷ್ಟ್ರ ವಿಕೆಟ್ ನಷ್ಟವಿಲ್ಲದೆ 15 ರನ್ ಬಾರಿಸಿ 10 ವಿಕೆಟ್ ಗೆಲುವು ಸಾಧಿಸಿತು.

ಐಸಿಸಿ ಬೆಸ್ಟ್ ಟೆಸ್ಟ್ ತಂಡ: ಮೂವರು ಭಾರತೀಯರು

ದೆಹಲಿ: 2024ರ ಕ್ಯಾಲೆಂಡರ್ ವರ್ಷದಲ್ಲಿ ಟೆಸ್ಟ್ ಕ್ರಿಕೆಟ್‌ನಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಟಾಪ್ 11 ಆಟಗಾರರನ್ನು ಹೊಂದಿರುವ ಅತ್ಯುತ್ತಮ ತಂಡವನ್ನು ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಶುಕ್ರವಾರ ಪ್ರಕಟಿಸಿದೆ. ಮೂವರು

ಆಟಗಾರರು ಟೆಸ್ಟ್ ತಂಡದಲ್ಲಿ ಸ್ಥಾನ ಪಡೆದರು. ಟೀಂ ಇಂಡಿಯಾದ ಯುವ ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ ಜೊತೆಗೆ ಆಲ್ ರೌಂಡರ್ ರವೀಂದ್ರ ಜಡೇಜಾ ಮತ್ತು ಸ್ಟಾರ್ ವೇಗಿ ಜಸ್ಪ್ರೀತ್ ಬುಮ್ರಾ ಅವರು 2024ರ ಐಸಿಸಿ ವರ್ಷದ ಟೆಸ್ಟ್ ತಂಡಕ್ಕೆ ಆಯ್ಕೆಯಾಗಿದ್ದಾರೆ. ಯಶಸ್ವಿ ಜೈಸ್ವಾಲ್ ಕಳೆದ ವರ್ಷದ ಟೆಸ್ಟ್‌ನಲ್ಲಿ ಅಸಾಧಾರಣ ಪ್ರದರ್ಶನ ನೀಡಿದ್ದರು. 54.74ರ ಸರಾಸರಿಯಲ್ಲಿ 1474 ರನ್ ಗಳಿಸಿ ಭಾರತದ ಪರ ಅಗ್ರ ಸ್ಕೋರರ್ ಹಾಗೂ ಒಟ್ಟಾರೆ 2ನೇ ಗರಿಷ್ಠ ಸ್ಕೋರರ್ ಎನಿಸಿಕೊಂಡರು. 36 ಸಿಕ್ಸರ್‌ಗಳನ್ನು ಬಾರಿಸುವ ಮೂಲಕ ಒಂದೇ ಕ್ಯಾಲೆಂಡರ್ ವರ್ಷದಲ್ಲಿ ಟೆಸ್ಟ್‌ನಲ್ಲಿ ಅತಿ ಹೆಚ್ಚು ಸಿಕ್ಸರ್‌ಗಳನ್ನು ಬಾರಿಸಿದ ಬ್ಯಾಟ್ಸ್‌ಮನ್ ಎಂಬ ಹೊಸ ಇತಿಹಾಸ ನಿರ್ಮಿಸಿದರು. ಈ ಕ್ರಮದಲ್ಲಿ ಐಸಿಸಿ ಅತ್ಯುತ್ತಮ ತಂಡದಲ್ಲಿ ಯಶಸ್ವಿ ಜೈಸ್ವಾಲ್ ಅವರನ್ನು ಆರಂಭಿಕರಾಗಿ ಆಯ್ಕೆ ಮಾಡಿದೆ.

ಸ್ಮರಣ್ ದ್ವಿಶತಕದಾಟ ಕರ್ನಾಟಕ ಬಿಗಿಹಿಡಿತ

ಪಂಜಾಬ್ ವಿರುದ್ಧದ ರಣಜಿ ಪಂದ್ಯ | ರಾಜ್ಯಕ್ಕೆ 420 ರನ್ ಇನ್ನಿಂಗ್ಸ್ ಮುನ್ನಡೆ

ಬೆಂಗಳೂರು: ಉತ್ತಮ ಫಾರ್ಮ್‌ನಲ್ಲಿರುವ ಕರ್ನಾಟಕ ತಂಡದ ಯುವ ಬ್ಯಾಟ್ಸ್‌ಮನ್ ಸ್ಮರಣ್ ರವಿಚಂದ್ರನ್ ಅವರ ಸ್ಫೋಟಕ ದ್ವಿಶತಕದ ನೆರವಿನಿಂದ ಪಂಜಾಬ್ ವಿರುದ್ಧ ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಪಂದ್ಯಾವಳಿಯ ಪ್ರಥಮ ಇನ್ನಿಂಗ್ಸ್‌ನಲ್ಲಿ ಒಟ್ಟು 475 ರನ್‌ಗಳ ಬೃಹತ್ ಮೊತ್ತವನ್ನು ಪೇರಿಸಿ, 420 ರನ್‌ಗಳ ಇನ್ನಿಂಗ್ಸ್ ಮುನ್ನಡೆಯನ್ನು ಪಡೆಯುವಲ್ಲಿ ಯಶಸ್ವಿಯಾಯಿತು.

ಎರಡನೇ ದಿನ ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟ್ ಮಾಡಿದ ಸ್ಮರಣ್ ರವಿಚಂದ್ರನ್, ತಮ್ಮ ಕೌಶಲಭರಿತ ಆಟವನ್ನು ಆಡಿದರು. ಆದರೆ ಮಯಾಂಕ್ ಅಗರ್ವಾಲ್, ಅನೀಶ್, ದೇವದತ್ ಪಡಿಕ್ಕಲ್, ಕೃಷ್ಣನ್ ಶ್ರೀಜಿತ್ ಹಾಗೂ ಅಭಿನವ್ ಮನೋಹರ್ ಮುಂತಾದ ಅನುಭವಿ ಬ್ಯಾಟರ್‌ಗಳು ತಮಗೆ ಸಿಕ್ಕ ಅವಕಾಶ ಬಳಸಲು ವಿಫಲರಾದರು.

ಆದರೆ ಒಂದು ತುದಿಯಲ್ಲಿ ಗಟ್ಟಿಯಾಗಿ ನಿಂತು ಬ್ಯಾಟ್ ಮಾಡಿದ ಎಸ್.ರವಿಚಂದ್ರನ್, ಪಂಜಾಬ್ ಬೌಲಿಂಗ್ ದಾಳಿಯನ್ನು ಸಮರ್ಥವಾಗಿ ಮೆಟ್ಟಿ ನಿಂತರು. ಒಟ್ಟು 277 ಎಸೆತಗಳನ್ನು ಎದುರಿಸಿದ ಅವರು, 3 ಸಿಕ್ಸರ್ ಹಾಗೂ 25 ಬೌಂಡರಿಗಳೊಂದಿಗೆ 203 ರನ್‌ಗಳನ್ನು ಬಾರಿಸಿದರು. ಆ ಮೂಲಕ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಚೊಚ್ಚಲ ದ್ವಿಶತಕವನ್ನು ಪೂರ್ಣಗೊಳಿಸಿದ್ದಾರೆ.

ಕರ್ನಾಟಕಕ್ಕೆ ಬೃಹತ್ ಮುನ್ನಡೆ: ಪಂಜಾಬ್ ತಂಡವನ್ನು ಪ್ರಥಮ ಇನಿಂಗ್ಸ್‌ನಲ್ಲಿ 55 ರನ್‌ಗಳಿಗೆ ಆಲ್‌ಔಟ್ ಮಾಡಿದ ಬಳಿಕ, ಪ್ರಥಮ ಇನಿಂಗ್ಸ್ ಆರಂಭಿಸಿದ ಕರ್ನಾಟಕ ತಂಡಕ್ಕೆ ಸ್ಮರಣ್ ರವಿಚಂದ್ರನ್ (203 ರನ್) ಹೊರತುಪಡಿಸಿ ಯಾರೂ ಕೂಡಾ ಅರ್ಧ ಶತಕದ ಗಡಿ ದಾಟಲೂ ವಿಫಲರಾದರು. ಆರಂಭಿಕ ಆಟಗಾರ ಕೆ.ವಿ. ಅವಿನಾಶ್ 33 ರನ್ ಗಳಿಸಿದರೆ, ಮಯಾಂಕ್ ಅಗರ್ವಾಲ್ 20 ರನ್ ಗಳಿಸಿ ಸನ್ವಿರ್ ಸಿಂಗ್ ಬೌಲಿಂಗ್‌ನಲ್ಲಿ ತಮ್ಮ ವಿಕೆಟ್ ಒಪ್ಪಿಸಿದರು. ದೇವದತ್ ಪಡಿಕ್ಕಲ್ 45 ಎಸೆತಗಳಲ್ಲಿ 27 ರನ್ ಗಳಿಸಿ ಗುರ್ನೂರ್ ಬ್ರಾರ್‌ಗೆ ತಮ್ಮ ವಿಕೆಟ್ ಒಪ್ಪಿಸಿದರು. ವಿಕೆಟ್ ಕೀಪರ್ ಕೆ.ಎಲ್. ಶ್ರೀಜಿತ್ 65 ಎಸೆತಗಳಲ್ಲಿ 26 ರನ್ ಸಂಪಾದಿಸಿ ತಮ್ಮ ವಿಕೆಟ್ ಒಪ್ಪಿಸಿದರು.

ತ್ರಿವಳಿ ಶತಕ ಸಂಭ್ರಮ

ಪಂಜಾಬ್ ವಿರುದ್ಧ ದ್ವಿಶತಕ ಸಿಡಿಸಿದ ಕರ್ನಾಟಕ ಸ್ಮರಣ್ ರವಿಚಂದ್ರನ್ ಅವರು ಇತ್ತೀಚೆಗಷ್ಟೇ ಬೆಳಕಿಗೆ ಬಂದಿರುವ ಪ್ರತಿಭೆ. ಇಲ್ಲಿಯವರೆಗೂ 9 ಲಿಸ್ಟ್ ಎ ಪಂದ್ಯಗಳು ಹಾಗೂ 7 ಟಿ20 ಪಂದ್ಯಗಳನ್ನು ಅವರು ಆಡಿದ್ದಾರೆ. 600ಕ್ಕೂ ಅಧಿಕ ರನ್‌ಗಳನ್ನು ಪೂರ್ಣಗೊಳಿಸಿರುವ ಅವರು, ಮೂರು ಶತಕಗಳನ್ನು ಸಿಡಿಸಿದ್ದಾರೆ. ವಿದರ್ಭ ವಿರುದ್ಧ ವಿಜಯ್ ಹಝಾರೆ ಟ್ರೋಫಿ ಫೈನಲ್ ಪಂದ್ಯದಲ್ಲಿಯೂ ಶತಕ ಸಿಡಿಸಿದ ಎಸ್. ರವಿಚಂದ್ರನ್ ಕರ್ನಾಟಕ ತಂಡ ಚಾಂಪಿಯನ್ ಆಗಲು ನೆರವು ನೀಡಿದ್ದರು. ಅದಕ್ಕೂ ಮುನ್ನ ಸಿ.ಕೆ ನಾಯ್ಡು ಟ್ರೋಫಿ ಟೂರ್ನಿಯಲ್ಲಿ ಮಿಂಚಿದ್ದರು. 829 ರನ್‌ಗಳನ್ನು ಕಲೆ ಹಾಕಿ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದರು.

ಭರವಸೆಯ ಆಟಗಾರ ಎ. ಮನೋಹರ್ 34 ರನ್ ಗಳಿಸಿ ಔಟ್ ಆದರೆ, ಎಸ್. ಗೋಪಾಲ್ 31 ರನ್, ಪಿ. ಕೃಷ್ಣ 26 ಬಾಲ್‌ಗಳಲ್ಲಿ 30 ರನ್ ಗಳಿಸಿ ಪೆವಿಲಿಯನ್ ಸೇರಿದರು. ಪಂಜಾಬ್ ಪರ ಜೆ. ಸಿಂಗ್ ಮತ್ತು ಎಂ. ಮಾರ್ಕಂಡೆ ತಲಾ 3 ವಿಕೆಟ್ ಪಡೆದರು.

ದಿನದ ಅಂತ್ಯಕ್ಕೆ ಪಂಜಾಬ್ ದ್ವಿತೀಯ ಇನ್ನಿಂಗ್‌ನಲ್ಲಿ 2 ವಿಕೆಟ್ ನಷ್ಟಕ್ಕೆ 24 ರನ್ ಗಳಿಸಿ ಸಂಕಷ್ಟದಲ್ಲಿ ಸಿಲುಕಿದೆ.

ಫೈನಲ್ ಪ್ರವೇಶಿಸಿದ ಅಲೆಕ್ಸಾಂಡರ್ ಜ್ವೆರೇವ್

ಮೆಲ್ಬರ್ನ್: ಎಡಗಾಲಿನ ಗಾಯದ ಸಮಸ್ಯೆಯಿಂದ ನೊವಾಕ್ ಜೋಕೊವಿಕ್ ಅವರು ಆಸ್ಟ್ರೇಲಿಯನ್ ಓಪನ್ ಸೆಮಿಫೈನಲ್ ಪಂದ್ಯದಿಂದ ಹಿಂದೆ ಸರಿದಿದ್ದಾರೆ, ಹೀಗಾಗಿ ಅವರ 25ನೇ ಗ್ರಾಂಡ್ ಸ್ಲಾಂ ಕಿರೀಟದ ಹೋರಾಟ ಕೊನೆಗೊಂಡಿದೆ.

ಶುಕ್ರವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಜರ್ಮನಿಯ ಅಲೆಕ್ಸಾಂಡರ್ ಜ್ವೆರೇವ್ ವಿರುದ್ಧ ಆಡಲು ಇಳಿದ ಜೋಕೊ ಮೊದಲ ಸೆಟ್‌ನಲ್ಲಿ ತೀವ್ರ ಹೋರಾಟ ನಡೆಸಿ ಸೋಲು ಕಂಡರು. ದ್ವಿತೀಯ ಸೆಟ್ ಆರಂಭಕ್ಕೂ ಮುನ್ನ ಎದುರಾಳಿಗೆ ಕೈ ಕುಲುಕಿ ಪಂದ್ಯದಿಂದ ಹಿಂದೆ ಸರಿದರು, ಹೀಗಾಗಿ ಜ್ವೆರೇವ್ ವಾಕ್ ಓವರ್ ಮೂಲಕ ಫೈನಲ್ ಪ್ರವೇಶಿಸಿದರು.

ಕ್ವಾರ್ಟರ್ ಫೈನಲ್ ಪಂದ್ಯದ ವೇಳೆಯೇ ಜೋಕೊ ಗಾಯಕ್ಕೆ ತುತ್ತಾಗಿದ್ದರು. ಆದರೂ ಕೂಡ ಹೋರಾಟ ನಡೆಸಿ ಮೂರನೇ ಶ್ರೇಯಾಂಕದ ಕಾರ್ಲೋಸ್ ಅಲ್ಕರಾಜ್ ಅವರನ್ನು ಮಣಿಸಿ ಸೆಮಿ ಫೈನಲ್ ಪ್ರವೇಶಿಸಿದ್ದರು.

ಗುರುವಾರ ನಡೆದಿದ್ದ ಮಹಿಳಾ ಸಿಂಗಲ್ಸ್ ಸೆಮಿಫೈನಲ್ ಪಂದ್ಯದಲ್ಲಿ ವಿಶ್ವದ ನಂಬರ್ ಒನ್ ಆಟಗಾರ್ತಿ, ಹಾಲಿ ಚಾಂಪಿಯನ್ ಅರಿನಾ ಸಬಲೆಂಕಾ ಮತ್ತು ಅಮೆರಿಕದ ಮ್ಯಾಡಿಸನ್ ಕೀಯ್ಸ್ ಗೆಲುವು ಸಾಧಿಸಿ ಫೈನಲ್ ಪ್ರವೇಶಿಸಿದ್ದರು. ಐದು ಗ್ರಾಂಡ್ ಸ್ಲಾಂ ಒಡತಿ ಐಗಾ ಸ್ವಿಯಾಟೆಕ್ ವಿರುದ್ಧ 7-5, 1-6, 6-7(8-10) ಸೂಪರ್ ಟೈ ಬ್ರೇಕರ್‌ನಲ್ಲಿ ಕೀಯ್ಸ್ ರೋಚಕ ಗೆಲುವು ಸಾಧಿಸಿದರು, ಕೀಯ್ಸ್‌ಗೆ ಇದು 2ನೇ ಗ್ರಾಂಡ್ ಸ್ಲಾಂ ಫೈನಲ್ ಪಂದ್ಯವಾಗಿತ್ತು.

ವಿಶ್ವಕಪ್ ಖೋ ಖೋ ತಂಡದ ಇಬ್ಬರಿಗೂ ತಲಾ ಐದು ಲಕ್ಷ ರು.

ರಾಜ್ಯ ಸರಕಾರದಿಂದ ಬಹುಮಾನ

ಬೆಂಗಳೂರು: ದೆಹಲಿಯಲ್ಲಿ ಇತ್ತೀಚೆಗೆ ನಡೆದ ಖೋ ಖೋ ವಿಶ್ವಕಪ್‌ನಲ್ಲಿ ವಿಜೇತರಾದ ಭಾರತ ತಂಡದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ರಾಜ್ಯದ ಆಟಗಾರರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೌರವಿಸಿ, ತಲಾ 5 ಲಕ್ಷ ರು. ಬಹುಮಾನ ಘೋಷಣೆ ಮಾಡಿದರು.

ಇತ್ತೀಚೆಗೆ ನಡೆದ 2025ರ ಪುರುಷರ ಹಾಗೂ ಮಹಿಳಾ ಖೋ ಖೋ ವಿಶ್ವಕಪ್‌ನಲ್ಲಿ ಅತ್ಯುತ್ತಮ ಪ್ರದರ್ಶನ ತೋರಿ ಭಾರತ ತಂಡ ಕಪ್ ಗೆದ್ದಿತ್ತು. ಭಾರತ ತಂಡದಲ್ಲಿ ಉತ್ತಮ ಪ್ರದರ್ಶನ ನೀಡಿದ ರಾಜ್ಯದ ಇಬ್ಬರು ಆಟಗಾರರನ್ನು ತಮ್ಮ ಕಚೇರಿಗೆ ಕರೆಸಿಕೊಂಡು ಸನ್ಮಾನ ಮಾಡಿ ಗೌರವಿಸಿ, ಕ್ರೀಡಾ ಸ್ಫೂರ್ತಿಗೆ ಮೆಚ್ಚಿ ಖೋ ಖೋ ಆಟದಲ್ಲಿ ಮತ್ತಷ್ಟು ಸಾಧನೆ ಮಾಡುವಂತೆ ಪ್ರೋತ್ಸಾಹಿಸಿದ್ದಾರೆ.

ಭಾರತ ವಿಶ್ವ ಚಾಂಪಿಯನ್ ಆಗಲು ಅತ್ಯುತ್ತಮ ಪ್ರದರ್ಶನ ನೀಡಿದ ಪುರುಷರ ತಂಡದ ಆಟಗಾರ ಮಂಡ್ಯ ಜಿಲ್ಲೆಯ ಡಿ. ಮಲ್ಲಿಗೆರೆ ಗ್ರಾಮದ ಎಂ.ಕೆ ಗೌತಮ್ ಹಾಗೂ ಮೈಸೂರು ಜಿಲ್ಲೆ ಟಿ. ನರಸೀಪುರ ತಾಲೂಕಿನ ಕುರುಬೂರಿನ ಚೈತ್ರಾ, ಇಬ್ಬರನ್ನೂ ವಿಧಾನಸೌಧದ ತಮ್ಮ ಕಚೇರಿಯಲ್ಲಿ ಸನ್ಮಾನಿಸಿದ ಸಿಎಂ ಸಿದ್ದರಾಮಯ್ಯ, ಗೌರವಿಸಿ, ಬಹುಮಾನ ಘೋಷಣೆ ಮಾಡಿದ್ದಾರೆ. ಮುಖ್ಯಮಂತ್ರಿ ನಿಧಿ ಅಥವಾ ಕ್ರೀಡಾ ಇಲಾಖೆಯ ನಿಧಿಯಿಂದ ಅವರ ಖಾತೆಗೆ ಹಣ ವರ್ಗಾವಣೆ ಆಗಲಿದೆ. ಕ್ರೀಡಾಪಟುಗಳಿಗೆ ಸನ್ಮಾನಿಸಿದ ವೇಳೆ ಕೃಷಿ ಇಲಾಖೆ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್. ಚಲುವರಾಯಸ್ವಾಮಿ ಮತ್ತು ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಹಾಜರಿದ್ದರು.

ಭಾರತ-ಇಂಗ್ಲೆಂಡ್ ಟಿ20 | ಸ್ಪಿನ್ನರ್‌ಗಳಿಗೆ ಪಿಚ್ ವರವಾಗುವ ಸಾಧ್ಯತೆ

ಚೆನ್ನೈನಲ್ಲಿ ಇಂದು 2ನೇ ಪಂದ್ಯ

ಚೆನ್ನೈ: ಇಂಗ್ಲೆಂಡ್ ವಿರುದ್ಧ ಕೋಲ್ಕತ್ತಾದಲ್ಲಿ ನಡೆದ ಮೊದಲ ಟಿ20 ಪಂದ್ಯದಲ್ಲಿ 7 ವಿಕೆಟ್‌ಗಳಿಂದ ಜಯಿಸಿರುವ ಭಾರತ ತಂಡ, ಇದೀಗ ದ್ವಿತೀಯ ಪಂದ್ಯವನ್ನಾಡಲು ಸಜ್ಜಾಗಿದೆ. ಈ ಪಂದ್ಯ ಇಲ್ಲಿನ ಎಂ.ಎ. ಚಿದಂಬರಂ ಸ್ಟೇಡಿಯಂನಲ್ಲಿ ಶನಿವಾರ ನಡೆಯಲಿದೆ.

ಚೆನ್ನೈನ ಚೆಪಾಲ್ ಟ್ರ್ಯಾಕ್ ಸ್ಪಿನ್ ಟ್ರ್ಯಾಕ್ ಆಗಿದೆ. ಹೀಗಾಗಿ ಉಭಯ ತಂಡಗಳು ಸ್ಪಿನ್ ಬೌಲಿಂಗ್‌ಗೆ ಹೆಚ್ಚಿನ ಮಹತ್ವ ನೀಡಬಹುದು. ಸ್ಪಿನ್ ಟ್ರ್ಯಾಕ್ ಆದರೂ ಕೂಡ ಐಪಿಎಲ್‌ನಲ್ಲಿ ದೊಡ್ಡ ಮೊತ್ತ ಇಲ್ಲಿ ದಾಖಲಾಗಿದೆ. ಹೀಗಾಗಿ ಬ್ಯಾಟಿಂಗ್‌ಗೂ ಈ ಪಿಚ್ ಕೊಂಚ ನೆರವು ನೀಡಲಿದೆ ಎಂದೂ ಹೇಳಲಾಗುತ್ತಿದೆ. ಸ್ಪಿನ್ ಪಿಚ್ ಆದ ಕಾರಣ ಭಾರತ ತಂಡ ಈ ಪಂದ್ಯಕ್ಕೆ ವಾಷಿಂಗ್ಟನ್ ಸುಂದರ್ ಅವರನ್ನು ಕಣಕ್ಕಿಳಿಸುವ ಸಾಧ್ಯತೆ ಇದೆ.

ಸುಂದರ್ ಚೆನ್ನೈಯವರೇ ಆಗಿರುವ ಕಾರಣ ಈ ಪಿಚ್‌ನಲ್ಲಿ ಅವರಿಗೆ ಹೆಚ್ಚಿನ ಹಿಡಿತವಿದೆ. ಅವರು ಆಡುವ ಬಳಗಕ್ಕೆ ಆಯ್ಕೆಯಾದರೆ ನಿತೀಶ್ ರೆಡ್ಡಿ ಜಾಗ ಬಿಡಬೇಕಾಗಬಹುದು. ಶಮಿ ಈ ಪಂದ್ಯದಲ್ಲಿಯೂ ಆಡುವುದು ಅನುಮಾನ ಎನ್ನಲಾಗಿದೆ. ಇಂಗ್ಲೆಂಡ್ ಕೂಡ ಆದೀಲ್ ರಶೀದ್‌ಗೆ ಜತೆಯಾಗಿ ಮತ್ತೋರ್ವ ಸ್ಪಿನ್ನರ್ ರೆಹಾನ್ ಅಹ್ಮದ್ ಆಡಬಹುದು, ಆಗ ಇಂಗ್ಲೆಂಡ್ ತಂಡದಿಂದ ಒಬ್ಬ ವೇಗಿ ಹೊರಗುಳಿಯಬೇಕಾಗುತ್ತದೆ.

ಸಂಭಾವ್ಯ ತಂಡ

ಭಾರತ: ಸೂರ್ಯಕುಮಾರ್ ಯಾದವ್ (ನಾಯಕ) ಅಭಿಷೇಕ್ ಶರ್ಮಾ, ಸಂಜು ಸ್ಯಾಮ್ಸನ್ (ಕೀಪರ್) ತಿಲಕ್ ವರ್ಮಾ, ಹಾರ್ದಿಕ್ ಪಾಂಡ್ಯ, ರಿಂಕು ಸಿಂಗ್, ವಾಷಿಂಗ್ಟನ್ ಸುಂದರ್, ಅಕ್ಷರ್ ಪಟೇಲ್, ಅರ್ಶ್‌ದೀಪ್ ಸಿಂಗ್, ರವಿ ಬಿಷ್ಣೋಯಿ, ವರುಣ್ ಚಕ್ರವರ್ತಿ.

ಇಂಗ್ಲೆಂಡ್: ಜೋಸ್ ಬಟ್ಲರ್ (ನಾಯಕ), ಫಿಲ್ ಸಾಲ್ಟ್ (ಕೀಪರ್), ಬೆನ್ ಡಕೆಟ್, ಹ್ಯಾರಿ ಬ್ರೂಕ್, ಲಿಯಾಮ್ ಲಿವಿಂಗ್‌ಸ್ಟೋನ್, ಜಾಕೋಬ್ ಬೆಥೆಲ್, ಜೇಮಿ ಓವರ್ಟನ್, ರೆಹಾನ್ ಅಹ್ಮದ್, ಜೋಫ್ರಾ ಆರ್ಚರ್, ಆದಿಲ್ ರಶೀದ್, ಮಾರ್ಕ್‌ವುಡ್.

ಬಿಡದೆ ಕಾಡುವ ನಿಗೂಢತೆ

ಟ್ರೇಲರ್‌ನಲ್ಲಿಯೇ ಮೋಡಿ ಮಾಡಿದ್ದ ರುದ್ರ ಗರುಡ ಪುರಾಣ ಅದ್ದೂರಿಯಾಗಿ ತೆರೆಗೆ ಬಂದಿದೆ. ಸಸ್ಪೆನ್ಸ್, ಥ್ರಿಲ್ಲರ್ ಕಥನದ ಸಿನಿಮಾ ಪ್ರೇಕ್ಷಕರನ್ನು ಸೆಳೆದಿದೆ. ಆತ ರುದ್ರ, ಪ್ರಾಮಾಣಿಕ ಪೊಲೀಸ್ ಅಧಿಕಾರಿ. ಎಲ್ಲೇ ಅನ್ಯಾಯ ನಡೆದರೂ ಮುಲಾಜಿಲ್ಲದೆ ಮಟ್ಟ ಹಾಕುವ ಖಡಕ್ ಪೊಲೀಸ್ ಆಫೀಸರ್. ಹಿರಿಯ ಅಧಿಕಾರಿಗಳ ಆದೇಶದಂತೆ ರುದ್ರನನ್ನು ಮೈಸೂರಿಗೆ ವರ್ಗಾವಣೆ ಮಾಡಲಾಗುತ್ತದೆ. ಮೈಸೂರಿಗೆ ಬಂದ ರುದ್ರ ಖುಷಿಯಾಗಿಯೇ ಇರುತ್ತಾನೆ. ಇತ್ತ ಶಾಸಕನ ಮಗ ಇದ್ದಕ್ಕಿದ್ದಂತೆ ಕಾಣೆಯಾಗುತ್ತಾನೆ. ಅದರ ಹಿಂದೆ ನಿಗೂಢತೆ ಅಡಗಿರುತ್ತದೆ, ಎಷ್ಟೇ ಹುಡುಕಿದರೂ ಅದು ಕಗ್ಗಂಟಾಗಿಯೇ ಇರುತ್ತದೆ. ಇದನ್ನು ಭೇಧಿಸಲು ರುದ್ರನನ್ನು ನೇಮಿಸಲಾಗುತ್ತದೆ. ನಿಗೂಢತೆಯ ಬೆನ್ನು ಹತ್ತುವ ರುದ್ರನಿಗೆ ಹತ್ತು ಹಲವು ಸವಾಲುಗಳು ಎದುರಾಗುತ್ತವೆ. ಥ್ರಿಲ್ಲಿಂಗ್ ಹಾದಿಯಲ್ಲಿ ಬ್ಲಾಕ್ ಮ್ಯಾಜಿಕ್ ಕಥೆಯೂ ತೆರೆದುಕೊಳ್ಳುತ್ತದೆ. ಅಷ್ಟಕ್ಕೂ ರಾಜಕಾರಣಿಯ ಮಗನನ್ನು ಅಪಹರಿಸಿದ್ದು ಯಾರು, ಅದರ ಹಿಂದಿನ ರಹಸ್ಯ ಏನು, ಇದನ್ನು ರುದ್ರ ಹೇಗೆ ಭೇಧಿಸುತ್ತಾನೆ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು.

ಚಿತ್ರ : ರುದ್ರ ಗರುಡ ಪುರಾಣ
ನಿರ್ದೇಶಕ :ಕೆ.ಎಸ್.ನಂದೀಶ್
ನಿರ್ಮಾಪಕ : ಅಶ್ವಿನಿ ವಿಜಯಲೋಹಿತ್
ತಾರಾಗಣ : ರಿಷಿ, ಪ್ರಿಯಾಂಕಾ, ಅವಿನಾಶ್, ಶ್ರೀಧರ್, ವಿನೋದ್ ಆಳ್ವ ಮುಂತಾದವರು.
ರೇಟಿಂಗ್ : 3.5

ನಿರ್ದೇಶಕ ನಂದೀಶ್ ಅದ್ಭುತವಾದ ಕಥೆಯನ್ನು ಹೆಣೆದು, ಅಷ್ಟೇ ರೋಚಕವಾಗಿ ತೆರೆಯಲ್ಲಿ ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಚಿತ್ರ ಪ್ರತಿಕ್ಷಣಕ್ಕೂ ಕುತೂಹಲ ಮೂಡಿಸುತ್ತಾ ಸಾಗುತ್ತದೆ. ಅದಕ್ಕೆ ಹಿನ್ನೆಲೆ ಸಂಗೀತ ಶಕ್ತಿತುಂಬಿದೆ. ರಿಷಿ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದು ಅದ್ಭುತ ಅಭಿನಯ ತೋರಿದ್ದಾರೆ. ತನಿಖಾಧಿಕಾರಿಯಾಗಿ ಪ್ರೇಕ್ಷಕರಿಗೆ ಇಷ್ಟವಾಗುತ್ತಾರೆ. ಪ್ರಿಯಾಂಕಾ ಕುಮಾರ್ ನಾಯಕಿಯಾಗಿ ಬಣ್ಣಹಚ್ಚಿದ್ದು, ಸಿಕ್ಕ ಪಾತ್ರಕ್ಕೆ ಜೀವತುಂಬಿದ್ದಾರೆ. ಕಾಮಿಡಿ ಪಾತ್ರಗಳಲ್ಲಿ ನಟಿಸಿದ್ದ ಶಿವರಾಜ್ ಕೆ.ಆರ್.ಪೇಟೆ ಪತ್ರಕರ್ತನಾಗಿ ಗಂಭೀರ ಪಾತ್ರದತ್ತ ಹೊರಳಿದ್ದಾರೆ. ಇಲ್ಲಿ ಥ್ರಿಲ್ಲರ್ ಜತೆಗೆ ಒಂದಷ್ಟು ಕಾಮಿಡಿಯೂ ಬೆರೆತಿದ್ದು, ಅಲ್ಲಲ್ಲಿ ಪ್ರತ್ಯಕ್ಷವಾಗುವ ಗಿರೀಶ್ ಶಿವಣ್ಣ ಪ್ರೇಕ್ಷಕರನ್ನು ನಗಿಸುತ್ತಾರೆ. ಕಾಟೇರ ಬಳಿಕ ವಿನೋದ್ ಆಳ್ವಾ ಇಲ್ಲಿಯೂ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡು ರಂಜಿಸಿದ್ದಾರೆ. ಉಳಿದಂತೆ ಹಿರಿಯ ನಟ ಅವಿನಾಶ್, ಕೆ.ಎಸ್.ಶ್ರೀಧರ್ ಪೊಲೀಸ್ ಅಧಿಕಾರಿಗಳಾಗಿ ಕಾಣಿಸಿಕೊಂಡು ಮನಗೆದ್ದಿದ್ದಾರೆ. ಚಿತ್ರ ಛಾಯಾಗ್ರಹಣ ಸಂಗೀತಕ್ಕೆ ಫುಲ್ ಮಾರ್ಕ್ಸ್ ನೀಡಬಹುದು. ಒಟ್ಟಾರೆ ರೋಚಕವಾಗಿ ಮೂಡಿಬಂದಿರುವ ರುದ್ರ ಗರುಡ ಪುರಾಣ ಚಿತ್ರವನ್ನು ಮನೆಮಂದಿಯೆಲ್ಲಾ ಕುಳಿತು ನೋಡಬಹುದು.

ವಿಟಾಕೀಸ್

ಹೊಸ ಅವತಾರದಲ್ಲಿ ಮನೋಹರ್

ತಮ್ಮ ವಿಭಿನ್ನ ನಟನೆಯ ಮೂಲಕ ಛಾಪು ಮೂಡಿಸಿರುವ ಬಾಲಾಜಿ ಮನೋಹರ್, ಈಗ ರಾಮರಸ ಚಿತ್ರದಲ್ಲಿ ಮೂರು ವಿಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ರಾಮರಸದ ಪಾತ್ರಗಳಲ್ಲಿ ಕ್ಷಾತ್ರ ತೇಜಸ್ಸಿನ ಗಹನತೆ, ಶಾಕ್ತ ಪರಂಪರೆಯ ಧೀಮಂತಿಕೆ ಹಾಗೂ ಅತೀಂದ್ರಿಯ ಶಕ್ತಿಗಳ ಅನಾವರಣವೂ ಇದೆ. ಇದನ್ನು ಬಿಂಬಿಸುವ ಪಾತ್ರದಲ್ಲಿ ಬಾಲಾಜಿ ಮನೋಹರ್ ಕಾಣಿಸಿಕೊಂಡಿದ್ದಾರೆ.

ಇಷ್ಟು ಮಾತ್ರವಲ್ಲ ಅವರ ಸಂಭಾಷಣೆಯ ವೈಖರಿಯೂ ವಿಶೇಷವಾಗಿದೆ. ಡಬ್ಬಿಂಗಲ್ಲಿ ಕ್ಲೈಮ್ಯಾಕ್ಸಿಗೆ ಬೇಕಾದ ಬೇರೆ ತರಹದ ದನಿಗೆ ನಿರ್ದೇಶಕರು ಸೌಂಡ್ ಇಂಜಿನಿಯರ್ ಜತೆ ತಿಂಗಳಿಂದ ಚರ್ಚಿಸಿ, ದನಿ ಮೂಡಿಸಿದ್ದಾರೆ. ರಾಮರಸದ ಈ ಪಾತ್ರ ಮನೋಹರ್ ಬಾಲಾಜಿಗೆ ಹೊಸ ತಿರುವು ನೀಡಲಿದ್ದು, ಪರಭಾಷೆಯಲ್ಲಿಯೂ ಅವರಿಗೆ ಬೇಡಿಕೆ ಹೆಚ್ಚಾಗಲಿದೆ ಎನ್ನುತ್ತಾರೆ ನಿರ್ಮಾಪಕ ಗುರುದೇಶಪಾಂಡೆ. ಟೈಟಲ್‌ನಲ್ಲಿಯೇ ಕುತೂಹಲ ಮೂಡಿಸಿರುವ ರಾಮರಸ ಚಂದನವನದ ಭರವಸೆಯ ಸಿನಿಮಾವಾಗಿದೆ.



ಸ್ಫೂರ್ತಿ ತುಂಬುವ ಕೃಷ್ಣಾವತಾರ

ಎಲ್ಲರಿಗೂ ಹಿಡಿಸುವ, ಕನೆಕ್ಟ್ ಆಗುವ ಕಥೆ ಹೊತ್ತ ರಾಯಲ್ ಅದ್ದೂರಿಯಾಗಿ ತೆರೆಗೆ ಬಂದಿದೆ. ತಾನು ಸೂಟು, ಬೂಟು ಹಾಕಿಕೊಂಡು ಮಿಂಚಬೇಕು. ತನ್ನ ಕೆಲಸ ಮಾಡಲು ಕೆಲಸದವರಿರಬೇಕು. ಐಷಾರಾಮಿ ಕಾರಿನಲ್ಲಿ ಸುತ್ತಾಡಬೇಕು.. ಹೀಗೆ ರಾಯಲ್ ಕನಸು ಕಾಣುವ ನಾಯಕ. ಎಲ್ಲವೂ ಸಾಧ್ಯ ಎಂದು ಅದರತ್ತಲೇ ಗುರಿ ಇಡುತ್ತಾನೆ. ಹೀಗೆ ಕನಸು ಕಾಣುತ್ತಲೇ ಅವನ ಐಷಾರಾಮಿ ಕನಸು ನನಸಾಗುತ್ತದೆ. ಅದು ಹೇಗೆ ಎಂಬುದೇ ಚಿತ್ರದ ಕುತೂಹಲ.

ನಾಯಕ ತಾಯಿ ಹೇಳಿಕೊಟ್ಟ ಪಾಠ, ತಂದೆಯ ಗುಣ, ಜೀವನದಲ್ಲಿ ಆದ ಅನುಭವ ಇದೆಲ್ಲದರಿಂದ ಆತ ತನ್ನದೇ ದಾರಿಯಲ್ಲಿ ಸಾಗುತ್ತಾನೆ. ಅಂದುಕೊಂಡಿದ್ದನ್ನು ಸಾಧಿಸಿ ತೋರಿಸುತ್ತಾನೆ. ರಾಯಲ್ ನಿಜವಾಗಿಯೂ ಸ್ಫೂರ್ತಿ ಕಥೆಯಾಗಿದೆ. ಹಾಗಾಗಿ ಇದು ಮಧ್ಯಮ ವರ್ಗದವರಿಗೆ ಬಲು ಬೇಗ ಕನೆಕ್ಟ್ ಆಗುತ್ತದೆ.

ಚಿತ್ರ : ರಾಯಲ್
ನಿರ್ದೇಶನ : ದಿನಕರ್ ತೂಗುದೀಪ
ನಿರ್ಮಾಣ : ಜಯಣ್ಣ ಫಿಲಂಸ್
ತಾರಾಗಣ : ವಿರಾಟ್, ಸಂಜನಾ, ಅಚ್ಯುತ್ ಕುಮಾರ್, ರಘು ಮುಖರ್ಜಿ ಮುಂತಾದವರು
ರೇಟಿಂಗ್ : 3.5

ಸಹಜವಾಗಿ ನಮ್ಮ ಸುತ್ತಮುತ್ತ ನಡೆಯುವ ಇಂತಹ ಕಥೆಯನ್ನು ಲವ್, ಸೆಂಟಿಮೆಂಟ್, ಆ್ಯಕ್ಷನ್ ಬೆರೆಸಿ ಮನಮುಟ್ಟುವಂತೆ ಕಟ್ಟಿಕೊಡುವಲ್ಲಿ ನಿರ್ದೇಶಕ ದಿನಕರ್ ತೂಗುದೀಪ್ ಗೆದ್ದಿದ್ದಾರೆ. ಮಾಸ್-ಕ್ಲಾಸ್ ಅಂಶಗಳನ್ನು ಒಳಗೊಂಡಿರುವ ಕಥೆಗೆ ರಾಯಲ್ ಟಚ್ ಕೊಟ್ಟಿದ್ದಾರೆ. ಸಿನಿಮಾವನ್ನು ನೋಡುತ್ತಿದ್ದರೆ ಇಲ್ಲಿಯೇ ನಮ್ಮ ಸುತ್ತಮುತ್ತಲೇ ಸ್ಟೋರಿ ಸಾಗುತ್ತಿದೆ ಎನ್ನಿಸುತ್ತದೆ. ಪ್ರೇಕ್ಷಕರನ್ನು ಹಿಡಿದು ಕೂರಿಸುತ್ತದೆ.

ಕಿಸ್‌ನಲ್ಲಿ ಲವ್ವರ್ ಬಾಯ್ ಆಗಿ ಮಿಂಚಿದ್ದ ವಿರಾಟ್, ರಾಯಲ್ ಅವತಾರ ತಾಳಿ ಆ್ಯಕ್ಷನ್ ಅಬ್ಬರಿಸಿದ್ದಾರೆ. ಕೃಷ್ಣಾವತಾರ ತಾಳಿ ಲೀಲೆ ಪ್ರದರ್ಶಿಸಿದ್ದಾರೆ. ರಾಯಲ್, ವಿರಾಟ್‌ಗೆ ಬಿಗ್ ಬ್ರೇಕ್ ಕೊಡುವುದು ಪಕ್ಕಾ. ಇನ್ನು ಸಂಜನಾ ಆನಂದ್ ತಮ್ಮ ಪಾತ್ರವನ್ನು ಬಲು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ಉಳಿದಂತೆ ಅಚ್ಯುತ್ ಕುಮಾರ್, ಛಾಯಾ ಸಿಂಗ್, ರಘು ಮುಖರ್ಜಿ ಎಲ್ಲರೂ ತಮ್ಮ ಪಾತ್ರಗಳಿಗೆ ಜೀವತುಂಬಿ ನಟಿಸಿದ್ದಾರೆ. ಚರಣ್ ರಾಜ್ ಸಂಗೀತ ಚಿತ್ರಕ್ಕೆ ಪ್ಲಸ್ ಪಾಯಿಂಟ್ ಆಗಿದೆ. ಒಟ್ಟಾರೆ ರಾಯಲ್ ಮನೆಮಂದಿಯೆಲ್ಲಾ ಕುಳಿತು ನೋಡಿ ಆನಂದಿಸಬಹುದಾದ ಸಿನಿಮಾವಾಗಿದೆ.

ಕಾಡಿನಲ್ಲಿ ಅಡಗಿದ ಖಜಾನೆ

ಫಾರೆಸ್ಟ್‌ನಲ್ಲಿ ನಡೆಯುವ ಥ್ರಿಲ್ಲರ್ ಕಥೆಗಳ ಸಿನಿಮಾಗಳನ್ನು ನೋಡಿದ್ದೇವೆ. ಈಗ ಫಾರೆಸ್ಟ್‌ನಲ್ಲಿ ಸಾಗುವ ಕಾಮಿಡಿಯ ಕಥೆ ಸಿನಿಪ್ರಿಯರನ್ನು ರಂಜಿಸುತ್ತಿದೆ. ಚಿನ್ನ, ಸಂಪತ್ತು ಎಂದರೆ ಎಲ್ಲರಿಗೂ ಎಲ್ಲಿಲ್ಲದ ಆಸೆ. ಅಂತೆಯೇ, ಅದೊಂದು ತಂಡ ಕಾಡಿನಲ್ಲಿಅಡಗಿದ ಖಜಾನೆಯ ಬಗ್ಗೆ ತಿಳಿದು ಅದನ್ನು ಅರಸಲು ತೆರಳುತ್ತದೆ. ಅದನ್ನು ಪಡೆಯಲೇ ಬೇಕು ಎಂದು ದಟ್ಟಾರಣ್ಯ ಪ್ರವೇಶಿಸುತ್ತಾರೆ. ಅಲ್ಲಿ ಖಜಾನೆ ಇರುವ ಜಾಗವನ್ನು ಅರಸಿ ಬಸವಳಿಯುತ್ತಾರೆ. ಮುಂದೆ ಕಾಡಿಗೆ ಬಂದ ತಂಡಕ್ಕೆ ಕಾಡಿನಲ್ಲಿದ್ದ ಅಪರೂಪದ ಸಂಪತ್ತು ಸಿಕ್ಕಿತೆ. ನಿಜವಾಗಿಯೂ ಕಾಡಿನಲ್ಲಿದ್ದ ಸಂಪತ್ತು ಯಾವುದು, ಅದರ ಹಿಂದಿನ ನಿಗೂಢತೆ ಎಂತಹದ್ದು ಎಂಬ ಕುತೂಹಲದ ಕಥನ ತೆರೆಯಲ್ಲಿ ಸಾಗುತ್ತದೆ. ಅದನ್ನು ಸಿನಿಮಾ ನೋಡಿಯೇ ಆನಂದಿಸಬೇಕು. ಇಷ್ಟೇ ಅಲ್ಲ ಮರೆತೆ ಹೋಗಿದ್ದ ವೀರಪ್ಪನ್ ಆ ಕಾಡಿನಲ್ಲಿ ಮತ್ತೆ ಪ್ರತ್ಯಕ್ಷವಾಗುತ್ತಾನೆ. ಅದನ್ನು ತೆರೆಯಲ್ಲಿಯೇ ನೋಡಿದರೆ ಚೆಂದ.

ಚಿತ್ರ : ಫಾರೆಸ್ಟ್
ನಿರ್ದೇಶನ : ಚಂದ್ರಮೋಹನ್
ನಿರ್ಮಾಣ : ಎನ್.ಎಂ. ಕಾಂತರಾಜು
ತಾರಾಗಣ : ರಂಗಾಯಣ ರಘು, ಅವಿನಾಶ್, ಚಿಕ್ಕಣ್ಣ, ಅರ್ಚನಾ, ಅನೀಶ್, ಮುಂತಾದವರು.
ರೇಟಿಂಗ್ : 3.5

ಕಾಮಿಡಿ ಪ್ರಿಯರಿಗಂತೂ ಈ ಚಿತ್ರ ಹೇಳಿಮಾಡಿಸಿದಂತಿದೆ. ನಿರ್ದೇಶಕ ಚಂದ್ರಮೋಹನ್ ಥ್ರಿಲ್ಲರ್ ಕಥೆಗೆ ಹಾಸ್ಯದ ಲೇಪವನ್ನು ಬೆರೆಸಿ ತೆರೆಯಲ್ಲಿ ಅಚ್ಚುಕಟ್ಟಾಗಿ ಕಟ್ಟಿಕೊಟ್ಟಿದ್ದಾರೆ. ಅಷ್ಟು ಮಾತ್ರವಲ್ಲ, ನಿಗೂಢತೆಯ ಜತೆಗೆ ಹಾರರ್ ಕಥೆಯೂ ಇಲ್ಲಿದ್ದು, ಫಾರೆಸ್ಟ್ ಮನರಂಜನಾತ್ಮಕವಾಗಿ ಮೂಡಿಬಂದಿದೆ. ಚಿಕ್ಕಣ್ಣ -ರಂಗಾಯಣ ರಘು ಜೋಡಿಯ ಕಾಮಿಡಿ ಮೋಡಿ ಮಾಡುತ್ತದೆ.

ಅರ್ಚನಾ ಕೊಟ್ಟಿಗೆ ಅದ್ಭುತ ನಟನೆ ತೋರಿದ್ದಾರೆ. ಸಿನಿಮಾ ನೋಡಿ ಹೊರ ಬಂದ ಮೇಲೆ ಅವರ ಪಾತ್ರ ಮನದಲ್ಲಿ ಉಳಿಯುತ್ತದೆ. ಉಳಿದಂತೆ ಗುರುನಂದನ್, ಅನೀಶ್ ತೇಜೇಶ್ವರ್, ಅವಿನಾಶ್, ಪ್ರಕಾಶ್ ತುಮ್ಮಿನಾಡು ಕೂಡ ಪ್ರೇಕ್ಷಕರನ್ನು ಸೆಳೆಯುತ್ತಾರೆ. ಚಿತ್ರದ ಛಾಯಾಗ್ರಹಣ, ಹಿನ್ನೆಲೆ ಸಂಗೀತ ಎಲ್ಲವೂ ಕಥೆಗೆ ಪೂರಕವಾಗಿದೆ. ಒಟ್ಟಾರೆ ಫಾರೆಸ್ಟ್ ಹಾಸು ಪ್ರಿಯರಿಗೆ ಹೇಳಿ ಮಾಡಿಸಿದ ಸಿನಿಮಾವಾಗಿದೆ.